₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಬುಧವಾರ 05.02.2025 ಸಂಪುಟ: 10 ಸಂಚಿಕೆ: 22 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಟೀಂ ಇಂಡಿಯಾ ಬಳಗದಲ್ಲಿ ವರುಣ್

ಇಂಗ್ಲೆಂಡ್ ವಿರುದ್ಧದ ಏಕದಿನ ಸರಣಿಗೆ ಟೀಂ ಇಂಡಿಯಾಕ್ಕೆ ಸ್ಪಿನ್ನರ್ ವರುಣ್ ಚಕ್ರವರ್ತಿ ಆಯ್ಕೆ.

ರಾಷ್ಟ್ರಪತಿಗಳ ವಂದನಾ ನಿರ್ಣಯದ ಮೇಲಿನ ಚರ್ಚೆ ವೇಳೆ ಮಾತನಾಡಿದ ಪ್ರಧಾನಿ ತಮ್ಮ ಸುದೀರ್ಘ ಭಾಷಣದುದ್ದಕ್ಕೂ ಪ್ರತಿಪಕ್ಷಗಳನ್ನು ತರಾಟೆಗೆ ತೆಗೆದುಕೊಂಡ ಮೋದಿ

ಕೀಳು ರಾಜಕಾರಣ ವಿಕಸಿತ ಭಾರತದ ಪರಿಕಲ್ಪನೆಗೆ ವಿರುದ್ಧ

ದೆಹಲಿ: ಭಾರತದ ಅಭಿವೃದ್ಧಿಯ ನಾಗಾಲೋಟವನ್ನು ತಡೆಯುವ ಕೀಳು ರಾಜಕಾರಣ, ವಿಕಸಿತ ಭಾರತದ ಪರಿಕಲ್ಪನೆಗೆ ವಿರುದ್ಧವಾದುದು ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಲೋಕಸಭೆಯಲ್ಲಿ ರಾಷ್ಟ್ರಪತಿಗಳ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಚರ್ಚೆಯನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ಪ್ರತಿಪಕ್ಷಗಳು ತಮ್ಮ ರಾಜಕೀಯ ಲಾಭಕ್ಕಾಗಿ ರಾಷ್ಟ್ರೀಯ ಹಿತಾಸಕ್ತಿಯನ್ನೂ ಬಲಿಕೊಡಲು ಸಿದ್ಧವಿರುವುದು ವಿಷಾದನೀಯ.. ಎಂದು ಗುಡುಗಿದರು. ಈ ಮೂಲಕ ಭಾರತದ ಭೂಪ್ರದೇಶದ ಮೇಲೆ ಚೀನಾ ಅತಿಕ್ರಮಣದ ಆರೋಪ ಮಾಡಿದ್ದ ರಾಹುಲ್ ಗಾಂಧಿ ಅವರನ್ನು ಪ್ರಧಾನಿ ಮೋದಿ ಪರೋಕ್ಷವಾಗಿ ತರಾಟೆಗೆ ತೆಗೆದುಕೊಂಡರು.

ರಾಷ್ಟ್ರಪತಿ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಪಾಲ್ಗೊಳ್ಳಲು ದೇಶದ ಜನತೆ ನನಗೆ 14ನೇ ಬಾರಿ ಅವಕಾಶ ಮಾಡಿಕೊಟ್ಟಿದ್ದಾರೆ. ಇದಕ್ಕಾಗಿ ನಾನು ದೇಶದ ಜನತೆಗೆ ಧನ್ಯವಾದ ಅರ್ಪಿಸುತ್ತೇನೆ ಎಂದು ಹೇಳಿದರು.

ರಾಷ್ಟ್ರಪತಿಗಳು ತಮ್ಮ ಭಾಷಣದಲ್ಲಿ ಭಾರತವು ಭವಿಷ್ಯದ 25 ವರ್ಷಗಳಲ್ಲಿ ಸಾಗಬೇಕಾದ ದಾರಿಯನ್ನು ತೋರಿಸಿಕೊಟ್ಟಿದ್ದಾರೆ. ವಿಕಸತಿ ಭಾರತದ ಉದ್ದೇಶದೊಂದಿಗೆ ನಾವು ಹೆಜ್ಜೆ ಹಾಕಬೇಕು ಎಂದು ರಾಷ್ಟ್ರಪತಿಗಳು ತಮ್ಮ ಭಾಷಣದಲ್ಲಿ ನಮಗೆ ಮಾರ್ಗದರ್ಶನ ಮಾಡಿದ್ದಾರೆ. ದೇಶದ ಬಡ ಜನರಿಗೆ ಮನೆ ಕಟ್ಟಿಕೊಡುವ ನಮ್ಮ ಉದ್ದೇಶವನ್ನು ಹಲವರು ಅಣಕಿಸುತ್ತಿದ್ದಾರೆ. ಆದರೆ ಪಕ್ಕಾ ಮನೆ, ಶೌಚಾಲಯ, ವಿದ್ಯುತ್ ಹೊಂದುವ ಬಡಜನರ ಕನಸಿನ ಮಹತ್ವ ಅರಮನೆಯಂತಹ ಮನೆಗಳಲ್ಲಿ ವಾಸಿಸುವ ಜನರಿಗೆ ತಿಳಿಯುವುದಿಲ್ಲ ಎಂದು ಹೇಳಿದರು.

ಇಂದು ಕೆಲವರು ನಗರ ನಕ್ಸಲರ ಭಾಷೆಯನ್ನು ಬಹಿರಂಗವಾಗಿ ಮಾತನಾಡುತ್ತಿರುವುದು ದುರದೃಷ್ಟಕರ, ಭಾರತದ ರಾಜ್ಯ ವ್ಯವಸ್ಥೆಗೆ ಸವಾಲು ಹಾಕುವುದು ಮತ್ತು ಅದರ ವಿರುದ್ಧ ಹೋರಾಟವನ್ನು ಘೋಷಿಸುವುದು ದುರದೃಷ್ಟಕರವಾಗಿದೆ. ಈ ಭಾಷೆಯನ್ನು ಮಾತನಾಡುವವರಿಗೆ ಸಂವಿಧಾನ ಅಥವಾ ರಾಷ್ಟ್ರದ ಏಕತೆ ಅರ್ಥವಾಗುವುದಿಲ್ಲ ಎಂದು ಪ್ರಧಾನಿ ಮೋದಿ ಅವರು ಪರೋಕ್ಷವಾಗಿ ರಾಹುಲ್ ಗಾಂಧಿ ಅವರ ಹೇಳಿಕೆಯನ್ನು ಉಲ್ಲೇಖಿಸಿ ತರಾಟೆಗೆ ತೆಗೆದುಕೊಂಡರು.

ಒಟ್ಟಿನಲ್ಲಿ ಪ್ರಧಾನಿ ಮೋದಿ ಅವರು ಲೋಕಸಭೆಯಲ್ಲಿ ಮಾಡಿದ ತಮ್ಮ ಸುದೀರ್ಘ ಭಾಷಣದಲ್ಲಿ, ಹಲವು ಮಹತ್ವದ ಅಂಶಗಳನ್ನು ಪ್ರಸ್ತಾಪಿಸಿದ್ದು, ತಮ್ಮ ಸರಕಾರದ ಅಭಿವೃದ್ಧಿ ಯೋಜನೆಗಳ ಬಗ್ಗೆ ಸವಿಸ್ತಾರವಾಗಿ ಮಾತನಾಡಿದರು.

ಪ್ರಧಾನಿ ಭಾಷಣದ ಮುಖ್ಯಾಂಶಗಳು

- ನೇರ ಹಣ ವರ್ಗಾವಣೆ ಮೂಲಕ ನಾವು ರೈತರ ಬ್ಯಾಂಕ್ ಅಕೌಂಟ್‌ಗೆ 40 ಸಾವಿರ ಕೋಟಿ ರುಪಾಯಿ ವರ್ಗಾಯಿಸಿದ್ದೇವೆ. ದೇಶದ ರೈತರ ಹಿತಾಸಕ್ತಿಯನ್ನು ಕಾಪಾಡುವ ವಾಗ್ದಾನ ಮಾಡುತ್ತಿದ್ದ ಹಿಂದಿನ ಸರಕಾರಗಳಿಗೂ, ರೈತರ ಹಿತಾಸಕ್ತಿ ಕಾಪಾಡಲು ನಿರ್ಣಯ ಕೈಗೊಳ್ಳುವ ನಮ್ಮ ಸರಕಾರಕ್ಕೂ ಇರುವ ಮುಖ್ಯ ವ್ಯತ್ಯಾಸ ಎಲ್ಲರ ಕಣ್ಣ ಮುಂದಿದೆ.
- ದೇಶದ ಮಧ್ಯಮ ವರ್ಗ ಹೆಚ್ಚಿನ ಆದಾಯ ತೆರಿಗೆ ದರದಿಂದ ಹೈರಾಣಾಗಿತ್ತು. ಆದರೆ ನಮ್ಮ ಸರಕಾರವು ಕಳೆದ 10 ವರ್ಷಗಳಲ್ಲಿ ಮಂಡಿಸಲಾದ ಎಲ್ಲ ಬಜೆಟ್‌ಗಳಲ್ಲಿ ಆದಾಯ ತೆರಿಗೆ ವಿನಾಯಿತಿ ಮಿತಿಯನ್ನು ಏರಿಕೆ ಮಾಡಿ, ಮಧ್ಯಮ ವರ್ಗದ ಹೊರೆಯನ್ನು ಕಡಿಮೆ ಮಾಡಿದೆ. ಈ ಬಾರಿಯ ಕೇಂದ್ರ ಬಜೆಟ್ 2025ರಲ್ಲಿ ನಮ್ಮ ಸರಕಾರವು 12.75 ಲಕ್ಷ ರು.ವರೆಗೆ ಶೂನ್ಯ ಆದಾಯ ತೆರಿಗೆ ಘೋಷಣೆ ಮಾಡಿದೆ.
- ಇಂಡಿಯಾ ಎಐ ಮಿಷನ್ ಬಗ್ಗೆ ಇಡೀ ಜಗತ್ತು ಆಶಾವಾದಿಯಾಗಿದೆ. ಜಾಗತಿಕ ಎಐ ಕ್ಷೇತ್ರದಲ್ಲಿ ಭಾರತ ತನ್ನ ಅಸ್ತಿತ್ವವನ್ನು ದೃಢವಾಗಿ ದಾಖಲಿಸಿದೆ. ನಾವು ಭಾರತದ ಯುವ ಸಮುದಾಯದ ಉತ್ತಮ ಭವಿಷ್ಯಕ್ಕಾಗಿ ಕೆಲಸ ಮಾಡುತ್ತಿದ್ದು, ವಿಕಸಿತ ಭಾರತದ ನಮ್ಮ ಕನಸನ್ನು ಖಂಡಿತವಾಗಿಯೂ ನನಸು ಮಾಡುತ್ತೇವೆ.
- ಪ್ರತಿಪಕ್ಷ ನಾಯಕರು ಮಾತೆತ್ತಿದ್ದರೆ ಸಂವಿಧಾನದ ಬಗ್ಗೆ ಮಾತನಾಡುತ್ತಾರೆ. ಸಂವಿಧಾನ ಅಪಾಯದಲ್ಲಿದೆ ಎಂದು ಸುಳ್ಳು ನಿರೂಪಣೆ ನೀಡುತ್ತಾರೆ. ಆದರೆ ನಮ್ಮ ಕೇಂದ್ರ ಸರಕಾರ ಸಂವಿಧಾನವನ್ನು ಜೀವಿಸುತ್ತದೆ. ಸಂವಿಧಾನದ ಆಶಯಗಳಿಗೆ ತಕ್ಕಂತೆ ನಾವು ಕೆಲಸ ಮಾಡುತ್ತೇವೆ. ಇದಕ್ಕೆ ನಾನು ಹಲವಾರು ಉದಾಹರಣೆ ಕೊಡಬಲ್ಲೆ.

ಬಡವರ ಮನೆ ಮುಂದೆ ಫೋಟೋ ಸೆಷನ್ ಮಾಡುವ ನಾಯಕರಿಗೆ, ಸದನದಲ್ಲಿ ನಡೆಯುವ ಬಡವರ ಬಗೆಗಿನ ಚರ್ಚೆ ಬೇಸರ ತರಿಸುತ್ತದೆ. ನಾವು ಸಮಸ್ಯೆಯ ಸಮಾಧಾನಕ್ಕಾಗಿ ನಿರಂತರವಾಗಿ ಪ್ರಯತ್ನ ಮಾಡುತ್ತೇವೆ. ಆದರೆ ಕೆಲವರು ಇದನ್ನು ಅಪಹಾಸ್ಯ ಮಾಡುತ್ತಾ ದೇಶದ ಜನರ ಭಾವನೆಗೆ ಧಕ್ಕೆ ತರುತ್ತಾರೆ.

– ನರೇಂದ್ರ ಮೋದಿ ಪ್ರಧಾನಿ

ದೆಹಲಿಯಲ್ಲೇ ಠಿಕಾಣಿ ಹೂಡಿದರೂ ಸಿಗದ ವರಿಷ್ಠರು ಇಂದು ಭೇಟಿ ಸಾಧ್ಯತೆ, ಹಲವು ಬೇಡಿಕೆಗಳ ಮಂಡನೆ

ಭಿನ್ನರ ಬಣದಿಂದ ದೆಹಲಿ ದಂಡಯಾತ್ರೆ

ಬೆಂಗಳೂರು: ಬಿಜೆಪಿ ಹಾಲಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಬದಲಾವಣೆಗೆ ಪಟ್ಟು ಹಿಡಿದಿರುವ ಭಿನ್ನ ಬಣದ ನಾಯಕರು ದೆಹಲಿ ದಂಡಯಾತ್ರೆ ಕೈಗೊಂಡಿದ್ದು, ವರಿಷ್ಠರ ಭೇಟಿಗಾಗಿ ಕಾದು ಕುಳಿತಿದ್ದಾರೆ. ಆದರೆ ಈವರೆಗೂ ಯಾವುದೇ ವರಿಷ್ಠರ ಭೇಟಿ ನಡೆದಿಲ್ಲ ಎನ್ನಲಾಗಿದೆ.

ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ, ಜೆ.ಪಿ.ನಡ್ಡಾ ಸೇರಿದಂತೆ ಪ್ರಮುಖರು ಸಂಸತ್ ಅಧಿವೇಶದಲ್ಲಿ ಭಾಗಿಯಾಗಿದ್ದು, ಬಿಡುವಿಲ್ಲದ ಕಾರ್ಯಕ್ರಮದಲ್ಲಿ ತೊಡಗಿದ್ದಾರೆ. ಅಲ್ಲದೆ ಇಂದು ನಡೆಯಲಿರುವ ದೆಹಲಿ ಚುನಾವಣೆಯತ್ತ ಗಮನ ಹರಿಸಿದ್ದಾರೆ. ವರಿಷ್ಠರ ಭೇಟಿಗೆ ಭಿನ್ನರು ಸಮಯ ಕೋರಿದ್ದರೂ ಪ್ರಮುಖರು ಸಿಗುವುದು ಅನುಮಾನ ಎನ್ನಲಾಗಿದೆ.

ಈ ಮಧ್ಯೆ ಸೋಮವಾರ ರಾತ್ರಿ ಬಿಜೆಪಿ ರಾಷ್ಟ್ರಿಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಭೇಟಿಯಾಗಿ ರಾಜ್ಯದ ವಸ್ತು ಸ್ಥಿತಿ ವಿವರಿಸಿದ್ದೇನೆ ಎಂದು ಮಾಜಿ ಸಚಿವ ರಮೇಶ್ ಜಾರಕಿಹೊಳಿ ಹೇಳಿದ್ದಾರೆ. ಮಂಗಳವಾರ ಬೆಳಗ್ಗೆ ಸಂಸತ್ತಿನಲ್ಲಿ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧ್ಯ ಅವರನ್ನು ಮಾಜಿ ಸಚಿವರಾದ ರಮೇಶ್ ಜಾರಕಿಹೊಳಿ, ಕುಮಾರ್ ಬಂಗಾರಪ್ಪ, ಶ್ರೀಮಂತ ಪಾಟೀಲ್ ಸೇರಿದಂತೆ ಕೆಲವರು ಭೇಟಿಯಾಗಿದ್ದರು. ರಾಜ್ಯ ಚುನಾವಣಾ ಉಸ್ತುವಾರಿ ಶಿವರಾಜ್ ಸಿಂಗ್ ಚೌವ್ಹಾಣ್ ಅವರನ್ನು ಭೇಟಿ ಮಾಡಲು ಸಮಯಾವಕಾಶ ಕೇಳಿದ್ದರೂ ಇನ್ನೂ ಭೇಟಿ ನಡೆದಿಲ್ಲ. ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮತ್ತಿತರರು ತಡರಾತ್ರಿ ವೇಳೆಗೆ ದೆಹಲಿ ತಲುಪಿದ್ದು, ಇಂದು ವರಿಷ್ಠರನ್ನು ಭೇಟಿ ಮಾಡಲಿದ್ದು, 23 ಜಿಲ್ಲಾಧ್ಯಕ್ಷರ ಆಯ್ಕೆ ಘೋಷಣೆ ರದ್ದು ಮಾಡಬೇಕು, ರಾಜ್ಯಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಬೇಕು, ವಿಜಯೇಂದ್ರ ಅವರನ್ನು ಕೆಳಗಿಳಿಸಬೇಕು ಎಂಬುದು ಸೇರಿದಂತೆ ಹಲವು ಬೇಡಿಕೆಗಳನ್ನು ವರಿಷ್ಠರ ಮುಂದೆ ಇಡಲಿದ್ದಾರೆ.

ರಾಮುಲುಗೆ ನಮ್ಮ ಬೆಂಬಲ

ಶ್ರೀರಾಮುಲು ರಾಜ್ಯಾಧ್ಯಕ್ಷರಾದರೆ ನಮ್ಮದೇನೂ ತಕರಾರಿಲ್ಲ, ಅವರೂ ನಮ್ಮವರೇ. ರಾಜ್ಯದ ಎಲ್ಲ ಸಂಸದರು ನಮ್ಮ ಜತೆಗಿದ್ದಾರೆ, ವಿಜಯೇಂದ್ರ ಸಹೋದರ ಒಬ್ಬರನ್ನು ಬಿಟ್ಟು. ಯತ್ನಾಳ್ ರಾಜ್ಯಾಧ್ಯಕ್ಷ ಆಗಬೇಕು ಅನ್ನುವವರೂ ಇದ್ದಾರೆ. ಏನಾಗುತ್ತದೋ ನೋಡೋಣ. ನಾನು ಯಡಿಯೂರಪ್ಪ ಸಮಕಾಲಿನವನು. ಒಂದು ವೇಳೆ ವಿಜಯೇಂದ್ರರನ್ನು ಮತ್ತೆ ರಾಜ್ಯಾಧ್ಯಕ್ಷ ಮಾಡಿದರೆ ನಮ್ಮ ನಿರ್ಣಯ ತಿಳಿಸುತ್ತೇವೆ. ನಮ್ಮ ಹೋರಾಟವಂತೂ ಮುಂದುವರಿಯುತ್ತದೆ ಎಂದು ಯತ್ನಾಳ್ ಹೇಳಿದ್ದಾರೆ ಎಂದರು.

ವಿಜಯೇಂದ್ರ ಬೇಡವೇ ಬೇಡ

ವಿಜಯೇಂದ್ರ ರಾಜ್ಯಾಧ್ಯಕ್ಷ ಸ್ಥಾನದಿಂದ ಇಳಿಯಬೇಕು. ಯಾರಾದರೂ ಮುಂದಿನ ರಾಜ್ಯಾಧ್ಯಕ್ಷರಾಗಲಿ, ನಮ್ಮ ಬೆಂಬಲ ಇದೆ ಎಂದು ಶಾಸಕ ಬಿ.ಪಿ.ಹರೀಶ್ ಹೇಳಿದ್ದಾರೆ. ಯಡಿಯೂರಪ್ಪ ಸಿಎಂ ಆಗಿದ್ದಾಗ ಅತಿ ಹೆಚ್ಚು ಭ್ರಷ್ಟಾಚಾರ ಆಗಿದ್ದು ವಿಜಯೇಂದ್ರನ ಮೂಲಕ. ಅಶೋಕ, ಬೊಮ್ಮಾಯಿ, ಸುನೀಲ್ ಕುಮಾರ್, ಯತ್ನಾಳ್, ಅರವಿಂದ ಲಿಂಬಾವಳಿ, ಕುಮಾರ್ ಬಂಗಾರಪ್ಪ, ನಿರಾಣಿ ಇವರಲ್ಲಿ ಯಾರು ಬೇಕಾದರೂ ರಾಜ್ಯಾಧ್ಯಕ್ಷರಾಗಲಿ. ಹೈಕಮಾಂಡ್‌ನವರು ಸಮಯಕ್ಕೆ ಸರಿಯಾದ ಕ್ರಮ ತೆಗೆದುಕೊಳ್ಳುತ್ತಾರೆ ಎಂದರು.

ಭ್ರಷ್ಟ ಕಾಂಗ್ರೆಸ್ ಸರಕಾರ ಮತ್ತು ಸಿಎಂ ಸಿದ್ದರಾಮಯ್ಯ ವಿರುದ್ಧ ನಡೆದ ಹೋರಾಟದಲ್ಲಿ ನೇತೃತ್ವ ವಹಿಸಲಾಗಿದೆ. ಭಿನ್ನರ ಹೇಳಿಕೆಗಳಿಂದ ಕಾರ್ಯಕರ್ತರೆಲ್ಲ ನೊಂದಿದ್ದಾರೆ. ದೆಹಲಿ ವರಿಷ್ಠರ ಮುಂದೆ ಏನು ಹೇಳಬೇಕಾಗಿದೆಯೋ ಹೇಳಿಕೊಳ್ಳಲಿ. ವರಿಷ್ಠರೊಂದಿಗೆ ಸಂಪರ್ಕದಲ್ಲಿದ್ದೇನೆ.

– ಬಿ.ವೈ.ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷ

ಸೊಂಪಾದ ಪುಟಗಳು



ನರವಿಜ್ಞಾನದ ಹೆಬ್ಬಾಗಿಲನ್ನು ತೆರೆದ ಹುತಾತ್ಮ ಲೆಬೋರ್ನ್ಯ

ಹಿಂದಿರುಗಿ ನೋಡಿದಾಗ ಡಾ. ನಾ.ಸೋಮೇಶ್ವರ 6

ನಮ್ಮ ನದಿಗಳ ಪಾವಿತ್ರ್ಯವನ್ನು ಉಳಿಸುವವರಾರು?

ಲೋಕಮತ ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ

ಅದ್ಭುತ ಅಥವಾ ಉತ್ತಮ ಕೆಲಸ ಮಾಡುವ ಏಕೈಕ ಮಾರ್ಗವೆಂದರೆ, ನೀವು ಮಾಡುವ ಕೆಲಸವನ್ನು ಅತ್ಯಂತ ಗಾಢವಾಗಿ ಪ್ರೀತಿಸುವುದು ಮತ್ತು ಅದರಲ್ಲಿ ನೂರಕ್ಕೆ ನೂರು ತಲ್ಲೀನವಾಗುವುದು. ನಿಮ್ಮ ಕೆಲಸವನ್ನು ನೀವು ಪ್ರೀತಿಸದೇ, ಬೇರೆಯವರು ಪ್ರೀತಿಸುವುದಿಲ್ಲ. ನಿಮ್ಮ ಮೇಲೆ ನಿಮಗೆ ನಂಬಿಕೆ ಇರಲಿ.

ವಕ್ರತುಂಡೋಕ್ತಿ



'ಸಮಯ ಬಂದಾಗ ಎಲ್ಲವನ್ನೂ ಬಿಚ್ಚಿಡುತ್ತೇನೆ' ಅಂತ ಯಾರಾದರೂ ಹೇಳಿದರೆ ಅದು ಗಂಡಸು ರಾಜಕಾರಣಿ ಎಂದು ತಿಳಿಯಬಹುದು.

205 ಭಾರತೀಯರು ಅಮೆರಿಕದಿಂದ ವಾಪಸ್

ವಾಷಿಂಗ್ಟನ್: ಅಕ್ರಮವಾಗಿ ಅಮೆರಿಕ ಪ್ರವೇಶಿಸಿದ್ದ 205 ಭಾರತೀಯರನ್ನು ಗಡಿಪಾರು ಪ್ರಕ್ರಿಯೆ ಮೊದಲ ಹಂತದಲ್ಲಿ ಆರಂಭವಾಗಿದೆ. ಎಲ್ಲರನ್ನೂ ಅಮೆರಿಕ ಮಿಲಿಟರಿ ವಿಮಾನದಲ್ಲಿ ಭಾರತಕ್ಕೆ ವಾಪಸ್ ಕರೆತರಲಾಗುತ್ತಿದ್ದು, ಅಮೆರಿಕದ ಟೆಕ್ಸಾಸ್‌ನಿಂದ ವಿಮಾನ ಹೊರಟಿದೆ. ಅಮೆರಿಕದಲ್ಲಿರುವ ಅಕ್ರಮ ಭಾರತೀಯ ವಲಸಿಗರನ್ನು ಮರಳಿ ಕರೆತರುವ ಇಂತಹ ಅನೇಕ ವಿಮಾನಗಳಿದ್ದು, ಇದು ಮೊದಲನೆಯದಾಗಿದೆ. ಅಮೆರಿಕದ ಸಿ–17 ಮಿಲಿಟರಿ ವಿಮಾನವು ಭಾರತೀಯ ಪ್ರಜೆಗಳನ್ನು ಮನೆಗೆ ಮರಳಿ ಕರೆತರುತ್ತಿದೆ. ಯುಎಸ್ ವಾಯುಪಡೆಯ ಸಿ–17 ವಿಮಾನವು 205 ಪ್ರಯಾಣಿಕರಿಗೆ ಒಂದೇ ಒಂದು ಶೌಚಾಲಯವನ್ನು ಹೊಂದಿದೆ. ಅಕ್ರಮ ವಲಸಿಗರ ವಿಚಾರದಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕಠಿಣ ನಿಲುವು ಕೈಗೊಂಡಿದ್ದಾರೆ. ಅದಕ್ಕೆ ಅನುಗುಣವಾಗಿ ವಲಸಿಗರನ್ನು ಗಡಿಪಾರು ಮಾಡಲಾಗುತ್ತಿದೆ.

ಮಾತಂದ್ರೆ ಮಾತು

ಕುಮಾರಸ್ವಾಮಿ ಅವರು ಮೊದಲು ತಮ್ಮ ಕರ್ತವ್ಯ ಮಾಡಲಿ. ಅದು ಬಿಟ್ಟು, ಅವರು ಕೇಳಲಿಲ್ಲ, ಇವರು ಕೇಳಲಿಲ್ಲ ಅಂತ ಕಥೆ ಹೇಳಬಾರದು. ಹಾಗಿದ್ದರೆ, ಕೇಂದ್ರ ಸರಕಾರದಲ್ಲಿ ಇವರದ್ದು ಏನೂ ನಡೆಯುವುದಿಲ್ಲವೇ? ಪ್ರಧಾನಿ ಮೋದಿ ಮುಂದೆ ಇವರ ಬೇಳೆಕಾಳು ಬೇಯುವುದಿಲ್ಲವೇ?

– ಎಚ್.ಸಿ.ಬಾಲಕೃಷ್ಣ ಶಾಸಕ

ಫನ್‌ತರಂಗ

– ರಘುಪತಿ ಶೃಂಗೇರಿ –

70–90 ಅಲ್ಲ, ವಾರಕ್ಕೆ 120 ಗಂಟೆ ಕೆಲಸ ಮಾಡಿ – ಎಲಾನ್ ಮಸ್ಕ್



ನಾಳೆಯಿಂದ ಮುಖ್ಯಮಂತ್ರಿ ಸಿದ್ದು ಮ್ಯಾರಥಾನ್ ಸಭೆ

ಬೆಂಗಳೂರು: ಮಾರ್ಚ್ 2ನೇ ವಾರದಲ್ಲಿ ಮಂಡನೆಯಾಗಲಿರುವ ರಾಜ್ಯ ಬಜೆಟ್‌ಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರದಿಂದ ಮ್ಯಾರಥಾನ್ ಸಭೆಗಳನ್ನು ನಡೆಸಲು ಮುಂದಾಗಿದ್ದಾರೆ.

ಫೆ.3ರಿಂದಲೇ ಬಜೆಟ್ ಪೂರ್ವಭಾವಿ ಇಲಾಖಾವಾರು ಸಭೆ ನಡೆಯಬೇಕಿತ್ತು. ಆದರೆ ಮೊಣಕಾಲು ನೋವಿನ ಸಮಸ್ಯೆಯಿಂದ ಆಸ್ಪತ್ರೆಗೆ ದಾಖಲಾಗಿದ್ದರಿಂದ ಇಲಾಖಾವಾರು ಸಭೆಗಳನ್ನು ಮುಂದೂಡಲಾಗಿತ್ತು. ಆದರೀಗ ಗುರುವಾರದಿಂದ ವಿವಿಧ ಇಲಾಖೆಗಳ ಪೂರ್ವಭಾವಿ ಸಭೆ ನಡೆಸಲು ತೀರ್ಮಾನಿಸಿದ್ದು, ನಿತ್ಯ ಆರರಿಂದ ಎಂಟು ಇಲಾಖೆಗಳ ಸಭೆ ನಡೆಸಲಿದ್ದಾರೆ ಎಂದು ತಿಳಿದುಬಂದಿದೆ.

ಪೂರ್ವಭಾವಿ ಸಭೆಗಳು ಕರ್ನಾಟಕ ವಿದ್ಯುತ್ ನಿಗಮದ ಸಭಾಂಗಣದಲ್ಲಿ ನಡೆಯಲಿದ್ದು, ಇಲಾಖಾವಾರು ಸಚಿವರು, ಅಪರ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ ಕಾರ್ಯದರ್ಶಿಗಳೊಂದಿಗಿನ ಸಭೆಗೆ ಐವರು ಅಧಿಕಾರಿಗಳು ಮಾತ್ರ ಉಪಸ್ಥಿತರಿರಬೇಕು ಎಂದು ಸೂಚನೆ ನೀಡಲಾಗಿದೆ.

- ನಿತ್ಯ ಆರರಿಂದ ಎಂಟು ಇಲಾಖೆಗಳ ಸಭೆ ನಡೆಸಲಿರುವ ಮುಖ್ಯಮಂತ್ರಿ
- ಇಲಾಖಾವಾರು ಬೇಡಿಕೆ, ಅನುದಾನ ಹಂಚಿಕೆಗೆ ಸಂಬಂಧ ಚರ್ಚೆ

ಗುರುವಾರ, ಶುಕ್ರವಾರ, ಶನಿವಾರ ನಿರಂತರ ಸಭೆಗಳು ನಡೆಯಲಿದ್ದು, ಬಳಿಕ ಫೆ.10 ಹಾಗೂ ಫೆ.14ರಂದು ಇನ್ನುಳಿದ ಇಲಾಖೆಗಳಿಗೆ ಸಂಬಂಧಿಸಿದಂತೆ ಸಭೆ ನಡೆಸಲು ತೀರ್ಮಾನಿಸಲಾಗಿದೆ. ಈಗಾಗಲೇ ಎಲ್ಲ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಸಿದ್ದರಾಮಯ್ಯ ಅವರು, 2025–26ನೇ ಸಾಲಿನಲ್ಲಿ ಇಲಾಖಾವಾರು ಬೇಡಿಕೆ ಹಾಗೂ ಅನುದಾನ ಹಂಚಿಕೆಗೆ ಸಂಬಂಧಿಸಿದಂತೆ ಸಭೆ ನಡೆಸಲಿದ್ದಾರೆ. ಇದಾದ ಬಳಿಕ ಫೆಬ್ರವರಿ ಕೊನೇ ವಾರ, ಮಾರ್ಚ್ ಮೊದಲ ವಾರದಲ್ಲಿ ಅಂತಿಮ ಸುತ್ತಿನ ಸಭೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಪ್ರೇಯಸಿಗೆ 3 ಕೋಟಿ ರು. ಮೌಲ್ಯದ ಮನೆ ಉಡುಗೊರೆ ಕೊಟ್ಟ ಹೈಟೆಕ್ ಕಳ್ಳ

ಚಿನ್ನಗಳ್ಳನ ಪ್ರೇಮಕಥೆ

ಬೆಂಗಳೂರು: ಕಳವು ಮಾಡಿದ ಚಿನ್ನಾಭರಣಗಳನ್ನು ಕರಗಿಸಿ ಗಟ್ಟಿ ಮಾಡಿ ಮಾರಾಟ ಮಾಡಿದ ಹಣದಿಂದ ಪ್ರೇಯಸಿಗೆ ಬರೋಬ್ಬರಿ 3 ಕೋಟಿ ರು. ಮೌಲ್ಯದ ಮನೆ ಕಟ್ಟಿಸಿಕೊಟ್ಟಿದ್ದ ಖತರ್ನಾಕ್ ಖದೀಮನೊಬ್ಬ ಮಡಿವಾಳ ಠಾಣೆಯ ಪೊಲೀಸರ ಬಲೆಗೆ ಬಿದ್ದಿದ್ದಾನೆ.

ಸೊಲ್ಲಾಪುರ ಮೂಲದ ಪಂಚಾಕ್ಷರಿ ಸ್ವಾಮಿ (37) ಬಂಧಿತ ಆರೋಪಿ. ಆತನಿಂದ 12.25 ಲಕ್ಷ ಮೌಲ್ಯದ 181 ಗ್ರಾಂ ಚಿನ್ನದ ಗಟ್ಟಿ, 333 ಗ್ರಾಂ ಬೆಳ್ಳಿಯ ವಸ್ತುಗಳು, ಚಿನ್ನದ ಗಟ್ಟಿ ಮಾಡಲು ಉಪಯೋಗಿಸುತ್ತಿದ್ದ ಒಂದು ಫೈರ್ ಗನ್, ಮೂಸ್ ಜಪ್ತಿ ಮಾಡಲಾಗಿದೆ.

ಕಳವು ಪ್ರಕರಣದಲ್ಲಿ ಭಾಗಿಯಾಗಿದ್ದ ಪಂಚಾಕ್ಷರಿ ಸ್ವಾಮಿಯ ಸಹಚರ ತಲೆಮರೆಸಿಕೊಂಡಿದ್ದು, ಪತ್ತೆ ಕಾರ್ಯ ಮುಂದುವರಿದಿದೆ. ಬಂಧಿತ ಆರೋಪಿಯು ಪ್ರಖ್ಯಾತ ನಟಿಯೊಬ್ಬಳ ಜತೆಗೂ ನಂಟು ಹೊಂದಿರುವುದು ತನಿಖೆಯಲ್ಲಿ ಪತ್ತೆಯಾಗಿದೆ.

ತನ್ನ ಮನೆ ಹರಾಜಿಗೆ: ಪಂಚಾಕ್ಷರಿ ಸ್ವಾಮಿ ತಂದೆ ರೈಲ್ವೆ ಇಲಾಖೆಯ ಉದ್ಯೋಗಿಯಾಗಿದ್ದು, ಅವರ ಅಕಾಲಿಕ ಸಾವಿನ ಬಳಿಕ ತಾಯಿಗೆ ನೌಕರಿ ಸಿಕ್ಕಿತ್ತು. ಚಿಕ್ಕದಾಗಿರುವ ಆತನ ಮನೆಯು ತಾಯಿಯ ಹೆಸರಿನಲ್ಲಿದೆ. ಈ ಮನೆ ಮೇಲೆ ಸಾಲ ಇದ್ದು, ಸಾಲ ಕಟ್ಟದ ಹಿನ್ನೆಲೆಯಲ್ಲಿ ಬ್ಯಾಂಕ್‌ನಿಂದ ನೋಟಿಸ್ ಬಂದಿದೆ. ವಾಸದ ಮನೆ ಸದ್ಯ ಹರಾಜಿಗೆ ಬಂದಿದೆ.

ಮಹಾರಾಷ್ಟ್ರದಿಂದ ಬೆಂಗಳೂರಿಗೆ ಶಿಫ್ಟ್!

2024ರಲ್ಲಿ ಜೈಲಿನಿಂದ ಬಿಡುಗಡೆಯಾದ ಪಂಚಾಕ್ಷರಿ ಬೆಂಗಳೂರಿಗೆ ಬಂದು ಕಳ್ಳತನ ಆರಂಭಿಸಿದ್ದ. ಬೀಗ ಹಾಕಿದ ಮನೆಗಳನ್ನೇ ಟಾರ್ಗೆಟ್ ಮಾಡುತ್ತಿದ್ದ ಇವನು ಸದ್ದಿಲ್ಲದೇ ಕೆಲಸ ಮುಗಿಸಿ ಬಿಡುತ್ತಿದ್ದ. ಕಳೆದ ಜನವರಿ 9ರಂದು ಮಡಿವಾಳದಲ್ಲಿ ಮನೆ ಕಳ್ಳತನ ಮಾಡಿದ್ದ ಇವನು ಕಳ್ಳತನ ಮಾಡಿದ ಬಳಿಕ ರಸ್ತೆಯಲ್ಲೇ ಬಟ್ಟೆ ಬದಲಿದ್ದಾನೆ. ಇದೇ ಸುಳಿವಿನ ಮೇಲೆ ಮಡಿವಾಳ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ. ಪಂಚಾಕ್ಷರಿ ಮೇಲೆ 180ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿರುವುದು ಬೆಳಕಿಗೆ ಬಂದಿದೆ.

22 ಲಕ್ಷದ ಅಕ್ವೇರಿಯಂ ಉಡುಗೊರೆ: ಪಂಚಾಕ್ಷರಿಗೆ ಮದುವೆಯಾಗಿದ್ದರೂ ಪ್ರೇಯಸಿಯ ಶೋಕಿ ಹೊಂದಿದ್ದ. ಮದುವೆಯಾಗಿ ಮಗು ಇದ್ದರೂ 2016ರಲ್ಲಿ ಪ್ರಿಯತಮೆಗೆ ಕೊಲ್ಕತ್ತಾದಲ್ಲಿ 3 ಕೋಟಿ ಮೌಲ್ಯದ ಮನೆ ಗಿಫ್ಟ್ ಕೊಟ್ಟಿದ್ದಾನೆ. ಇಷ್ಟೇ ಅಲ್ಲದೇ ಪ್ರಿಯತಮೆ ಹುಟ್ಟುಹಬ್ಬಕ್ಕೆ 22 ಲಕ್ಷದ ಅಕ್ವೇರಿಯಂ ಗಿಫ್ಟ್ ಕೊಟ್ಟಿದ್ದ ಎಂಬುದು ತನಿಖೆಯಲ್ಲಿ ತಿಳಿದುಬಂದಿದೆ.

ಪಿ.ಎನ್.ದೇಸಾಯಿ ಆಯೋಗದ ಅವಧಿ ಮೇ 31 ರವರೆಗೆ ವಿಸ್ತರಣೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) 2006 ರಿಂದ 2024 ರ ಜುಲೈ 15 ರವರೆಗೂ ನಡೆದಿರುವ ಭೂಸ್ವಾಧೀನ, ಬಡಾವಣೆಗಳ ನಿರ್ಮಾಣ, ನಿವೇಶನ ಹಂಚಿಕೆ, ಪರಿಹಾರ ವಿತರಣೆ ಮತ್ತು ಬದಲಿ ನಿವೇಶನಗಳ ಹಂಚಿಕೆ ಆರೋಪಗಳ ಕುರಿತು ವಿಚಾರಣೆ ನಡೆಸಲು ರಾಜ್ಯ ಸರಕಾರ ನೇಮಿಸಿದ್ದ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪಿ.ಎನ್.ದೇಸಾಯಿ ನೇತೃತ್ವದ ಏಕ ಸದಸ್ಯ ಆಯೋಗದ ಅವಧಿಯನ್ನು ಮೇ 31 ರವರೆಗೆ ವಿಸ್ತರಿಸಲಾಗಿದೆ.

ವಿಚಾರಣಾ ಆಯೋಗದ ಅವಧಿ ವಿಸ್ತರಿಸುವಂತೆ ಆಯೋಗದ ಕಾರ್ಯದರ್ಶಿ ಜ.6ರಂದು ಸರಕಾರಕ್ಕೆ ಮನವಿ ಸಲ್ಲಿಸಿದ್ದರು. ಎಚ್.ಡಿ.ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ, ಡಿ.ವಿ.ಸದಾನಂದಗೌಡ, ಜಗದೀಶ್ ಶೆಟ್ಟರ್, ಸಿದ್ದರಾಮಯ್ಯ ಮತ್ತು ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಪ್ರಾಧಿಕಾರದಲ್ಲಿ ನಡೆದಿರಬಹುದಾದ ಅವ್ಯವಹಾರಗಳ ಕುರಿತು ವಿಚಾರಣೆ ನಡೆಸಿ, ವರದಿ ಸಲ್ಲಿಸುವ ಜವಾಬ್ದಾರಿಯನ್ನು ಆಯೋಗಕ್ಕೆ ವಹಿಸಲಾಗಿದೆ.

1.55 ಕೋಟಿ ನರೇಗಾ ಸಕ್ರಿಯ ಕಾರ್ಮಿಕರ ಹೆಸರು ಡಿಲೀಟ್

ದೆಹಲಿ: 2022ರಿಂದ 2024ರ ಅವಧಿಯಲ್ಲಿ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಿಂದ (ನರೇಗಾ) 1.55 ಕೋಟಿ ಸಕ್ರಿಯ ಕಾರ್ಮಿಕರ ಹೆಸರುಗಳನ್ನು ಅಳಿಸಿ ಹಾಕಲಾಗಿದೆ ಎಂದು ಸರಕಾರ ಸಂಸತ್ತಿನಲ್ಲಿ ಮಂಗಳವಾರ ಮಾಹಿತಿ ನೀಡಿದೆ. ಪ್ರಶ್ನೆಯೊಂದಕ್ಕೆ ಉತ್ತರಿಸಿದ ಗ್ರಾಮೀಣ ಅಭಿವೃದ್ಧಿ ಖಾತೆ ರಾಜ್ಯ ಸಚಿವ ಕಮಲೇಶ್ ಪಾಸ್ವಾನ್ ಅವರು, ಉದ್ಯೋಗ ಕಾರ್ಡ್‌ಗಳ ದುರುಪಯೋಗ ತಡೆಗಾಗಿ ಮತ್ತು ನೈಜ ಫಲಾನುಭವಿಗಳನ್ನು ಯೋಜನೆಯಿಂದ ಹೊರಗಿಡುವುದನ್ನು ತಪ್ಪಿಸುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ. ಫೆ.1ರವರೆಗೆ 13.41 ಕೋಟಿ ಸಕ್ರಿಯ ಕಾರ್ಮಿಕರ ಪೈಕಿ 13.34 ಕೋಟಿ (99.47%) ಕಾರ್ಮಿಕರ ಹೆಸರಿನ ಜತೆ ಆಧಾರ್ ಸಂಖ್ಯೆಯನ್ನು ಜೋಡಿಸಲಾಗಿದೆ ಎಂದು ತಿಳಿಸಿದರು.

ಕಾರಣಗಳು

- ಸುಳ್ಳು ಅಥವಾ ತಪ್ಪು ಮಾಹಿತಿ ಇರುವ ಉದ್ಯೋಗ ಕಾರ್ಡ್
- ಗ್ರಾಮ ಪಂಚಾಯಿತಿಯಿಂದ ಕುಟುಂಬಗಳ ಶಾಶ್ವತ ಸ್ಥಳಾಂತರ
- ಗ್ರಾಮಗಳನ್ನು 'ನಗರ' ಎಂದು ವರ್ಗೀಕರಿಸಿದ ಕಾರಣ

ಬಸವನಬಾಗೇವಾಡಿಯಲ್ಲಿ ಬ್ರಿಗೇಡ್‌ಗೆ ವಿಧ್ಯುಕ್ತ ಚಾಲನೆ | ಮಾಜಿ ಡಿಸಿಎಂ ಈಶ್ವರಪ್ಪ, 1008 ಸ್ವಾಮೀಜಿಗಳು ಭಾಗಿ

ಧರ್ಮರಕ್ಷಣೆಗಾಗಿ ಕ್ರಾಂತಿವೀರ ಬ್ರಿಗೇಡ್

ವಿಜಯಪುರ/ಬಸವನಬಾಗೇವಾಡಿ: ಮಾಜಿ ಡಿಸಿಎಂ ಕೆ.ಎಸ್. ಈಶ್ವರಪ್ಪ ನೇತೃತ್ವದ ಕ್ರಾಂತಿವೀರ ಬ್ರಿಗೇಡ್‌ಗೆ ಬಸವನಬಾಗೇವಾಡಿಯಲ್ಲಿ ಮಂಗಳವಾರ ವಿಧ್ಯುಕ್ತ ಚಾಲನೆ ದೊರೆತಿದೆ. ಈಶ್ವರಪ್ಪ ದಂಪತಿ ಕನ್ನೇರಿಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿಗಳ ಪಾದಪೂಜೆ ಮಾಡುವ ಮೂಲಕ 1008 ಪೂಜ್ಯರ ಪಾದಪೂಜೆಯೊಂದಿಗೆ ಬ್ರಿಗೇಡ್ ಉದ್ಘಾಟನೆ ನೆರವೇರಿದೆ. ಈ ವೇಳೆ ಈಶ್ವರಪ್ಪ ಪುತ್ರ ಕಾಂತೇಶ್ ಮತ್ತು ಕುಟುಂಬದವರು ಭಾಗಿಯಾಗಿದ್ದರು.

ಗೋರಕ್ಷಣೆಗೆ ಬ್ರಿಗೇಡ್ ಪಣ: ಬ್ರಿಗೇಡ್ ಸಂಚಾಲಕ, ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ಉದ್ಘಾಟನಾ ಭಾಷಣ ಮಾಡಿ, ಜಾತಿ, ಪಕ್ಷ ಬಿಟ್ಟು ಧರ್ಮ ಉಳಿಸಲು ನಾವು ಪ್ರತಿಜ್ಞೆ ಮಾಡುತ್ತಿದ್ದೇವೆ. 1008 ಸ್ವಾಮೀಜಿಗಳೂ ಕುಳಿತಿದ್ದಾರೆ. ಅವರು ಸ್ವಾಮೀಜಿಗಳಲ್ಲ, ದೇವರು. ಬೇರೆಯವರಂತೆ ನಾವು ಜಾತಿ ಮಾಡಿದರೆ ಸಣ್ಣವರಾಗುತ್ತೇವೆ ಎಂದರು.

ಸದಾನಂದಗೌಡ ಸಿಎಂ ಇದ್ದಾಗ 109 ಕೋಟಿ, ಬಸವರಾಜ ಬೊಮ್ಮಾಯಿ ಸಿಎಂ ಇದ್ದಾಗ ಮಠಗಳಿಗೆ 129 ಕೋಟಿ ಅನುದಾನ ಕೊಟ್ಟಿದ್ದಾರೆ. ವರ್ಷಗಳಿಂದಿರುವ ನಮ್ಮ ಜಮೀನುಗಳನ್ನು ವಕ್ಫ್ ಆಸ್ತಿ ಮಾಡಿಕೊಂಡಿದ್ದರು. ವಕ್ಫ್ ಬೋರ್ಡ್ ಉಲ್ಲೇಖವನ್ನು ಪಹಣಿಯಿಂದ ತೆಗೆಯುವರೆಗೂ ನಮ್ಮ ಹೋರಾಟ. ಸಾಧು–ಸಂತರ ಮಾರ್ಗದರ್ಶನದಲ್ಲಿ ಕ್ರಾಂತಿವೀರ ಬ್ರಿಗೇಡ್ ಕಟ್ಟಿದ್ದೇವೆ. ರಾಜ್ಯ, ದೇಶದಲ್ಲಿ ಹಿಂದುತ್ವ ಉಳಿಸುತ್ತೇವೆ ಎಂದು ಈಶ್ವರಪ್ಪ ಘೋಷಿಸಿದರು.

ಬಸವನಬಾಗೇವಾಡಿಯಲ್ಲಿ ಕ್ರಾಂತಿವೀರ ಬ್ರಿಗೇಡ್‌ಗೆ ಚಾಲನೆ ದೊರೆಯಿತು. ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ಕನ್ನೇರಿ ಮಠದ ಸ್ವಾಮೀಜಿ ಸೇರಿ ಸಾವಿರಕ್ಕೂ ಹೆಚ್ಚು ಸಾಧು–ಸಂತರು, ಸಹಸ್ರಾರು ಜನರು ಪಾಲ್ಗೊಂಡಿದ್ದರು.

ಚಾಮರಾಜಪೇಟೆಯಲ್ಲಿ ಗೋವಿನ ಕೆಚ್ಚಲು ಕತ್ತರಿಸಿದ್ದಾರೆ. ಹಸುವನ್ನು ಕಡಿದು ಮಾಂಸ ಮಾರಾಟ ಮಾಡುತ್ತಿದ್ದಾರೆ. ಗೋಮಾತೆಗೆ ಆಗುತ್ತಿರುವ ಅನ್ಯಾಯ ನೋಡಿಕೊಂಡು ಕುಳಿತರೆ ಬದುಕಿದ್ದರೂ ಸತ್ತಂತೆ. ಯಾರಾದರೂ ಗೋವು ಕಡಿದರೆ ಅವರ ಕೈಯನ್ನು ಕಡಿಯುತ್ತೇವೆಂದು ತೀರ್ಮಾನ ಮಾಡೋಣ. ಗೋ ರಕ್ಷಣೆಯಾಗಬೇಕು, ಅತ್ಯಾಚಾರ ನಿಲ್ಲಿಸಬೇಕು.

– ಕೆ.ಎಸ್.ಈಶ್ವರಪ್ಪ ಮಾಜಿ ಡಿಸಿಎಂ

ಹಿಂದೂಗಳ ಸಂಖ್ಯೆ ಕುಸಿತಕ್ಕೆ ಕಳವಳ: ಕನ್ನೇರಿ ಮಠದ ಕಾಡಸಿದ್ದೇಶ್ವರ ಸ್ವಾಮೀಜಿ ಆಶೀರ್ವಚನ ನೀಡಿ, ಇತ್ತೀಚೆಗೆ ದೇಶ, ಧರ್ಮ, ಹೃದಯಕ್ಕೆ ಆಘಾತಗಳಾಗುತ್ತಿವೆ. ಇದನ್ನು ತಪ್ಪಿಸಲು ಒಂದು ಚಳವಳಿ ಉಂಟಾಗಿದೆ. ಸಾಂಸ್ಕೃತಿಕ ಚಳವಳಿ ಉಳಿಸಬೇಕಿದೆ. ಶೇ.80ರಷ್ಟು ಸಮಾಜಕ್ಕಾಗಿ ಕೆಲಸ, ಶೇ.20ರಷ್ಟು ರಾಜಕೀಯ ಮಾಡಿದರೆ ಉತ್ತಮ ರಾಜಕಾರಣ ಆಗಬಹುದು. ಜನಹಿತ ಕೆಲಸ ಮಾಡುವವರೇ ಜನನಾಯಕ ಎಂದರು.

ಪಾಕಿಸ್ತಾನ ವಿಭಜನೆಯಾದಾಗ 35 ಸಾವಿರ ಜನರು ಭಾರತಕ್ಕೆ ಬರುವ ವೇಳೆ ಗಡಿಯೊಳಗೆ ಬಂದವರು ಕೇವಲ 3 ಸಾವಿರ ಮಾತ್ರ. ಹಿಂದೂ ಮಹಿಳೆಯರು, ಯುವತಿಯರ ಮೇಲೆ ಅತ್ಯಾಚಾರ ಮಾಡಿದರು. ಇದನ್ನು ತಪ್ಪಿಸೋಕೆ ವಿಷ ಉಣ್ಣುವಂತಾಗಿತ್ತು. ಈಗ ಅಂತಹ ಪರಿಸ್ಥಿತಿ ಬರುವ ಸಾಧ್ಯತೆ ಇದೆ. ಇದನ್ನು ಈಶ್ವರಪ್ಪ ಕಂಡಿದ್ದಾರೆ, ಇದೆಲ್ಲ ಹಿಂದಿನಿಂದಲೂ ಬಂದಿದೆ. ತುಷ್ಟೀಕರಣ ಪರಿಣಾಮ ಗಂಭೀರವಾಗಲಿದೆ ಎಂದು ಸ್ವಾಮೀಜಿ ಎಚ್ಚರಿಕೆ ಕೊಟ್ಟರು.

→ 8

ಎಎಪಿ, ಬಿಜೆಪಿ, ಕಾಂಗ್ರೆಸ್ ತ್ರಿಕೋನ ಸ್ಪರ್ಧೆ | ಹ್ಯಾಟ್ರಿಕ್ ಸಾಧನೆಗೆ ಎಎಪಿ ಭಾರೀ ಯತ್ನ | ಅಧಿಕಾರಕ್ಕಾಗಿ ಬಿಜೆಪಿ, ಕಾಂಗ್ರೆಸ್ ಪ್ರಯತ್ನ

ದೆಹಲಿ ವಿಧಾನಸಭೆ: ಇಂದು ಮತದಾನ

ದೆಹಲಿ: 70 ಸದಸ್ಯ ಬಲದ ದೆಹಲಿ ವಿಧಾನಸಭೆಗೆ ಒಂದೇ ಹಂತದಲ್ಲಿ ಚುನಾವಣೆ ನಡೆಯುತ್ತಿದ್ದು, ಬುಧವಾರ ಬೆಳಗ್ಗೆ 7ರಿಂದ ಸಂಜೆ 6ವರೆಗೂ ಮತದಾನ ನಡೆಯಲಿದೆ. ಕೇಂದ್ರಾಡಳಿತ ಪ್ರದೇಶ ದೆಹಲಿ ವ್ಯಾಪ್ತಿಯ 1.55 ಕೋಟಿ ಮತದಾರರು ಸಾಂವಿಧಾನಿಕ ಹಕ್ಕು ಚಲಾಯಿಸಲಿದ್ದಾರೆ. ಫೆ.8ಕ್ಕೆ ಮತ ಎಣಿಕೆ ನಡೆದು ಫಲಿತಾಂಶ ಪ್ರಕಟವಾಗಲಿದೆ.

ಈ ಬಾರಿ ಆಮ್ ಆದ್ಮಿ ಪಕ್ಷ(ಎಎಪಿ) ಮತ್ತು ಬಿಜೆಪಿ ನಡುವೆ ನಿಕಟ ಸ್ಪರ್ಧೆಯಿದ್ದರೆ, ಕಾಂಗ್ರೆಸ್ ಪಕ್ಷದ ಪ್ರಬಲ ಉಪಸ್ಥಿತಿಯು ಚುನಾವಣೆಯನ್ನು ತ್ರಿಕೋನ ಸ್ಪರ್ಧೆಯ ಕಣವನ್ನಾಗಿಸಿದೆ. ಚುನಾವಣಾ ಬಹಿರಂಗ ಪ್ರಚಾರದ ಕೊನೆಯ ದಿನವಾದ ಸೋಮವಾರ ಮೂರೂ ಪಕ್ಷಗಳು ದಿಗ್ಗಜ ನಾಯಕರನ್ನು ಪ್ರಚಾರ ಕಾರ್ಯದಲ್ಲಿ ತೊಡಗಿಸಿದ್ದವು.

ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಜೆ.ಪಿ.ನಡ್ಡಾ ಮತ್ತು ಬಿಜೆಪಿ ಆಡಳಿತದ ರಾಜ್ಯಗಳ ಮುಖ್ಯಮಂತ್ರಿಗಳು ಬಿಜೆಪಿ ಅಭ್ಯರ್ಥಿಗಳ ಪರ ಸೋಮವಾರ ದಿನವಿಡೀ ಪ್ರಚಾರ ನಡೆಸಿದರು.

ಎಎಪಿ ನಾಯಕ ಅರವಿಂದ್ ಕೇಜ್ರಿವಾಲ್ ಸ್ವತಃ ನವದೆಹಲಿ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯಾಗಿದ್ದರೂ ಹಾಲಿ ಸಿಎಂ ಅತಿಶಿ ಅವರ ಕ್ಷೇತ್ರದ ವಿವಿಧೆಡೆ ಸೋಮವಾರ 3 ರ‍್ಯಾಲಿ ನಡೆಸಿದರು. ಕಾಂಗ್ರೆಸ್ ಅಭ್ಯರ್ಥಿಗಳ ಪರವಾಗಿ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಪ್ರಚಾರ ಕಣದಲ್ಲಿದ್ದರು. ಕಲ್ಕಾಜಿ ಮತ್ತು ಕಸ್ತೂರ್‌ಬಾ ನಗರ ಕ್ಷೇತ್ರಗಳಲ್ಲಿ ಅಣ್ಣ–ತಂಗಿ ರೋಡ್ ಶೋ ನಡೆಸಿದರು.

- ದೆಹಲಿ ವಿಧಾನಸಭಾ ಕ್ಷೇತ್ರ 70
- ಒಟ್ಟು ಮತದಾರರು 1.56 ಕೋಟಿ
- ಮತಗಟ್ಟೆಗಳ ಸಂಖ್ಯೆ 13,766
- ಪುರುಷ ಮತದಾರರು 83.76 ಲಕ್ಷ
- ಮಹಿಳಾ ಮತದಾರರು 72.36 ಲಕ್ಷ
- ತೃತೀಯ ಲಿಂಗಿ ಮತದಾರರು 1,267
- ವಿಶೇಷಚೇತನರಿಗೆ ಮತಗಟ್ಟೆ 733

ಸಮಾಚಾರ ಸಣ್ಣದಲ್ಲ

ತಪ್ಪು ಮಾಡಿದ್ರೆ ಯಾರನ್ನೂ ಬಿಡಲ್ಲ

ದಾವಣಗೆರೆ: ಅಮಾಯಕ ಮಹಿಳೆಯರು, ಯುವತಿಯರು, ಅಪ್ರಾಪ್ತೆಯರ ಮೇಲೆ ಲೈಂಗಿಕ ದೌರ್ಜನ್ಯವೆಸಗಿ ವಿಡಿಯೊ ಮಾಡಿಕೊಂಡು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿ ಆರೋಪಿ ಅಮ್ಜದ್‌ಗೆ ಕಠಿಣ ಶಿಕ್ಷೆ ನಿಶ್ಚಿತ. ತಪ್ಪು ಮಾಡಿದವರನ್ನು ಕೈಬಿಡುವ ಪ್ರಶ್ನೆಯೇ ಇಲ್ಲ ಎಂದು ಚನ್ನಗಿರಿ ಶಾಸಕ ಬಸವರಾಜ್ ಶಿವಗಂಗಾ ಆಗ್ರಹಿಸಿದರು. ಚನ್ನಗಿರಿಯಲ್ಲಿ ಅಮರ್ ಮೆಡಿಕಲ್ ಶಾಪ್ ಎಂದು ಹೆಸರಿಟ್ಟುಕೊಂಡು ಶಾಪ್‌ಗೆ ಬರುವವರನ್ನು ಪುಸಲಾಯಿಸಿ ಲೈಂಗಿಕ ದೌರ್ಜನ್ಯವೆಸಗಿರುವ ಅಮ್ಜದ್‌ಗೆ ಯಾವುದೇ ಕಾರಣಕ್ಕೂ ಜಾಮೀನು ಸಿಗಬಾರದು ಹಾಗೂ ಸಮಗ್ರ ತನಿಖೆ ನಡೆಸಿ ಆರೋಪಿಗೆ ಸಜೆಯಾಗುವಂತೆ ಮಾಡುವ ನಿಟ್ಟಿನಲ್ಲಿ ಎಲ್ಲ ಕ್ರಮವಹಿಸಲಾಗುವುದು ಎಂದರು. ಈ ಘಟನೆಯಿಂದ ನಾಗರಿಕ ಸಮಾಜ ತಲೆತಗ್ಗಿಸುವಂತೆ ಆಗಿದ್ದು, ಆರೋಪಿಗೆ ಗಲ್ಲು ಶಿಕ್ಷೆ ವಿಧಿಸಿದಾಗ ಮುಂದಿನ ದಿನಗಳಲ್ಲಿ ಇಂತಹ ಕೃತ್ಯಕ್ಕೆ ಕೈ ಹಾಕಲು ಹಿಂಜರಿಯುತ್ತಾರೆ ಎಂದರು.

ಆಸ್ಪತ್ರೆಯ ಲಿಫ್ಟ್ ಸರಿಪಡಿಸಲು ಮನವಿ

ಚಿತ್ರದುರ್ಗ: ಜಿಲ್ಲಾಸ್ಪತ್ರೆ ಆವರಣದಲ್ಲಿ ಹೊಸದಾಗಿ ನಿರ್ಮಿಸಿರುವ ಮಕ್ಕಳ ಆಸ್ಪತ್ರೆಯಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿ ಕೆಟ್ಟು ಹೋಗಿರುವ ಲಿಫ್ಟ್‌ನ್ನು ರಿಪೇರಿ ಮಾಡಿಸುವಂತೆ ಕರುನಾಡ ವಿಜಯಸೇನೆಯಿಂದ ಜಿಲ್ಲಾ ಶಸ್ತ್ರಚಿಕಿತ್ಸಕರಿಗೆ ಮನವಿ ಸಲ್ಲಿಸಲಾಯಿತು. ನಾಲ್ಕು ಮಹಡಿಯ ಮಕ್ಕಳ ಆಸ್ಪತ್ರೆಯನ್ನು ಕಟ್ಟಿಸಲಾಗಿದೆ ಆದರೆ ಅಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿದೆ. ಲಿಫ್ಟ್ ಕೆಟ್ಟು ಹೋಗಿರುವುದರಿಂದ ವಯಸ್ಸಾದವರು ಮೆಟ್ಟಿಲು ಹತ್ತಿ ಇಳಿಯಲು ಕಷ್ಟವಾಗುತ್ತದೆ. ಕಳೆದ ವಾರ ಆಸ್ಪತ್ರೆಯ ಮೇಲ್ಛಾವಣಿ ಕುಸಿದಿರುವುದಕ್ಕೆ ಕಳಪೆ ಕಾಮಗಾರಿಯೇ ಕಾರಣವಾಗಿದೆ. ಕಟ್ಟಡಕ್ಕೆ ಚುರುಕಿ ಹಾಕಿ ಭದ್ರಪಡಿಸಬೇಕು. ಮಕ್ಕಳ ಮಂಚಗಳಿಗೆ ಅಳವಡಿಸಿರುವ ಪಟ್ಟಿಗಳು ಹಳೆಯದಾಗಿರುವುದರಿಂದ ಬದಲಾವಣೆ ಮಾಡುವಂತೆ ಕರುನಾಡ ವಿಜಯಸೇನೆ ಜಿಲ್ಲಾಧ್ಯಕ್ಷ ಕೆ.ಟಿ.ಶಿವಕುಮಾರ್ ಜಿಲ್ಲಾ ಶಸ್ತ್ರ ಚಿಕಿತ್ಸಕರಲ್ಲಿ ಒತ್ತಾಯಿಸಿದರು. ಶಶಿ, ಗೋಪಿನಾಥ್ ಎಸ್. ಈ ಸಂದರ್ಭದಲ್ಲಿದ್ದರು.

ಪದಾಧಿಕಾರಿಗಳ ಆಯ್ಕೆ

ದಾವಣಗೆರೆ: ಜಿಲ್ಲಾ ಔಷಧ ವ್ಯಾಪಾರಿಗಳ ಸಂಘದ ವಿಶೇಷ ವಾರ್ಷಿಕ ಮಹಾಸಭೆಯಲ್ಲಿ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಗೌರವ ಕಾರ್ಯದರ್ಶಿಯಾಗಿ ರವಿಕುಮಾರ್ ನುಗ್ಗಿಹಳ್ಳಿ, ಅಧ್ಯಕ್ಷರಾಗಿ ಲಿಂಗರಾಜ್, ಖಜಾಂಚಿಯಾಗಿ ಯೋಗಾನಂದಸ್ವಾಮಿ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕಾರ್ಡಿನಲ್ಲಿ ಕಥೆ ಸ್ಪರ್ಧೆ ಫಲಿತಾಂಶ ಪ್ರಕಟ

ದಾವಣಗೆರೆ: ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ಪ್ರತೀ ವರ್ಷದಂತೆ ಈ ವರ್ಷವೂ 50 ಪೈಸೆ ಅಂಚೆ ಕಾರ್ಡಿನಲ್ಲಿ ರಾಜ್ಯ ಮಟ್ಟದ ಉಚಿತವಾಗಿ ಹಮ್ಮಿಕೊಂಡಿದ್ದ ಕಾರ್ಡಿನಲ್ಲಿ ಕಥೆ ಸ್ಪರ್ಧೆ ಫಲಿತಾಂಶ ಬಿಡುಗಡೆ ಮಾಡಿದೆ. ಬೆಂಗಳೂರಿನ ಭಾರ್ಗವಿ ಪಿ. ಪ್ರಥಮ, ದ್ವಿತೀಯ ಬೆಂಗಳೂರಿನ ಉಮೇಶ್ ಸಿ.ಎನ್., ತೃತೀಯ ಬೆಂಗಳೂರಿನ ಸಂಜಯ್ ಹೆಚ್.ಪಾಟೀಲ್ ಹಾಗೂ ಸಮಾಧಾನಕರ ಬಹುಮಾನ ಗಳನ್ನು ಉಡುಪಿ ಜಿಲ್ಲೆಯ ಕುತ್ಪಾಡಿಯ ಸರಿತಾ ಅಂಬರೀಶ್ ಭಂಡಾರಿ, ದಾವಣಗೆರೆಯ ಕುಸುಮಾ ಲೋಕೇಶ್ ಪಡೆದಿದ್ದಾರೆ ಎಂದು ಕಲಾಕುಂಚದ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ಪ್ರಕಟಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಮಾನ್ಯ ಗೌರವಾನ್ವಿತ 1ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ದಾವಣಗೆರೆ
ಸಿ.ಆರ್.ಮಿಸ್ ನಂ.: 33/2025
ಅರ್ಜಿದಾರರು : 1) ಶ್ರೀ ಬಿ.ಜಿ. ತಿಪ್ಪೇಸ್ವಾಮಿ ಬಿನ್ ಲೇಟ್ ಜಿ. ಬಸಪ್ಪ, ವಯಸ್ಸು 51 ವರ್ಷ, ಸರ್ಕಾರಿ ನೌಕರ. 2) ಶ್ರೀಮತಿ ಡಾ। ಜಿ.ಬಿ. ಲಕ್ಷ್ಮೀ ದೇವಿ ಬಿನ್ ಲೇಟ್ ಜಿ. ಬಸಪ್ಪ, ವಯಸ್ಸು 54 ವರ್ಷ ವೃತ್ತಿ : ವೈದ್ಯರು. 3) ಶ್ರೀಮತಿ ಜ್ಯೋತಿ ಬಿ ಜಿರಳೆ ಕೋಂ ಲೇಟ್ ಜಿ.ಬಿ. ಶಿವಪ್ರಕಾಶ, ವಯಸ್ಸು ಸುಮಾರು 48 ವರ್ಷ, ಗೃಹಿಣಿ, 1 ರಿಂದ 3ನೇ ಅರ್ಜಿದಾರರ ವಾಸ ನಂ.1955/8-9, 6ನೇ ತಿರುವು, ಎಸ್.ಎಸ್. ಬಡಾವಣೆ, ಎ ಬ್ಲಾಕ್, ದಾವಣಗೆರೆ. 4) ಶ್ರೀಮತಿ ಸವಿತಾ ಬಿ. ಬಿನ್ ಲೇಟ್ ಜಿ.ಬಸಪ್ಪ, ಕೋಂ ಚಂದನ ಪಾಟೀಲ್, ವಯಸ್ಸು ಸುಮಾರು 45 ವರ್ಷ. ಗೃಹಿಣಿ, ವಾಸ: ಮನೆ ನಂ: 3. ಶ್ರೀಕೃಷ್ಣ ಕ್ಲಬ್ ರೋಡ್, ಭರ್ಮ ಅಪಾರ್ಟ್ ಮೆಂಟ್ ಹಿಂಭಾಗ, ಹುಕ್ಕೇರಿ ಬೆಳಗಾವಿ ಜಿಲ್ಲೆ.
ವಿರುದ್ಧ
ಎದುರುದಾರರು : ಮಾನ್ಯ ಆಯುಕ್ತರು, ಜನನ ಮತ್ತು ಮರಣ ನೋಂದಣಾಧಿಕಾರಿಗಳು, ದಾವಣಗೆರೆ.
ಅರ್ಜಿದಾರರ ಪರ ನೀಡಲಾದ ಪ್ರಕಟಣಾ ನೋಟೀಸು
ಅರ್ಜಿದಾರರ ಪರ ಮಾನ್ಯ ಘನ ನ್ಯಾಯಾಲಯದಲ್ಲಿ ವಿನಯಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುವುದೇನೆಂದರೆ ಲೇಟ್ ಜಿ.ಬಸಪ್ಪ ಬಿನ್ ಲೇಟ್ ತಿರುಕಪ್ಪ ಇವರು ಅರ್ಜಿದಾರರಿಗೆ ತಂದೆಯಾಗಬೇಕು. ಸದರಿ ಜಿ.ಬಸಪ್ಪ ಇವರು ನಂ: 1955/8-9, 6ನೇ ತಿರುವು. ಎಸ್.ಎಸ್. ಬಡಾವಣೆ, ಎ ಬ್ಲಾಕ್, ದಾವಣಗೆರೆ ಅವರ ಮನೆಯಲ್ಲಿ ದಿನಾಂಕ: 17.07.2003 ರಂದು ಮರಣ ಹೊಂದಿರುತ್ತಾರೆ. ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರ ತಂದೆಯ ಮರಣ ಪ್ರಮಾಣ ಪತ್ರವನ್ನು ಪಡೆಯಲು ಮಾನ್ಯ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಬೇರೆ ಯಾರದಾದರೂ ತಂಟೆ ತಕರಾರು ಇದ್ದಲ್ಲಿ ನಿಮ್ಮ ಹಾಜರಾತಿಗಾಗಿ ದಿನಾಂಕ : 25-02-2025 ರಂದು ಬೆಳಗ್ಗೆ 11-00 ಗಂಟೆಗೆ ನೀವು ಖುದ್ದಾಗಿ ಅಥವಾ ನಿಮ್ಮ ಪರ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಿದ್ದು ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಸದರಿ ಪ್ರಕರಣವನ್ನು ಏಕಪಕ್ಷೀಯ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ.
ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ
ದಿನಾಂಕ : 03/02/2025.
ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ದಾವಣಗೆರೆ
ಅರ್ಜಿದಾರರ ಪರ ವಕೀಲರು.
ಬಸವರಾಜ ಜಿ. ಹೆಚ್.,
ಹರವಿ ಹನುಮಂತಪ್ಪ

ಜಾಗೃತಿಯೇ ಶಕ್ತಿ ಕ್ಯಾನ್ಸರ್‌ನಿಂದ ಮುಕ್ತಿ | ಧೂಮಪಾನ ಮಾಡದಿರು ಯಮನ ಕೋಣ ಹತ್ತದಿರು

ಕ್ಯಾನ್ಸರ್ ಜಾಗೃತಿಗಾಗಿ ಜಾಥಾ

ದಾವಣಗೆರೆ: ನಗರದ ಜಿಎಂ ವಿಶ್ವವಿದ್ಯಾಲಯವು ವಿಶ್ವಾರಾಧ್ಯ ಕ್ಯಾನ್ಸರ್ ಆಸ್ಪತ್ರೆಯ ಸಹಯೋಗದಲ್ಲಿ ವಿಶ್ವ ಕ್ಯಾನ್ಸರ್ ದಿನಾಚರಣೆಯ ಅಂಗವಾಗಿ ಮಂಗಳವಾರ ಕ್ಯಾನ್ಸರ್ ನಿರೋಧಕತೆ ಮತ್ತು ಬೆಂಬಲ ಕುರಿತ ಕಾಲ್ನಡಿಗೆಯ ಜಾಗೃತಿ ಜಾಥಾ ನಗರದಲ್ಲಿ ನಡೆಸಿತು.

ಜಾಗೃತಿಯೇ ಶಕ್ತಿ ಕ್ಯಾನ್ಸರ್‌ನಿಂದ ಮುಕ್ತಿ, ಧೂಮಪಾನ ಮಾಡದಿರು ಯಮನ ಕೋಣ ಹತ್ತದಿರು, ಕ್ಯಾನ್ಸರ್ ಬಗ್ಗೆ ಜಾಗೃತಿ ಇರಲಿ, ಕ್ಯಾನ್ಸರ್ ದೂರ ಆರೋಗ್ಯ ಹತ್ತಿರ, ಕ್ಯಾನ್ಸರ್ ತಿಳಿವು ಮುಂಚಿತ ಇಲ್ಲ ಸಾವು ಖಚಿತ ಎಂಬ ಇತ್ಯಾದಿ ಕ್ಯಾನ್ಸರ್ ಜಾಗೃತಿ ಕುರಿತ ಘೋಷ ವಾಕ್ಯಗಳ ಹಿಡಿದು ಘೋಷಣೆ ಕೂಗಿದರು.

ವಿವಿಧ ಶಿಕ್ಷಣ ಸಂಸ್ಥೆಗಳು ಮತ್ತು ಆರೋಗ್ಯ ಸಂಸ್ಥೆಗಳ ಪ್ರತಿನಿಧಿಗಳು ಸಾಥ್ ನೀಡಿದ್ದರು.

ಜಾಥಾವು ಮೋತಿ ವೀರಪ್ಪ ಶಾಲೆಯ ಮೈದಾನದಿಂದ ಪ್ರಾರಂಭವಾಗಿ ಜಯದೇವ ವೃತ್ತದವರೆಗೂ ಸಾಗಿತು. ಅಲ್ಲಿ ಸಾರ್ವಜನಿಕವಾಗಿ ಬಹಿರಂಗ ಸಭೆ ನಡೆಸಿ, ಕ್ಯಾನ್ಸರ್ ಬಗ್ಗೆ ಜಾಗೃತಿ ವಹಿಸುವಂತೆ ಅರಿವು ಮೂಡಿಸಿ ಜಾಥಾ ಸಮಾರೋಪಗೊಂಡಿತು.

ಕ್ಯಾನ್ಸರ್ ಹೋರಾಟಗಾರ ಆರ್.ಟಿ. ಅರುಣ್ ಕುಮಾರ್ ತಮ್ಮ ಅನುಭವವನ್ನು ಹಂಚಿಕೊಂಡು, ಕ್ಯಾನ್ಸರ್‌ನಿಂದ ತಯಾರಾಗುವ ಮನೋ ವೈದ್ಯಕೀಯ ಬೆಂಬಲ ಹಾಗೂ ತಂತ್ರಜ್ಞಾನದ ಬಳಕೆಯಿಂದ ಹೇಗೆ ಅವರು ಯಶಸ್ವಿಯಾಗಿ ಈ ಭೀಕರ ರೋಗ ಗೆದ್ದಿದ್ದಾರೆ ಎಂದು ತಿಳಿಸಿದರು. ಇದೇ ವೇಳೆ ವಿದ್ಯಾರ್ಥಿಗಳು ಕ್ಯಾನ್ಸರ್ ಕುರಿತ ಜಾಗೃತಿ ನಾಟಕ ಪ್ರದರ್ಶಿಸಿ ಜನರ ಗಮನ ಸೆಳೆದರು.

ಜಿಎಂ ವಿಶ್ವವಿದ್ಯಾಲಯದ ಕುಲಸಚಿವ ಡಾ. ಸುನಿಲ್ ಕುಮಾರ್, ವ್ಯವಸ್ಥಾಪಕ ಪ್ರತಿನಿಧಿ ಡಾ. ವೈ.ಯು. ಸುಭಾಷ್ ಚಂದ್ರ, ಫಾರ್ಮಸಿ ಕಾಲೇಜಿನ ಪ್ರಾಚಾರ್ಯ ಡಾ. ಗಿರೀಶ್ ಬೋಳಕಟ್ಟಿ, ವಿಶ್ವಾರಾಧ್ಯ ಕ್ಯಾನ್ಸರ್ ಆಸ್ಪತ್ರೆ ಡಾ. ಅಜಯ್ ಮತ್ತು ಡಾ. ಅಮಿತ್, ಕಾರ್ಯಕ್ರಮದ ಸಂಯೋಜಕ ಡಾ. ನಿರ್ಮಲ್ ಟಿ.ಹೆಚ್., ಕೇಶವ ಕೆ.ಎಸ್., ಮೊಹಮ್ಮದ್ ಯೋಸುಫ್ ಎಂ.ಡಿ., ರಾಕೇಶ್ ಹಾಗೂ ಡಾ. ಮೊಹಮ್ಮದ್ ಯಾಸೀನ್, ರೋಟರಿ ಕ್ಲಬ್ ಸದಸ್ಯರು, ಮಾದಕ ದ್ರವ್ಯ ನಿಯಂತ್ರಣ ಇಲಾಖೆ ಅಧಿಕಾರಿಗಳು, ವಿವಿಧ ವೈದ್ಯಕೀಯ ಸಂಸ್ಥೆಗಳಿಂದ ವೈದ್ಯಕೀಯ ವೃತ್ತಿಪರರು ಭಾಗವಹಿಸಿದ್ದರು.

ದಾವಣಗೆರೆಯಲ್ಲಿ ಜಿಎಂ ವಿಶ್ವವಿದ್ಯಾಲಯದಿಂ ಕ್ಯಾನ್ಸರ್ ಜಾಗೃತಿ ಜಾಥಾ ನಡೆಸಲಾಯಿತು.

> ಗ್ರಾಮೀಣ ಪ್ರದೇಶಗಳಲ್ಲಿ ಕ್ಯಾನ್ಸರ್ ಪ್ರಕರಣಗಳು ಹೆಚ್ಚಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದರಲ್ಲದೇ, ಜಾಗೃತಿ ಕೊರತೆಯೇ ಇದಕ್ಕೆ ಕಾರಣ. ಅದನ್ನು ನಿವಾರಿಸಲು ಶಿಕ್ಷಣ ಮತ್ತು ಆರೋಗ್ಯ ಸೇವೆ ಜಾಗೃತಿ ಮೂಡಿಸಬೇಕಾಗಿದೆ .
>
> -ಡಾ. ಹೆಚ್.ಡಿ. ಮಹೇಶಪ್ಪ,
> ಜಿಎಂ ವಿಶ್ವವಿದ್ಯಾಲಯದ ಸಹ ಕುಲಪತಿ

ಸಾಲ ಮಂಜೂರು: ವಸೂಲಿ ನಿಯಮ ಬದ್ಧವಾಗಿರಲಿ

ಚಿತ್ರದುರ್ಗ: ಮೈಕ್ರೋಫೈನಾನ್ಸ್, ಲೇವಾದೇವಿ, ಗಿರವಿ ಹಣಕಾಸು ಸಂಸ್ಥೆಗಳು ಕಡ್ಡಾಯವಾಗಿ ಆರ್.ಬಿ.ಐ (ಭಾರತೀಯ ರಿಸರ್ವ್ ಬ್ಯಾಂಕ್) ಮಾರ್ಗಸೂಚಿ ಪಾಲನೆ ಮಾಡಬೇಕು. ಸಾಲ ಮಂಜೂರಾತಿ ಹಾಗೂ ವಸೂಲಾತಿ ನಿಯಮ ಬದ್ಧವಾಗಿರಬೇಕು. ಯಾವುದೇ ಕಾರಣಕ್ಕೂ ನಿಯಮಬಾಹಿರ ಮಾರ್ಗ ಅನುಸರಿಸಬಾರದು ಎಂದು ಜಿಲ್ಲಾಧಿಕಾರಿ ಟಿ. ವೆಂಕಟೇಶ್ ಎಚ್ಚರಿಕೆ ನೀಡಿದರು.

ಸಾಲ ವಸೂಲಾತಿ ಸಮಯದಲ್ಲಿ ಸಾರ್ವಜನಿಕರಿಗೆ ನೀಡುತ್ತಿರುವ ಕಿರುಕುಳ ಹಾಗೂ ಅತಿಯಾದ ಬಡ್ಡಿ ವಿಧಿಸುತ್ತಿರುವ ಕುರಿತಂತೆ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಮೈಕ್ರೋ ಫೈನಾನ್ಸ್, ಲೇವಾದೇವಿ, ಗಿರವಿ ಹಣಕಾಸು ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮೈಕ್ರೋ ಫೈನಾನ್ಸ್ ಸಾಲ ವಸೂಲಾತಿ ಕಿರುಕುಳ ತಡೆಯುವ ನಿಟ್ಟಿನಲ್ಲಿ ಮಾರ್ಗಸೂಚಿಗಳ ರೂಪಿಸಿ ರಾಜ್ಯ ಸರಕಾರ ಸುಗ್ರೀವಾಜ್ಞೆ ಮೂಲಕ ಹೊಸ ಕಾಯ್ದೆ ಜಾರಿ ಮಾಡಲಿದೆ. ಇದರ ಅನುಸಾರ ಉಪವಿಭಾಗಾಧಿಕಾರಿಗಳು ಅಧ್ಯಕ್ಷತೆಯಲ್ಲಿ ಪ್ರಾಧಿಕಾರ ರಚಿಸಲಾಗುವುದು. ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಹಾಯ ವಾಣಿ ಘಟಕ ತೆರೆಯಲಾಗುವುದು. ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಮೈಕ್ರೋ ಫೈನಾನ್ಸ್ ಸಂಸ್ಥೆಗಳು ತಮ್ಮ ಮಾಹಿತಿಯನ್ನು ಜಿಲ್ಲಾಧಿಕಾರಿ ಕಚೇರಿಗೆ ನೀಡುವಂತೆ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸೂಚಿಸಿದರು.

ಸಭೆಯಲ್ಲಿ ಜಿ.ಪಂ ಸಿಇಒ ಎಸ್.ಜೆ. ಸೋಮಶೇಖರ್, ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಲೀಡ್ ಬ್ಯಾಂಕ್ ಜಿಲ್ಲಾ ವ್ಯವಸ್ಥಾಪಕ ಕುಮಾರ್ ಬಾಬು, ಡಿವೈಎಸ್‌ಪಿ ದಿನಕರ್, ರಾಜಣ್ಣ, ಶಿವಕುಮಾರ್ ಹಾಗೂ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಪ್ರತಿನಿಧಿಗಳು ಇದ್ದರು.

> ಹಣಕಾಸು ಸಂಸ್ಥೆಗಳು ಸಾಲ ನೀಡುವಾಗ ಎಲ್ಲಾ ಮುನ್ನಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಮನೆಗೆ ತೆರಳಿ ಗಲಾಟೆ, ಸಂಬಂಧಿಕರಿಗೆ ಕಿರುಕುಳ, ರಾತ್ರಿ ಸಮಯದಲ್ಲಿ ಸಾಲ ವಸೂಲಾತಿಯಂತಹ ಮಾರ್ಗಗಳನ್ನು ಅನುಸರಿಸಬಾರದು. ಕಾಯ್ದೆಗಳನ್ನು ಮೀರಿ ಸಾಲ ವಸೂಲಾತಿ ಮಾಡುತ್ತಿರುವ ಬಗ್ಗೆ ದೂರು ಕೇಳಿಬಂದರೆ, ತಕ್ಷಣವೇ ಸಾಲ ವಸೂಲಿಗೆ ಬಂದವರ ಮೇಲೆ ಅಪರಾಧಿಕ ಅತಿಕ್ರಮಣ, ದೌರ್ಜನ್ಯ ಹಾಗೂ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಅಪರಾಧಗಳ ಅಡಿ ಬಂಧಿಸಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು.
>
> -ರಂಜಿತ್ ಕುಮಾರ್ ಬಂಡಾರು,ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಕಾಯಕದ ಜತೆಗೆ ಮೀಸಲಾತಿ ಕಡೆ ಗಮನ ನೀಡಿ

ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ಏರ್ಪಡಿ ಸಿದ್ದ ಸವಿತಾ ಮಹರ್ಷಿ ಜಯಂತಿಯಲ್ಲಿ ಶಾಸಕ ಡಾ.ಎಂ. ಚಂದ್ರಪ್ಪ ಮಹಿರ್ಷಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು.

ಹೊಳಲ್ಕೆರೆ: ಕಾಯಕದ ಜತೆ ರಾಜ್ಯ ಮಟ್ಟದಲ್ಲಿ ಸಂಘಟಿತರಾಗಿ ಸರಕಾರದಿಂದ ಸಿಗುವ ಸೌವಲತ್ತು ಹಾಗೂ ಮೀಸಲಾಯಿತಿಯನ್ನು ಪಡೆದುಕೊಳ್ಳುವ ಕಡೆ ನಿಮ್ಮ ಗಮನವಿರಬೇಕೆಂದು ಶಾಸಕ ಡಾ.ಎಂ.ಚಂದ್ರಪ್ಪ ಸವಿತಾ ಸಮಾಜದವರಿಗೆ ಕರೆ ನೀಡಿದರು.

ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಸವಿತಾ ಮಹರ್ಷಿ ಜಯಂತಿಯಲ್ಲಿ ಮಹಿರ್ಷಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು.

ಸವಿತಾ ಸಮಾಜದ ಬಡತನದಲ್ಲಿದ್ದರು ಕಾಯಕವನ್ನು ಮರೆತಿಲ್ಲ. ಪರಿಶಿಷ್ಟ ಜಾತಿಗೆ ಸೇರುವ ಎಲ್ಲಾ ಅರ್ಹತೆಗಳು ಸವಿತಾ ಸಮಾಜಕ್ಕಿದೆ. ಮೊದಲು ನೀವು ಸಂಘಟಿತರಾಗಿ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಬಳಿ ಮನವಿ ಸಲ್ಲಿಸಿ ಎಂದು ತಾಕೀತು ಮಾಡಿದರು.

ತಹಸೀಲ್ದಾರ್ ಬೀಬಿ ಫಾತಿಮ, ಪುರಸಭೆ ಮುಖ್ಯಾಧಿಕಾರಿ ರೇಣುಕಾ ದೇಸಾಯಿ, ತಾಲೂಕು ಸವಿತಾ ಸಮಾಜದ ಅಧ್ಯಕ್ಷ ರಾಜಪ್ಪ, ಪ್ರಧಾನ ಕಾರ್ಯದರ್ಶಿಗಳಾದ ಗಿರೀಶ್ ಗುರುಸ್ವಾಮಿ, ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ಸವಿತಾ ಸಮಾಜದವರು ಜಯಂತಿಯಲ್ಲಿ ಭಾಗವಹಿಸಿದ್ದರು.

ಪ್ರೇಕ್ಷಕರ ಕಣ್ಮನಸೆಳೆದ ಮೋಟರ್ ಸೈಕಲ್ ಸ್ಲೋ ರೇಸ್

ಹೊಸದುರ್ಗ: ಇಲ್ಲಿನ ಕಲ್ಪತರು ಯೂತ್ ಅಸೋಸಿಯೇಷನ್ ವತಿಯಿಂದ ಪಟ್ಟಣದ ವಿನಾಯಕ ರಂಗಮಂದಿರದ ಮುಂಭಾಗದಲ್ಲಿ ಆಯೋಜಿಸಿದ್ದ ಸ್ಲೋ ಮೋಟರ್ ಸೈಕಲ್ ರೇಸ್ ಸಾವಿರಾರು ಪ್ರೇಕ್ಷಕರ ಕಣ್ಮನ ಸೆಳೆಯಿತು. ಪೊಲೀಸ್ ನಿರೀಕ್ಷಕ ಎನ್.ತಿಮ್ಮಣ್ಣ ಚಾಲನೆ ನೀಡಿದರು.

ಸವಾರರು ವೀಕ್ಷಕರ ಕಣ್ಮನ ಸೆಳೆದರು. ನೂರಾರು ಬೈಕ್ ಸವಾರರು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ರೇಸ್ ವೀಕ್ಷಣೆಗೆ ಜನರು ಗುಂಪು ನೆರೆದಿತ್ತು. ಪ್ರೇಕ್ಷಕರು ಕೇಕೆ, ಶಿಳ್ಳೆ, ಚಪ್ಪಾಳೆ ತಟ್ಟುವ ಮೂಲಕ ಸವಾರರನ್ನು ಹುರಿದುಂಬಿಸುತ್ತಿದ್ದರು. ಮೊದಲ ಸುತ್ತಿನಲ್ಲಿ 16 ಸುತ್ತುಗಳಲ್ಲಿ ಸ್ಪರ್ಧೆ ನಡೆಯಿತು. ಅಂತಿಮವಾಗಿ ವಿಜೇತರಾದ ನಾಲ್ವರು ಸ್ಪರ್ಧಿಗಳ ನಡುವೆ ನಡೆದ ಸ್ಪರ್ಧೆ ರೋಚಕ ವಾಯಿತು. ಅಂತಿಮ ಸುತ್ತಿನ ಸ್ಪರ್ಧೆಯಲ್ಲಿ ಪ್ರಥಮ ಹೊಸದುರ್ಗದ ಎಸ್.ಕೆ.ಎಂ.ಗುರು, ದ್ವಿತೀಯ ಧನರಾಜ್, ತೃತೀಯ ಅಜ್ಮಲ್ ವಿಜೇತರಾದರು. ಮಹಿಳಾ ವಿಭಾಗದಲ್ಲಿ ರಕ್ಷಿತಾ ಪ್ರಶಸ್ತಿ ಪಡೆದರು.

ಈ ಸಂದರ್ಭದಲ್ಲಿ ಸಂಘದ ಭರತ್ ಪಾಟೀಲ್, ಅಶೋಕ್, ರಾಘವೇಂದ್ರ, ರವಿಕುಮಾರ್, ಕೆ.ಆರ್ .ಪ್ರವೀಣ್, ವಿಶ್ವನಾಥ್, ಹರೀಶ್ ವೆಂಕಟೇಶ್ ಸೇರಿ ಇನ್ನಿತರ ಮುಖಂಡರು ಹಾಜರಿದ್ದರು.

ಪಟ್ಟಣದ ವಿನಾಯಕ ರಂಗಮಂದಿರದ ಮುಂಭಾಗದಲ್ಲಿ ಆಯೋಜಿಸಿದ್ದ ಸ್ಲೋ ಮೋಟರ್ ಸೈಕಲ್ ರೇಸ್‌ಗೆ ಪೊಲೀಸ್ ನಿರೀಕ್ಷಕ ಎನ್.ತಿಮ್ಮಣ್ಣ ಚಾಲನೆ ನೀಡಿದರು.

ಸ್ಲೋ ಮೋಟರ್ ಸೈಕಲ್ ರೇಸ್

ಕಲ್ಪತರು ಯೂತ್ ಅಸೋಸಿಯೇಷನ್ ಸದಸ್ಯ ಹಾಗೂ ಕ್ರೀಡಾ ಪ್ರೇಮಿಯಾಗಿದ್ದ ಕೆ.ವಿ.ಮುರುಳಿಧರ್ ಅವರು ಈಚೆಗೆ ಅಕಾಲಿಕ ಮರಣಕ್ಕೆ ತುತ್ತಾಗಿದ್ದು, ನಮಗೆಲ್ಲಾ ದುಃಖವುಂಟಾಗಿದೆ. ಅವರು ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದ ಕಾರ್ ಮತ್ತು ಬೈಕ್ ರೇಸ್ ಆಯೋಜಿಸುವ ಮೂಲಕ ಜನರಲ್ಲಿ ಕ್ರೀಡಾ ಅಭಿಮಾನ ಮೂಡಿಸಿದ್ದರು. ಈ ಹಿನ್ನೆಲೆಯಲ್ಲಿ ಅವರ ಸ್ಮರಣಾರ್ಥ ಸ್ಲೋ ಮೋಟರ್ ಸೈಕಲ್ ರೇಸ್ ಆಯೋಜಿಸಲಾಗಿದೆ. ನಮ್ಮ ಸಂಘವು ಸಮಾಜಮುಖಿ ಚಿಂತನೆಯೊಂದಿಗೆ ಸೇವಾ ಕಾರ್ಯಗಳನ್ನು ನಿರಂತರವಾಗಿ ಮಾಡುತ್ತಾ ಬರುತ್ತಿದೆ ಎಂದು ಕಲ್ಪತರು ಯೂತ್ ಅಸೋಸಿಯೇಷನ್ ಗೌರವಾಧ್ಯಕ್ಷ ಎನ್.ಮಂಜುನಾಥ್ ತಿಳಿಸಿದರು.

ಸವಿತಾ ಸಮಾಜ ಬಾಂಧವರು ಶ್ರಮ ಜೀವಿಗಳು

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮದಲ್ಲಿ ಬಿ.ಟಿ.ಕುಮಾರಸ್ವಾಮಿ ಮಾತನಾಡಿದರು.

ಚಿತ್ರದುರ್ಗ: ಸವಿತಾ ಸಮಾಜ ಬಾಂಧವರು ಶ್ರಮ ಹಾಗೂ ಕಾಯಕ ಜೀವಿಗಳಾಗಿದ್ದಾರೆ. ಆಧುನಿಕ ಯುಗದಲ್ಲಿ ಪ್ರತಿಯೊಬ್ಬರೂ ಸುಂದರವಾಗಿ ಕಾಣುತ್ತಿದ್ದಾರೆ ಎಂದರೆ, ಇದರ ಹಿಂದೆ ಸವಿತಾ ಸಮಾಜದವರ ಶ್ರಮ ಅಡಿಗಿದೆ ಎಂದು ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಸಹಯೋಗದಲ್ಲಿ, ಮಂಗಳವಾರ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾದ ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಸವಿತಾ ಮಹರ್ಷಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು. ಹಳೆಯ ಪದ್ದತಿಗಳಿಗೆ ಜೋತು ಬೀಳದೆ, ಸವಿತಾ ಸಮಾಜ ಬಾಂಧವರು ಇತರೆ ವೃತ್ತಿಗಳ ಕಡೆಗೆ ಮುಖ ಮಾಡಬೇಕು. ಸಣ್ಣ ಸಮಾಜಗಳು ಅಭಿವೃದ್ಧಿ ಹೊಂದಿ ಮುಖ್ಯವಾಹಿನಿಗೆ ಬರಲು, ಸರಕಾರ ಶೈಕ್ಷಣಿಕ ಹಾಗೂ ಔದ್ಯೋಗಿಕವಾಗಿ ಮೀಸಲಾತಿ ನೀಡಿದೆ. ಈ ಅವಕಾಶಗಳನ್ನು ಬಳಸಿಕೊಂಡು ಸಮಾಜದ ಇತರೆ ಮಕ್ಕಳಂತೆ ನಿಮ್ಮ ಮಕ್ಕಳು ಪ್ರಗತಿ ಹೊಂದಬೇಕು ಎಂದರು.

ಸಮಾಜದ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಎನ್.ಡಿ.ಕುಮಾರ್ ಮಾತನಾಡಿ, ಸಮಾಜದಲ್ಲಿ ಕಟ್ಟ ಕಡೆಯ ವ್ಯಕ್ತಿಗಳಾಗಿ ಜೀವನ ಸಾಗಿಸುತ್ತಿದ್ದಾರೆ. ಸರಕಾರ ಸವಿತಾ ಸಮಾಜವನ್ನು ಪರಿಶಿಷ್ಟ ಜಾತಿಗಳ ಪಟ್ಟಿ ಸೇರಿಸಬೇಕು ಎಂದು ಒತ್ತಾಯಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಿ.ಎಂ.ಗುರುನಾಥ, ಆಹಾರ ಇಲಾಖೆ ಸಹಾಯಕ ನಿರ್ದೇಶಕ ಎಸ್.ಕೆ.ಮಲ್ಲಿಕಾರ್ಜುನ ಸವಿತಾ ಸಮಾಜ ಅಧ್ಯಕ್ಷ ಎನ್.ಚಂದ್ರಶೇಖರ್, ಜಿಲ್ಲಾ ಕಾರ್ಯಾಧ್ಯಕ್ಷ ಎನ್.ಶ್ರೀನಿವಾಸ್, ತಾಲೂಕು ಅಧ್ಯಕ್ಷ ಆರ್.ಶ್ರೀನಿವಾಸ್, ತಾಲೂಕು ಪ್ರಧಾನ ಕಾರ್ಯದರ್ಶಿ ಆರ್.ನಾಗರಾಜ್ ಸೇರಿದಂತೆ ಸವಿತಾ ಸಮಾಜದ ಮುಖಂಡರು ಹಾಗೂ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಓ.ಮೂರ್ತಿ ಮತ್ತು ಸಂಗಡಿಗರು ಗೀತಗಾಯನ ಪ್ರಸ್ತುತ ಪಡಿಸಿದರು.

> ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಯಿಂದ ಹಾಸ್ಟೆಲ್ ಹಾಗೂ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ತೆರೆಯ ಲಾಗಿದೆ. ಶೈಕ್ಷಣಿಕವಾಗಿ ಮಕ್ಕಳು ಅಭಿವೃದ್ಧಿ ಹೊಂದಿದ್ದರೆ, ಮನೆಯ ವಾತಾವರಣ ಬದಲಾ ಗುತ್ತದೆ. ಪರಿಶಿಷ್ಟ ಜಾತಿ ಪಟ್ಟಿಗೆ ಸವಿತಾ ಸಮಾ ಜ ಸೇರಿಸುವ ಸಲು ವಾಗಿ ನೀಡಿದ ಮನವಿ ಯನ್ನು ಸರಕಾರಕ್ಕೆ ಕಳುಹಿಸಲಾಗುವುದು.
>
> -ಬಿ.ಟಿ.ಕುಮಾರಸ್ವಾಮಿ,
> ಅಪರ ಜಿಲ್ಲಾಧಿಕಾರಿ

ಜಿಎಂ ಲೀಗ್ ಕ್ರೀಡಾ ಪಂದ್ಯಾವಳಿ ಶುಭಾರಂಭ

ದಾವಣಗೆರೆ: ದಿ.ಜಿ.ಮಲ್ಲಿಕಾರ್ಜುನಪ್ಪ ಅವರ ಹೆಸರಿನಡಿ ಜಿಎಂ ಲೀಗ್ ನಡಿ ಐಪಿಎಲ್ ಮಾದರಿಯಲ್ಲಿ ಕ್ರಿಕೆಟ್ ಸೇರಿದಂತೆ ವಿವಿಧ ಕ್ರೀಡಾ ಪಂದ್ಯಾವಳಿಗಳು ಫೆ. 4ರಿಂದ ಶುಭಾರಂಭಗೊಂಡಿದೆ.

ದಾವಣಗೆರೆಯ ಜಿಎಂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ವ್ಯವಹಾರಗಳ ನಿರ್ದೇಶನಾಲಯ ಹಾಗೂ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ ವತಿಯಿಂದ ಬರುವ ಫೆ. 4ರಿಂದ 15ರ ವರೆಗೆ ಜಿಎಂ ವಿಶ್ವವಿದ್ಯಾಲಯದ ಕ್ರೀಡಾ ಮೈದಾನದಲ್ಲಿ ನಡೆಯಲಿರುವ ಜಿಎಂ ಲೀಗ್ ಕ್ರೀಡಾ ಹಬ್ಬಕ್ಕೆ ಕುಸ್ತಿ ಪಟು, ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ ಪುರಸ್ಕೃತ ಕಾರ್ತಿಕ್ ಜಿ. ಕಾಟೆ ಚಾಲನೆ ನೀಡಿದರು.

ಕ್ರೀಡಾಪಟುಗಳ ಉದ್ದೇಶಿಸಿ ಕಾರ್ತಿಕ್ ಜಿ ಕಾಟೆ ಮಾತನಾಡಿ, ನಿಮ್ಮಲ್ಲಿರುವ ಕ್ರೀಡಾ ಕೌಶಲ್ಯವು ಕೇವಲ ಜಿಎಂ ವಿಶ್ವವಿದ್ಯಾನಿಲಯದಲ್ಲಿ ಅಷ್ಟೇ ಅಲ್ಲದೇ ಅದರಿಂದ ಆಚೆಯೂ ರಾಜ್ಯ, ರಾಷ್ಟ್ರಮಟ್ಟದಲ್ಲೂ ಸಹ ಕ್ರೀಡಾ ಪ್ರತಿಭೆ ಪ್ರದರ್ಶಿಸಬೇಕು ಎಂದರು. ಜಿಎಂ ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್.ಆರ್. ಶಂಕಪಾಲ್ ಮಾತನಾಡಿ, ಜಿಎಂ ವಿಶ್ವವಿದ್ಯಾಲಯದ ಪ್ರತಿಯೊಬ್ಬ ವಿದ್ಯಾರ್ಥಿಯೂ ಕನಿಷ್ಠ ಒಂದು ಕ್ರೀಡೆ ಕಲಿಯುವಂತೆ, ಭಾಗವಹಿಸುವಂತೆ ಅಭ್ಯಾಸ ಮಾಡಬೇಕು. ಜಿಎಂ ವಿಶ್ವವಿದ್ಯಾಲಯದ ಎಂಜಿನಿಯರಿಂಗ್ ವಿದ್ಯಾರ್ಥಿ ಗಳನ್ನು ಸಹ ಕ್ರೀಡೆಯಲ್ಲಿ ತೊಡಗಿಕೊಳ್ಳುವಂತೆ ಮಾಡುವ ಬಗ್ಗೆ ಚಿಂತನೆ ಮಾಡಬೇಕಿದೆ ಎಂದು ಆಶಿಸಿದರು.

ಸಹಕುಲಪತಿ ಡಾ. ಹೆಚ್.ಡಿ. ಮಹೇಶಪ್ಪ, ಕುಲಸಚಿವ ಡಾ. ಸುನಿಲ್ ಕುಮಾರ್ ಬಿ.ಎಸ್., ಜಿಎಂ ತಾಂತ್ರಿಕ ಮಹಾವಿದ್ಯಾಲಯದ ಆಡಳಿತಧಿಕಾರಿ ವೈ.ಯು. ಸುಭಾಷ್ ಚಂದ್ರ, ಕ್ಯಾನ್ಸರ್ ಹೋರಾಟಗಾರ ಆರ್.ಟಿ. ಅರುಣ್ ಕುಮಾರ್, ವಿದ್ಯಾರ್ಥಿ ವ್ಯವಹಾರ ನಿರ್ದೇಶನಾಲಯದ ನಿರ್ದೇಶಕ ಡಾ. ಹೆಚ್.ಎಸ್. ಕಿರಣ್ ಕುಮಾರ್, ಕ್ರೀಡಾ ವಿಭಾಗದ ನಿರ್ದೇಶಕ ಜಿ.ಬಿ. ಅಜ್ಜಯ್ಯ ಇದ್ದರು.

ದಾವಣಗೆರೆಯಲ್ಲಿ ಜಿಎಂ ಲೀಗ್ ನಡಿ ಐಪಿಎಲ್ ಮಾದರಿಯಲ್ಲಿ ಕ್ರಿಕೆಟ್ ಸೇರಿದಂತೆ ವಿವಿಧ ಕ್ರೀಡಾ ಪಂದ್ಯಾವಳಿಗೆ ಗಣ್ಯರು ಚಾಲನೆ ನೀಡಿದರು.

ಮೋದಿಯವರದ್ದು ಪುಣ್ಯ ಸ್ನಾನವಲ್ಲ : ಓಟಿಗಾಗಿ ಸ್ನಾನ



ದಾವಣಗೆರೆ: ದೇವರು- ಧರ್ಮದ ಹೆಸರಿನಲ್ಲಿ ಬಿಜೆಪಿ ರಾಜಕಾರಣ ಮಾಡುತ್ತದೆ, ಚುನಾವಣೆಗಳು ಬಂದಾಗ ಬಿಜೆಪಿಗರಿಗೆ ದೇವರು- ಧರ್ಮ ನೆನಪಾಗುತ್ತದೆ. ಇನ್ನು ಪ್ರಧಾನಿ ಮೋದಿ ಕುಂಭ ಮೇಳದಲ್ಲಿ ಸ್ನಾನ ಮಾಡುವುದು ದೆಹಲಿ ಚುನಾವಣೆಗಾಗಿ ಎಂದು ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಟೀಕಿಸಿದ್ದಾರೆ.

ದೇಶದ ಜನರು ಕೇಳಬೇಕಿರುವುದು ಲೋಕಸಭಾ ಚುನಾವಣೆಯ ಬಿಜೆಪಿ ಪ್ರಚಾರದಲ್ಲಿ, ಪ್ರಣಾಳಿಕೆಯಲ್ಲಿನ ಅಂಶಗಳನ್ನು ಕಾರ್ಯರೂಪಕ್ಕೆ ತನ್ನಿ ಎಂಬುದನ್ನು. ಇನ್ನು ಬೇಟಿ ಬಚಾವೋ ಬೇಟಿ ಪಡಾವೋ ಎಂದೆಲ್ಲ ದೊಡ್ಡ ಭಾಷಣ ಮಾಡುವ ಮೋದಿ ಮಣಿಪುರದಲ್ಲಿ ಕುಕಿ ಬುಡಕಟ್ಟು ಸಮುದಾಯದ ಮೂವರು ಮಹಿಳೆಯರನ್ನು ಬೆತ್ತಲುಗೊಳಿಸಿ, ಲೈಂಗಿಕ ದೌರ್ಜನ್ಯ ನಡೆಸಿ ಮತ್ತು ಒಬ್ಬ ಯುವತಿಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ ಕೃತ್ಯದ ಬಗ್ಗೆ ಮಾತನಾಡಿದ್ದಾರಾ,ಬಿಜೆಪಿರಿಗೆ ದೇಶದಲ್ಲಿ ಹಿಂದೂ ಮುಸ್ಲಿಂ ಬಿಟ್ಟು ಮತ್ತೊಂದು ಲೋಕ ಇದೆ, ಅದು ಶಿಕ್ಷಣ,ಆರೋಗ್ಯ,ಉದ್ಯೋಗ ಆರ್ಥಿಕ ಅಭಿವೃದ್ಧಿ, ಇದರ ಬಗ್ಗೆ ಚರ್ಚೆ ನಡೆಸುತ್ತಾರಾ? ಮೋದಿಯವರ ಕಾರಣದಿಂದ ಏರಿಕೆಯಾಗಿದ್ದ ಡೀಸೆಲ್, ಪೆಟ್ರೋಲ್, ಗ್ಯಾಸ್, ರಸಗೊಬ್ಬರ, ಬೇಳೆ-ಕಾಳು, ಅಡುಗೆ ಎಣ್ಣೆ ಸೇರಿ ಎಲ್ಲದರ ಬೆಲೆ ಏರಿಕೆ ನೀತಿಯಿಂದ ಹೈರಾಣಾಗಿದ್ದ ರಾಜ್ಯದ ಜನರ ಬದುಕಿನ ಕಷ್ಟಗಳಿಗೆ ಸ್ಪಂದಿಸುವ ಉದ್ದೇಶದಿಂದ ನಮ್ಮ ಕಾಂಗ್ರೆಸ್ ಸರಕಾರ ಐದು ಗ್ಯಾರಂಟಿಗಳನ್ನು ಜಾರಿ ಮಾಡಿದೆ. ಇನ್ನು ಗ್ಯಾರಂಟಿ ಯೋಜನೆಗಳಿಂದ ದೇಶ ಹಾಳಾಗುತ್ತೆ ಎಂದ ಬಿಜೆಪಿಗರು ಈಗ ದೆಹಲಿಯಲ್ಲಿ ಮಾಡುತ್ತಿರುವುದೇನು...? ಎಂದು ಪ್ರಕಟಣೆಯಲ್ಲಿ ಪ್ರಶ್ನಿಸಿದ್ದಾರೆ.

ಬೆಳೆ ಪರಿಹಾರ ನೀಡುವಂತೆ ಸುಧಾಕರ್ ಸೂಚನೆ

ಹಿರಿಯೂರು: ಜಿಲ್ಲೆಯ ರೈತರಿಗೆ ಬೆಳೆ ಪರಿಹಾರ ಮತ್ತು ಬೆಳೆ ವಿಮೆ ಬಿಡುಗಡೆ ಮಾಡುವಂತೆ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಹಿರಿಯೂರು ನಗರದ ಪ್ರವಾಸಿ ಮಂದಿರದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಜಿಲ್ಲೆಯ ರೈತರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು, ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು ರೈತರ ಖಾತೆಗಳಿಗೆ 2023-24 ನೇ ಸಾಲಿನ ಬೆಳೆ ಪರಿಹಾರ, ಬೆಳೆ ವಿಮೆ ಜಮಾ ಆಗದೇ ಇರುವ ಬಗ್ಗೆ ರೈತ ಸಂಘಗಳಿಂದ ದೂರುಗಳು ಬಂದ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿಗಳು , ಉಪನಿರ್ದೇಶಕರು ಕೃಷಿ ಇಲಾಖೆ, ಉಪನಿರ್ದೇಶಕರು ತೋಟಗಾರಿಕೆ ಇಲಾಖೆ, ತಾಲೂಕುಗಳ ಕೃಷಿ , ತೋಟಗಾರಿಕೆ ಇಲಾಖೆಗಳ ಸಹಾಯಕ ನಿರ್ದೇಶಕರುಗಳ ಸಭೆ ನಡೆಸಲಾಯಿತು.

ಜಿಲ್ಲಾಧಿಕಾರಿಗಳಿಗೆ ಪ್ರತಿ ತಾಲೂಕುವಾರು ತಾಂತ್ರಿಕ ದೋಷದಿಂದ ಪಾವತಿ ಮಾಡದೇ ಇರುವ ಬೆಳೆ ಪರಿಹಾರ ಫಲಾನುಭವಿಗಳ ಪಟ್ಟಿ ತಯಾರಿಸಿ 15 ದಿನದೊಳಗೆ ಪಾವತಿ ಮಾಡಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು.

ಬೆಳೆ ವಿಮೆಗೆ ಸಂಬಂಧಿಸಿದಂತೆ ಕೃಷಿ, ತೋಟಗಾರಿಕೆ ಇಲಾಖೆ ಅಧಿಕಾರಿಗಳು ವಿಮಾ ಕಂಪನಿಯವರು, ಆಯಾ ತಾಲೂಕು ರೈತ ಸಂಘದವರೊಂದಿಗೆ ಸಭೆ ನಡೆಸಿ ಪಾವತಿಗೆ ಇರುವ ಸಮಸ್ಯೆಗಳನ್ನು ತಾಲೂಕು ಮಟ್ಟದಲ್ಲಿಯೇ ಪರಿಹರಿಸಿಕೊಳ್ಳಲು ತಿಳಿಸಿದರು. ವರದಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲು ಸೂಚಿಸುತ್ತಾ, ಸದರಿ ವರದಿಯನ್ನು ಜಿಲ್ಲಾಧಿಕಾರಿ ಜಿಲ್ಲಾ ಮಟ್ಟದ ಸಭೆಯನ್ನು ವಿಮಾ ಕಂಪನಿಗಳೊಂದಿಗೆ ಏರ್ಪಡಿಸಿ ಪರಿಹಾರ ವಿತರಣೆಗೆ ಕ್ರಮ ಜರುಗಿಸುವಂತೆ ಸೂಚಿಸಲಾಯಿತು. ಈ ಸಭೆಯಲ್ಲಿ ಜಿಲ್ಲಾಧಿಕಾರಿ.ಟಿ.ವೆಂಕಟೇಶ್, ತಹಸೀಲ್ದಾರ್ ರಾಜೇಶ್ ಕುಮಾರ್, ರೈತ ಸಂಘದ ತಾಲೂಕು ಅಧ್ಯಕ್ಷ ಕೆ ಟಿ ತಿಪ್ಪೇಸ್ವಾಮಿ, ಮಲ್ಲಿಕಾರ್ಜುನ, ರವಿ, ನಿಜಲಿಂಗಪ್ಪ, ಬಸವರೆಡ್ಡಿ, ಸಿದ್ದರಾಮಣ್ಣ, ಸುರೇಶ್ ಕೃಷಿ ಇಲಾಖೆಯ ತೋಟಗಾರಿಕೆ ಇಲಾಖೆಯ ಜಿಲ್ಲಾ,ತಾಲೂಕು ಮಟ್ಟದ ಅಧಿಕಾರಿಗಳು ಇತರರಿದ್ದರು.

ನಗರದ ಪ್ರವಾಸಿ ಮಂದಿರದಲ್ಲಿ ನಡೆದ ರೈತರ ಸಭೆಯಲ್ಲಿ ಸಚಿವ ಡಿ.ಸುಧಾಕರ್ ಮಾತನಾಡಿದರು.

ರಸ್ತೆ ಅಗಲೀಕರಣಕ್ಕೆ 3 ಕೋಟಿ ಕಟ್ಟಡ ತ್ಯಾಗ

ಚಿತ್ರದುರ್ಗ: ಐತಿಹಾಸಿಕ ಚಿತ್ರದುರ್ಗದಲ್ಲಿ ರಸ್ತೆ ಅಗಲೀಕರಣದ ಮಾತು ಕೇಳಿ ಬಂದಾಗಲೆಲ್ಲಾ ವಿರೋಧಿಸುತ್ತಿರುವವರ ನಡುವೆ ಗಾಂಧಿ ವೃತ್ತದ ಸಮೀಪ ಅಂದಾಜು ಮೂರು ಕೋಟಿ ರು.ಬೆಲೆ ಬಾಳುವ ಕಟ್ಟಡವನ್ನು ರಸ್ತೆ ಅಗಲೀಕರಣಕ್ಕೆ ಬಿಟ್ಟುಕೊಡಲು ಪಿಂಟು ಜೈನ್ ಮುಂದೆ ಬಂದಿರುವುದು ಸೋಜಿಗದ ಸಂಗತಿ. ನಗರದಲ್ಲಿ ಅವೈಜ್ಞಾನಿಕ ಡಿವೈಡರ್ ತೆರವುಗೊಳಿಸುತ್ತಿರುವ ಶಾಸಕ ಕೆ.ಸಿ.ವೀರೇಂದ್ರಪಪ್ಪಿರವರ ಅಧಿಕಾರ ವಧಿಯಲ್ಲಿ ಪ್ರವಾಸಿ ಮಂದಿರದಿಂದ ಗಾಂಧಿವೃತ್ತ ಹೊಳಲ್ಕೆರೆ ರಸ್ತೆ, ದಾವಣಗೆರೆ ಹಾಗೂ ಮೆದೇಹಳ್ಳಿ ರಸ್ತೆ ಅಗಲೀಕರಣವಾದರೆ ವಾಹನ ಹಾಗೂ ಪಾದಚಾರಿಗಳ ಸಂಚಾರಕ್ಕೆ ಅನುಕೂಲವಾಗಲಿದೆ ಎಂದು ವಿ.ಪಿ.ಟೆಕ್ಸ್‌ಟೈಲ್ ಮತ್ತು ಗಾರ್ಮೆಂಟ್ಸ್ ಮಳಿಗೆಯನ್ನು ರಸ್ತೆ ಅಗಲೀಕರಣಕ್ಕೆ ಬಿಟ್ಟುಕೊಡಲು ಮುಂದೆ ಬಂದಿರುವ ಕಟ್ಟಡದ ಮಾಲೀಕ ಪಿಂಟು ಜೈನ್‌ಗೆ ಜಯ ಕರ್ನಾಟಕ ಸಂಘಟನೆಯಿಂದ ಸನ್ಮಾನಿಸಲಾಯಿತು. ರಾಜೇಶ್ ಮಧುರಿ, ಅರುಣ್‌ಕುಮಾರ್, ಪ್ರಕಾಶ್, ಸುರೇಶ್, ಪ್ರವೀಣ್, ಸುನೀಲ್, ರಘು, ಅನಿಲ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

35 ಮೀನುಗಾರರ ಕುಟುಂಬಕ್ಕೆ ಕಿಟ್ ವಿತರಣೆ

ಹೊಸನಗರ: ಮೀನುಗಾರಿಕೆ ಇಲಾಖೆ ಸಾಗರರವರು 2024-25ನೇ ಸಾಲಿನ ಮೀನುಗಾರಿಕೆ ಇಲಾಖೆಯ ರಾಜ್ಯ ವಲಯ ಹಾಗೂ ಜಿಲ್ಲಾ ವಲಯ ಯೋಜನೆ ಯಡಿಯಲ್ಲಿ ಆಯ್ಕೆಯಾದ 35ಕುಟುಂಬಗಳಿಗೆ ಅಂದಾಜು 3.50ಲಕ್ಷ ವೆಚ್ಚದಲ್ಲಿ ಮೀನುಗಾರಿಕೆ ಸಲಕರಣೆ ಕಿಟ್ಟು, ಫೈಬರ್ ಗ್ಲಾಸ್ ಹರಿಗೋಲು ಹಾಗೂ ಪೂರಕ ಸಾಮಾಗ್ರಿ ವಿತರಣೆ ಕಾರ್ಯಕ್ರಮವನ್ನು ಹೊಸನಗರದ ಪಟ್ಟಣ ಪಂಚಾಯತಿ ಆವರಣದಲ್ಲಿ ಬೇಳೂರು ಗೋಪಾಲಕೃಷ್ಣರವರು ಒಂದೇರಡು ಫಲಾನುಭವಿಗಳಿಗೆ ವಿತರಿಸಿ ನಂತರ ಹೊಸನಗರದ ಮೀನುಗಾರಿಕೆ ಕಚೇರಿಯ ಆವರಣ ದಲ್ಲಿ ಶಿವಮೊಗ್ಗದ ಮೀನುಗಾರಿಕ ಇಲಾಖೆಯ ಸಹಾಯಕ ಉಪ ನಿರ್ದೇಶಕರಾದ ಶಿವಕುಮಾರ್ ರವರು ವಿತರಿಸಿದರು. ಈ ಸಂದರ್ಭದಲ್ಲಿ ಸಾಗರದ ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕ ಪ್ರಶಾಂತ್ ಹಾಗೂ ಮೀನುಗಾರಿಕೆ ಮೇಲ್ವಿಚಾರಕಿ ಬಸಮ್ಮ ಮುಲ್ಕಿಗೌಡ್ರು ಮುಂತಾದವರು ಉಪಸ್ಥಿತರಿದ್ದರು.

ಹನುಮಂತಯ್ಯಗೆ ಗೌರವ ಡಾಕ್ಟರೇಟ್

ಭದ್ರಾವತಿ: ನಗರದ ರಂಗಭೂಮಿ ಹಾಗೂ ಚಲನಚಿತ್ರ. ಕಿರುತೆರೆ ನಟ ವೈ.ಕೆ. ಹನುಮಂತಯ್ಯರವರ ಕಲಾ ಸೇವೆಯನ್ನು ಪರಿಗಣಿಸಿ ಹೊಸೂರಿನ ಏಷ್ಯಾ ಇಂಟರ್ ನ್ಯಾಷನಲ್ ಕಲ್ಚರ್ ರಿಸರ್ಚ್ ಯೂನಿವರ್ಸಿಟಿ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ಎಂಪಿಎಂ ಸಕ್ಕರೆ ಘಟಕದಲ್ಲಿ ಸುಮಾರು 29 ವರ್ಷ ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿರುವ ವೈ.ಕೆ. ಹನುಮಂತಯ್ಯ ಅವರು ಸುಮಾರು 5 ದಶಕಗಳಿಂದ ರಂಗಭೂಮಿ ಕಲಾವಿದರಾಗಿ ಗುರುತಿಸಿ ಕೊಂಡಿದ್ದು, ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಹಾಗೂ ಜಾನಪದ ಸೇರಿದಂತೆ ಒಟ್ಟು 60ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಇವರ ಅಭಿನಯದ ನಾಟಕಗಳು ಸುಮಾರು 180 ಬಾರಿ ಪ್ರದರ್ಶನಗೊಂಡಿವೆ. ಚಲನಚಿತ್ರ, ಕಿರುತೆರೆ ನಟರಾಗಿದ್ದಾರೆ. ಇವರ ಸೇವೆಯನ್ನು ಗುರುತಿಸಿ ಗೌರವ ಡಾಕ್ಟರೇಟ್ ಪದವಿ ನೀಡಲಾಗಿದೆ. ನಗರದ ವಿವಿಧ ಸಂಘ-ಸಂಸ್ಥೆ ಗಳ ಮುಖಂಡರು,ಗಣ್ಯರು ಅಭಿನಂದಿಸಿದ್ದಾರೆ.

ವೈದ್ಯಾಧಿಕಾರಿಗಳ ಸಮಾಲೋಚನಾ ಸಭೆಯಲ್ಲಿ ಜಿಲ್ಲಾಧಿಕಾರಿ ಗುರುದತ್ತ ಹೆಗಡೆ

ಡೆಂಘೀ, ಮಂಗನಕಾಯಿಲೆ ತಡೆಗೆ ಕ್ರಮ

ಶಿವಮೊಗ್ಗ: ಪ್ರತಿವರ್ಷ ಬೇಸಿಗೆಯಲ್ಲಿ ಉಲ್ಬಣ ಗೊಳ್ಳಬಹುದಾದ ಡೆಂಘೀ, ಚಿಕನ್‌ಗುನ್ಯ ಮತ್ತು ಮಂಗನ ಕಾಯಿಲೆಯಂತಹ ರೋಗಗಳ ಉಲ್ಬಣ ಗೊಳ್ಳದಂತೆ ನಿಯಂತ್ರಣ ಕ್ರಮ ಕೈಗೊಳ್ಳಲು ಜಿಲ್ಲಾಡಳಿತ ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಂಡಿದೆ ಎಂದು ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ಅವರು ಹೇಳಿದರು.

ಕಚೇರಿ ಸಭಾಂಗಣದಲ್ಲಿ ಡೆಂಘೀ, ಚಿಕನ್‌ಗುನ್ಯ ಮತ್ತು ಮಂಗನಕಾಯಿಲೆಯ ಇಂದಿನ ಸ್ಥಿತಿಗತಿ ಹಾಗೂ ಕೈಗೊಳ್ಳಬಹುದಾದ ನಿಯಂತ್ರಣ ಕ್ರಮಗಳ ಕುರಿತು ಏರ್ಪಡಿಸಲಾಗಿದ್ದ ವೈದ್ಯಾಧಿಕಾರಿಗಳೊಂದಿಗಿನ ಸಮಾಲೋಚನ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಜಿಲ್ಲೆಯ ಯಾವುದೇ ತಾಲೂಕುಗಳ ನಗರ, ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ನಿವಾಸಿಗಳು ಯಾವುದೇ ಜ್ವರ ಬಂದಲ್ಲಿ ತಕ್ಷಣದ ಕ್ರಮವಾಗಿ ಸ್ಥಳೀಯ ಸರ್ಕಾರಿ ಆಸ್ಪತ್ರೆಗಳಿಗೆ ತೆರಳಿ, ತಪಾಸಣೆ ಮಾಡಿಸಿ, ಚಿಕಿತ್ಸೆ ಪಡೆದುಕೊಳ್ಳುವಂತೆ ಸೂಚಿಸಿ, ಜಿಲ್ಲೆಯ ಎಲ್ಲಾ ಸರಕಾರಿ ಆಸ್ಪತ್ರೆಗಳಲ್ಲಿ ತಕ್ಷಣದ ಚಿಕಿತ್ಸೆಗೆ ಕ್ರಮಕೈಗೊಳ್ಳಲಾಗಿದ್ದು, ಸಾರ್ವಜನಿಕರು ಈ ಸದಾವಕಾಶದ ಲಾಭ ಪಡೆದುಕೊಳ್ಳಬೇಕಲ್ಲದೇ ಆರೋಗ್ಯ ಇಲಾಖೆಯು ಸೂಚಿಸುವ ಸುರಕ್ಷತಾ ಕ್ರಮಗಳನ್ನು ಅನುಸರಿಸುವಂತೆ ಸಲಹೆ ನೀಡಿದರು. ಈಗಾಗಲೇ ಡೆಂಘೀ ಜ್ವರದ ತಪಾಸಣೆಗಾಗಿ ಪ್ರಸಕ್ತ ಮಾಹೆಯಲ್ಲಿ ಈಗಾಗಲೇ ಶಂಕಿತ 390ಜನರ ರಕ್ತಪರೀಕ್ಷೆ ನಡೆಸಿ, ಅವರಲ್ಲಿ ಬಾಧಿತ 28ಜನರನ್ನು ಗುರುತಿಸಿ, ಸಕಾಲಿಕ ಚಿಕಿತ್ಸೆ ನೀಡಲಾಗಿದೆ. ಅಲ್ಲದೇ ಪರೀಕ್ಷೆ ನಡೆಸಿದ 223 ಮಂದಿಯಲ್ಲಿ 23ಮಂದಿ ಚಿಕನ್ ಗುನ್ಯ ಸೋಂಕಿಗೆ ತುತ್ತಾಗಿರುವುದು ಪತ್ತೆ ಮಾಡಲಾಗಿದ್ದು ಸಕಾಲಿಕವಾಗಿ ಚಿಕಿತ್ಸೆ ನೀಡಲಾಗಿದೆ ಎಂದರು.

ಕಚೇರಿ ಸಭಾಂಗಣದಲ್ಲಿ ಡೆಂಘೀ, ಚಿಕನ್‌ಗುನ್ಯ ಮತ್ತು ಮಂಗನಕಾಯಿಲೆಯ ನಿಯಂತ್ರಣ ಕ್ರಮಗಳ ಕುರಿತು ಏರ್ಪಡಿಸಿದ್ದ ವೈದ್ಯಾಧಿಕಾರಿಗಳೊಂದಿಗಿನ ಸಮಾಲೋಚನ ಸಭೆಯಲ್ಲಿ ಗುರುದತ್ತ ಹೆಗಡೆ ಮಾತನಾಡಿದರು.

ಸಾರ್ವಜನಿಕರು ತಾವು ವಾಸಿಸುವ ಸುತ್ತಮುತ್ತಲ ಪ್ರದೇಶದಲ್ಲಿ ಸೊಳ್ಳೆಗಳು ಉತ್ಪತ್ತಿಯಾಗದಂತೆ ಸುರಕ್ಷತಾ ಕ್ರಮಗಳನ್ನು ಅನುಸರಿಸಬೇಕು. ಅಲ್ಲದೇ ಲಾರ್ವಾಗಳನ್ನು ನಾಶಪಡಿಸಲು ಗಮನಹರಿಸಬೇಕು. ಇಲಾಖೆಯೊಂದಿಗೆ ಸಾರ್ವಜನಿಕರು ಕೈಜೋಡಿಸುವಂತೆ ಅವರು ಸೂಚಿಸಿದರು.

ಜಿಲ್ಲೆಯ ಎಲ್ಲಾ ವೈದ್ಯಾಧಿಕಾರಿಗಳು ಡೇಂಗ್ಯೂ ತಪಾಸಣೆಯನ್ನು ಹೆಚ್ಚಿಸಲು ಗಮಹರಿಸ ಬೇಕು. ಸೋಂಕಿತರು, ಶಂಕಿತರು ಚಿಕಿತ್ಸಾಲಯಕ್ಕೆ ಬಂದಲ್ಲಿ ಯಾವುದೇ ರೋಗಿಯನ್ನು ನಿರ್ಲಕ್ಷಿಸದೇ ಸಕಾಲಿಕ ಚಿಕಿತ್ಸೆ ನೀಡಿ ಅಮೂಲ್ಯ ಜೀವ ರಕ್ಷಣೆಗೆ ಮುಂದಾಗಬೇಕು. ಅಲ್ಲದೇ ತಮ್ಮ ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲಿ ಕಾಲಕಾಲಿಕವಾಗಿ ಲಾರ್ವಾ ಸಮೀಕ್ಷೆ ನಡೆಸಬೇಕು ಎಂದು ಅವರು ಸೂಚಿಸಿದರು.

> ಜಿಲ್ಲೆಯ ಯಾವುದೇ ಖಾಸಗಿ ಆಸ್ಪತ್ರೆಯಲ್ಲಿ ಡೆಂಘೀ,ಬಾಧಿತರು ದಾಖಲಾದಲ್ಲಿ ಅವರ ಬಗ್ಗೆ ಸಂಬಂಧಿಸಿದ ವೈದ್ಯಾಧಿಕಾರಿಗಳಿಗೆ ಕೂಡಲೇ ಮಾಹಿತಿ ನೀಡಿ. ಇದರಿಂದಾಗಿ ಕಾಯಿಲೆಯ ನಿಯಂತ್ರಣಕ್ಕೆ ಸಕಾಲಿಕ ಕ್ರಮ ಕೈಗೊಳ್ಳಲು ಸಾಧ್ಯವಾಗಲಿದೆ.
> -ಡಾ.ಗುಡುದಪ್ಪ ಕುಸುಬಿ, ಜಿಲ್ಲಾ ಸಾಂಕ್ರಾಮಿಕ ರೋಗ ನಿಯಂತ್ರಣಾಧಿಕಾರಿ

ಮಂಗನಕಾಯಿಲೆಗೆ ಕ್ರಮ:

ಈಗಾಗಲೇ ಮಂಗನಕಾಯಿಲೆ ಕಂಡುಬಂದ ತಾಲೂಕಗಳ ಆಯ್ದ ಪ್ರದೇಶಗಳಲ್ಲಿ ಆಯಾ ತಾಲೂಕು ವೈದ್ಯಾಧಿಕಾರಿಗಳು ಕಾಯಿಲೆ ಹರಡದಂತೆ ತಕ್ಷಣದ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ ಎಂದ ಅವರು, ಅದರ ನಿಯಂತ್ರಣ ಕ್ರಮವಾಗಿ ಸ್ಥಳೀಯ ನಿವಾಸಿಗಳಿಗೆ ಔಷಧಗಳನ್ನು ವಿತರಿಸಿ, ಬಳಸಲು ಸೂಚಿಸಿದರು.

ಸಭೆಯಲ್ಲಿ ಜಿಪಂ ಸಿಇಒ ಎನ್.ಹೇಮಂತ್, ಅರಣ್ಯ ಸಂರಕ್ಷಣಾಧಿಕಾರಿ ಶಿವಶಂಕರ್, ಡಿಎಚ್‌ಒ ಡಾ.ನಟರಾಜ್, ಡಾ. ಸಿದ್ಧನಗೌಡ ಉಪಸ್ಥಿತರಿದ್ದರು.

ಕಾಂಗ್ರೆಸ್ ಸರಕಾರದಿಂದ ಬಡವರಿಗೆ ಸೌಲಭ್ಯ

ಹೊಸನಗರ: ನಮ್ಮ ಕರ್ನಾಟಕ ಕಾಂಗ್ರೆಸ್ ಸರಕಾರ ಒಂದುವರೆ ವರ್ಷದಲ್ಲಿ 5ಗ್ಯಾರಂಟಿ ಯೋಜನೆಯ ಜತೆಗೆ ಸಾಕಷ್ಟು ಬಡ ಕುಟುಂಬಗಳಿಗೆ ಸ್ವಾವಲಂಬಿ ಜೀವನ ಸಾಗಿಸಲು ಸಾಕಷ್ಟು ಸಲಕರಣೆಗಳನ್ನು ವಿತರಿಸುತ್ತಿದ್ದು, ಅದನ್ನು ಸರಿಯಾಗಿ ಉಪಯೋಗಿಸಿಕೊಂಡಲ್ಲಿ ಜೀವನ ಸಾಗಿಸಲು ಅನುಕೂಲವಾಗುತ್ತದೆ ಎಂದು ಹೊಸನಗರ ಸಾಗರ ಕ್ಷೇತ್ರದ ಶಾಸಕರಾದ ಬೇಳೂರು ಗೋಪಾಲಕೃಷ್ಣರವರು ಹೇಳಿದರು.

ಹೊಸನಗರದ ಪಟ್ಟಣ ಪಂಚಾಯತಿ ಆವರಣದಲ್ಲಿ ಪಟ್ಟಣ ಪಂಚಾಯತಿ ವ್ಯಾಪ್ತಿಯ 2023-24ನೇ ಸಾಲಿನ ಎಸ್.ಎಫ್.ಸಿ ಶೇ 24.10 ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿಯ ಫಲಾನುಭವಿಗಳಿಗೆ ಟೈಲರಿಂಗ್ ಮಿಷನ್ ಹಾಗೂ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ 500 ಲೀಟರ್ ಸಿಂಟೆಕ್ಸ್ ಹಾಗೂ ವಿಕಚೇತನ ಫಲಾನುಭವಿಗೆ ಎಲೆಕ್ಟ್ರಿಕಲ್ ಗಾಡಿ ವಿತರಿಸಿ ಮಾತನಾಡಿದರು.

ನಮ್ಮ ಸರಕಾರ ಬಂದ ಮೇಲೆ ಸಾಕಷ್ಟು ಬಡ ಕುಟುಂಬಗಳ ಜೀವನ ಸಾಗಿಸಲು ಸಲಕರಣೆಗಳನ್ನು ಈಗಾಗಲೇ ನೀಡಲಾಗಿದೆ ಮುಂದಿನ ಬಜೆಟ್ ವೇಳೆಯಲ್ಲಿ ಪ್ರತಿಯೊಂದು ಪಟ್ಟಣ ಪಂಚಾಯಿತಿಗೂ ಸುಮಾರು ಅಂದಾಜು 5ಕೋಟಿ ಬಜೆಟ್ ನೀಡುವ ವಿಶ್ವಾಸವಿದ್ದು ಕೋಟಿ ಅನುದಾನದಲ್ಲಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಎಲ್ಲ ರಸ್ತೆಗಳು ಅಭಿವೃದ್ಧಿ ಮಾಡುವುದರ ಜತೆಗೆ ಪಟ್ಟಣ ಪಂಚಾಯತಿ ಯನ್ನು ಅಭಿವೃದ್ಧಿ ಮಾಡುವ ಯೋಜನೆ ಹೊಂದಿದ್ದೇವೆ ಎಂದರು.ಪಟ್ಟಣ ಪಂಚಾಯತಿ ವತಿಯಿಂದ 3 ಫಲಾನುಭವಿಗೆ ಸುಮಾರು 30ಸಾವಿರ ವೆಚ್ಚದಲ್ಲಿ ಮೂರು ಟ್ಯಲರಿಂಗ್ ಮಿಷನ್, 5ಫಲಾನುಭವಿಗೆ ಸುಮಾರು 29ಸಾವಿರ ವೆಚ್ಚದಲ್ಲಿ ಸಿಂಟೆಕ್ಸ್ ಹಾಗೂ 48ಸಾವಿರ ವೆಚ್ಚದಲ್ಲಿ ಅಂಗವಿಕಲ ಫಲಾನುಭವಿ ಶಿವಕುಮಾರ್‌ರವರಿಗೆ ಎಲೆಕ್ಟ್ರಿಕಲ್ ಗಾಡಿಯನ್ನು ಈ ಸಂದರ್ಭದಲ್ಲಿ ವಿತರಿಸಲಾಯಿತು.

ಹೊಸನಗರದ ಪಟ್ಟಣ ಪಂಚಾಯತಿ ಆವರಣದಲ್ಲಿ ಅಂಗವಿಕ ಶಿವಕುಮಾರ್‌ರವರಿಗೆ ಎಲೆಕ್ಟ್ರಿಕಲ್ ಬೈಕ್‌ನ್ನು ಬೇಳೂರು ಗೋಪಾಲಕೃಷ್ಣವರವರು ವಿತರಿಸುತ್ತಿರುವುದು.

ಈ ಕಾರ್ಯಕ್ರಮದಲ್ಲಿ ಪಟ್ಟಣ ಪಂಚಾಯತಿಯ ಮುಖ್ಯಾಧಿಕಾರಿ ಹರೀಶ್, ಆರೋಗ್ಯಾಧಿಕಾರಿ ಶೃತಿ, ಕಂದಾಯ ಇಲಾಖೆಯ ಮಂಜುನಾಥ್, ಪರಶುರಾಮ್, ಉಮಾ ಶಂಕರ್, ಗಿರೀಶ್, ಆಸ್ಮಾ, ನೇತ್ರಾ, ಸುಮಿತ್ರ, ತಿಲಕ್ ಪ್ರಸಾದ್, ಪಟ್ಟಣ ಪಂಚಾಯತಿ ಅಧ್ಯಕ್ಷ ನಾಗಪ್ಪ, ಉಪಾಧ್ಯಕ್ಷಣಿ ಚಂದ್ರಕಲಾ ನಾಗರಾಜ್, ಅಶ್ವಿನಿಕುಮಾರ್, ಗುರುರಾಜ್, ಶಾಹಿನ, ನಾಮ ನಿರ್ದೇಶಕ ಸದಸ್ಯ ಗುರುರಾಜ್ ನೇತ್ರಾ ಸುಬ್ರಾಯಭಟ್, ನಾಸೀರ್ ಶಾಸಕರ ಆಪ್ತ ಕಾರ್ಯದರ್ಶಿ ಸಣ್ಣಕ್ಕಿ ಮಂಜು, ಇನ್ನೂ ಮುಂತಾದವರು ಉಪಸ್ಥಿತರಿದ್ದರು.

ಆಧಾರ್ ತಿದ್ದುಪಡಿ ಸಮಸ್ಯೆ ಪರಿಹರಿಸಿ

ಆಧಾರ್ ಕಾರ್ಡ್ ಸಮಸ್ಯೆ ಪರಿಹಾರಕ್ಕೆ ಶಾಸಕ ವಿಜಯೇಂದ್ರ ಅಂಚೆ ಕಚೇರಿಗೆ ಭೇಟಿ ನೀಡಿದರು.

ಶಿಕಾರಿಪುರ: ಆಧಾರ್ ಕಾರ್ಡ್ ತಿದ್ದುಪಡಿ ಸಮಸ್ಯೆ ಮತ್ತು ಹೊಸ ಆಧಾರ್ ಕಾರ್ಡ್ ಮಾಡಿಸುವ ಸಮಸ್ಯೆ ತಾಲೂಕಿನಲ್ಲಿ ಹೆಚ್ಚಾಗುತ್ತಿದೆ. ಶಿಕಾರಿಪುರದಲ್ಲಿ ಎರಡೇ ಆಧಾರ್ ತಿದ್ದುಪಡಿ ಕೇಂದ್ರಗಳು ಇರುವುದರಿಂದ ಜನರಿಗೆ ಸಾಕಷ್ಟು ತೊಂದರೆಯಾಗಿದೆ ತಕ್ಷಣ ಈ ಸಮಸ್ಯೆ ಬಗೆಹರಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ,ಶಾಸಕ ಬಿ ವೈ ವಿಜಯೇಂದ್ರ ಸೂಚಿಸಿದರು.

ಆಧಾರ್ ಕಾರ್ಡ್ ಸಮಸ್ಯೆಯ ಬಗ್ಗೆ ಸ್ಥಳೀಯ ಪೋಸ್ಟ್ ಆಫೀಸ್‌ಗೆ ಭೇಟಿ ನೀಡಿ ಮಾತನಾಡಿ, ಎಲ್ಲಾ ಕೆಲಸಗಳಿಗೂ ಆಧಾರ್ ಕಾರ್ಡ್ ಅಗತ್ಯವಿದೆ. ಹಾಗಿದ್ದರೂ ಕೂಡ ಜನರನ್ನು ಅಲೆದಾಡಿಸುವುದು ಸರಿಯಲ್ಲ. ಸಿಸ್ಟಮ್ ಸರಿಯಿಲ್ಲ ಎಂದು ಹೇಳುವುದು ಟೋಕನ್ ಕೊಟ್ಟವರನ್ನೂ ಹಿಂದೆ ಕಳಿಸುವುದು ಸರಿಯಲ್ಲ. ಜನರು ತಮ್ಮ ದೈನಂದಿನ ಕೆಲಸ ಕಾರ್ಯಗಳನ್ನು ಬಿಟ್ಟು ಬಂದಿರುತ್ತಾರೆ ಜನ ಆಕ್ರೋಶಗೊಳ್ಳುವ ಮುನ್ನ ಸಂಬಂಧಿಸಿದ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪೋಸ್ಟ್ ಆಫೀಸ್ ಮತ್ತು ಎಸ್ ಬಿ ಐ ಪಕ್ಕದಲ್ಲಿ ಆಧಾರ್ ತಿದ್ದುಪಡಿ ಕೇಂದ್ರಗಳಿದ್ದರೂ ಇಲ್ಲಿನ ಜನಸಂಖ್ಯೆಗೆ ಸಾಕಾಗುತ್ತಿಲ್ಲ. ಎಸ್‌ಬಿಐ ಪಕ್ಕ ಜನ ಸಾಲುಗಟ್ಟಿ ನಿಂತಿರುತ್ತಾರೆ. ಇನ್ನಷ್ಟು ಕೇಂದ್ರಗಳ ಅಗತ್ಯವಿದೆ ಹೋಬಳಿ ಕೇಂದ್ರಗಳಲ್ಲಿ, ಗ್ರಾಮ ಒನ್ ಗಳಲ್ಲಿ ಆಧಾರ್ ತಿದ್ದುಪಡಿ ಕೇಂದ್ರಗಳನ್ನು ತೆರೆಯಬೇಕು ಎಂದರು.

ಮಾಜಿ ಎಂಎಡಿಬಿ ಅಧ್ಯಕ್ಷ ಕೆ ಎಸ್ ಗುರುಮೂರ್ತಿ, ಟಿಎಪಿಸಿಎಂಎಸ್ ಅಧ್ಯಕ್ಷ ಸುಧೀರ್ ಸಂಕ್ಲಾಪುರದ ಹನುಮಂತಪ್ಪ, ತಹಸೀಲ್ದಾರ್ ಮಲ್ಲೇಶ್ ಬಿ ಪೂಜಾರ್, ಭದ್ರಾಪುರದ ಪಾಲಾಕ್ಷಪ್ಪ, ಈರಣ್ಣ ಮುಂತಾದವರು ಉಪಸ್ಥಿತರಿದ್ದರು.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಮಹಾತ್ಮ ಗಾಂಧಿ
ನರೇಗಾ ಹಬ್ಬ

ನರೇಗಾ ಯೋಜನೆಯನ್ನು ಅತ್ಯುತ್ತಮವಾಗಿ ಅನುಷ್ಠಾನಿಸಿದ ಪಂಚಾಯತ್ ರಾಜ್ ಸಂಸ್ಥೆಗಳು ಹಾಗೂ ಅನುಷ್ಠಾನ ಇಲಾಖೆಗಳಿಗೆ 2023-24 ನೇ ಸಾಲಿನ ನರೇಗಾ ಪ್ರಶಸ್ತಿ ಪ್ರದಾನ
(2023-24 ರಿಂದ ಪ್ರಸ್ತುತವರೆಗೆ)
ದಿನಾಂಕ: 05 ನೇ ಫೆಬ್ರವರಿ 2025 | ಸಮಯ: ಬೆಳಿಗ್ಗೆ 11.00 ಗಂಟೆಗೆ | ಸ್ಥಳ: ಡಾ. ಬಿ.ಆರ್ ಅಂಬೇಡ್ಕರ್ ಭವನ, ವಸಂತ ನಗರ, ಬೆಂಗಳೂರು
"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ರಕ್ಷಿಸುವುದು ಮತ್ತು ಗೌರವಿಸುವುದು" - ಇದು ನಮ್ಮ ದೇಶದ ಪ್ರತಿಯೊಬ್ಬ ನಾಗರೀಕನ ಮೂಲಭೂತ ಕರ್ತವ್ಯ. ಸಂವಿಧಾನದಲ್ಲಿ ಇದನ್ನು ಪ್ರತಿಪಾದಿಸಲಾಗಿದೆ.
ಪ್ರಕಟಣೆ: ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ
Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್-5/2024-25/4932 ದಿನಾಂಕ:03-02-2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗೆ ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ **https:kppp.karnataka.gov.in** ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1)	PWD/2024-25/EL/WORK_INDENT17917	80.00

ಸೂಚನೆ: ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಬದಲಾದಲ್ಲಿ, ಮರು ಟೆಂಡರ್ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ) ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ **07-02-2025 ರಂದು 12.00 ಗಂಟೆಯ ವರೆಗೆ.** ಆ) ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **12-02-2025 ರಂದು 16.00 ಗಂಟೆಯ ವರೆಗೆ.** ಇ) ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ. **13-02-2025 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರ್,
ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/864/ಕೆಎಸ್‌ಎಂಸಿಎ/2024-25

ಕಿವಿ ಚುಚ್ಚಲು ಅನಸ್ತೇಷಿಯಾ: ಮಗು ಸಾವು

ಚಾಮರಾಜನಗರ: ಕಿವಿ ಚುಚ್ಚಲು ಅನಸ್ತೇಷಿಯಾ ನೀಡಿದ ಹಿನ್ನೆಲೆ ಆರು ತಿಂಗಳ ಗಂಡು ಮಗು ಸಾವನ್ನಪ್ಪಿದ ಘಟನೆ ಗುಂಡ್ಲುಪೇಟೆ ತಾಲೂಕಿನ ಬೊಮ್ಮಲಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನಡೆದಿದೆ. ವೈದ್ಯರ ನಿರ್ಲಕ್ಷ್ಯಕ್ಕೆ ಮಗು ಸಾವನ್ನಪ್ಪಿದೆ ಎಂದು ಪೋಷಕರು ಆರೋಪಿಸಿದ್ದಾರೆ. ತಾಲೂಕಿನ ಹಂಗಳ ಗ್ರಾಮ ಆನಂದ್-ಶುಭ ದಂಪತಿಯ ಆರು ವರ್ಷದ ಗುಂಡು ಮಗು ಅಸುನೀಗಿದೆ. ಬಾಣಂತನಕ್ಕೆ ತಾಯಿ ಶುಭ ಸ್ವಗ್ರಾಮ ಶೆಟ್ಟಹಳ್ಳಿಯಲ್ಲಿದ್ದರು. ಕಿವಿ ಚುಚ್ಚಿಸುವ ಸಲುವಾಗಿ ಮಗುವನ್ನು ಬೊಮ್ಮಲಾಪುರ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ವೈದ್ಯ ಡಾ.ನಾಗರಾಜು ಮಗುವಿನ ಎರಡು ಕಿವಿಗಳಿಗೆ ಅನಸ್ತೆಷಿಯಾ ಚುಚ್ಚುಮದ್ದು ನೀಡಿದ್ದಾರೆ. ಈ ವೇಳೆ ಓವರ್ ಡೋಸ್ ಆಗಿದ್ದು, ಮಗುವಿನ ಬಾಯಿಯಲ್ಲಿ ನೊರೆ ಬಂದು ಪ್ರಜ್ಞಾಹೀನ ಸ್ಥಿತಿ ತಲುಪಿದೆ. ನಂತರ ವೈದ್ಯರು ತಾಲೂಕು ಆಸ್ಪತ್ರೆಗೆ ಕರೆದೊಯ್ಯಲು ಸೂಚಿಸಿದರು.ಆದರೆ ಬೊಮ್ಮಲಾಪುರ ಆಸ್ಪತ್ರೆಯಲ್ಲಿಯೇ ಮಗು ಅಸುನೀಗಿದೆ. ಇದಕ್ಕೆ ವೈದ್ಯರ ಎಡವಟ್ಟೇ ಕಾರಣ ಎಂದು ಪೋಷಕರು ದೂರಿದ್ದಾರೆ.

ವೈದ್ಯರ ವಿರುದ್ಧ ಕ್ರಮಕ್ಕೆ ಸಿದ್ಧ: ಈ ಸಂಬಂಧ ಗುಂಡ್ಲುಪೇಟೆ ತಾಲೂಕು ಆರೋಗ್ಯಾಧಿಕಾರಿ ಡಾ.ಅಲೀಂ ಪಾಷಾ ಪ್ರತಿಕ್ರಿಯೆ ನೀಡಿ, ಕಿವಿ ಚುಚ್ಚುವ ವೇಳೆ ನೋವಾಗಬಾರದೆಂದು ವೈದ್ಯರು ಅನಸ್ತೇಷಿಯಾ ಕೊಟ್ಟಿದ್ದಾರೆ. ನಂತರ ಮಗುವಿಗೆ ಫಿಟ್ಸ್ ಕಾಣಿಸಿಕೊಂಡು ಅಸುನೀಗಿದೆ ಎಂದು ವೈದ್ಯರು ತಿಳಿಸಿದ್ದಾರೆ. ಮರಣೋತ್ತರ ಪರೀಕ್ಷೆ ನಂತರ ಸೂಕ್ತ ಕಾರಣ ತಿಳಿಯಲಿದ್ದು, ವೈದ್ಯರ ನಿರ್ಲಕ್ಷ್ಯ ಧೃಢಪಟ್ಟರೆ ಕ್ರಮ ಕೈಗೊಳ್ಳಲಾಗುವುದು ಎಂದು ಸ್ಪಷ್ಟಪಡಿಸಿದರು.

ಸನಾತನ ಪರಂಪರೆಗೆ ಅಪಮಾನ ಸಹಿಸುವುದಿಲ್ಲ

ಭಾರತೀಯ ಸಂಸ್ಕೃತಿ ಉತ್ಸವದಲ್ಲಿ ಶಾಸಕ ಯತ್ನಾಳ್ ಎಚ್ಚರಿಕೆ | ಸನಾತನ ಸಂಸ್ಕೃತಿ ರಕ್ಷಣೆ ನಮ್ಮ ಧ್ಯೇಯವಾಗಲಿ

ಕಲಬುರಗಿ: ನಮ್ಮ ಸನಾತನದ ಸಂಸ್ಕೃತಿ ಹಾಗೂ ಪರಂಪರೆಗೆ ಆಗುತ್ತಿರುವ ಅಪಮಾನಗಳನ್ನು ನಾವು ಎಂದಿಗೂ ಸಹಿಸುವುದಿಲ್ಲ ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಎಚ್ಚರಿಕೆ

ಸೇಡಂ ತಾಲೂಕಿನ ಬೀರನಳ್ಳಿಯ ಪ್ರಕೃತಿ ನಗರದಲ್ಲಿ ನಡೆಯುತ್ತಿರುವ ಕೊತ್ತಲ ಸ್ವರ್ಣ ಜಯಂತಿ ಹಾಗೂ ಏಳನೇ ಭಾರತೀಯ ಸಂಸ್ಕೃತಿ ಉತ್ಸವದಲ್ಲಿ ಮಂಗಳವಾರ 'ಪ್ರಕೃತಿ ಮತ್ತು ನಾವು' ಸಮ್ಮೇಳನ ಉದ್ಘಾಟಿಸಿ ಯತ್ನಾಳ್ ಮಾತನಾಡಿದರು.

ದೇಶದಲ್ಲಿ ಪ್ರಕೃತಿಯೊಂದಿಗೆ ವಿಕೃತ ಮನುಸ್ಸುಗಳು ದಿನನಿತ್ಯ ಚೆಲ್ಲಾಟವಾಡುತ್ತಿವೆ. ಇತ್ತೀಚೆಗೆ ಚಾಮರಾಜಪೇಟೆಯಲ್ಲಿ ಗೋವಿನ ಕೆಚ್ಚಲು ಕೊಯ್ದಿದ್ದು ಸನಾತನ ಧರ್ಮಕ್ಕೆ ದೊಡ್ಡ ಅಪಮಾನ ಮಾಡಿದ್ದಾರೆ ಎಂದ ಅವರು, ರಾಜ್ಯದಲ್ಲಿ ಅಭಿವೃದ್ಧಿ ಎಂದರೆ ಕೇವಲ ರಸ್ತೆ ನಿರ್ಮಾಣ, ವಿಮಾನ ನಿಲ್ದಾಣ ಮಾಡುವುದು, ಡ್ಯಾಂ ಕಟ್ಟಿಸುವುದು ಅಷ್ಟೇ ಅಲ್ಲ. ಬದಲಾಗಿ ನಮ್ಮ ಸಂಸ್ಕೃತಿ, ನಮ್ಮತನ, ನಮ್ಮವರನ್ನು ಉಳಿಸಿಕೊಂಡು ನಮಗೆ ಸಂಬಂಧ ಪಟ್ಟ ದೇವರ ಉಳಿವಿಗಾಗಿ ಕೆಲಸ ಮಾಡುವುದು ಕೂಡ ನಮ್ಮ ಮೂಲ ಉದ್ದೇಶವಾಗಿರಬೇಕು. ಕೆಚ್ಚಲು ಕೊಯ್ಯುವಂತಹ ಘಟನೆಗಳು ರಾಜ್ಯದಲ್ಲಿ ನಡೆಯುತ್ತಿದ್ದರು ನಾವು ಸುಮ್ಮನೆ ಕೂರುವುದು ಸರಿಯಲ್ಲ. ಸ್ವಾಭಿಮಾನಿಯಾಗಿ ನಮ್ಮತನವನ್ನು ಉಳಿಸುವುದು ನಮ್ಮ ಹಕ್ಕು ಎಂದು ಹೇಳಿದರು.

ನಿಸರ್ಗದ ಜತೆ ಚೆಲ್ಲಾಟ ನಿಲ್ಲಿಸಿ: ನಿಸರ್ಗದ ಜತೆಗೆ ಚೆಲ್ಲಾಟ ಕೂಡಲೇ ನಿಲ್ಲಿಸಬೇಕು. ಪ್ರಕೃತಿಯ ವಿರುದ್ಧವಾದ ಕಾರ್ಯಗಳಿಗೆ ಕೈಹಾಕಿದಾಗ ಅದಕ್ಕೆ ತಕ್ಕವಾದ ಪಾಠ ಪ್ರಕೃತಿಯಿಂದ ಎದುರಿಸಬೇಕಾಗುತ್ತದೆ. ಪ್ರಕೃತಿಗೆ ಪ್ರಿಯವಾದ ಗೋವಿನ ಉಳಿವಿಗೆ ವಿಜಯಪುರದಲ್ಲಿ 45ರಿಂದ ಪ್ರಾರಂಭವಾದ ಗೋಶಾಲೆ, ಇದೀಗ 1000 ಗೋವುಗಳುಳ್ಳ ಅತಿದೊಡ್ಡ ಗೋಶಾಲೆಯಾಗಿ ಹೊರಹೊಮ್ಮಿದೆ ಎಂದು ಯತ್ನಾಳ್ ವಿವರಿಸಿದರು.

ವಿವಿಧ ಗಣ್ಯರು ಭಾಗಿ: ತೆಲಂಗಾಣದ ಹಸಿರು ಕ್ರಾಂತಿ ಪರಿಷತ್ತಿನ ಅಧ್ಯಕ್ಷೆ ಲೀಲಾ ಲಕ್ಷ್ಮಾರೆಡ್ಡಿ, ಜಮ್ಮು -ಕಾಶ್ಮೀರ ಅಧ್ಯಯನ ಕೇಂದ್ರದ ಸದಸ್ಯೆ ಹಾಗೂ ಕಾಶ್ಮೀರ ಫೈಲ್ಸ್ ಚಲನಚಿತ್ರದ ನಟಿ ಭಾಷಾ ಸುಂಬಲಿ ಮಾತನಾಡಿದರು.

ಈ ವೇಳೆ ಜಮ್ಮು ಕಾಶ್ಮೀರ ಅಧ್ಯಯನ ಸಂಸ್ಥೆ ಅಧ್ಯಕ್ಷೆ ಶಕ್ತಿ ಮುನ್ಶಿಜಿ, ಲಾತೂರಿನ ಪರಿಸರ ಸಂಯೋಜನೆ ಮತ್ತು ವ್ಯಕ್ತಿ ವಿಕಾಸ ಕೇಂದ್ರದ ನಿರ್ದೇಶಕ ಮಹಾದೇವ ಗೊಮಾರೆ, ಶಿಕ್ಷಣ ತಜ್ಞ ಡಾ. ಗುರುರಾಜ ಕರಜಗಿ, ಪರಬಣಿಯ ವಸಂತರಾವ ನಾಯಕ್ ಕೃಷಿ ವಿಶ್ವವಿದ್ಯಾಲಯದ ಉಪಕುಲಪತಿ ಇಂದ್ರಮಣಿ, ನವದೆಹಲಿಯ ಸೇವಾ ಇಂಟರ್‌ನ್ಯಾಷನಲ್ ಕಾರ್ಯದರ್ಶಿ ಶ್ಯಾಮ್ ಪರಂಡೇಜಿ, ತೆಲಂಗಾಣದ ರವಿ ಮೇರೆಡ್ಡಿ, ಮುಂಬಯಿನ ಸಮಸ್ತ ಮಹಾಜನ ಟ್ರಸ್ಟ್ ಸದಸ್ಯ ಗಿರಿಶಬಾಯ್ ಶಹಾ, ಧನ್ ಬಹಾದ್ದೂರ ಛತ್ರಿ, ವಿವೇಕ್ ತ್ಯಾಗಿ, ಅರವಿಂದ ತಿವಾರಿ ಮೊದಲಾದವರು ಇದ್ದರು.

ಕೇವಲ 20 ದಿನಗಳಲ್ಲಿ ಕಲಬುರಗಿ ಜಿಲ್ಲೆಯ ಚಿಂಚೋಳಿಯಲ್ಲಿ 17 ಸಾವಿರ ಸಸಿಗಳನ್ನು ನೆಡುವ ಮೂಲಕ ಪ್ರಕೃತಿಗೆ ಪೂರಕವಾದ ಕೆಲಸವನ್ನು ಮಾಡಲಾಗಿದೆ. ಪ್ರಕೃತಿಯಪ್ರಿಯವಾದ ಸಮಾಜದ ನಿರ್ಮಾಣಕ್ಕೆ ನಾವೆಲ್ಲರೂ ಕೈಜೋಡಿಸಬೇಕು. ಪ್ರಕೃತಿ ಮೇಲೆ, ಮಹಿಳೆಯರ ಮೇಲೆ, ಗೋವುಗಳ ಮೇಲೆ ನಡೆಸಲಾಗುತ್ತಿರುವ ಹಲ್ಲೆಗಳು ಖಂಡನೀಯ. ಹೀಗಾಗಿ ಸಮಾಜದಲ್ಲಿ ಬದಲಾವಣೆ ಬಯಸುವ ಮುನ್ನ ನಮ್ಮಲ್ಲಿ ಮೊದಲು ಬದಲಾವಣೆ ತರೋಣ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಕರೆ ನೀಡಿದರು.

ತ್ಯಾಗಮಯ ಜೀವನದಿಂದ ಶಾಂತಿ

ಪ್ರಕೃತಿಯು ನಮಗೆ ತ್ಯಾಗಮಾಡಿದಂತೆ ನಾವು ಪ್ರಕೃತಿಗೆ ತ್ಯಾಗಮಾಡುವ ಮನಸ್ಥಿತಿ ಬೆಳೆಸಿಕೊಂಡಾಗ ವಿಶ್ವಶಾಂತಿ ಮೂಡುತ್ತದೆ. ವ್ಯಕ್ತಿ ವಿಕಾಸ, ಕುಟುಂಬ ವಿಕಾಸ, ಸಮಾಜದ ಪರಿಕಲ್ಪನೆ ಮೂಡಿಸಿಕೊಂಡು ಶಾರೀರಿಕ, ಮಾನಸಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕ ಸಂಸ್ಕಾರ ಬೆಳೆಸಿಕೊಂಡಾಗ ಸಮಗ್ರ ವಿಕಾಸ ಸಾಧ್ಯವಾಗುತ್ತದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತ ವಿದ್ಯಾಭಾರತಿ ಅಧ್ಯಕ್ಷ ಮತ್ತು ದಕ್ಷಿಣ ಮಧ್ಯ ಸಹ ಸಂಘಚಾಲಕ ದೂಸಿ ರಾಮಕೃಷ್ಣರಾವ್ ಹೇಳಿದರು.



ರಾಜಕಾರಣಿಗಳು ತಮ್ಮ ಸ್ವಾರ್ಥಕ್ಕೆ ಕಾರ್ಯಕ್ರಮ ನಡೆಸುತ್ತಾರೆ.ಆದರೆ, ಬಸವರಾಜ ಪಾಟೀಲ್ ಸೇಡಮ್ ಅವರು ಭವಿಷ್ಯದ ಮಕ್ಕಳಿಗಾಗಿ,ನಮ್ಮ ಸಂಸ್ಕೃತಿ ಉಳಿವಿಗಾಗಿ ರಾಜಕೀಯವನ್ನೇ ತ್ಯಾಗ ಮಾಡಿ ಇಂತಹ ಉತ್ಸವಗಳನ್ನು ಮಾಡುವ ಮುಖೇನ ನಮಗೆಲ್ಲರಿಗೂ ಪ್ರೇರಣೆಯಾಗಿದ್ದಾರೆ.

- ಬಸನಗೌಡ ಪಾಟೀಲ್ ಯತ್ನಾಳ್ ಶಾಸಕ

ಧರ್ಮರಕ್ಷಣೆಗಾಗಿ ಕ್ರಾಂತಿವೀರ ಬ್ರಿಗೇಡ್

← ಮೊದಲಪುಟದಿಂದ

ಕಾಗಿನೆಲೆ ಕನಕಗುರುಪೀಠ ತಿಂಥಿಣಿ ಶಾಖಾಮಠದ ಸಿದ್ದರಾಮಾನಂದಪುರಿ ಸ್ವಾಮೀಜಿ, ಲೋಕಾಪುರದ ಜಗದೀಶ ಆನಂದ ಸ್ವಾಮೀಜಿ, ಮಕನಾಪುರದ ಸೋಮೇಶ್ವರ ಸ್ವಾಮೀಜಿ, ಹುಲಜಂತಿ ಮಾಲಿಂಗರಾಯರು, ಅಮರೇಶ್ವರ ಸ್ವಾಮಿಜಿ, ಸಿದ್ಧಲಿಂಗ ಸ್ವಾಮೀಜಿ, ಶಿವಪ್ರಕಾಶ ಶಿವಾಚಾರ್ಯ ಸ್ವಾಮೀಜಿ, ಅಭಿನವ ಸಂಗನಬಸವ ಶಿವಾಚಾರ್ಯ ಸ್ವಾಮೀಜಿ ಸೇರಿದಂತೆ ಸಾವಿರಾರು ಮಠಾಧೀಶರು ಉಪಸ್ಥಿತರಿದ್ದರು. ಸಮಾರಂಭದಲ್ಲಿ 50 ಸಾವಿರಕ್ಕೂ ಅಧಿಕ ಜನಸ್ತೋಮ ಭಾಗಿಯಾಗಿತ್ತು.

ಬೃಹತ್ ಕುಂಭೋತ್ಸವ

ಬ್ರಿಗೇಡ್ ಉದ್ಘಾಟನೆಗೂ ಮುನ್ನ ಬಸವನಬಾಗೇವಾಡಿ ಪಟ್ಟಣದಲ್ಲಿ 1008 ಮಹಿಳೆಯರಿಂದ ಬೃಹತ್ ಕುಂಭೋತ್ಸವ ಜರುಗಿತು. ಕನ್ನೇರಿ ಸ್ವಾಮೀಜಿ ನೇತೃತ್ವದಲ್ಲಿ ಸ್ವಾಮೀಜಿಗಳು ಕುಂಬಳಕಾಯಿ ಒಡೆದು ಬೃಹತ್ ತೆರೆ ಅನಾವರಣಗೊಳಿಸಿ ಲಾಂಛನ ಬಿಡುಗಡೆಗೊಳಿಸಿದರು.ಜತೆಗೆ ಬ್ರಿಗೇಡ್ ಗೀತೆ ಹಾಗೂ ಬ್ರಿಗೇಡ್ ಗೀತೆಯ ಸಿ.ಡಿ. ಅನಾವರಣಗೊಳಿಸಿದರು.

ದಿನದಿಂದ ದಿನಕ್ಕೆ ಹಿಂದೂಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಹಿಂದೂಗಳ ಜನಸಂಖ್ಯೆ ಶೇ.50ಕ್ಕಿಂತಲೂ ಕಡಿಮೆಯಾದಾಗ ಸಂವಿಧಾನ, ಪ್ರಜಾತಂತ್ರ ಉಳಿಯಲ್ಲ. ಬಾಂಗ್ಲಾದೇಶ ಇದಕ್ಕೆ ಸೂಕ್ತ ಉದಾಹರಣೆ. ಕೇರಳದ ಕಲ್ಲಿಕೋಟೆಯಲ್ಲಿ ಕಿಟಕಿ ಬದಲಾಯಿಸಲು ಇಸ್ಲಾಂ ಧರ್ಮ ಸೇರಬೇಕಾಗಿದೆ. ಕಾಸರಗೋಡಿನಲ್ಲಿ ಹಿಂದೂಗಳ ಮನೆಯ ಮುಂದೆಯೇ ಗೋವು ಕಡಿದು ಮಾಂಸ ಹಂಚಿಕೊಳ್ಳುತ್ತಾರೆ.

- ಕಾಡಸಿದ್ದೇಶ್ವರ ಸ್ವಾಮೀಜಿ ಕನ್ನೇರಿ ಮಠ

ಸಾರ್ವಜನಿಕ ಗ್ರಂಥಾಲಯ ಇಲಾಖೆ
ಉಪನಿರ್ದೇಶಕರ ಕಛೇರಿ, ನಗರ ಕೇಂದ್ರ ಗ್ರಂಥಾಲಯ, ಉತ್ತರ ವಲಯ, ಮಲ್ಲೇಶ್ವರಂ, ಬೆಂಗಳೂರು-560 003. ದೂರವಾಣಿ: 080-23567065,
E-mail: cclnzlibrary@gmail.com, dd_ccl_nz_bbl@yahoo.co.in

ಸಂ:ನಕೇಗ್ರಂ/ಉವ/ಲೆಪವಿ/34/ದಿಪ&ನಿಕಾಸ/1388/2024-25, ದಿನಾಂಕ : 01-02-2025

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

2024-25 ನೇ ಸಾಲಿನಲ್ಲಿ ನಗರ ಕೇಂದ್ರ ಗ್ರಂಥಾಲಯ, ಉತ್ತರ ವಲಯ, ಮಲ್ಲೇಶ್ವರಂ,, ಬೆಂಗಳೂರು ಈ ಕಛೇರಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಾಖಾ/ವಾಚನಾಲಯ/ಗ್ರಾಮ ಪಂಚಾಯತಿ ಗ್ರಂಥಾಲಯಗಳಿಗೆ ದಿನನಿತ್ಯ ಅವಶ್ಯಕವಿರುವ ದಿನಪತ್ರಿಕೆ ಹಾಗೂ ನಿಯತಕಾಲಿಕೆಗಳನ್ನು ಗರಿಷ್ಠ ಸೋಡಿ ಆಧಾರದ ಮೇಲೆ ಸರಬರಾಜು ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 2000 ರ ಪ್ರಕಾರ **ದಿನಾಂಕ: 01-02-2025 ರಂದು** ಈ ಕಛೇರಿಯಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ ಲಕೋಟೆ ಪದ್ಧತಿಯಲ್ಲಿ ಇ-ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅನುಭವವುಳ್ಳ ಸಂಸ್ಥೆಯವರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಭಾಗವಹಿಸಬಹುದು. ಟೆಂಡರ್‌ಗಿಟ್ಟ ಅಂದಾಜು **ಮೊತ್ತ ರೂ.150.00 ಲಕ್ಷ.** ಇ.ಎಂ.ಡಿ. **ಮೊತ್ತ ರೂ. 3,00,000/-**ಟೆಂಡರ್‌ನಲ್ಲಿ **https://www.kppp.karnataka.gov.in** ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ **ದಿನಾಂಕ: 15-02-2025 ನಮಯ. ಸಂಜೆ 4.00 ಗಂಟೆ.** ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 17-02-2025 ಸಮಯ ಸಂಜೆ 4.30 ಗಂಟೆ.** ಟೆಂಡರ್‌ದಾರರು ಹೆಚ್ಚಿನ ವಿವರಗಳನ್ನು ಈ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯುವುದು.

ಸಹಿ/- ಉಪನಿರ್ದೇಶಕರು,
ನಗರ ಕೇಂದ್ರ ಗ್ರಂಥಾಲಯ, ಉತ್ತರ ವಲಯ, ಮಲ್ಲೇಶ್ವರಂ, ಬೆಂಗಳೂರು

DIPR/CP/AAPL/RO4817/24-25

ಸಾರ್ವಜನಿಕ ಗ್ರಂಥಾಲಯ ಇಲಾಖೆ
ಉಪನಿರ್ದೇಶಕರ ಕಛೇರಿ, ನಗರ ಕೇಂದ್ರ ಗ್ರಂಥಾಲಯ, ದಕ್ಷಿಣ ವಲಯ, 7ನೇ ಮುಖ್ಯ ರಸ್ತೆ, ಬಿ.ಟಿ.ಎಂ. 2ನೇ ಹಂತ, ಬೆಂಗಳೂರು-560 076.
ದೂರವಾಣಿ: 080-26548829, E-mail: cclsouthzone@gmail.com

ಸಂಖ್ಯೆ:ನಕೇಗ್ರಂ/ದವ/ಎ2/ಟಿ-5/ಕ್ರಿ. ಸಿಂಪಡಣೆ/815/2024-25 ದಿನಾಂಕ: 04-02-2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ನಗರ ಕೇಂದ್ರ ಗ್ರಂಥಾಲಯ ದಕ್ಷಿಣ ವಲಯ, ಬೆಂಗಳೂರು ಈ ಕಛೇರಿ ವ್ಯಾಪ್ತಿಯಲ್ಲಿ ಬರುವ ಶಾಖಾ/ಸೇವಾ ಕೇಂದ್ರ ಗ್ರಂಥಾಲಯಗಳಿಗೆ 2024-25ನೇ ಸಾಲಿಗೆ ಕ್ರಿಮಿನಾಶಕ ಸಿಂಪಡನೆ ಮಾಡಲು ಎರಡು ವರ್ಷಗಳ ಅನುಭವವುಳ್ಳ ನೋಂದಾಯಿತ ಸಂಸ್ಥೆಯವರು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್‌ನಲ್ಲಿ ಭಾಗವಹಿಸಬಹುದು. **ಟೆಂಡರ್ ಅಂದಾಜು ಮೊತ್ತ ರೂ. 10.00 ಲಕ್ಷ (ಹತ್ತು ಲಕ್ಷ ಮಾತ್ರ)** ಇ.ಎಂ.ಡಿ. **ಮೊತ್ತ ರೂ 20.00 ಸಾವಿರ (ಇಪ್ಪತ್ತು ಸಾವಿರ ಮಾತ್ರ).** ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವವರು **https://kppp.karnataka.gov.in/** ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಹಾಗೂ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 13-02-2025 ಸಂಜೆ: 05.00 ಗಂಟೆ** ಮತ್ತು ತಾಂತ್ರಿಕ ಬಿಡ್ಡುಗಳನ್ನು ತೆರೆಯುವ **ದಿನಾಂಕ: 14-02-2025 ರಂದು ಸಂಜೆ: 5.00 ಗಂಟೆಗೆ ತೆರೆಯಲಾಗುವುದು.** ಆರ್ಥಿಕ ಲಕೋಟೆ ತೆರೆಯುವ ದಿನಾಂಕವನ್ನು ಮುಂದೆ ತಿಳಿಸಲಾಗುವುದು.

ಟೆಂಡರುದಾರರು ಹೆಚ್ಚಿನ ವಿವರಗಳನ್ನು ಕಛೇರಿ ಕೆಲಸದ ವೇಳೆಯಲ್ಲಿ ಪಡೆಯುವುದು. **ಕಛೇರಿ ದೂರವಾಣಿ ಸಂಖ್ಯೆ 080-26548829**

ಸಹಿ/- ಉಪನಿರ್ದೇಶಕರು,
ನಗರ ಕೇಂದ್ರ ಗ್ರಂಥಾಲಯ, ದಕ್ಷಿಣ ವಲಯ, ಬೆಂಗಳೂರು

DIPR/CP/AAPL/RO4820/24-25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ, ಮಡಿಕೇರಿ

ಟೆಂಡರ್ ಪ್ರಕಟಣೆ ಸಂಖ್ಯೆ: 24/2024-25/3193-97 ದಿನಾಂಕ : 31-01-2025

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್-ಕೆ.ಡಬ್ಲ್ಯೂ-3 ರನ್ವಯ ದ್ವಿ-ಲಕೋಟೆ ಪದ್ಧತಿಯಲ್ಲಿ ಲೋಕೋಪಯೋಗಿ ಇಲಾಖೆಯ ಕೊಡಗು ವಿಭಾಗದ ವ್ಯಾಪ್ತಿಯಲ್ಲಿ ಲೆ.ಶೀ: 8443- ಠೇವಣಿ ವಂತಿಕೆ ಅಡಿಯಲ್ಲಿ 1 ಕಾಮಗಾರಿಯನ್ನು ಇ-ಸಂಗ್ರಹಣಾ ವೇದಿಕೆ ಮೂಲಕ 2ನೇ ಕರೆ ಟೆಂಡರ್ ಆಹ್ವಾನಿಸಲಾಗಿದ್ದು, ಕಾಮಗಾರಿಗಳ ಟೆಂಡರಿಗಿಟ್ಟ ಮೊತ್ತ ಕನಿಷ್ಟ ರೂ.67.05 ಲಕ್ಷಗಳಾಗಿರುತ್ತದೆ. ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ರಾಜ್ಯ ಸರ್ಕಾರದ ಇ-ಸಂಗ್ರಹಣಾ ವೇದಿಕೆ ಮುಖಾಂತರ ಪಡೆಯಬಹುದಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 15-02-2025 ಸಂಜೆ 5.00 ಗಂಟೆಯಾಗಿರುತ್ತದೆ. ಟೆಂಡರ್ ಸಂಪೂರ್ಣ ವಿವರಗಳನ್ನು ಇ-ಸಂಗ್ರಹಣಾ ವೇದಿಕೆ https://kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಯಾವುದೇ ತಿದ್ದುಪಡಿ/ಮಾರ್ಪಾಡುಗಳನ್ನು ಇ- ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/-
ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ,
ಕೊಡಗು ವಿಭಾಗ, ಮಡಿಕೇರಿ

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ.

ಸಂಖ್ಯೆ: ಲೋ.ಇ./ಬೆವಿ/ತಾಂಶಾ/ಗುತ್ತಿಗೆ/2024-25/6256 ದಿನಾಂಕ:31/01/2025

-: ಟೆಂಡರ ಅಧಿಸೂಚನೆ (ಕೆ.ಪಿ.ಪಿ.ನಲ್ಲಿ):-

ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ- 1, & 4 ರಲ್ಲಿ ಲೆಕ್ಕ ಶೀರ್ಷಿಕೆ: 3054- ರಾಜ್ಯ ಹೆದ್ದಾರಿ ನಿರ್ವಹಣೆ, 3054- ಜಿಲ್ಲಾ ಮುಖ್ಯ ರಸ್ತೆಗಳು ನಿರ್ವಹಣೆ, 2059 ಸುವರ್ಣ ಸೌಧ ಕಟ್ಟಡಗಳ ನಿರ್ವಹಣೆ ಹಾಗೂ 2216 ವಸತಿ ಗೃಹ ನಿರ್ವಹಣೆ ಅಡಿಯಲ್ಲಿ ಸೇರಿ ಒಟ್ಟು 16 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು ಕನಿಷ್ಠ ಹಾಗೂ ಗರಿಷ್ಠ ಗುತ್ತಿಗೆಗೆ ಇಟ್ಟ ಅಂದಾಜು ಮೊತ್ತವು ಅನುಕ್ರಮವಾಗಿ ರೂ. 1.785 ಲಕ್ಷಗಳು ಹಾಗೂ ರೂ. 149.56 ಲಕ್ಷಗಳು ಇದ್ದು, ಮುಂಗಡ ಠೇವಣಿ ಮೊತ್ತವು ಕನಿಷ್ಠ ಹಾಗೂ ಗರಿಷ್ಠ ಅನುಕ್ರಮವಾಗಿ ರೂ. 4,500/- ಹಾಗೂ ರೂ. 2,24,400/- ಇರುತ್ತದೆ. ಭಾಗ-1 : ಟೆಂಡರ ಸ್ವೀಕರಿಸುವ ದಿನಾಂಕ 10.02.2025 ರ ಸಂಜೆ 4.30 ಘಂಟೆಯರೆಗೆ, ಟೆಂಡರ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 11.02.2025 ರ ಸಂಜೆ 4.45 ಘಂಟೆ ಹಾಗೂ ಭಾಗ-2: ಟೆಂಡರ ಸ್ವೀಕರಿಸುವ ದಿನಾಂಕ 11.02.2025 ರ ಸಂಜೆ 4.30 ಘಂಟೆಯರೆಗೆ ಮತ್ತು ಆರ್ಥಿಕ ಬಿಡ್ ತರೆಯುವ ದಿನಾಂಕ 12.02.2025 ರ ಸಂಜೆ 4.45 ರ ನಂತರ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ದಿನಾಂಕ: 31.01.2025 ರ ನಂತರ ಪಡೆಯಬಹುದು.

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ.

DIPR/BGM/RO-NO-1592/KSMCA/2024-25

ಜಿಲ್ಲಾ ಪಂಚಾಯತ ಬಾಗಲಕೋಟೆ
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ
ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ 126, ನವನಗರ, ಬಾಗಲಕೋಟೆ
ದೂರವಾಣಿ : 08354-235042, ಇ-ಮೇಲ್: bgkeezpe@yahoo.com

ಸಂಖ್ಯೆ : ಕಾ.ನಿ.ಇಂ./ಪಂ.ರಾ.ಇಂ.ವಿ./ಬಿ.ಜಿ.ಕೆ./ಪಿಬಿ-2,3/ಟೆಂಡರ್/ ಎಸ್.ಸಿ.ಪಿ./ಟಿ.ಎಸ್.ಪಿ./2023-24/4489 ದಿನಾಂಕ : 31-01-2025

ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣಿ
(ಏಕ-ಲಕೋಟೆ) ಕೆ.ಡಬ್ಲ್ಯೂ. 1 & 2 ಬಿಡ್ ಡಾಕ್ಯೂಮೆಂಟ್

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ, ಬೆಂಗಳೂರು / ಲೋಕೋಪಯೋಗಿ ಇಲಾಖೆ ಇವರಲ್ಲಿ ಎನ್‌ರೋಲ್‌ಮೆಂಟ್ ದಾಖಲಾತಿಗಳೊಂದಿಗೆ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ 1) 2023-24 ನೇ ಸಾಲಿನ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಕಾರ್ಯಕ್ರಮದಡಿ ಲೆಕ್ಕಶೀರ್ಷಿಕೆ : 5054-03-337-0-75-422/423 ರಡಿ ಬಾಗಲಕೋಟೆ ಜಿಲ್ಲಾ ವ್ಯಾಪ್ತಿಯ ತೇರದಾಳ ವಿಧಾನಸಭಾ ಕ್ಷೇತ್ರಕ್ಕೆ ರೂ. 25.00 ಲಕ್ಷ ಹಂಚಿಕೆಯಾಗಿರುವ ಅನುದಾನ ತೇರದಾಳ ವಿಧಾನಸಭಾ ಕ್ಷೇತ್ರ ಮತ್ತು 2) 2023-24 ನೇ ಸಾಲಿನ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಕಾರ್ಯಕ್ರಮದಡಿ ಲೆಕ್ಕಶೀರ್ಷಿಕೆ : 5054-03-337-0-75-422/423 ರಡಿ ಬಾಗಲಕೋಟೆ ಜಿಲ್ಲಾ ವ್ಯಾಪ್ತಿಯ ವಿವಿಧ ವಿಧಾನಸಭಾ ಕ್ಷೇತ್ರಗಳಿಗೆ ಹಂಚಿಕೆಯಾಗಿರುವ ಅನುದಾನದ ರೂ. 90.00 ಲಕ್ಷ ಅನುದಾನ ಬೀಳಗಿ ವಿಧಾನಸಭಾ ಕ್ಷೇತ್ರ ಅಡಿಯಲ್ಲಿ ಹಾಗೂ 3) 2023-24 ನೇ ಸಾಲಿನ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಕಾರ್ಯಕ್ರಮದಡಿ ಲೆಕ್ಕಶೀರ್ಷಿಕೆ : 5054-03-337-0-75-422/423 ರಡಿ ಬಾಗಲಕೋಟೆ ಜಿಲ್ಲಾ ವ್ಯಾಪ್ತಿಯ ವಿವಿಧ ವಿಧಾನಸಭಾ ಕ್ಷೇತ್ರಗಳಿಗೆ ಹಂಚಿಕೆಯಾಗಿರುವ ಅನುದಾನದ ರೂ. 100.00 ಲಕ್ಷ ಬಾಗಲಕೋಟೆ ವಿಧಾನಸಭಾ ಕ್ಷೇತ್ರ, ಬಾಗಲಕೋಟೆ ಜಿಲ್ಲೆಯ ಬೀಳಗಿ ಬಾಗಲಕೋಟೆ ಹಾಗೂ ತೇರದಾಳ ವಿಧಾನಸಭಾ ಕ್ಷೇತ್ರದ ಜಮಖಂಡಿ ಹಾಗೂ ಬಾಗಲಕೋಟೆ ಉಪವಿಭಾಗ ವ್ಯಾಪ್ತಿಯ ಈ ಕೆಳಗಿನ ಕಾಮಗಾರಿಗಳಿಗೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ. - 1 & 2 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999 - 2000 ರ ಪ್ರಕಾರ ಆ್ಯಕ್ಟ್ 2000 ರ ನಿಯಮದಂತೆ ಏಕ-ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಸಾಮಾನ್ಯ ಗುತ್ತಿಗೆಯಲ್ಲಿ ಕಾಮಗಾರಿಗಳ ಇಂಡೆಂಟ್ ನಂ. : RDPR/2024-25/RD/WORK_INDENT11658, RDPR/2024-25/RD/WORK_INDENT11660, RDPR/2024-25/RD/WORK_INDENT11436, ಪರಿಶಿಷ್ಟ ಜಾತಿ ವರ್ಗದ ಗುತ್ತಿಗೆಯಲ್ಲಿ ಕಾಮಗಾರಿಯ ಇಂಡೆಂಟ್ ನಂ. : RDPR/2024-25/RD/WORK_INDENT11659, RDPR/2024-25/RD/WORK_INDENT11070, ಪ್ರವರ್ಗ-2(ಎ) ವರ್ಗದ ಗುತ್ತಿಗೆಯಲ್ಲಿ ಕಾಮಗಾರಿಯ ಇಂಡೆಂಟ್ ನಂ. : RDPR/2024-25/RD/WORK_INDENT12068 ಇದ್ದು, ಕಾಮಗಾರಿಗಳ ವಿವರ, ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್ ಮೊತ್ತ (ರೂ. 6.00 ದಿಂದ 18.00 ಲಕ್ಷಗಳ ಮಿತಿಗೊಳಪಟ್ಟು) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತ ಎಲ್ಲ ವಿವರಗಳು ಇ-ಪೋರ್ಟಲ್‌ನಲ್ಲಿ ಇದ್ದಂತೆ.

1) ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್ -ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 13-02-2025 ರ ಸಂಜೆ 5.30 ಗಂಟೆವರೆಗೆ. 2) ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ & ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ : 15-02-2025 ರ ಬೆಳಿಗ್ಗೆ 11.00 ಗಂಟೆಯ ನಂತರ.

ಸೂಚನೆ : ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ ವೆಬ್‌ಸೈಟ್ : https://kppp.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ (ಇಂ) ವಿಭಾಗ,
ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟ/463/ಮಣಿಪಾಲ್/2024-25

ಎಸ್.ವಿ.ಸಿ. ಕೋ - ಆಪರೇಟಿವ್ ಬ್ಯಾಂಕ್ ಲಿ.
ಪ್ರಧಾನ ಕಚೇರಿ : ಕಾನೂನು ಮತ್ತು ವಸೂಲಾತಿ ವಿಭಾಗ
ಎಸ್.ವಿ.ಸಿ. ಟವರ್, ನೆಹರು ರಸ್ತೆ, ವಕೋಲಾ, ಸಾಂಟಾಕ್ರೂಜ್ (ಪೂರ್ವ), ಮುಂಬೈ-400055.
ಫೋನ್ ನಂ: 66999980/66999982/66999929.
ಸತಾರಾ ಶಾಖೆ : ಜಿ3 & ಜಿ4, ರಾಜಭೋಸಲೆ ಹೈಟ್ಸ್, ಎಸ್.ಟಿ ಸ್ಟ್ಯಾಂಡ್ ಹಿಂಭಾಗ ಹಳೆಯ ಆರ್‌ಟಿಒ ರಸ್ತೆ, ಸಾದರ್‌ಬಜಾರ್, ಸತಾರಾ. ದೂರವಾಣಿ ಸಂಖ್ಯೆ.02162-226868/69

ಸ್ವಾಧೀನತೆಯ ಪ್ರಕಟಣೆ

ಈ ಕೆಳ ಸಹಿದಾರರು ಎಸ್.ವಿ.ಎಸ್ ಕೋಆಪರೇಟಿವ್ ಬ್ಯಾಂಕ್ ಲಿಮಿಟೆಡ್, (ಈ ಮೊದಲು "ದಿ ಶಾಮರಾವ್ ವಿಠ್ಠಲ್ ಕೋಆಪರೇಟಿವ್ ಬ್ಯಾಂಕ್ ಲಿ") ಇದರ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯುರಿಟಿಝೇಷನ್ ಮತ್ತು ರಿಕನ್ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್ಫೋರ್ಸ್ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2000 ದ ಅಡಿಯಲ್ಲಿ, ತಿದ್ದುಪಡಿ ಮಾಡಲಾಗಿರುವ ದಿ ಎನ್ಫೋರ್ಸ್ಮೆಂಟ್ ಸೆಕ್ಯೂರಿಟಿ ಇಂಟರೆಸ್ಟ್ ಅಂಡ್ ರಿಕವರಿ ಆಫ್ ಡೆಬ್ಟ್ಸ್ ಲಾಸ್ (ತಿದ್ದುಪಡಿ) ಆಕ್ಟ್ 2016, (2016 ರ 44) ಮತ್ತು ತದನಂತರ ತಿದ್ದುಪಡಿಯಾದ ಸೆಕ್ಯೂರಿಟಿ ಇಂಟರೆಸ್ಟ್ (ಎನ್ಫೋರ್ಸ್ಮೆಂಟ್) (ಅಮೆಂಡ್ಮೆಂಟ್) ರೂಲ್ಸ್ 2018 ಮತ್ತು ಸೆಕ್ಷನ್ 13 (12), ಸೆಕ್ಯೂರಿಟಿ ಇಂಟರೆಸ್ಟ್ (ಎನ್ಫೋರ್ಸ್ಮೆಂಟ್ಸ್) ರೂಲ್ಸ್ 2002 ರ ರೂಲ್ಸ್ 3ನ್ನು ಓದಿಕೊಂಡಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದಿನಾಂಕ 10.10.2017 ರಂದು ಡಿಮ್ಯಾಂಡ್ ನೋಟೀಸ್‌ನ್ನು ಸೆಕ್ಷನ್ 13(2) ನಿಯುಮದಡಿಯುಲ್ಲಿ 1. ಮೆ॥ ಫ್ಲೀಟಿನ್ವೆಲಿ ಸರ್ವ್ ಪ್ರೈ ಲಿಮಿಟೆಡ್, ನೋಂದಾಯಿತ ಕಚೇರಿ ಎಂ -2, ಇನ್ಲ್ಯಾಂಡ್ ಅವೆನ್ಯೂ, ಕಮರ್ಷಿಯಲ್ ಕಾಂಪ್ಲೆಕ್ಸ್ ಬಿಲ್ಡಿಂಗ್, ಕೊಡಿಯಾಲಬೈಲ್, ಮಂಗಳೂರು 575002 ಮತ್ತು 505/ಎ/13, ಎಲ್ ಐ ಸಿ ಕಾಲೋನಿ, ಸಾದರ್ ಬಜಾರ್ ತಾಲೂಕು ಮತ್ತು ಸತಾರ ಜಿಲ್ಲೆ, ಮತ್ತು ಎಸ್ ಟಿ ಪಿ ಐ, 4ನೆ ಮಹಡಿ, ಐ ಟಿ ಪಾರ್ಕ್, ಹುಬ್ಬಳ್ಳಿ - 580020 ಮತ್ತು 825, 12 ನೇ ಅಡ್ಡ ರಸ್ತೆ, ಕಲಾಂತ್ರ ಟೆಕ್ನಾಲಜಿ, ಸಿದ್ದಾರ್ಥ್ ಲೇಔಟ್, ಮೈಸೂರು, ಕರ್ನಾಟಕ ಮತ್ತು ಯೂನಿಟ್ ನಂ. 2 ಮತ್ತು 3, ಮೇಲಿನ ನೆಲ ಮಹಡಿ, ರುಕ್ಮಿಣಿ ಕುಂಜ್ ಅಪಾರ್ಟ್ಮೆಂಟ್, ಸಿ ಎಸ್ ನಂ.599 ರಲ್ಲಿ ನಿರ್ಮಾಣಗೊಂಡಿದೆ, ಗುರುವಾರ್ ಪೇಟ್, ಸತಾರ, 2. ಶ್ರೀಮತಿ ಗುಡಿಬಂಡೆ ಸುಬ್ಬ ರಾವ್ ಶಿವರಂಜನಿ, ವಿಳಾಸ : 505/ಎ/13, ಎಲ್ ಐ ಸಿ ಕಾಲೋನಿ, ಸಾದರ್ ಬಜಾರ್ ತಾಲೂಕು ಮತ್ತು ಸತಾರ ಜಿಲ್ಲೆ, ಮತ್ತು 98, ಮೈಕ್ರೋ ಲೇಔಟ್, ಅರಕೆರೆ, ಬೆಂಗಳೂರು - 560076. ಮತ್ತು c/o ಸಂದೀಪ್ ಕುಮಾರ್ ಕುಲ್ಕರ್ಣಿ, 78, ಸುಪರ್ಣ, 6ನೆ ಕ್ರಾಸ್, 19ನೆ ಮೇನ್, ಸಿ ಟಿ ಬೆಡ್, ಟಿ ಆರ್ ನಗರ ಪೊಲೀಸ್ ಸ್ಟೇಷನ್ ಹತ್ತಿರ, ಬನಶಂಕರಿ 2ನೆ ಹಂತ, ಬೆಂಗಳೂರು, ಕರ್ನಾಟಕ - 560070. 3. ಶ್ರೀಮತಿ ನಾಗಜ್ಯೋತಿ ಗುಡಿಬಂಡೆ ಸುಬ್ಬ ರಾವ್, ವಿಳಾಸ : ನ್ಯೂ ಲಕ್ಷ್ಮೀಪುರ ಎಕ್ಸಟೆನ್ಶನ್, ಮಂಚನಹಳ್ಳಿ, ಗೌರಿಬಿದನೂರು, ಚಿಕ್ಕಬಳ್ಳಾಪುರ - 562211, 4. ಶ್ರೀ ರಘುರಾಮ್ ರಾವ್, ವಿಳಾಸ : 505/ಎ/13, ಎಲ್ ಐ ಸಿ ಕಾಲೋನಿ, ಸಾದರ್ ಬಜಾರ್ ತಾಲೂಕು ಮತ್ತು ಸತಾರ ಜಿಲ್ಲೆ, ಮತ್ತು c/o ಸಂದೀಪ್ ಕುಮಾರ್ ಕುಲ್ಕರ್ಣಿ, 78, ಸುಪರ್ಣ, 6ನೆ ಕ್ರಾಸ್, 19ನೆ ಮೇನ್, ಸಿ ಟಿ ಬೆಡ್, ಟಿ ಆರ್ ನಗರ ಪೊಲೀಸ್ ಸ್ಟೇಷನ್ ಹತ್ತಿರ, ಬನಶಂಕರಿ 2ನೆ ಹಂತ, ಬೆಂಗಳೂರು, ಕರ್ನಾಟಕ - 560070 ಮತ್ತು 98, ಮೈಕ್ರೋ ಲೇಔಟ್, ಅರಕೆರೆ, ಬೆಂಗಳೂರು - 560076. ಇವರಿಗೆ ಒಟ್ಟು ಬಾಕಿ ಮೊತ್ತ ದಿನಾಂಕ: 30.09.2017ರಂತೆ ರೂ. 37,75,246/- (ರೂಪಾಯಿಗಳು ಮೂವತ್ತೇಳು ಲಕ್ಷ ಎಪ್ಪತ್ತೈದು ಸಾವಿರದ ಎರಡುನೂರಾ ನಲವತ್ತಾರು ಮಾತ್ರ) ಜೊತೆಗೆ ದಿನಾಂಕ: 01.10.2017 ರಿಂದ ಒಪ್ಪಂದದಂತೆ ನಂತರದ ಬಡ್ಡಿ ಹಾಗೂ ಕಾನೂನಾತ್ಮಕ ವೆಚ್ಚವನ್ನು ಈ ನೊಟೀಸ್ ನೀಡಿದ 60 ದಿನಗಳ ಒಳಗೆ ಪಾವತಿಸುವಂತೆ ಸೂಚಿಸಲಾಗಿತ್ತು.

ಆದಾಗ್ಯೂ ಮೇಲೆ ಉಲ್ಲೇಖಿಸಲಾದ ಸಾಲಗಾರರು/ಅಡಮಾನದಾರರು/ಜಾಮೀನುದಾರರು ಪೂರ್ತಿ ಹಣವನ್ನು ಬಡ್ಡಿ ಸಮೇತ ಮರುಪಾವತಿಸಲು ವಿಫಲರಾಗಿರುವುದರಿಂದ, ಮೇಲ್ಕಂಡ ಸಾಲಗಾರರು/ಅಡಮಾನದಾರರು/ಜಾಮೀನುದಾರರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಅಧಿಕೃತ ಅಧಿಕಾರಿಯವರು ಸೆಕ್ಷನ್ 13 (4) ರ ಕಾಯಿದೆಯನ್ವಯ ನಿಯಮ 8ನ್ನು ಓದಿಕೊಂಡಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದಿನಾಂಕ 21.08.2024 ರಂದು ಸಾಂಕೇತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ. ಮತ್ತು ಈಗ ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ ಜೆ ಎಂ, ಮಂಗಳೂರು ರವರ ಆದೇಶ Cri .Misc/311/2024 ದಿನಾಂಕ 04.12.2024 ಪ್ರಕಾರ ಅಡ್ವಕೇಟ್ ಕಮಿಷ್‌ನರ್ ಅವರಿಂದ ಅನುಸೂಚಿಯಲ್ಲಿ ಕೆಳಗೆ ವಿವರಿಸಿದ ಆಸ್ತಿಯನ್ನು ದಿನಾಂಕ 31.01.2024 ರಂದು ಭೌತಿಕವಾಗಿ ಸ್ವಾಧೀನಪಡಿಸಿಕೊಳ್ಳಲಾಗಿದೆ.

ಸಾರ್ವಜನಿಕರು ಹಾಗೂ ಅಡಮಾನದಾರರು ಈ ಕೆಳಗೆ ವಿವರಿಸಿದ ಆಸ್ತಿಯೊಂದಿಗೆ ಯಾವುದೇ ರೀತಿಯ ವ್ಯವಹಾರ ನಡೆಸದಂತೆ ಈ ಮೂಲಕ ಎಚ್ಚರಿಸುತ್ತಿದ್ದೇವೆ. ಹಾಗೂ ಅಂತಹ ಯಾವುದೇ ವ್ಯವಹಾರಗಳು ಎಸ್.ವಿ.ಸಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ಗೆ ಸಂದಾಯವಾಗತಕ್ಕ ಮೊಬಲಗು ದಿನಾಂಕ 31.12.2024ರಂತೆ ರೂ. 10,83,214.50 (ರೂಪಾಯಿಗಳು ಹತ್ತು ಲಕ್ಷ ಎಂಭತ್ತೂರು ಸಾವಿರದ ಎರಡು ನೂರ ಹದಿನಾಲ್ಕು ಮತ್ತು ಪೈಸೆ ಐವತ್ತು ಮಾತ್ರ) ಮತ್ತು ಸಂಪೂರ್ಣ ಮೊಬಲಗು ಪಾವತಿಯಾಗುವರೆಗಿನ ಮತ್ತು 01.01.2025 ರಿಂದ ಅನ್ವಯಿಸುವ ಇತರ ಕಾನೂನು ವೆಚ್ಚ, ಖರ್ಚು ಇವುಗಳಿಗೆ ಋಣ ಬಾಧ್ಯರಾಗಿರುತ್ತಾರೆ.

ಸೆಕ್ಷನ್ 13ರ ಉಪ-ವಿಭಾಗ(8)ರ ಕಾಯಿದೆಗಳಲ್ಲಿ ಅವಕಾಶವಿರುವಂತೆ ಸಾಲಗಾರರ ಗಮನಕ್ಕೆ ತರುವುದೇನೆಂದರೆ, ಲಭ್ಯವಿರುವ ಸಮಯದ ಒಳಗೆ ಭದ್ರತಾ ಸ್ವತ್ತುಗಳನ್ನು ಮತ್ತೆ ಗಳಿಸಿಕೊಳ್ಳಲು ಅವಕಾಶವಿರುತ್ತದೆ.

ಸ್ಥಿರಾಸ್ತಿಯ ವಿವರ

ಎಲ್ಲ ಭಾಗಗಳು ಮತ್ತು ಭಾಗಾಂಶಗಳು ಸೇರಿ ವಾಣಿಜ್ಯ ಆವರಣ ನಂ. ಎಂ -2, ಕಾರ್ಪೊರೇಶನ್ ಡೋರ್ ನಂ. 4-1-85/18, ವಿಸ್ತೀರ್ಣ ಅಂದಾಜು 190 ಚದರ ಅಡಿಗಳು, ಮೆಜಾನಿನ್ ಮಹಡಿಯಲ್ಲಿದೆ (ನೆಲಮಹಡಿಯ ಒಂದು ಭಾಗ), ಇನ್ಲ್ಯಾಂಡ್ ಅವೆನ್ಯೂ ಕಮರ್ಷಿಯಲ್ ಕಾಂಪ್ಲೆಕ್ಸ್ ನಲ್ಲಿದೆ, ಜೊತೆಗೆ ಶೇ 0.30 ಅವಿಭಜಿತ ಪಾಲು ಸಾಮಾನ್ಯ ಪ್ರದೇಶಗಳಲ್ಲಿ ಮತ್ತು ಕಟ್ಟಡದ ಸೌಲಭ್ಯಗಳಲ್ಲಿ, ಕೆಳಗಿನ ಪಾಲುಗಳು ಸೇರಿ :

Item No.	R.S.No.	T.S.No.	Kissam	Extent A.C.
1	394	227/1(p)	Converted	0-35
2	394-2	227/2(P)	Converted	0-08
3	394-1	227/1(p)	Converted	0-01

ವಿಳಾಸ : ಕೊಡಿಯಾಲಬೈಲ್ ಗ್ರಾಮ, ಮಂಗಳೂರು ತಾಲೂಕು, ಕೊಡಿಯಾಲಬೈಲ್ ವಾರ್ಡ್, ಮಂಗಳೂರು ಮಹಾನಗರ ಪಾಲಿಕೆ ಮತ್ತು ನೋಂದಣಿ ಉಪ ಜಿಲ್ಲಾ, ಮಂಗಳೂರು ವ್ಯಾಪ್ತಿಯಲ್ಲಿ

ದಿನಾಂಕ : 31.01.2025
ಸ್ಥಳ : ಮಂಗಳೂರು
ಸಹಿ/-
ಅಧಿಕೃತ ಅಧಿಕಾರಿಗಳು

ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು - 560001.
ದೂರವಾಣಿ: 080-22215601, 22211246 ಫ್ಯಾಕ್ಸ್ : 22215602

ಸಂಖ್ಯೆ: ಡಿವೈಇಎಸ್/ತಾಂ.ಶಾ/ಕ್ರೀಯೋ/142/2024-25 ದಿನಾಂಕ : 03.02.2025

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ವಿಷಯ:ಉಪ-ನಿರ್ದೇಶಕರು (ಆಡಳಿತ), ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು-560 001 ಕರ್ನಾಟಕ, ಭಾರತ, ಇವರು, ಕರ್ನಾಟಕ ರಾಜ್ಯದಲ್ಲಿರುವ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧೀನದಲ್ಲಿರುವ ಶಿವಮೊಗ್ಗ ಜಿಲ್ಲಾ ಕ್ರೀಡಾಂಗಣದಲ್ಲಿ ವಾಕರ್ಸ್ ಪಾಥ್ ಅಳವಡಿಸುವ ಕಾಮಗಾರಿಗೆ ಟೆಂಡರ್ ಮೂಲಕ ಕೈಗೊಳ್ಳಲು ಗುತ್ತಿಗೆದಾರರನ್ನು ನೇಮಿಸಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಿದೆ.

ಕಾಮಗಾರಿ ವಿವರ : ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧೀನದಲ್ಲಿರುವ ಶಿವಮೊಗ್ಗ ಜಿಲ್ಲಾ ಕ್ರೀಡಾಂಗಣದಲ್ಲಿ ವಾಕರ್ಸ್ ಪಾಥ್ ಅಳವಡಿಸುವ ಕಾಮಗಾರಿ. ಟೆಂಡರ್‌ಗಿಟ್ಟ ಮೊತ್ತ : ರೂ. 42.16 ಲಕ್ಷಗಳು, ಇಎಂಡಿ ಮೊತ್ತ : ರೂ. 42,156.00.

ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 10.02.2025 ಸಮಯ : 16.00 ಗಂಟೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 11.02.2025 ಸಮಯ: 16.30 ಗಂಟೆ.

ಆಸಕ್ತ ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/-
ಉಪ ನಿರ್ದೇಶಕರು (ಆಡಳಿತ)
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರ)

DIPR/CP/4826/Zen/2024-25

ಕರ್ನಾಟಕ ಸರ್ಕಾರ
ಪುರಸಭಾ ಕಾರ್ಯಾಲಯ, ಪಾಂಡವಪುರ, ಮಂಡ್ಯ ಜಿಲ್ಲೆ-571434
ಇ-ಮೇಲ್ : itstaff_ulb_pandavapura@yahoo.com
ದೂ:08236-255137
ಸಂಖ್ಯೆ.ಪು.ಸ.ಕಾ.ಪಾಂ/ತಾಂ.ಶಾ/ಟೆಂ:06/2024-25
ದಿ:01-02-2025

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಪಾಂಡವಪುರ ಪುರಸಭಾ ವ್ಯಾಪ್ತಿಯಲ್ಲಿ 2021-22ನೇ ಸಾಲು ಮತ್ತು 2023-24ನೇ ಸಾಲಿನ 15ನೇ ಹಣಕಾಸು ಮುಕ್ತ ಅನುದಾನದ ಉಳಿತಾಯ ಮೊತ್ತದಡಿಯಲ್ಲಿ ಮತ್ತು 2024-25ನೇ ಸಾಲಿನ ಎಸ್.ಎಫ್.ಸಿ.ಸಿ.ಸಿ.ಎ ಅನುದಾನದಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 1999. ನಿಯಮಗಳು 2000ರಂತೆ ಹಾಗೂ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ KW-1ರ ಸೂಚನೆಗಳು ಹಾಗೂ ನಿಬಂಧನೆಗೊಳಪಟ್ಟಂತೆ ಲೋಕೋಪಯೋಗಿ ಇಲಾಖೆಯಲ್ಲಿ, ಚಾಲ್ತಿ ಸಾಲಿಗೆ ನೊಂದಾಯಿತ ಅರ್ಹ ಸಿವಿಲ್ ಮತ್ತು ಇಲೆಕ್ಟ್ರಿಕಲ್ ಗುತ್ತಿಗೆದಾರುಗಳಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಕಾಮಗಾರಿಗಳನ್ನು ಪೂರ್ಣಗೊಳಿಸುವ ಅವಧಿ 90 ದಿನಗಳು. ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್‌ನ್ನು ಸಲ್ಲಿಸಲು ದಿನಾಂಕ: 21.02.2025ರ ಸಂಜೆ 5.30 ಗಂಟೆಯವರೆಗೆ ನಿಗದಿಪಡಿಸಲಾಗಿದೆ ಹಾಗೂ ಟೆಂಡರ್‌ನ್ನು ದಿನಾಂಕ: 24.02.2025 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಪುರಸಭಾ ಕಛೇರಿಯ ತಾಂತ್ರಿಕ ಶಾಖೆಯಲ್ಲಿ ಪಡೆಯಬಹುದು.

ಕ್ರ ಸಂ : 01. ಕಾಮಗಾರಿಗಳ ಇಂಡೆಂಟ್ ವಿವರ : DMA/2024-25/OW/WORK_INDENT35599. ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) : 4.20. ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) : 10500.00. ಟೆಂಡರ್ ಮೀಸಲಾತಿ : ಸಾಮಾನ್ಯ.

ಕ್ರ ಸಂ : 02. ಕಾಮಗಾರಿಗಳ ಇಂಡೆಂಟ್ ವಿವರ : DMA/2024-25/EL/WORK INDENT35603. ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) : 10.30. ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) : 25750.00. ಟೆಂಡರ್ ಮೀಸಲಾತಿ : ಸಾಮಾನ್ಯ.

ಸೂಚನೆ: ಕಾರಣಾಂತರಗಳಿಂದ ಟೆಂಡರ್ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಇ-ಪೊಕ್ಯೂಮೆಂಟ ಪೋರ್ಟಲ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು.

ಸಹಿ/-ಮುಖ್ಯಾಧಿಕಾರಿ, ಪುರಸಭೆ,
ಪಾಂಡವಪುರ

ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/622/2024-25

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ.
ಆಸ್ತಿ ಅಧಿಕಾರಿಯವರ ಕಛೇರಿ, ಮುಖ್ಯ ಆವರಣ ಇರುವಕ್ಕಿ-577412, ಶಿವಮೊಗ್ಗ ಜಿಲ್ಲೆ
ದೂರವಾಣಿ : 9480838979, ಇ-ಮೇಲ್: eo@uahs.edu.in

ಸಂಖ್ಯೆ : ಕೆಶಿನಾಕೃತೋವಿವಿ(ಇ)/ಆ.ಅ/ಟಿ.ಎನ್-21/2024-25 ದಿನಾಂಕ : 30.01.2025

ಮರು ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗದ ಅಧೀನದಲ್ಲಿ ಬರುವ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ ಕತ್ತಲಗೆರೆಯಲ್ಲಿ ವಿದ್ಯುತ್ ಕಾಮಗಾರಿಯನ್ನು ನಿರ್ವಹಿಸಲು ವಿದ್ಯುತ್ ನೋಂದಣಿ ಹೊಂದಿದ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನೋಟಿಫಿಕೇಷನ್, ಶೆಡ್ಯೂಲ್ ಹಾಗೂ ಟೆಂಡರ್‌ನ ವಿವರಗಳು https://kppp.karnataka.gov.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.

ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ: 1) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ 12.02.2025 ಸಂಜೆ 4.00 ಗಂಟೆಗೆ. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ 13.02.2025 ಸಂಜೆ 4.30 ಗಂಟೆಗೆ. 3) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ 14.02.2025 ಬೆಳಿಗ್ಗೆ 10.00 ಗಂಟೆಗೆ.

ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು. ಕೆಲಸದ ಎಲ್ಲಾ ದಿವಸಗಳಲ್ಲೂ ಮತ್ತು ಆಸ್ತಿ ಅಧಿಕಾರಿಗಳು, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಇರುವಕ್ಕಿ, ಸಾಗರ ತಾಲೂಕು, ಶಿವಮೊಗ್ಗ-577412 ಇವರನ್ನು ಸಂಪರ್ಕಿಸಬಹುದು ದೂರವಾಣಿ ಸಂಖ್ಯೆ: 9480838979.

ಸಹಿ/-
ಆಸ್ತಿ ಅಧಿಕಾರಿಗಳು, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ,
ಇರುವಕ್ಕಿ, ಶಿವಮೊಗ್ಗ.

ವಾ.ಸಾ.ಸಂ.ಇ/ಶಿ/ನಂ. 13-02/ ಝೇಂಕಾರ್/2024-25

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ, ತುಮಕೂರು.
ಕ್ರ.ಸಂ:ಕಾಇಂ:ಲೋಇವಿ:ತುವು:ಸಇಂ-1:ಟೆಂಡರ್36/2024-25
ದಿನಾಂಕ : 30.01.2025

ಟೆಂಡರ್ ಪ್ರಕಟಣೆ ಸಂ.36/2024-25
ದಿನಾಂಕ: 30.01.2025

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 36/2024-25:ದಿನಾಂಕ 30-01-2025 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ ಲೆಕ್ಕ ಶೀರ್ಷಿಕೆ 5054-ಜಿಲ್ಲಾ ಮತ್ತು ಇತರೆ ರಸ್ತೆಗಳ ಸುಧಾರಣೆ ಯೋಜನೆ ಹಾಗೂ 8443 ಠೇವಣಿ ವಂತಿಕೆ ಯೋಜನೆ ಅಡಿಯಲ್ಲಿ 16 ಕಾಮಗಾರಿಗೆ KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಠ ಮೊತ್ತ ರೂ: 160.95 ಲಕ್ಷಗಳು, ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ: 8.17 ಲಕ್ಷಗಳು ಇ.ಎಂ.ಡಿ ಗರಿಷ್ಠ ಮೊತ್ತ ರೂ. 241425/-, ಇ.ಎಂ.ಡಿ ಕನಿಷ್ಠ ಮೊತ್ತ ರೂ. 20438/- ಅರ್ಹ ಗುತ್ತಿಗೆದಾರರು 4ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 3 ರಿಂದ 9 ತಿಂಗಳುಗಳು ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: 18-02-2025 ರ 17-00 ಗಂಟೆಗೆ, KPPP-Portal ಮೂಲಕ ಟೆಂಡರ್‌ಅನ್ನು ದಿನಾಂಕ 04-02-2025 ರಿಂದ 19-02-2025 ರ 16.00 ಗಂಟೆವರೆಗೆ ಪಡೆಯಬಹುದಾಗಿದೆ. ಟೆಂಡರ್‌ಅನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: 19-02-2025 ರ 16-00 ಗಂಟೆವರೆಗೆ, ತಾಂತ್ರಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 20-02-2025 ರ 16-30 ಗಂಟೆಗೆ, ಆರ್ಥಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 21-02-2025 ರ 11-00 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ.

ಸಹಿ/-ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.

DIPR/TUM/613/KSMCA/2024-25

ಟ್ವೀಟೂ-ಖಾರಾ

ಕಾಂಗ್ರೆಸ್, ಕರ್ನಾಟಕ

ಕಾಂಗ್ರೆಸ್ ಸರಕಾರದ ಗ್ಯಾರಂಟಿ ಯೋಜನೆಗಳು, ಜನಪರ ಕಾರ್ಯಗಳನ್ನು ಸದಾ ಟೀಕಿಸುವ , ದ್ವೇಷಿಸುವ ರಾಜ್ಯ ಬಿಜೆಪಿ ನಾಯಕರಿಗೆ ಅಸ್ಸಾಂ ಬಿಜೆಪಿ ಸರಕಾರದ ನಡೆ ತಕ್ಕ ಉತ್ತರ ನೀಡಿದೆ. ಅಸ್ಸಾಂ ಬಿಜೆಪಿ ಸರಕಾರ ಕರ್ನಾಟಕ ಸರಕಾರದ ಮಾದರಿಯನ್ನು ಅನುಸರಿಸಿ ಅಸ್ಸಾಂ ರಾಜ್ಯವನ್ನು ಮತ್ತೊಂದು ಕರ್ನಾಟಕ ಮಾಡುವುದೇ ನನ್ನ ಗುರಿ ಎಂದ ಬಿಜೆಪಿ ಮುಖ್ಯಮಂತ್ರಿಯೇ ಹೇಳಿದ್ದಾರೆ...! ಮೊಸರಲ್ಲಿ ಕಲ್ಲು ಹುಡುಕುವ , ಸದಾ ಜನರ ದಿಕ್ಕುತಪ್ಪಿಸುವ ಪ್ರಯತ್ನದಲ್ಲಿರುವ ರಾಜ್ಯ ಬಿಜೆಪಿ ನಾಯಕರು ಇನ್ನಾದರೂ ತಮ್ಮ ಮನಸ್ಥಿತಿಯನ್ನು ಸರಿಪಡಿಸಿಕೊಳ್ಳಲಿ.

ಎನ್. ಶಂಕರಪ್ಪ, ಬೆಂಗಳೂರು

ನಿಮ್ಮ ಗ್ಯಾರಂಟಿಗಳಿಂದಲೇ ಮೈಕ್ರೋಫೈನಾನ್ಸ್ ಹತ್ತಿರ ಸಾಲ ಪಡೆದು ಕಟ್ಟಕ್ಕಾಗದೆ ಜನರು ಸಾಯುತ್ತಿದ್ದಾರೆ.

ವಿಶ್ವವಾಣಿ ಕ್ಲಬ್ ಹೌಸ್
ಕಾರ್ನರ್ 05-02-2025
ಸಂಜೆ: 06.55ರಿಂದ 8.15ರ ವರೆಗೆ
ಬುಧವಾರದ ಅತಿಥಿ
ಶ್ರೀಮತಿ ವೈದರ್ಭಿ ಆರ್. ಕಡ್ಡಿ
ವಿಷಯ
ಸಂಗೀತ ಸಂಜೆ
@vishwavaninews

ವಿಜಯೇಂದ್ರರನ್ನು ಕೆಳಗಿಳಿಸುವುದೇ ನಮ್ಮ ಗುರಿ: ಯತ್ನಾಳ್

ಶ್ರೀರಾಮುಲು ರಾಜ್ಯಾಧ್ಯಕ್ಷರಾದರೆ ಅಭ್ಯಂತರ ಇಲ್ಲ

ವರಿಷ್ಠರ ಜಾತಿ ಲೆಕ್ಕಾಚಾರ ನೋಡಿ ಕಣಕ್ಕೆ

ಕಲಬುರಗಿ: ಬಿಜೆಪಿಯ ಹೈಕಮಾಂಡ್‌ನ ಜಾತಿ ಲೆಕ್ಕಾಚಾರ ನೋಡಿಕೊಂಡು ಅದೇ ಜಾತಿಯವರನ್ನು ನಾವು ರಾಜ್ಯಾಧ್ಯಕ್ಷರ ಸ್ಥಾನದ ಅಭ್ಯರ್ಥಿಯಾಗಿ ಕಣಕ್ಕೆ ಇಳಿಸುತ್ತೇವೆ ಎಂದು ಬಿಜೆಪಿ ಶಾಸಕ ಬಸವನಗೌಡ ಪಾಟೀಲ ಯತ್ನಾಳ ಸ್ಪಷ್ಟಪಡಿಸಿದ್ದಾರೆ. ಅಲ್ಲದೆ, ಬಿ.ವೈ. ವಿಜಯೇಂದ್ರ ರನ್ನು ಕೆಳಗಿಳಿಸುವುದೇ ನಮ್ಮ ಗುರಿ ಎಂದು ಸಾರಿರುವ ಅವರು, ಶ್ರೀರಾಮುಲು ರಾಜ್ಯಾಧ್ಯಕ್ಷರಾದರೆ ತಕರಾರಿಲ್ಲ ಎಂದು ಘೋಷಿಸಿದ್ದಾರೆ.

ಕಲಬುರಗಿ ಜಿಲ್ಲೆಯ ಸೇಡಂ ಬಳಿಯ ಬೀರನಳ್ಳಿ ಕ್ರಾಸ್‌ನಲ್ಲಿ ಭಾರತೀಯ ಸಂಸ್ಕೃತಿ ಉತ್ಸವದಲ್ಲಿ ಭಾಗವಹಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಯತ್ನಾಳ್, ನಮ್ಮ ಬಣದಿಂದ ಯಾರು ಸ್ಪರ್ಧೆ ಮಾಡುತ್ತಾರೆ ಎಂಬುದರ ಕುರಿತು ಚರ್ಚಿಸಿ ನಿರ್ಣಯ ತೆಗೆದುಕೊಳ್ಳುತ್ತೇವೆ. ಹೈಕಮಾಂಡ್‌ನ ಜಾತಿ ಲೆಕ್ಕಾಚಾರ ನೋಡಿಕೊಂಡು ನಾವು ಕಾರ್ಯತಂತ್ರ ರೂಪಿಸುತ್ತೇವೆ ಎಂದರು.

ದೆಹಲಿಯಲ್ಲಿ ವರಿಷ್ಠರ ಭೇಟಿ: ನಾನು ಸಹ ದೆಹಲಿಗೆ ಹೋಗುತ್ತಿದ್ದೇನೆ. ರಾಜ್ಯಾಧ್ಯಕ್ಷರ ಆಯ್ಕೆ ಸಂಬಂಧ ನಾವು ವರಿಷ್ಠರನ್ನು ಬಿಜೆಪಿಯ ಹಲವಾರು ರಾಷ್ಟ್ರೀಯ ಮುಖಂಡರನ್ನು ಭೇಟಿ ಮಾಡುತ್ತೇವೆ. ದೆಹಲಿ ಚುನಾವಣೆಯ ಬಹಿರಂಗ ಪ್ರಚಾರ ಮುಗಿದಿದ್ದು, ಪಕ್ಷದ ವರಿಷ್ಠರು ಭೇಟಿಗಾಗಿ ಸಮಯ ಕೊಟ್ಟಿದ್ದಾರೆ ಎಂದರು.

ಚುನಾವಣೆ ನಡೆಯಲಿ: ರಾಜ್ಯಾಧ್ಯಕ್ಷನಾಗಿ ಮುಂದುವರಿಯುತ್ತೇನೆ ಎಂಬ ವಿಜಯೇಂದ್ರ ಹೇಳಿಕೆಗೆ ಪ್ರತಿಕ್ರಿಯಿಸಿದ ಭಿನ್ನಬಣದ ನಾಯಕ, ಚುನಾವಣೆ ನಡೆದು ಅವರೇ ಮತ್ತೊಮ್ಮೆ ರಾಜ್ಯಾಧ್ಯಕ್ಷರಾಗಲಿ. ಬೇಡ ಅಂದವರಾರು..? ಅಲ್ಲಿವರೆಗೂ ನನಗೆ ಮತಹಾಕಿ ಎಂದು ಕೈಮುಗಿದು ಅವರು ಓಡಾಡಬೇಕಲ್ವಾ? ಕೆಲವರಿಗೆ ಕೈ ಮುಗಿಯುವುದನ್ನಾದರೂ ನಾವು ಕಲಿಸಿದ ಹಾಗಾಗುತ್ತದೆ ಎಂದು ತಿರುಗೇಟು ಕೊಟ್ಟರು.

ನಮ್ಮ ನಿಲುವು ತಿಳಿಸುತ್ತೇವೆ: ನಾನು ಮಾಜಿ ಸಿಎಂ ಬಿ.ಎಸ್ ಯಡಿಯೂರಪ್ಪ ಸಮಕಾಲೀನರು. ಒಂದು ವೇಳೆ ವಿಜಯೇಂದ್ರರನ್ನು ಮತ್ತೆ ರಾಜ್ಯಾಧ್ಯಕ್ಷ ಮಾಡಿದರೆ, ನಮ್ಮ ನಿಲುವು ತಿಳಿಸುತ್ತೇವೆ. ನಮ್ಮ ಹೋರಾಟವಂತೂ ಮುಂದುವರಿಯುತ್ತದೆ ಎಂದು ಯತ್ನಾಳ್ ಸ್ಪಷ್ಟಪಡಿಸಿದರು.

ಶ್ರೀರಾಮುಲುಗೆ ಬೆಂಬಲ: ಮಾಜಿ ಸಚಿವ ಶ್ರೀರಾಮುಲು ಬಿಜೆಪಿ ರಾಜ್ಯಾಧ್ಯಕ್ಷರಾದರೆ ನಮ್ಮದೇನೂ ತಕರಾರಿಲ್ಲ. ಅವರೂ ನಮ್ಮವರೇ. ಅವರಾದರೆ, ನಮ್ಮ ಬೆಂಬಲ ಇರುತ್ತದೆ. ರಾಜ್ಯದ ಎಲ್ಲ ಸಂಸದರು ನಮ್ಮ ಜೊತೆಗಿದ್ದಾರೆ. ವಿಜಯೇಂದ್ರ, ಸಹೋದರ ಒಬ್ಬರನ್ನು ಬಿಟ್ಟು, ಯತ್ನಾಳ ರಾಜ್ಯಾಧ್ಯಕ್ಷ ಆಗಬೇಕು ಎಂಬ ಕೂಗು ಬಲವಾಗಿದ್ದು, ಏನಾಗುತ್ತೋ ನೋಡೋಣ ಎಂದರು.

ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಸೇಡಂನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

> ನಮ್ಮಿಂದ ಬಿಜೆಪಿಗೆ ಯಾವುದೇ ಧಕ್ಕೆ ಆಗಿಲ್ಲ. ಯತ್ನಾಳರಿಂದಲೇ ನಮ್ಮ ಪಕ್ಷದ ಕಾರ್ಯಕರ್ತರು ಜೀವಂತವಾಗಿದ್ದಾರೆ. ಹಾಗೆ ನೋಡಿದರೆ, ನಮ್ಮ ಪಕ್ಷಕ್ಕೆ ನಾವೇ ಆಶಾಕಿರಣ.
> -**ಬಸನಗೌಡ ಪಾಟೀಲ್ ಯತ್ನಾಳ್**, ಶಾಸಕ

- ಬಿವೈವಿ ಮತ್ತೆ ಅಧ್ಯಕ್ಷರಾದರೆ ವರಿಷ್ಠರಿಗೆ ನಮ್ಮ ನಿರ್ಧಾರ ಸ್ಪಷ್ಟ. ಹೋರಾಟ ನಿಲ್ಲದು
- ಭಿನ್ನ ಬಣದ ನಾಯಕ ಬಸನಗೌಡ ಪಾಟೀಲ್ ಯತ್ನಾಳ್ ಎಚ್ಚರಿಕೆ
- ದೆಹಲಿಯಲ್ಲಿ ಯತ್ನಾಳ ಬಣದ ಕಾರ್ಯಾಚರಣೆ ಆರಂಭ

ಹೇಳಿಕೆ ಸರಿಯಲ್ಲ

ಕಾಂಗ್ರೆಸ್ ವಿರುದ್ಧ ಹೋರಾಟ ಮಾಡುತ್ತಿಲ್ಲ, ಪಕ್ಷದ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ ಎಂದು ದೆಹಲಿ ವರಿಷ್ಠರಿಗೆ ಬಸನಗೌಡ ಪಾಟೀಲ್ ಯತ್ನಾಳ್ ಬಣದ ಸದಸ್ಯರು ದೂರು ನೀಡಿದ ಬಗ್ಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿರುಗೇಟು ನೀಡಿದ್ದಾರೆ. ಭ್ರಷ್ಟ ಕಾಂಗ್ರೆಸ್ ಸರಕಾರ ಮತ್ತು ಸಿಎಂ ಸಿದ್ದರಾಮಯ್ಯ ವಿರುದ್ಧ ನಡೆದ ಹೋರಾಟದಲ್ಲಿ ನೇತೃತ್ವ ವಹಿಸಿದ್ದು ನಾನು, ಯತ್ನಾಳ ಬಣದ ಇಂತಹ ಹೇಳಿಕೆಗಳಿಂದ ಕಾರ್ಯಕರ್ತರು ನೊಂದಿದ್ದಾರೆ. ವರಿಷ್ಠರ ಮುಂದೆ ಏನು ಬೇಕಾದರೂ ಹೇಳಿಕೊಳ್ಳಲಿ, ನಾನು ವರಿಷ್ಠರೊಂದಿಗೆ ಸಂಪರ್ಕದಲ್ಲಿದ್ದೇನೆ ಎಂದು ವಿಜಯೇಂದ್ರ ಸ್ಪಷ್ಟನೆ ಕೊಟ್ಟರು.

ಎಲ್ಲೂ ಆಸ್ತಿ ಮಾಡಿಲ್ಲ

ನಮಗೆ ಬೇರೆಯವರಂತೆ ದೇಶ-ವಿದೇಶಗಳಲ್ಲಿ ಆಸ್ತಿ ಮಾಡಿಡುವ ಆಸಕ್ತಿ ಇಲ್ಲ. ವಿಜಯೇಂದ್ರ ದುಬೈನಲ್ಲಿ, ಸಿಂಗಾಪುರದಲ್ಲಿ ಆಸ್ತಿ ಮಾಡಿಟ್ಟು ಏನು ಮಾಡುತ್ತಾನೆ. ಜನರಿಗೆ ದಾನ ಕೊಟ್ಟರೆ, ಒಳ್ಳೆಯದಾಗುತ್ತದೆ. ಯಾರಿಗಾದರೂ ಒಳ್ಳೆಯದಾಗಲಿ ಅನ್ನೋದು ಅವರಿಂದ ಹೇಳಲು ಸಾಧ್ಯವೇ ಇಲ್ಲ ಎಂದು ಯತ್ನಾಳ್ ಹೇಳಿದರು.

ಕುಂಭಮೇಳದಿಂದ ಅಯೋಧ್ಯೆಗೆ ತೆರಳುತ್ತಿದ್ದ ಯುವಕ ಸಾವು

ಕೊಪ್ಪಳ: ಪ್ರಯಾಗ್‌ರಾಜ್‌ನ ಮಹಾ ಕುಂಭಮೇಳದಲ್ಲಿ ಪಾಲ್ಗೊಂಡ ರಾಜ್ಯದ ಯುವಕನೊಬ್ಬ , ಅಲ್ಲಿಂದ ಅಯೋಧ್ಯೆಗೆ ತೆರಳುವಾಗ ರೈಲಿನಲ್ಲಿ ವಿದ್ಯುತ್ ತಗುಲಿ ಸಾವನ್ನಪ್ಪಿದ ಘಟನೆ ಗೋರಖಪುರ ರೈಲ್ವೆ ನಿಲ್ದಾಣದಲ್ಲಿ ನಡೆದಿದೆ. ಮೃತ ಯುವಕನನ್ನು ಕಾರಟಗಿ ತಾಲೂಕಿನ ಸಿದ್ದಾಪುರ ನಿವಾಸಿ ಪ್ರವೀಣ್ ಹೊಸಮನಿ (27) ಎಂದು ಗುರುತಿಸಲಾಗಿದೆ. ಹದಿನೈದು ದಿನಗಳ ಹಿಂದೆ ಪ್ರವೀಣ್ ಪ್ರಯಾಗರಾಜ್‌ಗೆ ಹೋಗಿದ್ದರು. ಪ್ರಯಾಗರಾಜ್‌ಗೆ ತೆರಳಿ ಅಲ್ಲಿಂದ ಅಯೋಧ್ಯೆಗೆ ರೈಲಿನಲ್ಲಿ ಹೋಗುತ್ತಿದ್ದ, ವೇಳೆ ಗೋರಖಪುರ ನಿಲ್ದಾಣದಲ್ಲಿ ವಿದ್ಯುತ್ ಶಾಕ್‌ಗೆ ಸಿಲುಕಿ ಗಾಯಗೊಂಡಿದ್ದರು. ರೈಲ್ವೆ ಪೊಲೀಸರು ತಕ್ಷಣ ಬಿಆರ್‌ಡಿ ಮೆಡಿಕಲ್ ಕಾಲೇಜ್ ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಫಲಿಸದೆ ಪ್ರವೀಣ್ ಅಸುನೀಗಿದ್ದಾರೆ.

ಶಾಲಾ ಪ್ರವಾಸದ ಬಸ್ ಓಡಿಸಿದ ಶಿಕ್ಷಕ ಅಮಾನತು

ಚಾಮರಾಜನಗರ: ಶಾಲಾ ಶೈಕ್ಷಣಿಕ ಪ್ರವಾಸದ ವೇಳೆ ಶಿಕ್ಷಕರೊಬ್ಬರು ಬಸ್ ಚಾಲನೆ ಮಾಡಿ ಅಮಾನತುಗೊಂಡಿದ್ದಾರೆ. ಯಳಂದೂರು ತಾಲೂಕಿನ ಗುಂಬಳ್ಳಿ ಸರಕಾರಿ ಪ್ರೌಢ ಶಾಲೆಯ ಶಿಕ್ಷಕ ವೀರಭದ್ರಸ್ವಾಮಿ ಅಮಾನತುಗೊಂಡವರು. ಕಳೆದ ತಿಂಗಳು ನೂತನ ವರ್ಷಾಚರಣೆ ಹಿನ್ನೆಲೆಯಲ್ಲಿ ಬೇಲೂರು, ಹಳೇಬೀಡಿಗೆ ವಿದ್ಯಾರ್ಥಿಗಳನ್ನು ಕರೆದೊಯ್ಯಲಾಗಿತ್ತು. ಈ ವೇಳೆ ವೀರಭದ್ರಸ್ವಾಮಿ, ಚಾಲಕನನ್ನು ಪಕ್ಕಕ್ಕೆ ಸರಿಸಿ ಬಸ್ ಚಾಲನೆ ಮಾಡಿದ್ದರು. ಈ ವೀಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ಲಾಗಿ ಟೀಕೆಗಳು ವ್ಯಕ್ತವಾಗಿದ್ದವು. ಜವಾಬ್ದಾರಿ ಮರೆತು ಬಸ್ ಚಾಲನೆ ಮಾಡಿದ್ದು, ಅನಾಹುತವಾಗಿದ್ದರೆ ಎಲ್ಲ ಮಕ್ಕಳ ಜೀವಕ್ಕೆ ಕುತ್ತು ಬರುತ್ತಿತ್ತು ಎಂದು ಸಾರ್ವಜನಿಕರು ಟೀಕಿಸಿದ್ದರು. ಯಳಂದೂರು ಬಿಇಒ ವರದಿ ಆಧರಿಸಿ ಡಿಡಿಪಿಐ ರಾಮಚಂದ್ರಾಜೇ ಅರಸ್ ಅವರು ಶಿಕ್ಷಕನನ್ನು ಅಮಾನತುಗೊಳಿಸಿದ್ದಾರೆ.

ಕಾಂಗ್ರೆಸ್ ಸರಕಾರ ವಿರುದ್ಧ ಪ್ರತಿಪಕ್ಷ ನಾಯಕ ಅಶೋಕ್ ಕಿಡಿ

ಮೈಕ್ರೊ ಫೈನಾನ್ಸ್: ಸರಕಾರದಿಂದ ಬರೀ ಭಜನೆ

ಹಾಸನ: ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಇಡೀ ನಾಡು ಸೂತಕದ ಮನೆಯಾಗಿದೆ ಎಂದು ವಿಪಕ್ಷ ನಾಯಕ ಆರ್. ಅಶೋಕ್ ವಾಗ್ದಾಳಿ ನಡೆದಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಕ್ರೋ ಫೈನಾನ್ಸ್ ಹಾವಳಿಯಿಂದ ಸಾವು-ನೋವು ನಿತ್ಯವಾಗಿವೆ, ಆದರೂ ಕೇಳುವವರಿಲ್ಲ ಎಂದು ದೂರಿದರು. ರಾಜ್ಯದಲ್ಲಿ 24-25 ಜನರು ಕಿರುಸಾಲದ ಕಿರುಕುಳಕ್ಕೆ ಬಲಿಯಾಗಿದ್ದಾರೆ. ಸರಕಾರವೇ ಜನರ ಕಣ್ಣೀರು ತರಿಸುತ್ತಿದೆ ಎಂದು ಅಶೋಕ್ ಆರೋಪಿಸಿದರು.

ನಿಲ್ಲದ ಕಿರುಕುಳ, ಆತ್ಮಹತ್ಯೆ: ಕಳೆದ 10 ದಿನಗಳಿಂದ ಸಭೆ ಮೇಲೆ ಸಭೆ ಮಾಡಿ, ಕಠಿಣ ಕ್ರಮದ ಭಜನೆ ಮಾಡುತ್ತಿದ್ದಾರೆ ಅಷ್ಟೇ. ಇನ್ನೂ ಕಿರುಕುಳ ಮತ್ತು ಸಾವು ನಿಂತಿಲ್ಲ ಎಂದು ಕಿಡಿಕಾರಿದ ಪ್ರತಿಪಕ್ಷ ನಾಯಕ, ಈವರೆಗೆ ಯಾವ ಮೈಕ್ರೋ ಫೈನಾನ್ಸ್ ಮೇಲೆ ಕ್ರಮ ತೆಗೆದುಕೊಂಡಿದ್ದೀರಾ, ಯಾವ ಫೈನಾನ್ಸ್ ಮ್ಯಾನೇಜರ್‌ನನ್ನು ಬಂಧಿಸಿದ್ದೀರಾ ಮಾಡಿದ್ದೀರಾ ಎಂದು ಖಾರವಾಗಿ ಕೇಳಿದರು.

ಕಾಟಾಚಾರಕ್ಕೆ ಸುಗ್ರೀವಾಜ್ಞೆ ಅಂತೀರಾ, ಮೈಕ್ರೋ ಫೈನಾನ್ಸ್‌ನವರಿಗೆ ಸರಕಾರದ ಮೇಲಾಗಲೀ, ಪೊಲೀಸರ ಮೇಲಾಗಲೀ ಭಯವೇ ಇಲ್ಲ. ಪೊಲೀಸ್ ಅಧಿಕಾರಿಗಳು ಲಂಚಕೊಟ್ಟು ವರ್ಗ ಮಾಡಿಸಿಕೊಳ್ಳುತ್ತಿದ್ದಾರೆ ಎಂದು ಅಶೋಕ್ ಟೀಕಿಸಿದರು.

ಹೈಕಮಾಂಡ್ ಎಲ್ಲವನ್ನೂ ಗಮನಿಸುತ್ತಿದೆ: ರಾಜ್ಯ ಬಿಜೆಪಿಯ ಆಂತರಿಕ ವಿದ್ಯಮಾನಗಳನ್ನು ಹೈಕಮಾಂಡ್ ಗಮನಿಸುತ್ತಿದೆ. ನಡ್ಡಾ ಬಂದಾಗ ಕರ್ನಾಟಕದ ಸ್ಥಿತಿ-ಗತಿ ಹೇಳಿದ್ದೇನೆ. ನಾನು ಕೂಡ ದೆಹಲಿ ನಾಯಕರ ಜೊತೆ ಸಂಪರ್ಕದಲ್ಲಿದ್ದೇನೆ. 15-20 ದಿನದೊಳಗೆ ಕರ್ನಾಟಕದ ವಿಚಾರದಲ್ಲಿ ಸ್ಪಷ್ಟ ತೀರ್ಮಾನ ತೆಗೆದುಕೊಳ್ಳುತ್ತಾರೆ. ಅಷ್ಟರೊಳಗೆ ಎಲ್ಲಾ ಬಗೆಹರಿಯಲಿದೆ ಎಂದು ಅಶೋಕ್ ವಿಶ್ವಾಸ ವ್ಯಕ್ತಪಡಿಸಿದರು.

ನವಂಬರ್‌ಗೆ ಸಿಎಂ ಕುರ್ಚಿ ಖಾಲಿ

ಸಿದ್ದರಾಮಯ್ಯ ನ.15 ಅಥವಾ ನ.16 ರಂದು ಕುರ್ಚಿ ಖಾಲಿ ಮಾಡ್ತಾರೆ. ಅಷ್ಟರಲ್ಲಿ ಗುಡಿಸಿ ಗುಂಡಾಂತರ ಮಾಡಿ ಹೋಗ್ತಾರೆ ಆಮೇಲೆ ಡಿಕೆ ಬರ್ತಾರೋ, ಪರಮೇಶ್ವರ್ ಬರ್ತಾರೋ, ಜಾರಕಿಹೊಳಿ ಬರ್ತಾರೋ, ಯಾರು ಬಂದ್ರೂ ಏನೂ ಸಿಗಲ್ಲ. ಎಲ್ಲಾ ಖಾಲಿಮಾಡಿ ಹೋಗಿರ್ತಾರೆ. ಇಂತಹ ಸರಕಾರ ಹಿಂದೆಂದೂ ಬಂದಿರಲಿಲ್ಲ ಎಂದು ಅಶೋಕ್ ಕಿಡಿಕಾರಿದರು.

ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ
Fax No.08472/260776, Phone: 08472/ 278675, Email Id: itstaff_ulb_gulbarga@yahoo.com
ಸಂಖ್ಯೆ:ಕಮಪಾ/ಆಶಾ/ಎಸ್.ಡಬ್ಲ್ಯೂ.ಎಮ್/Legacy Waste/2024-25 ದಿನಾಂಕ:30.01.2025

:: ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಪ್ರಕಟಣೆ ::

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ನಿಯಮಗಳು 2000ರ ಅಡಿಯಲ್ಲಿ ಕಲಬುರಗಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಲಾದ ಕಾಮಗಾರಿ ಅರ್ಹ ಬಿಡ್‌ದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.
ಈ ಕೆಳಕಂಡ ಸೇವೆಗಳಿಗೆ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಪ್ರಕಾರ ಟೆಂಡರ್ ಕರೆಯಲಾಗಿದೆ.
1) ಕಾಮಗಾರಿ/ಸೇವೆಯ ವಿವರ : 1) Processing and Disposal of Legacy waste at Survey No. 82 of Udanoor Village, Kalaburagi District., 2) ಇಂಡೆಂಟ್ ಸಂಖ್ಯೆ: **DMA/2023-24/OW/WORK_INDENT 1405/CALL-4,** 3) ಇ.ಎಂ.ಡಿ ಮೊತ್ತ: **15,79,420/-,** 4) ಟೆಂಡರಿಗಾಗಿ ನಿಗಧಿಪಡಿಸಲಾದ ದಿನಾಂಕಗಳು : 1. ಬಿಡ್ ಪೂರ್ವಭಾವಿ ಸಭೆಯ ದಿನಾಂಕ: **15.02.2025 ಬೆಳಿಗ್ಗೆ 11.30 ಗಂಟೆಯವರೆಗೆ,** 2. ಆಕ್ಷೇಪಣೆಗಳನ್ನು ಸಲ್ಲಿಸುವ ಕೊನೆಯ ದಿನಾಂಕಃ **17.02.2025 ಬೆಳಿಗ್ಗೆ 11.30 ಗಂಟೆಯವರೆಗೆ,** 3. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: **04.03.2025 ಮಧ್ಯಾಹ್ನ 04.30 ಗಂಟೆಯವರೆಗೆ,** 4. ಪೂರ್ವ ಅರ್ಹತಾ ಬಿಡ್ ತೆರೆಯುವ ದಿನಾಂಕ: **05.03.2025 ಸಾಯಂಕಾಲ 05.00 ಗಂಟೆಯವರೆಗೆ,** 5. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **10.03.2025 ಬೆಳಿಗ್ಗೆ 11.30 ಗಂಟೆಯವರೆಗೆ,** 6. ಆರ್ಥಿಕ ಬಿಡ್ ತೆರೆಯುವ ದಿನಾಂಕ: **12.03.2025 ರಂದು ಬೆಳಿಗ್ಗೆ 11.30 ಗಂಟೆಯವರೆಗೆ.**
* ಇಎಮ್‌ಡಿ ಕುರಿತು ಹಾಗೂ ಹೆಚ್ಚಿನ ವಿವರಗಳನ್ನು ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಪಡೆಯಬಹುದು. * ಹೆಚ್ಚಿನ ವಿವರಗಳಿಗಾಗಿ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) ಕಲಬುರಗಿ ಮಹಾನಗರ ಪಾಲಿಕೆರವರನ್ನು ಸಂಪರ್ಕಿಸಬಹುದಾಗಿದೆ.
* ವೆಬ್‌ಸೈಟ್: https://kppp.karnataka.gov.in
ಸಹಿ/- ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ)
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/919/ಕೆ.ಎಸ್.ಎಂ.ಸಿ.&ಎ/2024-25

ತಮಿಳುನಾಡಿನಿಂದ ಬಂದ ಸಂದೇಶ: ಕಲಬುರಗಿಯಲ್ಲಿ ಆತಂಕ

ಶಾಲೆ ಸ್ಫೋಟ: ಹುಸಿ ಬೆದರಿಕೆ

ಕಲಬುರಗಿ: ನಗರದ ಹೊಸ ಜೇವರ್ಗಿ ರಸ್ತೆ ಕೆಇಬಿ ಕಲ್ಯಾಣ ಮಂಟಪ ಬಳಿ ಇರುವ ಖಾಸಗಿ ಶಾಲೆಯನ್ನು ಆರ್.ಡಿ.ಎಕ್ಸ್ ಬಾಂಬ್‌ನಿಂದ ಸ್ಫೋಟಿಸುವುದಾಗಿ ಇ-ಮೇಲ್ ಮೂಲಕ ಬೆದರಿಕೆ ಸಂದೇಶ ಬಂದಿರುವ ಘಟನೆ ಮಂಗಳವಾರ ನಡೆದಿದೆ. ಬೆಳಗ್ಗೆ 6.12 ನಿಮಿಷಕ್ಕೆ ಇ-ಮೇಲ್ ಮೂಲಕ ಬೆದರಿಕೆ ಸಂದೇಶ ಬಂದಿದ್ದು, ಅದನ್ನು ಶಾಲೆಯ ಆಡಳಿತ ಮಂಡಳಿ 11ಗಂಟೆಗೆ ಗಮನಿಸಿ ಪೊಲೀಸ್ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಈ ಸಂದೇಶ ತಮಿಳು ಭಾಷೆಯಲ್ಲಿದ್ದು, ತಮಿಳುನಾಡಿನಿಂದ ಬಂದಿದ್ದು ತನಿಖೆಯಿಂದ ಬೆಳಕಿಗೆ ಬಂದಿದೆ. ವಿಷಯ ತಿಳಿದ ಕೂಡಲೇ, ಸ್ಥಳಕ್ಕೆ ಬಾಂಬ್ ಬಾಂಬ್ ನಿಷ್ಕ್ರಿಯ ದಳ, ಶ್ವಾನದಳ ಹಾಗೂ ಪೊಲೀಸ್ ಅಧಿಕಾರಿಗಳು ಆಗಮಿಸಿ ಶಾಲೆಯ ಆವರಣವನ್ನು ಸಂಪೂರ್ಣ ಪರಿಶೀಲನೆ ನಡೆಸಿದರು. ಹುಸಿ ಬಾಂಬ್ ಬೆದರಿಕೆ ಹಿನ್ನೆಲೆ ಶಾಲೆಯ ಸಿಬ್ಬಂದಿ ಮಕ್ಕಳನ್ನು ಹೊರಗಡೆ ಕಳುಹಿಸಲಾಗಿತ್ತು. ಈ ವೇಳೆ ಕೆಲಕಾಲ ಸ್ಥಳದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಬೆದರಿಕೆ ಸಂದೇಶ ಇಲ್ಲ: ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ ಅವರು ಮಾತನಾ ಡಿದ, ಶಾಲೆಯಲ್ಲಿ ಆರ್‌ಡಿಎಕ್ಸ್ ಬಾಂಬ್ ಇಟ್ಟು ಸ್ಫೋಟಿಸುವುದಾಗಿ ಇ-ಮೇಲ್ ಬಂದಿದೆ. ಸಂದೇಶದ ಮೂಲ ಪರಿಶೀಲಿಸಿದಾಗ ಅದು ತಮಿಳುನಾಡಿನ ರಾಜಕೀಯ ಪಕ್ಷವೊಂದರ ಹೆಸರು ಹಾಗೂ ತಮಿಳುನಾಡು ರಾಜಕಾರಣದ ಬಗ್ಗೆ ಉಲ್ಲೇಖಿಸಿ ಬರೆದಿರುವುದು ತಿಳಿಯಿತು.

ಇದರಲ್ಲಿ ಯಾವುದೇ ಬಾಂಬ್ ಬೆದರಿಕೆ ಇಲ್ಲ. ಇದರಿಂದ ಪಾಲಕರು, ವಿದ್ಯಾರ್ಥಿಗಳು ಹಾಗೂ ಜನರು ಆತಂಕ ಪಡುವ ಅಗತ್ಯವಿಲ್ಲ ಎಂದರು.

ಹುಬ್ಬಳ್ಳಿ: ಮತ್ತೆ ಗುಂಡಿನ ಸದ್ದು

ಹುಬ್ಬಳ್ಳಿ: ವಾಣಿಜ್ಯ ನಗರಿ ಹುಬ್ಬಳ್ಳಿಯಲ್ಲಿ ಮತ್ತೆ ಪೊಲೀಸರ ಬಂದೂಕು ಸದ್ದು ಮಾಡಿದೆ. ನಗರದ ಹೊರವಲಯದಲ್ಲಿ ವಾಹನಗಳನ್ನು ಅಡ್ಡಗಟ್ಟಿ ದರೋಡೆ ಮಾಡುತ್ತಿದ್ದ ಗ್ಯಾಂಗ್‌ನ ಇಬ್ಬರು ಕುಖ್ಯಾತ ದರೋಡೆಕೋರರ ಕಾಲಿಗೆ ಪೊಲೀಸರು ಗುಂಡು ಹಾರಿಸಿ ಬಂಧಿಸಿದ್ದಾರೆ. ಮೂವರು ಪರಾರಿಯಾಗಿದ್ದಾರೆ. ಬೆಂಡಿಗೇರಿ ಠಾಣೆ ಇನ್ಸ್‌ಪೆಕ್ಟರ್ ಎಸ್. ಆರ್. ನಾಯಕ ತಂಡ ಗುಜರಾತ್ ಮೂಲದ ನಿಲೇಶ್, ದಿಲೀಪ್ ಕಾಲಿಗೆ ಗುಂಡು ಹೊಡೆದಿದ್ದಾರೆ. ಸೋಮವಾರ ರಾತ್ರಿ ಬೈಕ್ ಮೇಲೆ ಹೊರಟಿದ್ದ ವ್ಯಕ್ತಿಗೆ ನಾಲ್ಕೈದು ಜನರ ಗುಂಪು ಅಡ್ಡಗಟ್ಟಿ ಬೈಕ್, ನಗದು, ಮೊಬೈಲ್ ಸುಲಿಗೆ ಮಾಡಿ ಹಲ್ಲೆಗೈದು ಪರಾರಿಯಾಗಿತ್ತು.

ಫೈನಾನ್ಸ್ ಮ್ಯಾನೇಜರ್ ಸೆರೆ

ದಾವಣಗೆರೆ: ಸ್ನೇಹಿತರ ಹೆಸರಿನಲ್ಲಿ ಖಾತೆಗಳನ್ನು ತೆರೆದು ತಮ್ಮದೇ ಫೈನಾನ್ಸ್ ಕಂಪನಿಯಲ್ಲಿ ನಕಲಿ ಚಿನ್ನಾಭರಣಗಳನ್ನು ಅಡವಿಟ್ಟು, ಲಕ್ಷಾಂತರ ರುಪಾಯಿ ವಂಚಿಸಿದ್ದ ಆರೋಪದಡಿ ಮ್ಯಾನೇಜರ್‌ನನ್ನು ಜಗಳೂರು ಪೊಲೀಸರು ಬಂಧಿಸಿದ್ದಾರೆ. ಜಗಳೂರಿನ ಕೆಎಲ್‌ಎಂ ಆ್ಯಕ್ಸಿವ್ ಫಿನ್ ವೆಸ್ಟ್ ಫೈನಾನ್ಸ್ ಕಂಪನಿಯ ವ್ಯವಸ್ಥಾಪಕ ಅರವಿಂದ ಹನುಮಂತ ಬಂಧಿತ. ಸ್ನೇಹಿತರ ಹೆಸರಿನಲ್ಲಿ ಖಾತೆಗಳನ್ನು ತೆರೆದು ನಕಲಿ ಬಂಗಾರದ ಆಭರಣಗಳನ್ನು ಅಡವಿಟ್ಟಿದ್ದರು. ಬಳಿಕ ಲಕ್ಷಾಂತರ ರುಪಾಯಿ ಪಡೆದು ಕಂಪನಿಗೆ ವಂಚಿಸಿ ಪರಾರಿಯಾಗಿದ್ದನು. ಈ ಬಗ್ಗೆ ಕಾನೂನು ಕ್ರಮ ಜರುಗಿಸುವಂತೆ ಅವರದೇ ಸಂಸ್ಥೆಯ ಪ್ರಾದೇಶಿಕ ವ್ಯವಸ್ಥಾಪಕರು ನೀಡಿದ ದೂರಿನನ್ವಯ ಅರವಿಂದ ಹನುಮಂತನನ್ನು ಚಿತ್ರದುರ್ಗ ಬಸ್ ನಿಲ್ದಾಣದಲ್ಲಿ ಬಂಧಿಸಿದ್ದಾಗಿ ಜಗಳೂರು ಪೊಲೀಸರು ತಿಳಿಸಿದ್ದಾರೆ. ನಕಲಿ ಚಿನ್ನ ಅಡವಿಟ್ಟು ಹಣ ಲಪಟಾಯಿಸಿ ಪರಾರಿಯಾಗಿದ್ದ ಅರವಿಂದ ಪ್ರಕರಣ ಜಗಳೂರು ಪೊಲೀಸರಿಗೆ ಆರಂಭದಲ್ಲಿ ತಲೆನೋವಾಗಿತ್ತು.

ಇಬ್ಬರು ಮಕ್ಕಳಿಗೆ ವಿಷವುಣಿಸಿ ಆತ್ಮಹತ್ಯೆಗೆ ತಂದೆ ಯತ್ನ

ಹಾವೇರಿ: ತನ್ನ ಇಬ್ಬರು ಮಕ್ಕಳಿಗೆ ವಿಷವುಣಿಸಿ ತಂದೆ ಆತ್ಮಹತ್ಯೆಗೆ ಯತ್ನಿಸಿದ ಘಟನೆ ಹಾವೇರಿ ತಾಲೂಕಿನ ಹಳೇರಿತ್ತಿ ಗ್ರಾಮದಲ್ಲಿ ನಡೆದಿದೆ. ವಿಷ ಸೇವನೆಯಿಂದ ಅಸ್ವಸ್ಥಗೊಂಡಿರುವ 42 ವರ್ಷದ ನಾಗೇಶ ಪವಾಡೆಪ್ಪರ ಮತ್ತು ಅವರ ಇಬ್ಬರು ಮಕ್ಕಳನ್ನು ಹುಬ್ಬಳ್ಳಿಯ ಕಿಮ್ಸ್‌ಗೆ ಚಿಕಿತ್ಸೆಗೆ ದಾಖಲಿಸಲಾಗಿದೆ. ಹೆಂಡತಿ-ಮಕ್ಕಳನ್ನು ಊರಿನಲ್ಲೇ ಬಿಟ್ಟು ದುಡಿಯಲು ಬೇರೆ ಕಡೆ ಹೋಗಿದ್ದ ನಾಗೇಶ, ವಾಪಸ್ ಬಂದು ಪತ್ನಿ ಜತೆ ಹಣದ ವಿಚಾರಕ್ಕೆ ಜಗಳ ಮಾಡಿಕೊಂಡಿದ್ದರು. ಬಳಿಕ 10 ವರ್ಷದ ಮಗ, 8 ವರ್ಷದ ಮಗಳನ್ನು ಊರ ಹೊರಗೆ ಕರೆದೊಯ್ದು ಅವರಿಗೆ ವಿಷವುಣಿಸಿ ಬಳಿಕ ತಾನೂ ಆತ್ಮಹತ್ಯೆಗೆ ಯತ್ನಿಸಿದ್ದಾನೆ. ನಾಗೇಶ್ ಕೆಲ ಸಂಘಗಳಲ್ಲಿ ಸಾಲ ಮಾಡಿಕೊಂಡಿದ್ದರು. ಇದರಿಂದಾಗಿ ಮರುಪಾವತಿಸುವಂತೆ ಸಾಲಗಾರರು ಕಿರುಕುಳ ನೀಡಿದ ಬಗ್ಗೆಯೂ ಅನುಮಾನ ವ್ಯಕ್ತವಾಗಿದೆ ಎಂದು ಸಂಬಂಧಿಕರು ಶಂಕಿಸಿದ್ದಾರೆ. ಗುತ್ತಲ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ.

ಹೊಸ ಯೋಚನೆಯಿಂದ ಪತ್ರಿಕೆ ಎತ್ತರಕ್ಕೆ

-**ಮಹಾಂತೇಶ ಮಾಗನೂರ,** ಐಟಿ ಉದ್ಯೋಗಿ

ವಿಶ್ವವಾಣಿಗೆ ಈಗ ಒಂಬತ್ತು ಮುಗಿದು ಹತ್ತನೇ ವರ್ಷಕ್ಕೆ ದಿಟ್ಟ ಹೆಜ್ಜೆ. ಓಡುವ ಜಗದಲ್ಲಿ ಓದುವ ಮನಗಳ ಹಿಡಿದಿಟ್ಟುಕೊಳ್ಳುವಲ್ಲಿ ಅತ್ಯಂತ ಯಶಸ್ವಿ ಪಯಣ ಎನ್ನಬಹುದು. ಪತ್ರಿಕೆ ಪ್ರತಿ ವರ್ಷವೂ ನವೀನ ಯೋಚನೆ ಮತ್ತು ಯೋಜನೆಗಳಿಂದ ಎತ್ತರಕ್ಕೆ ಬೆಳೆದಿರುವುದು ಸಂತೋಷ ಮತ್ತು ಶ್ಲಾಘನೀಯ.

ಐದಾರು ವರ್ಷಗಳಿಂದ ನನ್ನ ಹನಿಗವನ, ಚುಟುಕು, ಕವನಗಳಿಗೆ ಪತ್ರಿಕೆಯಲ್ಲಿ ಜಾಗ ನೀಡುತ್ತಾ ಲಕ್ಷಾಂತರ ಕನ್ನಡಿಗರಿಗೆ ತಲುಪಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ. ನಾನೊಬ್ಬ ಕನ್ನಡದ ಬರಹಗಾರನಾಗಿ ಗುರುತಿಸಿಕೊಳ್ಳಲು ಈ ಪತ್ರಿಕೆಯ ಪಾಲು ಬಲು ದೊಡ್ಡದು.

ಸಾಹಿತ್ಯಿಕ ಬರಹಗಳಿಗೆ ಸದಾ ಸಹಕಾರ ಮತ್ತು ಪ್ರೋತ್ಸಾಹ ನೀಡುತ್ತಿರುವ ಪತ್ರಿಕಾ ಬಳಗದವರಿಗೆ, ವಿಶೇಷವಾಗಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರಿಗೆ ಧನ್ಯವಾದ ತಿಳಿಸಲು ಬಯಸುವೆ.

ಪತ್ರಿಕೋದ್ಯಮದಲ್ಲಿ ವೇಗವಾಗಿ ಮುನ್ನುಗ್ಗುತ್ತಿರುವ ಪತ್ರಿಕೆ ಇನ್ನಷ್ಟು ಬೆಳೆಯಲಿ ಮತ್ತು ಬರಹಗಾರರಿಗೆ ಇನ್ನಷ್ಟು ಅವಕಾಶ ನೀಡುತ ಕನ್ನಡ ಸಾಹಿತ್ಯವನ್ನೂ ಬೆಳೆಸಲಿ ಎಂದು ಹಾರೈಸುವೆ.

ಸಮಾಚಾರ ಸಣ್ಣದಲ್ಲ

ತುಂಡಾದ ಕೊಟ್ಟೂರು ರಥದ ಸ್ಟೀರಿಂಗ್

ಬಳ್ಳಾರಿ: ವಿಜಯನಗರ ಜಿಲ್ಲೆಯ ಕೊಟ್ಟೂರಿನ ಐತಿಹಾಸಿಕ ಗುರುಬಸವೇಶ್ವರ ರಥವನ್ನು ಹೊರತೆಗೆಯುವಾಗ ಅವಘಡ ಸಂಭವಿಸಿದ್ದು, ಭಕ್ತರು ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸೋಮವಾರ ಸಂಜೆ ಗುರು ಬಸವೇಶ್ವರ ತೇರನ್ನು ಹೊರತೆಗೆಯುವಾಗ ಸ್ಟೀರಿಂಗ್ ಕೈಕೊಟ್ಟಿತ್ತು. ಹೀಗಾಗಿ ರಥವನ್ನು ಜೋರಾಗಿ ಎಳೆಯಲಾಗಿದೆ. ಆದರೆ ಜೋರಾಗಿ ಎಳೆದ ಪರಿಣಾಮ ಬೃಹತ್ ಗಾತ್ರದ ತೇರು ರಭಸವಾಗಿ ಕೆಳಗೆ ಬಿದ್ದಿದೆ. ಈ ವೇಳೆ ಸ್ಥಳದಲ್ಲಿದ್ದ ಭಕ್ತರು ಪಕ್ಕಕ್ಕೆ ಸರಿದಿದ್ದರಿಂದ ಪ್ರಾಣಾಪಾಯದಿಂದ ಪಾರಾಗಿದ್ದು, ಭಾರಿ ಅನಾಹುತ ತಪ್ಪಿದೆ. ರಥದ ಗಾಲಿಗಳ ನಿರ್ವಹಣೆ ಮಾಡುವವರ ಸಮಯ ಪ್ರಜ್ಞೆಯಿಂದ ಕ್ಷಿಪ್ರಗತಿಯಲ್ಲಿ ಜನರನ್ನು ಬದಿಗೆ ಸರಿಸಲು ಕಾರಣವಾಯಿತು. ಆದರೆ ರಸ್ತೆ ಬದಿಯಲ್ಲಿದ್ದ ಸ್ಕೂಟಿ ಹಾಗೂ ಬೈಕ್‌ಗಳು ರಥದ ಚಕ್ರಕ್ಕೆ ಸಿಲುಕಿ ಅಪ್ಪಚ್ಚಿಯಾಗಿವೆ.

ಸಾಲಬಾಧೆ: ರೈತ ನೇಣಿಗೆ ಶರಣು

ಡಂಬಳ: ಸಾಲಬಾಧೆ ತಾಳಲಾರದೆ ರೈತ ಜಮೀನಿನಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಡಂಬಳ ಹೋಬಳಿ ಮೇವುಂಡಿ ಗ್ರಾಮದಲ್ಲಿ ನಡೆದಿದೆ. ಈರಪ್ಪ ಕುರಡಗಿ (48) ಆತ್ಮಹತ್ಯೆ ಮಾಡಿಕೊಂಡ ರೈತ. ಆತ ಸ್ಥಳೀಯ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ನಲ್ಲಿ 1 ಲಕ್ಷ 20 ಸಾವಿರ ರು. ಬೆಳೆಸಾಲ ಹಾಗೂ ವಿವಿಧ ಸಂಘ ಸಂಸ್ಥೆಯಲ್ಲಿ 2 ಲಕ್ಷಕ್ಕೂ ಅಧಿಕ ಸಾಲ ಪಡೆದಿದ್ದ ಎಂದು ತಿಳಿದುಬಂದಿದೆ. ಕಳೆದ 2-3 ವರ್ಷದಿಂದ ಸರಿಯಾಗಿ ಫಸಲು ಬಾರದೆ, ನೊಂದು ಆತ್ಮಹತ್ಯೆ ಮಾಡಿಕೊಂಡಿ ದ್ದಾರೆ ಎನ್ನಲಾಗಿದೆ.

ಆತ್ಮಹತ್ಯೆಗೆ ಯತ್ನ

ಹಾವೇರಿ: ಸಾಲಗಾರರ ಕಿರುಕುಳಕ್ಕೆ ಬೇಸತ್ತ ವ್ಯಕ್ತಿಯೊಬ್ಬರು ಆತ್ಮಹತ್ಯೆಗೆ ಯತ್ನಿಸಿದ ಘಟನೆ ಬ್ಯಾಡಗಿ ತಾಲೂಕಿನ ಕಾಗಿನೆಲೆ ಗ್ರಾಮದಲ್ಲಿ ನಡೆದಿದೆ. ದಾದಾಪೀರ್ ತಿಳುವಳ್ಳಿ ಆತ್ಮಹತ್ಯೆಗೆ ಯತ್ನಿಸಿದ ವ್ಯಕ್ತಿ. ಅಡಕೆ ವ್ಯಾಪಾರ ಮಾಡುತ್ತಿರುವ ದಾದಾಪೀರ 30 ಲಕ್ಷ ರುಪಾಯಿ ಸಾಲ ಮಾಡಿಕೊಂಡಿದ್ದ.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ, ಮೈಸೂರು
Telephone No: 9448994705

CHAMUNDESHWARI ELECTRICITY SUPPLY CORPORATION LIMITED
(A Government of Karnataka Undertaking)
Corporate Office, Procurement Section, CESC, Mysuru-570017.
Website: www.cescmysore.org
E-mail ID: gmpurc@cescmysore.org
Company Identity Number(CIN): U40109KA2004SGC035177
ಚಾವಿಸನಿನಿ/ಪ್ರವ್ಯ/ಉ.ಪ್ರವ್ಯ(ಖ)/ಸ.ಪ್ರವ್ಯ(ಖ)-1/2024-25/27816 ದಿನಾಂಕ: 03.02.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)
ಚಾ.ವಿ.ಸ.ನಿ.ನಿ ವತಿಯಿಂದ ಅರ್ಹ ಗುತ್ತಿಗೆದಾರರಿಂದ ಪೂರ್ಣಗುತ್ತಿಗೆ ಆಧಾರದ ಮೇಲೆ ಕೈಗೊಳ್ಳಲು ಈ ಕೆಳಕಂಡ ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ.

ಕ್ರ.ಸಂ	ವಿವರಗಳು	ವಿಚಾರಣೆ ಸಂಖ್ಯೆ/ದಿನಾಂಕ
ಎ). ಶ್ರೀರಂಗಪಟ್ಟಣ ಉಪ ವಿಭಾಗ ವ್ಯಾಪ್ತಿಯಲ್ಲಿ AGRI ಫೀಡರ್‌ಗಳ ವಿತರಣಾ ನಷ್ಟ ಮತ್ತು HT-LT Ratios ಗಳನ್ನು ಕಡಿಮೆ ಮಾಡಲು ಕಾಮಗಾರಿಗಳನ್ನು ಪೂರ್ಣಗುತ್ತಿಗೆ ಆಧಾರದ ಮೇಲೆ ಕೈಗೊಳ್ಳಲು		
1	ಎಫ್01-ಹುಂಜನಕೆರೆ ಮತ್ತು ಎಫ್7-ಮಂಡ್ಯ ಕೊಪ್ಪಲು	ಸಿ2-6035/03-02-2025
2	ಎಫ್2-ಗಾಮನಹಳ್ಳಿ ಮತ್ತು ಎಫ್8-ನೆರಳಕೆರೆ, ಎಫ್1-ಡಿಜಿ ಕೊಪ್ಪಲು	ಸಿ2-6036/03-02-2025
3	ಎಫ್11-ತಡಗವಾಡಿ ಮತ್ತು ಎಫ್9-ಬಿದರಹಳ್ಳಿ	ಸಿ2-6037/03-02-2025
4	ಎಫ್8-ಬಣ್ಣಹಳ್ಳಿ ಮತ್ತು ಎಫ್1-ತರಿಪುರ	ಸಿ2-6038/03-02-2025
5	ಎಫ್11-ಮರಸಿಂಗನಹಳ್ಳಿ ಮತ್ತು ಎಫ್9-ಕಲಕೆರೆ	ಸಿ2-6039/03-02-2025
6	ಎಫ್9-ದೊಡ್ಡಪಾಳ್ಯ ಮತ್ತು ಎಫ್7-ಚಿಕನ್ನಕನಹಳ್ಳಿ	ಸಿ2-6040/03-02-2025
7	ಎಫ್9-ದೊಡ್ಡಹಾರೊಹಳ್ಳಿ	ಸಿ2-6041/03-02-2025
ಬಿ). ಚಾವಿಸನಿನಿಯ ವ್ಯಾಪ್ತಿಯಲ್ಲಿ ಅಪಾಯಕಾರಿ ಸ್ಥಳ, ವಿದ್ಯುತ್ ಕಳ್ಳತನ ಸಂಭಾವ್ಯ ಪ್ರದೇಶಗಳು, ಕೊಳಗೇರಿ ಪ್ರದೇಶಗಳು, ಜನನಿಬಿಡು ಸಾರ್ವಜನಿಕ ಸ್ಥಳ, ಕಿರಿದಾದ ರಸ್ತೆಗಳು, ಹೆಚ್ಚಿನ ಅಡಚಣೆಯಿರುವ ಫೀಡರ್‌ಗಳು, ಎನ್.ಜೆ.ವೈ ಫೀಡರ್ ಕ್ರಾಸಿಂಗ್ ಸ್ಥಳಗಳು ಮತ್ತು ಶಾಲೆಗಳು / ಕಾಲೇಜುಗಳು ಹಾಸ್ಟೆಲ್‌ಗಳ ಆವರಣಗಳಲ್ಲಿ ಅಸ್ತಿತ್ವದಲ್ಲಿರುವ LT/HT ಓವರ್ ಹೆಡ್ ಲೈನ್‌ಗಳನ್ನು LT AB Cable / Covered conductor ಗಳ ಮೂಲಕ ಬದಲಾಯಿಸಲು ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ವಿಭಾಗಗಳಿಗೆ ಪೂರ್ಣ ಗುತ್ತಿಗೆ ಆಧಾರದ ಮೇಲೆ ದರ ಒಪ್ಪಂದ (Rate contract) ಅಡಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು		
1	ಹಾಸನ ವಿಭಾಗ - ಲಾಟ್-1	ಸಿ2-6042/03-02-2025
2	ಹಾಸನ ವಿಭಾಗ - ಲಾಟ್-2	ಸಿ2-6043/03-02-2025
3	ಸಕಲೇಶಪುರ ವಿಭಾಗ - ಲಾಟ್-1	ಸಿ2-6044/03-02-2025
4	ಸಕಲೇಶಪುರ ವಿಭಾಗ - ಲಾಟ್-2	ಸಿ2-6045/03-02-2025
5	ಅರಸೀಕೆರೆ ವಿಭಾಗ - ಲಾಟ್-1	ಸಿ2-6046/03-02-2025
6	ಅರಸೀಕೆರೆ ವಿಭಾಗ - ಲಾಟ್-2	ಸಿ2-6047/03-02-2025
7	ಚನ್ನರಾಯಪಟ್ಟಣ ವಿಭಾಗ - ಲಾಟ್-1	ಸಿ2-6048/03-02-2025
8	ಚನ್ನರಾಯಪಟ್ಟಣ ವಿಭಾಗ - ಲಾಟ್-2	ಸಿ2-6049/03-02-2025
9	ಹೊಳೆನರಸೀಪುರ ವಿಭಾಗ - ಲಾಟ್-1	ಸಿ2-6050/03-02-2025
10	ಹೊಳೆನರಸೀಪುರ ವಿಭಾಗ - ಲಾಟ್-2	ಸಿ2-6051/03-02-2025
11	ಕೆ.ಆರ್ ಪೇಟೆ ವಿಭಾಗ - ಲಾಟ್-1	ಸಿ2-6052/03-02-2025
12	ಕೆ.ಆರ್ ಪೇಟೆ ವಿಭಾಗ - ಲಾಟ್-2	ಸಿ2-6053/03-02-2025
13	ಮಳವಳ್ಳಿ ವಿಭಾಗ - ಲಾಟ್-1	ಸಿ2-6054/03-02-2025
14	ಮಳವಳ್ಳಿ ವಿಭಾಗ - ಲಾಟ್-2	ಸಿ2-6055/03-02-2025

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ದಿನಾಂಕ: 07.02.2025ರ ನಂತರ ಪಡೆಯಬಹುದಾಗಿದೆ.
ಹೆಚ್ಚಿನ ಮಾಹಿತಿಗಾಗಿ ಹೆಲ್ಪ್‌ಲೈನ್ +91-8046010000, +91-8068948777 ಅಥವಾ ಇ-ಮೇಲ್ ವಿಳಾಸ support@eprochelpdesk.com ವ್ಯವಹರಿಸಲು ಕೋರಲಾಗಿದೆ.
ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ: 1912
ಸಹಿ/- ಪ್ರಧಾನ ವ್ಯವಸ್ಥಾಪಕರು (ಖರೀದಿ), ಚಾ.ವಿ.ಸ.ನಿನಿ., ಮೈಸೂರು
DIPR/DDMYS/1235/KSMCA/850/2024-25

ವಿಶ್ವವಾಣಿ

ಸಂಪಾದಕೀಯ

ಕಾಲ್ತುಳಿತ: ವಾಸ್ತವ ಸ್ಥಿತಿ ತಿಳಿಸಿ

ಉತ್ತರ ಪ್ರದೇಶದ ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳದಲ್ಲಿ ಮೌನಿ ಅಮಾವಾಸ್ಯೆಯಂದು ಘಟಿಸಿದ ಕಾಲ್ತುಳಿತ ಪ್ರಕರಣದ ಕುರಿತು ಒಬ್ಬೊಬ್ಬರು ಒಂದೊಂದು ಮಾಹಿತಿ ನೀಡುತ್ತಿದ್ದಾರೆ. ಘಟನೆ ನಡೆದ 24ಗಂಟೆಗಳ ನಂತರ ಉತ್ತರ ಪ್ರದೇಶ ಸರಕಾರವು 30 ಜನರು ಮೃತಪಟ್ಟಿದ್ದಾರೆ ಎಂದು ಹೇಳಿಕೆ ನೀಡಿತ್ತು. ಆದರೆ ಇದೀಗ ಸಾವಿನ ಸಂಖ್ಯೆ ಸಾವಿರ ದಾಟಿದೆ ಎಂಬ ಮಾತು ಹರಿದಾಡುತ್ತಿವೆ. ಇಂತಹ ದುರ್ಘಟನೆ ನಡೆದಾಗ ಸಾವಿನ ಸಂಖ್ಯೆಯ ಬಗ್ಗೆ ಸಾರ್ವಜನಿಕರಿಗೆ ಸರಿಯಾಗಿ ಮಾಹಿತಿ ಒದಗಿಸದೇ ಇರುವುದು ವದಂತಿಗಳು ಹರಡುವುದಕ್ಕೆ ನೇರ ಕಾರಣವಾಗುತ್ತದೆ. ಮೇಳದಲ್ಲಿ ಆಗಿರುವುದು ಏನು ಎಂಬುದರ ಬಗ್ಗೆ ಅಲ್ಲಿರುವ ಭಕ್ತರಿಗೆ ಹಾಗೂ ಇತರೆಡೆಗಳಲ್ಲಿರುವ ಅವರ ಸಂಬಂಧಿಕರಿಗೆ ಮಾಹಿತಿ ಸಿಗಬೇಕಿತ್ತು. ಆದರೆ ಆ ಮಾಹಿತಿ ಸಕಾಲದಲ್ಲಿ ಸಿಗಲಿಲ್ಲ. ಆರಂಭದಲ್ಲಿ ಸರಕಾರ ಮತ್ತು ಪೊಲೀಸರು ದುರ್ಘಟನೆ ನಡೆದೇ ಇಲ್ಲ ಎಂಬಂತೆ ವರ್ತಿಸಿದರು. ಕಾಲ್ತುಳಿತ ಎಂಬ ಪದವನ್ನೂ ಬಳಸಿರಲಿಲ್ಲ. ದುರ್ಘಟನೆಯು ದೊಡ್ಡಮಟ್ಟದ್ದಲ್ಲ ಎಂದು ಬಿಂಬಿಸಲು ಸರ್ವ ರೀತಿಯ ಪ್ರಯತ್ನ ನಡೆಸಲಾಯಿತು. ಈಗಲೂ ಬಿಜೆಪಿ ಸಂಸದೆ, ನಟಿ ಹೇಮಾಮಾಲಿನಿ ಸೇರಿದಂತೆ ಅನೇಕರು ಅದೊಂದು ದೊಡ್ಡ ಘಟನೆ ಅಲ್ಲವೇ ಅಲ್ಲ ಹೇಳಿದ್ದಾರೆ. ಸಾವಿನಲ್ಲೂ ರಾಜಕೀಯ ಬೆರೆಸಲು ಸ್ವತಃ ಉತ್ತರ ಪ್ರದೇಶ ಸರಕಾರವೇ ದಾರಿ ಮಾಡಿಕೊಡುತ್ತಿದೆ. ಇಂತಹ ಸಂದರ್ಭಗಳಲ್ಲಿ ನಡೆದಿರುವುದು ಏನು ಎಂಬುದನ್ನು ಪಾರದರ್ಶಕವಾಗಿ ತಿಳಿಸುವುದು ಬಹಳ ಮುಖ್ಯ. ಕಾಲ್ತುಳಿತಕ್ಕೆ ಕಾರಣ ಏನು ಎಂಬುದನ್ನು ಗುರುತಿಸಲು ಉತ್ತರಪ್ರದೇಶ ಸರಕಾರವು ನ್ಯಾಯಾಂಗ ತನಿಖೆಗೆ ಆದೇಶಿಸಿದೆ. ಪರಿಣಾಮಕಾರಿಯಾಗಿ ನಡೆಸಿದರೆ ಪೊಲೀಸ್ ತನಿಖೆಯೂ ಇದಕ್ಕೆ ಕಾರಣವನ್ನು ಗುರುತಿಸಬಲ್ಲದು. ಕಾಲ್ತುಳಿತಕ್ಕೆ ಕಾರಣರಾದವರನ್ನು ಉತ್ತರದಾಯಿ ಆಗಿಸಬೇಕು. ಮಹಾಕುಂಭಮೇಳದ ಆಯೋಜನೆಯ ಹೊಣೆಯನ್ನು ಹೊತ್ತುಕೊಂಡಿರುವ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಈಗ ಆಗಿರುವುದರ ಹೊಣೆಯಿಂದ ತಪ್ಪಿಸಿಕೊಳ್ಳಬಾರದು.

ಸೊಂಪಾದಕೀಯ

ಏಯ್ ಸಾಲಾ!

ಜನಸಂಖ್ಯೆ ಹೆಚ್ಚಿರುವ ದೇಶಗಳಲ್ಲಿ ಉತ್ಪಾದನೆ ಹೆಚ್ಚಿರುತ್ತದೆ ಅನ್ನೋದು ಪಾಸಿಟಿವ್ ವಿಷಯ ಆದರೂ ಕೂತ್ಕೊಂಡ್ ತಿನ್ನೋರು ಜಾಸ್ತಿ ಇದ್ರೆ ಅದು ವ್ಯತಿರಿಕ್ತ ಪರಿಣಾಮವನ್ನೂ ಬೀರಬಲ್ಲದು. ಕೂತು ತಿಂದರೆ ಕುಡಿಕೆ ಹಣ ಸಾಲದು ಅನ್ನೋ ಮಾತಿನ ನಂತರ ಕುಡಿಕೆ ಹಣ ಖಾಲಿ ಆಗಿ, ಸಾಲದ ಮೊರೆ ಹೋದರೆ ಅದರ ಹೊರೆಯೂ ಹೆಚ್ಚಾಗುತ್ತದೆ. ಈಗ ಕರ್ನಾಟಕ ಸರಕಾರದ ವಿಷಯದಲ್ಲೂ ಅದೇ ಆಗುತ್ತಿದೆ. ಸಾಮಾನ್ಯವಾಗಿ ಕೇಂದ್ರದಲ್ಲಿ ಸರ್ಕಾರಗಳು ಬದಲಾದಾಗ ಆ ಸರಕಾರದಲ್ಲಿ ದೇಶದ ಪ್ರಜೆಗಳ ತಲೆ ಮೇಲೆ ಸಾಲ ಅಷ್ಟಿತ್ತು, ಈಗ ಇಷ್ಟಾಯ್ತು ಅನ್ನೋ ಮಾತುಗಳು ಮಾಮೂಲಿ. ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಬಂದಮೇಲೆ ಕೂಡಾ ಇದರಲ್ಲಿ ಏನೂ ಬದಲಾವಣೆ ಇಲ್ಲದೆ ಸಾಲದ ಹೊರೆ ಹೆಚ್ಚುತ್ತಲೇ ಇದೆ. ಆದರೂ ಆಗಾಗ ಮೋದಿ ಮತ್ತು ಬಿಜೆಪಿ ಅಭಿಮಾನಿಗಳು ತಮ್ಮ ಸುಳ್ಳುಗಳ ಮೂಲಕ, ಹೌದು, ಭಾರತದ ಸಾಲವೆಲ್ಲಾ ತೀರಿದೆ, ಇನ್ನೊಂದು ಇನ್ನೂರೈವತ್ತು ರೂಪಾಯಿ ಉಳಿದಿರಬಹುದು ಅನ್ನೋ ಥರ ಟ್ರೋಲ್ ಗಳಲ್ಲಿ ನಗೆಪಾಟಲಿಗೆ ಈಡಾಗುತ್ತಿದ್ದಾರೆ. ಆದರೆ ಈ ವಿಷಯದಲ್ಲಿ ನಮ್ಮ ರಾಜ್ಯ ಸರ್ಕಾರ ಕೂಡಾ ಹಿಂದೆ ಬಿದ್ದಿಲ್ಲ. ಸದ್ಯಕ್ಕೆ ರಾಜ್ಯದ ಒಟ್ಟು ಸಾಲ 6.65 ಲಕ್ಷ ಕೋಟಿ ರೂಪಾಯಿ ಆಗಿದೆಯಂತೆ. ಇದರಲ್ಲಿ ಆತಂಕ ಪಡೋ ವಿಷಯ ಅಂದ್ರೆ, ಮರುಪಾವತಿಯ ಹಣವೆಲ್ಲಾ ಬರೀ ಬಡ್ಡಿಗೇ ಹೋಗ್ತಾ ಇರೋದ್ರಿಂದ ಅಸಲಿಗೆ ಈ ಸರ್ಕಾರ ಅಸಲನ್ನು ಯಾವಾಗ ತೀರಿಸುತ್ತದೆ ಅನ್ನೋದು ಎಲ್ಲರ ಪ್ರಶ್ನೆ. ರಾಜ್ಯದಲ್ಲಿ ಈಗ ಮೈಕ್ರೋ ಫೈನಾನ್ಸ್ ಕಂಪನಿಗಳ ಸಾಲ ವಸೂಲಿ ದೊಡ್ಡ ವಿವಾದ ಆಗಿದೆ. ಜನ ಸಾಮಾನ್ಯರು ಸಾಲ ಬಾಧೆ ತಾಳಲಾರದೆ ಆತ್ಮಹತ್ಯೆ ಮಾಡಿಕೊಳ್ತಾ ಇರೋದ್ರಿಂದ ಈ ಬಗ್ಗೆ ಸುಗ್ರೀವಾಜ್ಞೆ ಹೊರಡಿಸಲು ರೆಡಿ ಆಗಿರೋ ಸರಕಾರ ಸ್ವತಃ ತಾನೇ ಸಾಲದ ಶೂಲದಲ್ಲಿ ಇರೋದು ವಿಪರ್ಯಾಸ. ಆದರೆ ಈ ಪರಿಸ್ಥಿತಿಗೆ ಕಾರಣ ಏನು ಅಂದ್ರೆ, ಸಾಮಾನ್ಯ ಜನರ ದೃಷ್ಟಿ ಹೋಗೋದು ಉಚಿತ ಸವಲತ್ತುಗಳ ಕಡೆಗೆ. ಹೊಗಳಿ ಹೊಗಳಿ ಹೊನ್ನ ಶೂಲಕ್ಕೇರಿಸಿದರಯ್ಯಾ ಅನ್ನೋ ಮಾತಿನಂತೆ, ನಿಂಗೂ ಫ್ರೀ ಅವನಿಗೂ ಫ್ರೀ, ತಗಳಿ ತಗಳಿ ಅಂತ ರಾಜ್ಯದ ನಾಗರಿಕರನ್ನು ಸಾಲದ ಶೂಲಕ್ಕೇರಿಸಿದೆ ಕಾಂಗ್ರೆಸ್ ಸರ್ಕಾರ ಅನ್ನೋದು ಬಹುತೇಕರ ಆರೋಪ.

ಸಂಪಾದಕರ ಸದ್ಯಶೋಧನೆ

ಅಣುಬಾಂಬ್ ದಾಳಿ ಚರ್ಚೆ ನಿಷಿದ್ಧ

ಜಪಾನಿಗೆ ಹೋದವರು ಅಲ್ಲಿನ ಜನರೊಂದಿಗೆ ಸಾಮಾನ್ಯವಾಗಿ ಹಿರೋಶಿಮಾ, ನಾಗಾಸಕಿ ಅಣುಬಾಂಬ್ ದಾಳಿಯ ಬಗ್ಗೆ ಚರ್ಚಿಸಲು, ತಿಳಿದುಕೊಳ್ಳಲು ಬಯಸುವುದು ಸಹಜ. ಅಷ್ಟೇ ಅಲ್ಲ, ಅಣುಬಾಂಬ್ ದಾಳಿಗೆ ಕಾರಣವಾದ ಸಂಗತಿಗಳ ಬಗ್ಗೆ ತಿಳಿದುಕೊಳ್ಳಲು ಬಯಸುವುದೂ ಸಾಮಾನ್ಯ. ಆದರೆ ಅಲ್ಲಿ ಅನೇಕ ವರ್ಷಗಳ ಕಾಲ ವಾಸವಿದ್ದ ಸ್ನೇಹಿತರೊಬ್ಬರು, 'ಜಪಾನಿಗೆ ಹೋದಾಗ ನೀವು ಸ್ಥಳೀಯರೊಂದಿಗೆ ಚರ್ಚಿಸಲೇ ಬಾರದ ವಿಷಯ ಅಂದ್ರೆ ಹಿರೋಷಿಮಾ, ನಾಗಾಸಕಿ ಅಣುಬಾಂಬ್ ದಾಳಿ' ಅಂತ ನನಗೆ ಹೇಳಿದ್ದರು. 'ಅದು ನಿಷಿದ್ಧ ಎಂಬಷ್ಟು ಜಪಾನಿಯರು ಆ ವಿಷಯವನ್ನು ಚರ್ಚಿಸಲು ಬಯಸುವುದಿಲ್ಲ' ಎಂದೂ ಹೇಳಿದ್ದರು. ನಿಜ, ದ್ವಿತೀಯ ವಿಶ್ವ ಮಹಾಯುದ್ಧ ಮತ್ತು ಅದರ ಪರಿಣಾಮಗಳ ಬಗ್ಗೆ ಜಪಾನಿಯರು ಚರ್ಚಿಸಲು ಬಯಸುವುದಿಲ್ಲ. ಅದರಲ್ಲೂ ಯಾರು ತಪ್ಪು, ಯಾರು ಸರಿ ಎಂಬ ವಿಷಯವನ್ನು ಚರ್ಚಿಸಲು ಇಷ್ಟಪಡುವುದಿಲ್ಲ. ಕಾರಣ ಆ ವಾದ-ಸಂವಾದ ಯಾವತ್ತೂ ಮತ್ತಷ್ಟು ವಿವಾದವನ್ನು ಹುಟ್ಟುಹಾಕುತ್ತದೆ ಮತ್ತು ಸಂಘರ್ಷಕ್ಕೆ ಕಾರಣವಾಗುತ್ತದೆ ಎಂಬುದು. ಜಪಾನಿನ ಇತಿಹಾಸದಲ್ಲಿ ಅಣುಬಾಂಬ್ ದಾಳಿಯ ಬಗ್ಗೆ ಚರ್ಚಿಸಲು ಜನರು ಹಿಂಜರಿಯುವುದು ಸಾಮಾನ್ಯ. ಇದನ್ನು ಕೆಲವೆಡೆ ನಿಷಿದ್ಧ ಎಂದು ಪರಿಗಣಿಸುವ ಮಟ್ಟಿಗೆ ಅವರು ಕಡೆಗಣಿಸುವುದನ್ನು ಗಮನಿಸಬಹುದು. 1930ರ ದಶಕದಲ್ಲಿ ಜಪಾನ್ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಲು ಪೆಸಿಫಿಕ್ ಪ್ರದೇಶದಲ್ಲಿ ಆಕ್ರಮಣಾತ್ಮಕ ನೀತಿಯನ್ನು ಅನುಸರಿಸಿತು. 1941ರ ಡಿಸೆಂಬರ್ 7ರಂದು ಅಮೆರಿಕದ ಪರ್ಲ್ ಹಾರ್ಬರ್ ಮೇಲೆ ಜಪಾನ್ ನಡೆಸಿದ ದಾಳಿ, ದ್ವಿತೀಯ ವಿಶ್ವಯುದ್ಧದಲ್ಲಿ ದೇಶದ ಪಾತ್ರವನ್ನು ತೀವ್ರಗೊಳಿಸಿತು. ಯುದ್ಧದ ಅಂತಿಮ ಘಟ್ಟದಲ್ಲಿ, 1945ರ ಆಗಸ್ಟ್‌ನಲ್ಲಿ ಹಿರೋಶಿಮಾ ಮತ್ತು ನಾಗಾಸಕಿ ನಗರಗಳ ಮೇಲೆ ನಡೆಸಿದ ಪರಮಾಣು ಬಾಂಬ್ ದಾಳಿಗೆ ಜಪಾನ್ ದಯನೀಯವಾಗಿ ಸೋತಿತು. ಹಿರೋಶಿಮಾ ಮತ್ತು ನಾಗಾಸಕಿ ಪೂರ್ತಿಯಾಗಿ ನಾಶವಾದವು. ಲಕ್ಷಾಂತರ ಜನರು ಸಾವನ್ನಪ್ಪಿದರು ಮತ್ತು ಅನೇಕರು ದೀರ್ಘಕಾಲದ ಆರೋಗ್ಯ ಸಮಸ್ಯೆಗಳನ್ನು ಅನುಭವಿಸಿದರು. ಯುದ್ಧದ ನಂತರ ಜಪಾನ್ ತೀವ್ರ ಆರ್ಥಿಕ ಕುಸಿತಕ್ಕೆ ಒಳಪಟ್ಟಿತು ಮತ್ತು ದೇಶವನ್ನು ಮರು ನಿರ್ಮಿಸಲು ಹಲವಾರು ದಶಕಗಳ ಕಾಲ ತೆಗೆದುಕೊಂಡಿತು. 1947ರಲ್ಲಿ ಜಪಾನ್ ತನ್ನ ಹೊಸ ಶಾಂತಿ ಸಂವಿಧಾನವನ್ನು ರಚಿಸಿ, ಯುದ್ಧವನ್ನು ತ್ಯಜಿಸಿತು. ಇದು ಸಂಕ್ಷಿಪ್ತ ಹಿನ್ನೆಲೆ. ಇಂಥ ವಿಷಯಗಳು ಚರ್ಚೆಗೆ ಬರುವುದು ಸಾಮಾನ್ಯ. ಜಪಾನ್ ಎಂದ ತಕ್ಷಣ ಸಾಮಾನ್ಯವಾಗಿ ಕಣ್ಣ ಮುಂದೆ ಬರುವುದು ಅಣುಬಾಂಬ್ ದಾಳಿಗೆ ತುತ್ತಾದ ಹಿರೋಶಿಮಾ ಮತ್ತು ನಾಗಾಸಕಿ ನಗರಗಳು. ಅಣುಬಾಂಬ್ ದಾಳಿಯ ವಿಷಯ ಸೂಕ್ಷ್ಮವಾಗಿರುವುದರಿಂದ ಯಾವತ್ತೂ ಆಕ್ರೋಶಭರಿತವಾಗಿರುತ್ತದೆ. ಈ ವಿಷಯದ ಬಗ್ಗೆ ನಡೆಯುವ ಯಾವ ಚರ್ಚೆಯೂ ಶಾಂತಿಯುತವಾಗಿ ಇರಲು ಸಾಧ್ಯವಿಲ್ಲ. ಅದಕ್ಕಿಂತ ಹೆಚ್ಚಾಗಿ ಆ ವಿಷಯವನ್ನು ಈಗ ಚರ್ಚಿಸುವುದರಿಂದ ಯಾವ ಪ್ರಯೋಜನವೂ ಇಲ್ಲ. ಕೆಲವರು ಜಪಾನಿನ ಯುದ್ಧದ ಕಾರ್ಯತಂತ್ರಗಳನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸುತ್ತಾರೆ, ಇನ್ನೊಬ್ಬರು ಅದನ್ನು ತೀವ್ರವಾಗಿ ವಿರೋಧಿಸುತ್ತಾರೆ. ಯುದ್ಧದ ಸಮಯದ ದಾರಿ ತಪ್ಪಿದ ತೀರ್ಮಾನಗಳು ಮತ್ತು ಅದರ ಪರಿಣಾಮವಾಗಿ ಉಂಟಾದ ಹಾನಿ ಬಗ್ಗೆ ಚರ್ಚಿಸುವುದು ಯಾವತ್ತೂ ನೋವಿನೊಂದಿಗೆ ಕೂಡಿರುತ್ತದೆ. ಅಷ್ಟೇ ಅಲ್ಲ, ಜಪಾನಿಯರು ಹಿರೋಶಿಮಾ ಮತ್ತು ನಾಗಾಸಕಿ ಮೇಲೆ ನಡೆದ ದಾಳಿಯನ್ನು ಇಂದಿಗೂ ರಾಷ್ಟ್ರೀಯ ನೋವಿನ ಘಟನೆಯಾಗಿ ಪರಿಗಣಿಸುತ್ತಾರೆ. ನೋವು ತರುವ ವಿಷಯವನ್ನು ಚರ್ಚಿಸಲು ಯಾರೂ ಬಯಸುವುದಿಲ್ಲ. ಅದಕ್ಕಿಂತ ಮುಖ್ಯವಾಗಿ, ಜಪಾನ್ ಇಂದು ಶಾಂತಿ ಮತ್ತು ತಂತ್ರಜ್ಞಾನದ ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿದೆ. ದ್ವಿತೀಯ ವಿಶ್ವಯುದ್ಧವನ್ನು ಚರ್ಚಿಸುವುದರಿಂದ ಆಧುನಿಕ ಜಪಾನಿನ ಘನತೆಯ ಮೇಲೆ ಬೇಜಾರಿನ ಪ್ರತಿಫಲಗಳು ಉಂಟಾಗಬಹುದು. ಹಾಗಂತ ಆ ವಿಷಯವನ್ನು ಯಾರೂ ಚರ್ಚಿಸುವುದೇ ಎಂದೇನೂ ಇಲ್ಲ. ಪ್ರತಿವರ್ಷ ಆಗಸ್ಟ್ 6ರಂದು ನಡೆಯುವ ಶ್ರದ್ಧಾಂಜಲಿ ಕಾರ್ಯಕ್ರಮಗಳಲ್ಲಿ ಯುದ್ಧದ ಕುರಿತು ಚರ್ಚೆ ನಡೆಯುತ್ತದೆ. ಆದರೆ ಅದನ್ನು ಉಳಿದ ದಿನಗಳಿಗೂ ವಿಸ್ತರಿಸಲು ಅವರು ಬಯಸುವುದಿಲ್ಲ. ಜಪಾನಿಯರು ಚರ್ಚೆಗಳಲ್ಲಿ ತನ್ನ ಶಾಂತಿಯ ಪ್ರಾತಿನಿಧ್ಯವನ್ನು ತೋರಿಸುವಲ್ಲಿ ಹೆಚ್ಚಿನ ಒತ್ತು ನೀಡುತ್ತಾರೆ ಮತ್ತು ಯುದ್ಧದ ಕಾಲದ ಇತಿಹಾಸವನ್ನು ಗಮನಕ್ಕೆ ತರುವ ಸಂದರ್ಭಗಳಲ್ಲಿ ಮೌನಕ್ಕೆ ಶರಣಾಗುತ್ತಾರೆ.

ನರವಿಜ್ಞಾನದ ಹೆಬ್ಬಾಗಿಲನ್ನು ತೆರೆದ ಹುತಾತ್ಮ ಲೆಬೋರ್ನ್ಯ

ಲೆಬೋರ್ನ್ಯ ಪ್ರಸಂಗವು ಹಲವು ನೈತಿಕ ದ್ವಂದ್ವಗಳನ್ನು ಹುಟ್ಟುಹಾಕಿದೆ. ಬ್ರೋಕಾ ಬದುಕಿದ್ದ ಕಾಲದಲ್ಲಿ ಲೆಬೋರ್ನ್ಯನಂತಹವರನ್ನು ಮನುಷ್ಯರು ಎಂದು ಪರಿಗಣಿಸುತ್ತಿರಲಿಲ್ಲ. ಬದಲಿಗೆ ಅವರನ್ನು ಕೇವಲ ವೈದ್ಯಕೀಯ ಅಧ್ಯಯನ ಸಾಮಗ್ರಿ ಎಂದು ಪರಿಗಣಿಸುತ್ತಿದ್ದರು. ಹಾಗಾಗಿ ಅವರನ್ನು ಅಧ್ಯಯನ ಮಾಡಲು ಅಥವ ಅವರ ಮೇಲೆ ಯಾವುದೇ ರೀತಿಯ ಪ್ರಯೋಗಗಳನ್ನು ಮಾಡಲು, ಅವರು ಯಾರ ಅನುಮತಿಯನ್ನು ಕೇಳುತ್ತಿರಲಿಲ್ಲ.ಸ್ವಯಂ ರೋಗಿಯನ್ನೂ ಕೇಳುತ್ತಿರಲಿಲ್ಲ. ಬ್ರೋಕ ಸಹ ತನ್ನ ವೈದ್ಯಕೀಯ ಪ್ರಬಂಧಗಳಲ್ಲಿ ಎಲ್ಲಿಯೂ ಲೆಬೋರ್ನ್ಯನ ನಿಜ ಹೆಸರನ್ನು ಬಳಸಲೇ ಇಲ್ಲ.



ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ
vveditoped@gmail.com

ಪ್ರಾಚೀನ ಈಜಿಪ್ಟಿಯನ್ನರು ಪುನರ್ಜನ್ಮದಲ್ಲಿ ನಂಬಿಕೆಯನ್ನಿಟ್ಟಿದ್ದರು. ಹಾಗಾಗಿ ತಮ್ಮವರು ಸತ್ತಾಗ ಅವರ ಶವಗಳನ್ನು ಸದಾ ಕಾಲಕ್ಕೂ ಸಂರಕ್ಷಿಸಿಡಲು ಕಲಿತರು. ಇದುವೇ ಮಮ್ಮಿಫಿಕೇಶನ್ ಅಥವ ಮಮ್ಮೀಕರಣ. ಶವರಕ್ಷಣೆಯ ಪ್ರಕ್ರಿಯೆಯಲ್ಲಿ, ಒಂದು ಹರಿತವಾದ ನೀಳ ಕೊಕ್ಕೆಯನ್ನು ಶವದ ಮೂಗಿನ ಒಳಗೆ ತೂರಿಸುತ್ತಿದ್ದರು. ನಿಧಾನವಾಗಿ ಮೂಗಿನ ಒಳಪ್ರವೇಶಿಸಿ, ಅಲ್ಲಿದ್ದ ಮಿದುಳನ್ನು ಹೆರೆದು ಹೆರೆದು ಹೊರತೆಗೆದು ಎಸೆಯುತ್ತಿದ್ದರು. ಅವರ ದೃಷ್ಟಿಯಲ್ಲಿ ಹೃದಯವು ಜೀವ ಹಾಗೂ ಆತ್ಮನ ಅವಾಸವಾಗಿತ್ತು. ಮಿದುಳು ನಿಷ್ಪ್ರಯೋಜಕ ವಸ್ತುವಾಗಿತ್ತು. ಹಾಗಾಗಿ ಈಜಿಪ್ಟಿನ ಎಲ್ಲ ಮಮ್ಮಿಗಳಲ್ಲಿ ಮಿದುಳು ಎನ್ನುವ ಭಾಗವು ಇಲ್ಲವೇ ಇಲ್ಲ.

ಮನುಷ್ಯನ ಸಕಲ ಕೆಲಸ ಕಾರ್ಯಗಳನ್ನು ನಿಯಂತ್ರಿಸುವ ಸೂಪರ್ ಕಂಪ್ಯೂಟರ್ ಮಿದುಳು ಎನ್ನುವ ಸತ್ಯವು ಮನುಷ್ಯನಿಗೆ ತಿಳಿಯಲು ಕಾರಣನಾದವನು, ಒಬ್ಬ ರೋಗಿ ಲೂಯೀ ವಿಕ್ಟರ್ ಲೆಬೋರ್ನ್ಯ (1809–1861). ಇವನು ಪ್ಯಾರಿಸ್ಸಿನ ಬಿಸೆತ್ರ ಆಸ್ಪತ್ರೆಯ ಕತ್ತಲ ಕೋಣೆಯೊಂದರಲ್ಲಿ 21 ವರ್ಷಗಳ ಕಾಲ ಬದುಕಿದ್ದ. ಆಗ ಇವನ ಹೆಸರು ಯಾರಿಗೂ ತಿಳಿದಿರಲಿಲ್ಲ. ಇವನಿಗೆ ಗೊತ್ತಿದ್ದದ್ದು ಒಂದೇ ಒಂದು ಶಬ್ದ ಟ್ಯಾನ್. ಈ ಒಂದು ಶಬ್ದವನ್ನು ಬಿಟ್ಟು ಬೇರೇನನ್ನು ಮಾತನಾಡುತ್ತಿರಲಿಲ್ಲ. ಹಾಗಾಗಿ ಆಸ್ಪತ್ರೆಯಲ್ಲಿ ಎಲ್ಲರೂ ಈತನನ್ನು ಟ್ಯಾನ್ ಎಂದೇ ಕರೆಯುತ್ತಿದ್ದರು. ಇಂತಹ ಮಾತು ಬಾರದ ಟ್ಯಾನ್ ನರವಿಜ್ಞಾನದ ಹೆಬ್ಬಾಗಿಲನ್ನೇ ತೆರೆದ ಎಂದರೆ ಅದು ಅತಿಶಯೋಕ್ತಿಯಾಗಲಾರದು. 1861ರಲ್ಲಿ ಈತನು ಪಿಯರಿ ಪಾಲ್ ಬ್ರೋಕ (1824–1880) ಎಂಬ ಫ್ರೆಂಚ್ ವೈದ್ಯನನ್ನು ಭೇಟಿಯಾದ. ಅದರೊಡನೆ ಮನುಷ್ಯನನ್ನು ತನ್ನನ್ನು ತಾನು ಅರಿಯುವ ದಿಶೆಯಲ್ಲಿ ಒಂದು ಮಹತ್ತರ ತಿರುವು ದೊರೆಯಿತು. ಈಜಿಪ್ಷಿಯನ್ನರು ಮಿದುಳೊಂದು ಅನಗತ್ಯ ವಸ್ತು ಎಂದು ತೀರ್ಮಾನಿಸಿದ್ದರೂ ಸಹ, ಆನಂತರ ಬಂದ ಗ್ರೀಕರು, ರೋಮನ್ನರು, ಅರಬ್ಬರು ಹಾಗೂ ಯೂರೋಪಿನ ಅನೇಕ ವಿಜ್ಞಾನಿಗಳು ಮಿದುಳೇ ಮನುಷ್ಯನ ಎಲ್ಲ ಚಟುವಟಿಕೆಗಳ ಕೇಂದ್ರ ಎಂದು ತರ್ಕಿಸಿದ್ದರು. ಮಿದುಳಿನ ಕೆಲಸ ಕಾರ್ಯಗಳನ್ನು ಆಧಾರ ಸಮೇತ ಗುರುತಿಸಲು ಇನ್ನಿಲ್ಲದ ಪ್ರಯತ್ನಗಳನ್ನು ನಡೆಸಿದ್ದರು. ಈ ದಿಶೆಯಲ್ಲಿ ಪಾಲ್ ಬ್ರೋಕ ಮೊದಲ ವಿಜಯಿಯಾಗಿ, ಮಿದುಳಿನ ನಿರ್ದಿಷ್ಟ ಕ್ಷೇತ್ರಗಳು ನಮ್ಮ ನಿರ್ದಿಷ್ಟ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತವೆ ಎನ್ನುವ ಪರಿಕಲ್ಪನೆಗೆ ನಿಖರ ಪುರಾವೆಯನ್ನು ನೀಡಿದ ಈ ಸಂಶೋಧನೆಯು ಹಲವು ದ್ವಂದ್ವ, ಚರ್ಚೆ ಹಾಗೂ ವಾದಗಳನ್ನು ಹುಟ್ಟಿಹಾಕಿದ್ದೂ ಸಹ ಒಂದು ವಿಪರ್ಯಾಸವಾಗಿದೆ.

ಲೂಯಿ ವಿಕ್ಟರ್ ಲೆಬೋರ್ನ್ಯ ಫ್ರಾನ್ಸ್ ದೇಶದ ಮೊಹರ್ ಸುರ್ ಲುಹುವಾ ಎಂಬ ಹಳ್ಳಿಯಲ್ಲಿ ಹುಟ್ಟಿದ. ಈತನ ಬಾಲ್ಯದ ಬಗ್ಗೆ ಹೆಚ್ಚೇನು ತಿಳಿದಿಲ್ಲ. ಇವನು ತನ್ನ 30ನೆಯ ವಯಸ್ಸಿನವರೆಗೆ ಓರ್ವ ಕುಶಲಕರ್ಮಿಯಾಗಿದ್ದ. ಒಂದು ದಿನ ಇದ್ದಕ್ಕಿದ್ದ ಹಾಗೆ ಮಾತನಾಡುವ ಸಾಮರ್ಥ್ಯವನ್ನು ಕಳೆದುಕೊಂಡ. ಉಗ್ರಸ್ವರೂಪದ ಸೆಳವು ಆರಂಭವಾಯಿತು. ಅವನ ದೇಹದ ಬಲಭಾಗಕ್ಕೆ ಲಕ್ವ ಹೊಡೆಯಿತು. ಟ್ಯಾನ್ ಎನ್ನುವ ಶಬ್ದವನ್ನು ಬಿಟ್ಟು ಮತ್ತೇನನ್ನೂ ಉಚ್ಚರಿಸಲಾರದವನಾದ. 1840. ಇವನೊಬ್ಬ ದಂಡಪಿಂಡ ಎಂದು ಅಂದಿನ ಸಮಾಜವು ತೀರ್ಮಾನಿಸಿತು. ಇಂತಹ ದಂಡಪಿಂಡಗಳು, ಅಂದರೆ ಗುಣಪಡಿಸಲಾಗದ ಮನೋರೋಗಿಗಳು, ಅಪಸ್ಮಾರಿಗಳು ಹಾಗೂ ದಿವಾಳಿಗಳನ್ನು (ಪಾಪರ್) ಬಿಸೆತ್ರ ಆಸ್ಪತ್ರೆಯಲ್ಲಿ ಖೈದು ಇರಿಸಿದ್ದರು. ಅವರ ಗುಂಪಿಗೆ ಲೆಬೋರ್ನ್ಯನನ್ನೂ ಸೇರಿಸಿಬಿಟ್ಟರು. ಬಹುಶಃ ಇದುವೇ ಸಮಾಜ ಮಾಡಿದ ತಪ್ಪು ಎನಿಸುತ್ತದೆ. ಲೆಬೋರ್ನ್ಯನಿಗೆ ಮಾತು ಬರದಿದ್ದರೂ, ಬೇರೆಯವರು ಮಾತನಾಡುವುದು ಚೆನ್ನಾಗಿ ಅರ್ಥವಾಗುತ್ತಿತ್ತು. ಆಂಗಿಕದ ಮೂಲಕ ಉತ್ತರವನ್ನು ನೀಡುತ್ತಿದ್ದ. ಸಂಭಾಷಿಸಲು ಪ್ರಯತ್ನಿಸುತ್ತಿದ್ದ. ಸಿಳ್ಳೆಯ ಮೂಲಕ ಹಾಡಲೆತ್ನಿಸುತ್ತಿದ್ದ. ಆದರೆ ಮೂಕನಾಗಿದ್ದ ಇವನನ್ನು ಫ್ರೆಂಚ್ ಸಮಾಜವು ಒಂದು ದಂಡಪಿಂಡ ಎಂದು ಪರಿಗಣಿಸಿ ಅವನನ್ನು ಆಸ್ಪತ್ರೆಗೆ ಶಾಶ್ವತವಾಗಿ ಸೇರಿಸಿಬಿಟ್ಟಿತು. ವೈದ್ಯರು ಇವನನ್ನು ಟ್ಯಾನ್ ಟ್ಯಾನ್ ಎಂದು ಗುರುತಿಸಿದರೆ, ದಾದಿಯವರ ತಂಡವು ಇವನನ್ನು ಹಠಮಾರಿ ಎಂದು ಕರೆಯುತ್ತಿದ್ದರು.

ಏಪ್ರಿಲ್ 1861. ಪಾಲ್ ಬ್ರೋಕ, 36 ವರ್ಷ ವಯಸ್ಸಿನ ಶಸ್ತ್ರವೈದ್ಯ. ಪ್ಯಾರಿಸ್ಸಿನ ಶೈಕ್ಷಣಿಕ ವಲಯದಲ್ಲಿ ಪ್ರತಿಭಾವಂತ ಎಂದು ಹೆಸರಾಗಿದ್ದ. ಪಾಲ್ ಬ್ರೋಕ ಮಿದುಳಿನ ತೊಗಟೆಯಲ್ಲಿ ವಿವಿಧ ರೀತಿಯ ಕೆಲಸ ಕಾರ್ಯಗಳನ್ನು ನಿರ್ವಹಿಸುವ ನಿಗದಿತ ಕ್ಷೇತ್ರಗಳಿವೆ ಎಂದು ವಾದಿಸುತ್ತಿದ್ದ. ಆದರೆ ಇವನಿಗೆ ಪ್ರತಿಸ್ಪರ್ಧಿಯಾಗಿದ್ದ ಜೀನ್ ಪಿಯರಿ ಫ್ಲಾರೆನ್ಸ್ (1794–1867), ಯಾವುದೇ ಒಂದು ಕೆಲಸವನ್ನು ಮಾಡಬೇಕಾದರೂ, ಮಿದುಳು ಇಡಿಯಾಗಿ ಕೆಲಸವನ್ನು ಮಾಡುತ್ತದೆ; ಬಿಡಿ ಬಿಡಿಯಾಗಲ್ಲ ಎಂದು ವಾದಿಸುತ್ತಿದ್ದ. ಪಾರಿವಾಳದ ಮಿದುಳಿನ ಒಂದು ಭಾಗವನ್ನು ಛೇದಿಸಿದರೆ, ಇಡೀ ಪಾರಿವಾಳವು ನಿಶ್ಚೇತವಾಗುತ್ತಿದ್ದುದನ್ನು ತೋರುತ್ತಿದ್ದ.

ಟ್ಯಾನನ ಬಗ್ಗೆ ಯಾರೋ ಪಾಲ್ ಬ್ರೋಕನಿಗೆ ತಿಳಿಸಿದರು. ಪಾಲ್ ಬ್ರೋಕ ಬಂದು ಟ್ಯಾನನನ್ನು ಭೇಟಿಯಾದಾಗ, ಟ್ಯಾನನಿಗೆ ಅಂಗಕ್ಷಯವುಂಟಾಗಿತ್ತು. ಅವನು ಸಾಯುವ ಹಂತಕ್ಕೆ ಬಂದಿದ್ದ. ಪಾಲ್ ಬ್ರೋಕ ಟ್ಯಾನನ ಬಗ್ಗೆ ಸಮಗ್ರ ಮಾಹಿತಿಯನ್ನು ಸಂಗ್ರಹಿಸಿದ. ಅವನ ನಡೆಯನ್ನು ಸೂಕ್ಷ್ಮವಾಗಿ ಗಮನಿಸಿದ. ಟ್ಯಾನ್ ಎನ್ನುವ ಒಂದು ಶಬ್ದವನ್ನು ಮಾತ್ರ ನುಡಿಯುವ ವೈಚಿತ್ರ್ಯವನ್ನು ಬಿಟ್ಟರೆ, ಉಳಿದೆಲ್ಲ ರೀತಿಯಲ್ಲಿ ಅವನು ಎಲ್ಲರಂತೆಯೇ ಆರೋಗ್ಯವಾಗಿರುವುದನ್ನು ಗಮನಿಸಿದ. ದುರದೃಷ್ಟವಶಾತ್ ಟ್ಯಾನ್ ಕೆಲವೇ ದಿನಗಳಲ್ಲಿ ಮರಣಿಸಿದ. ಆಗ ಬ್ರೋಕ ಅವನ ಶವಪರೀಕ್ಷೆಯನ್ನು ಮಾಡಿದ. ಅವನ ಮಿದುಳಿನ ಎಡ ಲಲಾಟಹಾಲೆಯಲ್ಲಿ ಒಂದು ಕೋಳಿಮೊಟ್ಟೆ ಗಾತ್ರದ ಭಾಗವು ನಷ್ಟವಾಗಿರುವುದನ್ನು ಗಮನಿಸಿದ. ಬ್ರೋಕ ಸರಳ ತರ್ಕವನ್ನು ಮಂಡಿಸಿದ. ಟ್ಯಾನ್‌ನಲ್ಲಿ ಮಾತೊಂದನ್ನು ಬಿಟ್ಟು ಉಳಿದ ಎಲ್ಲ ಕೆಲಸ ಕಾರ್ಯಗಳು ಸಹಜವ್ಯಾಪ್ತಿಯಲ್ಲಿ ಇದ್ದ ಕಾರಣ, ಮಿದುಳಿನ ನಷ್ಟವಾದ ಈ ಭಾಗವು ಮಾತಿಗೆ ಸಂಬಂಧಪಟ್ಟಿರಬೇಕೆಂದು ತೀರ್ಮಾನಿಸಿದ. ಇದುವೇ ಸುಸಂಬದ್ಧ ಮಾತಿಗೆ ಸಂಬಂಧಪಟ್ಟ ಕ್ಷೇತ್ರ ಎಂದು ಘೋಷಿಸಿದ. ಈ ಒಂದು ಘೋಷಣೆಯು ಕ್ರಾಂತಿಕಾರಕ ತೀರ್ಮಾನವಾಗಿತ್ತು. ಮೊದಲ ಬಾರಿಗೆ ಮಾನವನ ಮಿದುಳಿನಲ್ಲಿ, ಒಂದು ನಿರ್ದಿಷ್ಟ ಕೆಲಸವನ್ನು ಮಾಡುವ ಒಂದು ಕ್ಷೇತ್ರವನ್ನು ಗುರುತಿಸಲಾಗಿತ್ತು. ಹಾಗಾಗಿ ಜೀನ್ ಪಿಯರ್ ಫ್ಲಾರೆನ್ಸ್ ನಂತಹವರ ವಾದವು ಪೂರ್ಣವಾಗಿ ಬಿದ್ದುಹೋಯಿತು.

ಇಂದು ಲೆಬೋರ್ನ್ಯನ ಮಿದುಳನ್ನು ಫಾರ್ಮಾಲ್ಡಿಹೈಡ್ ತುಂಬಿರುವ ಒಂದು ಗಾಜಿನ ಸೀಸೆಯಲ್ಲಿ ಸಂರಕ್ಷಿಸಿಇಡಲಾಗಿದೆ. ಬ್ರೋಕ, ಲೆಬೋರ್ನ್ಯನ ಮಿದುಳಿನ ಚಿತ್ರವನ್ನು ಅತ್ಯಂತ ನಿಖರವಾಗಿ ಚಿತ್ರಿಸಿದ. ಈ ಚಿತ್ರ–ಮಾಹಿತಿಯು ಜಗತ್ತಿನ ಎಲ್ಲ ವೈದ್ಯಕೀಯ ಪಠ್ಯಪುಸ್ತಕಗಳಲ್ಲಿ ಪ್ರಕಟವಾಯಿತು. ಇದನ್ನು ಬ್ರೋಕಾಸ್ ಏಫೇಸಿಯ ಅಥವ ಬ್ರೋಕ ವಾಕ್‌ಸ್ತಂಭನ ಎಂದು ಕರೆದರು. ಇವರಿಗೆ ಭಾಷೆಯು ಸಂಪೂರ್ಣವಾಗಿ ಅರ್ಥವಾಗುತ್ತದೆ. ಆದರೆ ತಾವು ಸುಸಂಬದ್ಧವಾಗಿ ಮಾತನಾಡಲಾರರು. ಸಂಕೀರ್ಣ ಹಾಗೂ ಸುದೀರ್ಘ ವಾಕ್ಯವನ್ನು ರಚಿಸಲಾರರು. ಹೌದು... ಇಲ್ಲ... ಕಾರು... ಹತ್ತು ಹೀಗೆ ಬಿಡಿ ಬಿಡಿಯಾಗಿ ಮಾತನಾಡುವುದುಂಟು. ಕೊನೆಗೆ ಇದೂ ನಿಂತುಹೋಗಬಹುದು. ಇಂದು ಬ್ರೋಕಾ ಕ್ಷೇತ್ರಕ್ಕೆ ಸಂಬಂಧಿಸಿದ ಹಾಗ ಸಾಕಷ್ಟು ಅಧ್ಯಯನಗಳು ನಡೆದಿವೆ. ಈ ಕ್ಷೇತ್ರವು ಕೇವಲ ಮಾತಿನ ಉತ್ಪಾದನೆಯನ್ನು ಮಾತ್ರ ಮಾಡುತ್ತಿಲ್ಲ, ವಾಕ್ಯಗಳ ರಚನೆ, ಸನ್ನೆಗಳು ಹಾಗೂ ಸಂಗೀತ ಲಯವನ್ನು ಆಸ್ವಾದಿಸಲೂ ನೆರವಾಗುತ್ತದೆ ಎನ್ನುವ ವಿಸ್ತೃತ ವಿಚಾರವು ತಿಳಿದುಬಂದಿದೆ.

ಲೆಬೋರ್ನ್ಯ ಪ್ರಸಂಗವು ಹಲವು ನೈತಿಕ ದ್ವಂದ್ವಗಳನ್ನು ಹುಟ್ಟುಹಾಕಿದೆ. ಬ್ರೋಕಾ ಬದುಕಿದ್ದ ಕಾಲದಲ್ಲಿ ಲೆಬೋರ್ನ್ಯನಂತಹವರನ್ನು ಮನುಷ್ಯರು ಎಂದು ಪರಿಗಣಿಸುತ್ತಿರಲಿಲ್ಲ, ಬದಲಿಗೆ ಅವರನ್ನು ಕೇವಲ ವೈದ್ಯಕೀಯ ಅಧ್ಯಯನ ಸಾಮಗ್ರಿ ಎಂದು ಪರಿಗಣಿಸುತ್ತಿದ್ದರು. ಹಾಗಾಗಿ ಅವರನ್ನು ಅಧ್ಯಯನ ಮಾಡಲು ಅಥವ ಅವರ ಮೇಲೆ ಯಾವುದೇ

ರೀತಿಯ ಪ್ರಯೋಗಗಳನ್ನು ಮಾಡಲು, ಅವರು ಯಾರ ಅನುಮತಿಯನ್ನು ಕೇಳುತ್ತಿರಲಿಲ್ಲ, ಸ್ವಯಂ ರೋಗಿಯನ್ನೂ ಕೇಳುತ್ತಿರಲಿಲ್ಲ. ಬ್ರೋಕ ಸಹ ತನ್ನ ವೈದ್ಯಕೀಯ ಪ್ರಬಂಧಗಳಲ್ಲಿ ಎಲ್ಲಿಯೂ ಲೆಬೋರ್ನ್ಯನ ನಿಜ ಹೆಸರನ್ನು ಬಳಸಲೇ ಇಲ್ಲ, ಬದಲಿಗೆ ಟ್ಯಾನ್ ಎಂದೇ ಬರೆದು ತನ್ನ ಅಮಾನವೀಯತೆಯನ್ನು ಮೆರೆದ. ಬ್ರೋಕನ ನಂತರ ಬಂದ ವೈದ್ಯಕೀಯ ಇತಿಹಾಸಕಾರರು ಬಿಸೆತ್ರ ಆಸ್ಪತ್ರೆಯ ದಾಖಲೆಗಳನ್ನೆಲ್ಲ ಪರಿಶೀಲಿಸಿ, ಟ್ಯಾನನ ನಿಜವಾದ ಹೆಸರನ್ನು ಬಹಿರಂಗಪಡಿಸಿದರು.

2007ರಲ್ಲಿ ನೀನ ಡ್ರೋಂಕರ್ಸ್ ಎಂಬ ನರವೈದ್ಯೆ, ಲೆಬೋರ್ನ್ಯನ ಮಿದುಳನ್ನು ತೆಗೆದುಕೊಂಡುಹೋಗಿ ಅದರ ಎಂ.ಆರ್.ಐ ಸ್ಕ್ಯಾನ್ ಮಾಡಿದಳು. ಸ್ಕ್ಯಾನ್ ವರದಿಯಂತೆ ಬ್ರೋಕ ಕ್ಷೇತ್ರದ ಜೊತೆಯಲ್ಲಿ ಇನ್ಸುಲ, ಬೇಸಲ್ ಗ್ಯಾಂಗ್ಲಿಯ, ವೈಟ್ ಮ್ಯಾಟರ್ ಟ್ರಾಕ್ಟ್ಸ್ ಎಂಬ ಮಿದುಳಿನ ಇತರ ಭಾಗಗಳೂ ಹಾನಿಗೊಳಗಾಗಿದ್ದವು ಎಂಬ ಅಂಶವು ಬೆಳಕಿಗೆ ಬಂದಿತು. ಬ್ರೋಕನಿಗೆ ತನ್ನ ಸಿದ್ಧಾಂತವನ್ನು ಮಂಡಿಸುವುದಷ್ಟೇ ಮುಖ್ಯವಾಗಿತ್ತು. ಹಾಗಾಗಿ ಅವನು ಬ್ರೋಕಾ ಕ್ಷೇತ್ರವನ್ನಷ್ಟೇ ಪರಿಗಣಿಸಿದ್ದ. ಆದರೆ ಅವನ ಇನ್ಸುಲ, ಬೇಸಲ್ ಗ್ಯಾಂಗ್ಲಿಯ, ವೈಟ್ ಮ್ಯಾಟರ್ ಟ್ರಾಕ್ಟ್ ಇತ್ಯಾದಿಗಳಲ್ಲಿ ಪರಿಗಣಿಸಿರಲಿಲ್ಲ. ಇನ್ಸುಲ ಮತ್ತು ಬೇಸಲ್ ಗ್ಯಾಂಗ್ಲಿಯ ವ್ಯಕ್ತಿಯ ದೇಹ ಸ್ಥಿತಿಯನ್ನು ಉದಾಹರಣೆಗೆ ಹಸಿವಿನ ಪ್ರಮಾಣವನ್ನು ಹಾಗೂ ಪ್ರೇರಣಾದಾಯಕ ಕೆಲಸ ಕಾರ್ಯಗಳನ್ನು ಅಂದರೆ ಆಹಾರ, ವಿಹಾರ, ಮನರಂಜನೆಗಳನ್ನು ಹುಡುಕಿಕೊಂಡು ಹೋಗುವ ಕೆಲಸಗಳನ್ನು ನಿರ್ಧರಿಸುತ್ತವೆ. ವೈಟ್ ಮ್ಯಾಟರ್ ಟ್ರಾಕ್ಟ್ ಮೂಲಕ ಇನ್ಸುಲವು ಪ್ರಧಾನ ಮಸ್ತಿಷ್ಕಕ್ಕೆ ಅಗತ್ಯ ತೀರ್ಮಾನಗಳನ್ನು ತೆಗೆದುಕೊಳ್ಳಲು ನೆರವಾಗುತ್ತದೆ. ಹಾಗಾಗಿ ಲೆಬೋರ್ನ್ಯ ಮಿದುಳಿನ ಈ ಭಾಗಗಳು ಹಾನಿಗೊಳಗಾಗಿದ್ದವು. ಈ ವಿಚಾರಗಳ ಬಗ್ಗೆ ಬ್ರೋಕ ತಲೆಯನ್ನು ಕೆಡಿಸಿಕೊಳ್ಳಲಿಲ್ಲ.

ಬ್ರೋಕ ಮಂಡಿಸಿದ ಸಿದ್ಧಾಂತದಿಂದ ಪ್ರಭಾವಿತನಾದ ಜರ್ಮನ್ ನರವೈದ್ಯ ಕಾರ್ಲ್ ವರ್ನಿಕೆ (1848–1905) 1874ರಲ್ಲಿ ಮತ್ತೊಂದು ವಿಶೇಷವನ್ನು ಗಮನಿಸಿದ. ಕೆಲವರು ಸುಲಲಿತವಾಗಿ ಮಾತನಾಡುತ್ತಿದ್ದರು ಆದರೆ ಅವರ ಮಾತುಕತೆಯ ತಲೆ ಬುಡ ಮಾತ್ರ ಯಾರಿಗೂ ಅರ್ಥವಾಗುತ್ತಿರಲಿಲ್ಲ. ಇಂತಹ ವ್ಯಕ್ತಿಗಳು ಸತ್ತಮೇಲೆ ಅವರ ಮಿದುಳನ್ನು ಪರೀಕ್ಷಿಸಿದಾಗ, ಲೆಬೋರ್ನ್ಯನ ಮಿದುಳಿನ ಎಡ ಅರೆಗೋಳದಲ್ಲಿ ಹೇಗೆ ಒಂದು ಭಾಗವು ನಷ್ಟವಾಗಿತ್ತೋ, ಹಾಗೆಯೇ ಇವರಲ್ಲೂ ಸಹ, ಬ್ರೋಕ ಕ್ಷೇತ್ರದ ಸಮೀಪದಲ್ಲಿದ್ದ ಮತ್ತೊಂದು ಕ್ಷೇತ್ರಕ್ಕೂ ಹಾನಿಯಾಗಿತ್ತು. ಈ ಭಾಗವನ್ನು ವರ್ನಿಕೆ ಕ್ಷೇತ್ರವೆಂದು ಕರೆದರು. ನಂತರ ದಿನಗಳಲ್ಲಿ ಜರ್ಮನ್ ನರಮನೋವೈದ್ಯ ಕಾರ್ಬೀನಿಯನ್ ಬ್ರಾಡ್ಮನ್ (1868–1918) ಸೈಟೋಆರ್ಕಿಟೆಕ್ಟೋನಿಕ್ ಎಂಬ ತಂತ್ರದಿಂದ, ಅಂದರೆ ಮಿದುಳಿನ ವಿವಿಧ ಭಾಗಗಳಲ್ಲಿರುವ ನರಕೋಶಗಳ ರಚನಾ ವೈವಿಧ್ಯತೆಯನ್ನು ಅಧ್ಯಯನ ಮಾಡಿ, ಮಿದುಳಿನಲ್ಲಿ 52 ವಿಶಿಷ್ಟ ಕ್ಷೇತ್ರಗಳು ಇರುವುದನ್ನು ಗುರುತಿಸಿದ. ಅವನ್ನು ಇಂದು ಬ್ರಾಡ್ಮನ್ ಏರಿಯಾಸ್ ಅಥವ ಬ್ರಾಡ್ಮನ್ ಕ್ಷೇತ್ರಗಳೆಂದು ಗುರುತಿಸುತ್ತೇವೆ. ಈ 52 ಕ್ಷೇತ್ರಗಳು 52 ವಿಶಿಷ್ಟ ಕೆಲಸ ಕಾರ್ಯಗಳನ್ನು ನಿರ್ವಹಿಸುವ ಕೇಂದ್ರಗಳಾಗಿವೆ.

20ನೆಯ ಶತಮಾನದಲ್ಲಿ ಫಂಕ್ಷನಲ್ ಮ್ಯಾಗ್ನೆಟಿಕ್ ರೆಸೊನನ್ಸ್ ಇಮೇಜಿಂಗ್ ಹಾಗೂ ಪಾಸಿಟ್ರಾನ್ ಎಮಿಷನ್ ಟೊಮೊಗ್ರಾಫಿ ಎಂಬ ಎರಡು ಸ್ಕ್ಯಾನಿಂಗ್ ತಂತ್ರಜ್ಞಾನಗಳು ಅಸ್ತಿತ್ವಕ್ಕೆ ಬಂದವು. ಮಿದುಳು ಸಕ್ರಿಯವಾಗಿರುವಾಗಲೇ, ಮಿದುಳಿನ ಅವನ್ನು ಅಧ್ಯಯನ ಮಾಡಲು ಸಾಧ್ಯವಾಯಿತು. ಈ ಸ್ಕ್ಯಾನಿಂಗ್ ಅಧ್ಯಯನಗಳು ಬ್ರಾಡ್ಮನ್ ಕ್ಷೇತ್ರಗಳ ಅಸ್ತಿತ್ವಕ್ಕೆ ಋಜುವಾತನ್ನು ಒದಗಿಸಿದವು. ಜೊತೆಗೆ ಮಿದುಳು ಕೇವಲ ಈ 52 ಕ್ಷೇತ್ರಗಳಿಂದ ಮಾತ್ರವಲ್ಲ, ಈ ಕ್ಷೇತ್ರಗಳ ವಿವಿಧ ಕ್ರಮಗತಿ ಹಾಗೂ ಸಂಯೋಜನೆಯ ಮೂಲಕ ಅತ್ಯಂತ ಸಂಕೀರ್ಣ ನರಜಾಲವನ್ನು ರೂಪಿಸಿ ಅವುಗಳ ನೆರವಿನಿಂದ ಸಮಗ್ರ ಕೆಲಸ ನಿರ್ವಹಿಸುತ್ತವೆ ಎನ್ನುವ ಮಾಹಿತಿಯೂ ತಿಳಿದುಬಂದಿತು.

ಲೂಯಿ ಲೆಬೋರ್ನ್ಯ ಏಪ್ರಿಲ್ 17, 1861ರಲ್ಲಿ ಮರಣಿಸಿದ. ಅವನ ಮರಣ ಪ್ರಮಾಣ ಪತ್ರದಲ್ಲಿ ಅವನ ಸಾವಿಗೆ ಅವನ ಗ್ಯಾಂಗ್ರಿನ್ ಅಥವ ಅಂಗಕ್ಷಯವು ಕಾರಣ ಎಂದು ನಮೂದಿಸಿದ್ದರು. ಮನುಷ್ಯನು ಮಹಾಸ್ವಾರ್ಥಿ. ಹೆಸರು ಹಣಕ್ಕಾಗಿ ಆತನು, ಎಂತಹ ನಿಕೃಷ್ಟ ಕೆಲಸವನ್ನು ಮಾಡಲು ಹೇಸುವುದಿಲ್ಲ. ವೈಜ್ಞಾನಿಕ ಅಧ್ಯಯನಗಳಿಗಾಗಿ ಅದೆಷ್ಟು ಕಪ್ಪೆಗಳನ್ನು, ಮೊಲಗಳನ್ನು, ಗಿನಿ ಪಿಗ್‌ಗಳನ್ನು, ಮಂಗಗಳನ್ನು, ಚಿಂಪಾಂಜಿಗಳನ್ನು, ಗೊರಿಲ್ಲಗಳನ್ನು ಕೊಂದಿದ್ದಾನೋ ಅದಕ್ಕೆ ಲೆಕ್ಕವೇ ಇಲ್ಲ. ಜೊತೆಗೆ ಲೆಬೋರ್ನ್ಯನಂತಹ ಅಜ್ಞಾತ ವ್ಯಕ್ತಿಗಳನ್ನು ಬಲಿ ತೆಗೆದುಕೊಂಡಿರುವುದು ಇತಿಹಾಸದಲ್ಲಿ ಹೂತುಹೋಗಿದೆ. ಇಂತಹ ಹೆಚ್ಚಿನ ಪ್ರಕರಣಗಳು ಬೆಳಕಿಗೆ ಬರುವುದಿಲ್ಲ. ಪ್ರತಿಯೊಂದು ವೈದ್ಯಕೀಯ ಸಂಶೋಧನೆಯ ಹಿಂದೆ ಹಲವು ಜೀವಿಗಳ ಬಲಿದಾನವಾಗಿರುತ್ತವೆ ಎನ್ನುವ ಪ್ರಜ್ಞೆಯನ್ನು ನಾವು ಉಳಿಸಿಕೊಳ್ಳಬೇಕಿದೆ.

ಟ್ರಂಪ್ ಆಟ: ಒಂದೇ ಕಲ್ಲಿಗೆ ಹಲವು ಹಕ್ಕಿ

ಪ್ರಸ್ತುತ

ಜಿ.ಪ್ರತಾಪ್ ಕೊಡಂಚ
vveditoped@gmail.com

ಟ್ರಂಪ್ ಅಮೆರಿಕದ ಅಧ್ಯಕ್ಷರಾಗುತ್ತಿದ್ದಂತೆ ಸೌದಿ ದೊರೆ ಮಹಮದ್ ಬಿನ್ ಸಲ್ಮಾನ್ (ಎಂಬಿಎಸ್)ರ ಜತೆ ತಮ್ಮ ಮೊಟ್ಟಮೊದಲ ಸಾಗರೋತ್ತರ ಮಾತುಕತೆ ಆರಂಭಿಸಿದರು. ಅಮೆರಿಕ ಜಾತ್ಯತೀತ ಸಾಂವಿಧಾನಿಕ ಪ್ರಜಾಪ್ರಭುತ್ವದ ಬಲದಲ್ಲಿ ಮುನ್ನಡೆಯುತ್ತಿದ್ದರೆ ಸೌದಿಯದು ಇಸ್ಲಾಮಿಕ್ ರಾಜಪ್ರಭುತ್ವ. ಆ ದೃಷ್ಟಿಯಲ್ಲಿ ಪರಸ್ಪರ ವಿರುದ್ಧ ನಿಲುವಿನ ಪ್ರಭುತ್ವಗಳಾದರೂ ಉಭಯ ರಾಷ್ಟ್ರಗಳ ನಡುವಿನ ಸಖ್ಯ, ದ್ವಿಪಕ್ಷೀಯ ಸಂಬಂಧ ಹೊಸತೇನು ಅಲ್ಲ ಬಿಡಿ. ಈ ಎರಡೂ ರಾಷ್ಟ್ರಗಳ ಕೊಡುಕೊಳ್ಳುವಿಕೆಯ ಸಂಬಂಧದ ಅಧಿಕೃತ ಮೊಹರು ಬಿದ್ದಿದ್ದು 1951ರ ಪರಸ್ಪರ ರಕ್ಷಣಾ ನೆರವಿನ ಒಪ್ಪಂದದ ಮೂಲಕ. ಇದರ ಪ್ರಕಾರ ಸೌದಿ ಅಗತ್ಯ ಪ್ರಮಾಣದ ತೈಲೋತ್ಪಾದನೆ ಮತ್ತು ತೈಲದ ಬೆಲೆ ಮತ್ತು ವಹಿವಾಟು ಅಮೆರಿಕನ್ ಡಾಲರಿನಲ್ಲೇ ಮಾಡುವುದರ ಜತೆ ಅಮೆರಿಕದ ವಿದೇಶಾಂಗ ನಿಲುವಿನ ಸಮರ್ಥಕನಾಗಿರಲು ಒಪ್ಪಿಕೊಂಡರೆ, ಅದಕ್ಕೆ ಪ್ರತಿಯಾಗಿ ಅಮೆರಿಕವು ಸೌದಿಗೆ ಮಿಲಿಟರಿ ರಕ್ಷಣೆ ಸಹಕಾರ ನೀಡುವ ಒಡಂಬಡಿಕೆ ಆಗಿತ್ತು. ಆ ಮೂಲಕವೇ ಸೌದಿಯ ದ್ರವ ಬಂಗಾರದ ಮೇಲಿನ ಪರೋಕ್ಷ ಸ್ವಾಮ್ಯ ಸಾಧಿಸುವ ಜತೆಗೆ ಡಾಲರ್ ಅನ್ನು ಪ್ರಪಂಚದ ಬಲಾಢ್ಯ ಕರೆನ್ಸಿಯಾಗಿ ಹೊಮ್ಮುವಂತೆ ಮಾಡಿತ್ತು ಚಾಣಾಕ್ಷ ಅಮೆರಿಕ! ಹಾಗಾಗಿ ಅಂದಿನ ಅಮೆರಿಕನ್ ಅಧ್ಯಕ್ಷರಾಗಿದ್ದ ಹ್ಯಾರಿ ಎಸ್ ಟ್ರುಮೆನ್ ಕೂಡ ಒಂದೇ ಕಲ್ಲಿಗೆ ಹಲವು ಹಕ್ಕಿಗಳನ್ನು ಹೊಡೆದಿದ್ದರು.

ಅಮೆರಿಕದ ಅಣತಿಯಂತೆ ಸೌದಿ ನಡೆಯುತ್ತಿದ್ದರಿಂದ ಬೇರೆಲ್ಲ ಕಡೆ ಚಿಕ್ಕಪುಟ್ಟ ವಿಷಯಕ್ಕೆ, ನಿರಂಕುಶತೆ ಎಂದು ದೊಡ್ಡಣ್ಣನ ವೇಷದಲ್ಲಿ ಮೂಗುತೂರಿಸುವ ಅಮೆರಿಕವು ಸೌದಿ ಮಟ್ಟಿಗೆ ಜಾಣ ಕುರುಡುತನ ತೋರಿಸಿ ಮುನ್ನಡೆಯುತ್ತಿತ್ತು. ಅಂಥಹ ಸಂಧರ್ಭಗಳಲ್ಲೆಲ್ಲಾ, ಇಂತಹ ನಡೆಗಳನ್ನು ಗಮನಿಸಿಯೂ ದೊಡ್ಡವರ ವ್ಯವಹಾರವೆಂದು ಜಗತ್ತಿನ ಅನೇಕ ರಾಷ್ಟ್ರಗಳು ಕಣ್ಣು ಮಿಟುಕಿಸಿ ಸುಮ್ಮನಾಗಿದ್ದವು. ಆದರೆ ಇತ್ತೀಚಿನ ಕೆಲ ವರ್ಷಗಳಿಂದ ಹೆಚ್ಚುತ್ತಿರುವ ಚೀನಾದ ಪ್ರಾಬಲ್ಯ, ಕುಸಿಯುತ್ತಿರುವ ಅಮೆರಿಕದ ಬಲಾಢ್ಯತೆಗಳನ್ನು ಅರಿತ ಸೌದಿ, ತೈಲ ಬೆಲೆ, ತೈಲ ಉತ್ಪಾದನೆಯ ವಿಷಯಕ್ಕೆ ಬಂದಾಗ ಅಮೆರಿಕದ ಬೇಡಿಕೆಗೆ ಮುಂಚಿನಂತೆ ಬಗ್ಗದೇ ತನ್ನಿಷ್ಟದಂತೆ ಮುಂದುವರಿದ ಕೆಲವು ನಿದರ್ಶನಗಳಿವೆ. ಚೀನಾದೊಂದಿಗಿನ ತಂತಮ್ಮ ಕರೆನ್ಸಿಯಲ್ಲಿಯೇ ವ್ಯವಹರಿಸುವ ಪೆಟ್ರೋ-ರಿಯಾಲ್/ಪೆಟ್ರೋ-ಯುವಾನ್ ಪ್ರಸ್ತಾಪಗಳನ್ನು ಸೇರಿ, ರಷ್ಯಾದೊಂದಿಗೆ ಸಂಬಂಧ, ಬ್ರಿಕ್ಸ್ ದೇಶಗಳನ್ನು ಸೇರುವ ಪ್ರಸ್ತಾಪ, ಆ ಮೂಲಕ ಡಾಲರ್‌ಗೆ ಬದಲಾಗಿ ಬ್ರಿಕ್ ಕರೆನ್ಸಿ ಹೊರತರುವ ಚರ್ಚೆಗಳಲ್ಲಿ ಸೌದಿ ಕೂಡ ಅಮೆರಿಕದೊಂದಿಗೆ ಕಣ್ಣಾಮುಚ್ಚಾಲೆ ಆಡಿತ್ತು.

ಮೊನ್ನೆಯ ಸೌದಿ ದೊರೆ, ಎಂಬಿಎಸ್ ಜತೆಗಿನ ಮಾತುಕತೆಯಲ್ಲಿ ಅಮೆರಿಕದಲ್ಲಿ 600 ಬಿಲಿಯನ್ ಹೂಡಿಕೆಗೆ ಮಾತುಕತೆ ಮಾಡಿದ್ದಾರೆ. ಎರಡೂ ಕಡೆಯವರು ಇದನ್ನು ಖಚಿತಪಡಿಸಿದ ನಂತರ ಒಂದೆರಡು ದಿನಗಳಲ್ಲಿ ನಡೆದದ್ದು ಕುತೂಹಲಕಾರಿ ಅಂಶ. ಟ್ರಂಪ್‌ರೊಂದಿಗೆ ಮಾತುಕತೆಯ ನಂತರ ಸೌದಿ ದೊರೆ ಚೀನಾ ಅಧ್ಯಕ್ಷರೊಂದಿಗೆ ಕೂಡ ಮಾತುಕತೆ ನಡೆಸಿದರು ಎಂಬ ಅಂತಾರಾಷ್ಟ್ರೀಯ ರಾಜಕೀಯ ವಲಯದ ಸುದ್ದಿ ಹರಡಲಾರಂಭಿಸಿತು. ಈ ಸುದ್ದಿ ಶ್ವೇತಭವನದ ಗೋಡೆಗಳಿಗೂ ಕೇಳಿಸಿರದಿರುತ್ತದೆಯೇ? ಮೊದಲ ಚೀನಾ ಅಮೆರಿಕದ ಕೆಂಗಣ್ಣಿನಲ್ಲಿದೆ. ಟ್ರಂಪ್, ಅಮೆರಿಕದ ಸಾರ್ವಭೌಮತ್ವ ಮರುಸ್ಥಾಪಿಸುವುದೇ ಗುರಿ ಮಾಡಿಕೊಂಡು ಚುನಾವಣೆಯಲ್ಲಿ ಗೆದ್ದು ಬಂದ ನೂತನ ಅಧ್ಯಕ್ಷರು. ಅವರದ್ದು ಆನೆ ನಡೆದದ್ದೇ ದಾರಿ ಎಂದು ಮುನ್ನುಗ್ಗುತ್ತಿರುವ ಪ್ರವೃತ್ತಿ. ಮರು ದಿನವೇ ಮಾಧ್ಯಮದರು ಕೇಳಿದ ಸೌದಿ ಅಮೆರಿಕ ನಡುವಿನ ಸಂಬಂಧ ಪ್ರಶ್ನೆಗೆ, 'ಎಂಬಿಎಸ್ ಜತೆ ಮಾತಾಡಿದ್ದೇನೆ. ಅವರು 600 ಬಿಲಿಯನ್ ಡಾಲರ್ ಹೂಡಿಕೆಗೆ ಒಪ್ಪಿಯಾಗಿದೆ, ಆದರೆ ನಾನು ಒಂದು ಟ್ರಿಲಿಯನ್ ಹೂಡಿಕೆ ಮಾಡಲು ಆಗ್ರಹಿಸುತ್ತೇನೆ. ಅವರಿಗೇನು? ಬೇಕಾದಷ್ಟು ದುಡ್ಡಿದೆ. ಅದೂ ದ್ರವ ಬಂಗಾರವೆನಿಸಿಕೊಂಡ ಪೆಟ್ರೋಲ್ ಸಂಪನ್ಮೂಲಗಳ ಮೂಲಕ ಬಂದ ಹಣವಲ್ಲವೇ? ನಮ್ಮಲ್ಲೂ ಬೇಕಾದಷ್ಟು ದ್ರವ ಬಂಗಾರವಿದೆ. ನಾನು ಹೇಳಿದರೆ ಅವರು ನಮ್ಮಲ್ಲಿ ಹೂಡಿಕೆ ಮಾಡದೆ ಇರಲಾಗುತ್ತದೆಯೇ?' ಎಂಬರ್ಥದ ಖಚಿತತೆಯ ಮಾತಾಡಿ ಬಿಟ್ಟಿದ್ದಾರೆ. ಇದೇನು ಬಾಯಿ ಮಾತಿಗೆ ಹೇಳಿ ಮುನ್ನಡೆದ ನಡೆಯಲ್ಲ, ತಮ್ಮೊಂದಿಗಿನ ಮಾತುಕತೆಯ ನಂತರ ತಮಗಾಗದವರ ಜತೆ ಮಾತಾಡಿದ್ದಕ್ಕೆ ವಿಧಿಸಿದ ದಂಡವೇ ಎಂಬ ಗುಸು ಗುಸು ಅಂತಾರಾಷ್ಟ್ರೀಯ ವಿದೇಶಾಂಗ ವ್ಯವಹಾರಗಳ ಪಡಸಾಲೆಗಳಲ್ಲಿ ಸದ್ಯ ಹರಿದಾಡುತ್ತಿರುವ ಸುದ್ದಿ.

ಇದು ಒಂದು ರೀತಿಯಲ್ಲಿ ಮೊದಲ ಕರೆಗೆ ಬಿದ್ದ ಹೊರೆಯೆಂದು ಸೌದಿ ಸಾಮ್ರಾಟರಿಗೆ ಎನಿಸಿರಲಿಕ್ಕಿಲ್ಲ, ವಿದೇಶಾಂಗ ವ್ಯವಹಾರಗಳ ಪಡಸಾಲೆಯಲ್ಲಿ ಹರಿದಾಡುವ ಸುದ್ದಿಗಳ ಪ್ರಕಾರ, ಹೊರೆಯ ಜತೆಗೆ ಅಮೆರಿಕದ ಹೊರತಾಗಿ ಸೌದಿ ಬೇರೆ ಕಡೆ ಹೂಡಿಕೆ ಮಾಡದಂತೆ ಅವರೆಲ್ಲ ಹೂಡಿಕೆ ಅಮೆರಿಕದಲ್ಲಿ ಕಟ್ಟಿಹಾಕಿ, ಆ ಮೂಲಕ ಅಮೆರಿಕನ್ ಡಾಲರ್ ಬಲಹೀನಗೊಳಿಸುವ ಪ್ರಯತ್ನಗಳಿಗೆ ತಿಲಾಂಜಲಿ ಇಡುವ ಮಾಸ್ಟರ್ ಸ್ಟ್ರೋಕ್ ಟ್ರಂಪ್ ರದ್ದು ಎನ್ನಲಾಗುತ್ತಿದೆ. ನೀರಿಕ್ಷೆಗೆ ಸಿಲುಕದೆ, ವಿವಾದಕ್ಕೆ ಹೆದರದೆ, ವಿವಾದವನ್ನೇ ತನ್ನ ಲಾಭಕ್ಕೆ ಬಳಸಿಕೊಳ್ಳುವ ಅಪ್ರತಿಮ ಚಾಕಚಕ್ಯತೆ ಟ್ರಂಪ್‌ರದ್ದು. ಇದರೊಂದಿಗೆ ಡಿ-ಡಾಲರೈಸೇಷನ್ ಕನಸು ಕಾಣುತ್ತಿರುವ ಅಮೆರಿಕ ವಿರೋಧಿ ಪಡೆಗಳಿಗೆ ಸದ್ಯಕ್ಕಂತೂ ಟ್ರಂಪ್ ಕ್ಷಿಪ್ರ ಪ್ರಹಾರವೇ ಮಾಡಿದ್ದಾರೆ. ಹಾಗಾಗಿ ಇಲ್ಲಿಯೂ ಟ್ರಂಪ್‌ರ ರಂಪ, ರಂಪಾಟ ಒಂದು ಕಲ್ಲಿಗೆ ಹಲವು ಹಕ್ಕಿಗಳನ್ನು ಹೊಡೆದುರುಳಿಸಿದಂತಿದೆ.

ಹೇಳಿದ ಹಾಗೆ ಕೇಳಿ, ಇಲ್ಲದಿದ್ರೆ ಏನು ಮಾಡ್ತೀನಿ ನೋಡಿ, ನೋಡ್ತಾ ಇರಿ!..

ಅಕ್ರಮ ವಲಸಿಗರನ್ನು ಹೊರದಬ್ಬುತ್ತೇನೆ, ಅಮೆರಿಕವನ್ನು ಇನ್ನಷ್ಟು ಸುಭದ್ರ, ಸುರಕ್ಷಿತವಾಗಿಸುತ್ತೇನೆ ಎಂಬ ಚುನಾವಣಾ ಪೂರ್ವ ಆಶ್ವಾಸನೆಗಳ ಮೇಲೆ ಈ ಬಾರಿ ಅಮೆರಿಕದಲ್ಲಿ ಗೆದ್ದು ಬಂದಿದ್ದಾರೆ ಟ್ರಂಪ್. ಜನವರಿ ಇಪ್ಪತ್ತರ ಅಧಿಕಾರ ಸ್ವೀಕಾರದ ದಿನದಿಂದಲೇ ಹತ್ತು ಹಲವು ಆದೇಶಗಳನ್ನು ಹೊರಡಿಸಿ ಎಂದಿನಂತೆ ತನ್ನ ಕ್ಷಿಪ್ರ ಕಾರ್ಯಾರಂಭ ಭರ್ಜರಿಯಾಗಿಯೇ ಮಾಡುತ್ತಿದ್ದಾರೆ. ದಿನ ಬೆಳಗಾದರೆ ಇನ್ನಾವ ಹೊಸ ಆದೇಶ ಹೊರಬರುತ್ತಿದೆಯಪ್ಪಾ? ಎಂದು ತಲೆಕೆಡಿಸಿಕೊಳ್ಳುವ ಪರಿಸ್ಥಿತಿ ಸದ್ಯ ಅಮೆರಿಕ ಮತ್ತದರ ಕೆಂಗಣ್ಣಿಗೆ ಗುರಿಯಾಗಿರುವ ಸುತ್ತಲಿನ ದೇಶಗಳದ್ದು! ಅಕ್ರಮ ವಲಸಿಗರ, ಅದರಲ್ಲೂ ಕ್ರಿಮಿನಲ್ ಹಿನ್ನೆಲೆಯ ವಲಸಿಗರನ್ನು ಹುಡುಕಿ ಹಿಡಿದು, ಅವರವರ ದೇಶಗಳಿಗೆ ವಾಪಸು ಕಳುಗಿಸುತ್ತೇವೆ ಎಂಬ ಅವರ ನಿಲುವ ಸದ್ಯಕ್ಕೆ ಸಡಿಲವಾಗುವಂತೆ ಕಾಣುತ್ತಿಲ್ಲ. ಇಂತಹದೇ ಒಂದು ಪ್ರಯತ್ನದಲ್ಲಿ ಕೊಲಂಬಿಯಾದ ಸುಮಾರು 200 ಅಕ್ರಮ ವಲಸಿಗರನ್ನು ಅಮೆರಿಕ ಮಿಲಿಟರಿ ವಿಮಾನದಲ್ಲಿ ಕೊಲಂಬಿಯಾಕ್ಕೆ ಕಳುಹಿಸಿದೆ. ಈ ವಾಪಸಾತಿಯ ಪ್ರಕ್ರಿಯೆಯಲ್ಲಿ 'ಅಕ್ರಮ ವಲಸಿಗರಿಗೆ ಕೈ-ಕೊಳ ತೊಡಿಸಿ ಕಳುಹಿಸಿಕೊಡಲಾಗಿದೆ. ನಮ್ಮೊಂದಿಗೆ ಚರ್ಚಿಸಿಲ್ಲ, ನಮ್ಮವರನ್ನು ಸರಿಯಾಗಿ ನಡೆಸಿಕೊಳ್ಳುತ್ತಿಲ್ಲ' ಎಂಬಿತ್ಯಾದಿ ತಕರಾರು ಕೊಲಂಬಿಯಾ ಅಧ್ಯಕ್ಷರದ್ದು. ಇವೆಲ್ಲ ಕಾರಣಗಳಿಂದ ತಮ್ಮ ದೇಶದವರೇ ಆದ ಅಕ್ರಮ ಅಮೆರಿಕ ವಲಸಿಗರನ್ನು ಹೊತ್ತುತಂದ ವಿಮಾನಗಳನ್ನು ಕೊಲಂಬಿಯಾದ ನೆಲದಲ್ಲಿ ಇಳಿಯಲು ಅನುಮತಿ ನೀಡದೇ ಕೊಲಂಬಿಯಾ ಅಧ್ಯಕ್ಷ ಗುಸ್ತಾವೋ ಪೆಟ್ರೋ ತಡೆ ಹಿಡಿದಿದ್ದಾರೆ. ಟ್ರಂಪ್‌ರ ರಂಪ ಕಡಿಮೆಯದೇ. ರಚ್ಚೆ ಹಿಡಿದರೆ, ಟ್ರಂಪ್ ಸಾಹೇಬರೇನು ಹಿಡಿದ ಪಟ್ಟು ಬಿಡುವವರೇ? ಇಳಿಯ ಬಿಡದಿದ್ದರೆ ಕೊಲಂಬಿಯಾದ ಮೇಲೆ ಅಧಿಕ ತೆರಿಗೆ ಹೊರೆ ಹೊರಿಸುತ್ತೇವೆ, ರಾಜತಾಂತ್ರಿಕ ಸಂಬಂಧ ನಿಲ್ಲಿಸುತ್ತೇವೆ, ಕೊಲಂಬಿಯನ್‌ರ ಅಮೆರಿಕನ್ ವೀಸಾ ರದ್ದುಗೊಳಿಸಿ ಬಿಡುತ್ತೇವೆ ಎಂಬ ಬಾಣಗಳನ್ನು ಚಕಚಕನೆ ಎಸೆದೇ ಬಿಟ್ಟಿದ್ದಾರೆ. ಬರಿಯ ಮಾತಿನ ಬರೆಯಲ್ಲ, ಇಂತಹ ಎಲ್ಲ ಆದೇಶಗಳನ್ನೂ ಕೆಲವೇ ಗಂಟೆಗಳಲ್ಲಿ ಹೊರಡಿಸಿಯೇ ಬಿಟ್ಟಿದ್ದಾರೆ. ಮೊದಲಿಗೆ ನಾವು ಪ್ರತಿಬಂಧಕ ತೆರಿಗೆ ವಿಧಿಸುತ್ತೇವೆ ಎಂದು ವೀರಾವೇಶದ ಮಾತುಗಳನ್ನಾಡಿದ ಕೊಲಂಬಿಯನ್ ಅಧ್ಯಕ್ಷರು, ಕೇವಲ 2 ಗಂಟೆಗಳಲ್ಲಿ ತಮ್ಮೆಲ್ಲ ಶಸ್ತ್ರ ತ್ಯಾಗ ಮಾಡಿ ಅಮೆರಿಕದ ಎಲ್ಲ ಷರತ್ತುಗಳಿಗೆ ಒಪ್ಪಿಕೊಂಡು ತಮ್ಮ ಅಕ್ರಮ ವಲಸಿಗರನ್ನು ಕೊಲಂಬಿಯಾದಲ್ಲಿ ಇಳಿಸಿಕೊಂಡಿದೆ. ಇವೆರೆಡೂ ದೇಶಗಳ ನಡುವೆ ಚೌಕಾಶಿ ನಡೆಯುತ್ತಿರುವ 2 ಗಂಟೆಗಳ ಕಾಲ ಇಳಿಯುತ್ತೇವೆಯೋ, ಇಲ್ಲವೋ? ಎಂಬುದನ್ನು ಅರಿಯದೆ ವಿಮಾನದೊಳಗೆ ದಿಗ್ಭ್ರಾಂತರಾಗಿ ಕುಳಿತ ಗಡಿಪಾರಾಗಿರುವ ಅಕ್ರಮ ವಲಸಿಗರ ಕಥೆ ಏನಾಗಿರಬೇಕು ಹೇಳಿ? ಅಂದ ಹಾಗೆ ಬ್ರೆಜಿಲ್‌ಗೆ ಅಮೆರಿಕ ಗಡಿಪಾರು ಮಾಡಿದ ಅಕ್ರಮ ವಲಸಿಗರಿಗೂ ಕೈ-ಕೊಳ ತೊಡಿಸಿ ಕಳುಹಿಸಿ ಕೊಡಲಾಗಿದೆ. ಅದಕ್ಕೆ ಬ್ರೆಜಿಲ್ ಕೂಡ ಮಾನವ ಹಕ್ಕುಗಳ ಉಲ್ಲಂಘನೆ ಎಂದು ತಕರಾರು ತೆಗೆಯುತ್ತಿದೆ. ತಮ್ಮದೇ ದೇಶದಲ್ಲಿ ಬದುಕುವ ಹಕ್ಕು ಸಹ್ಯವೆನಿಸದೆ ಅಕ್ರಮ ವಲಸೆ ಬಂದ ವಲಸಿಗರ ಮಾನವ ಹಕ್ಕು ಉಲ್ಲಂಘನೆ ಎಂದು ಇಂತಹ ದೇಶಗಳು ಕೂಗಿಕೊಳ್ಳುವ ಬದಲು ತಮ್ಮ ತಮ್ಮ ದೇಶದ ಜನಜೀವದ ಭರವಸೆಯನ್ನೇ ತೊರೆದು 'ಅಕ್ರಮ' ವಲಸೆ ಹೋಗಬಾರದಂತಹ ಜವಾಬ್ದಾರಿ ತೆಗೆದುಕೊಳ್ಳುವುದಿಲ್ಲವೇಕೆ? ವಲಸೆ ತಪ್ಪಲ್ಲ, ಬದುಕು ಕಟ್ಟಿಕೊಳ್ಳುವ ಆಸೆ, ಪ್ರಯತ್ನ, ಆದರೆ ಅಕ್ರಮ ವಲಸೆ ದುರಾಸೆಯೆನ್ನದೇ ವಿಧಿಯಿಲ್ಲ. ಆದರೆ ಟ್ರಂಪ್ ಸಾಹೇಬರ ಪ್ರಕಾರ ಇದು ಟ್ರೈಲರ್, ಪಿಕ್ಚರ್ ಅಭೀ ಬಾಕಿ ಹೈ. ಎಲ್ಲರಿಗೂ ಅವರದ್ದೊಂದೇ ಮಂತ್ರ.. ಹೇಳಿದ ಹಾಗೆ ಕೇಳಿ, ಇಲ್ಲದಿದ್ರೆ ಏನು ಮಾಡ್ತೀನಿ ನೋಡಿ, ನೋಡ್ತಾ ಇರಿ!..

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಅತ್ಯಾಚಾರಿಗಳಿಗೆ ಶಿಕ್ಷೆಯಾಗಲಿ

ರಾಜ್ಯದಲ್ಲಿ ಕಳೆದ ಐದು ವರ್ಷಗಳಲ್ಲಿ 2,803 ಮಹಿಳೆಯರ ಮೇಲೆ ಅತ್ಯಾಚಾರಗಳು ನಡೆದಿದ್ದು, ಕೇವಲ 75 ಪ್ರಕರಣಗಳಲ್ಲಷ್ಟೇ ಆರೋಪಿಗಳಿಗೆ ಶಿಕ್ಷೆಯಾಗಿದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಅಂದರೆ ಶೇಕಡಾ 3 ರಿಂದ 4 ರಷ್ಟು ಅತ್ಯಾಚಾರ ಆರೋಪಗಳು ಪ್ರಕರಣಗಳು ಸಾಬೀತಾಗಿವೆ ಎಂದಾಯಿತು, ಇದಕ್ಕೆ ಮುಖ್ಯ ಕಾರಣ ಸಾಕ್ಷ್ಯಾಧಾರಗಳ ಕೊರತೆ, ಸುಳ್ಳು ಪ್ರಕರಣಗಳು ಹಾಗೂ ವಿಚಾರಣೆ ವಿಳಂಬವಾಗುವುದು ಕಾರಣ ಎಂದು ವರದಿಯಾಗಿದೆ. ಆದರೆ ಈ ಕಾರಣಗಳಿಗಿಂತಲೂ, ಹಣ, ರಾಜಕೀಯ ಒತ್ತಡಗಳಿಗಾಗಿ, ಪೊಲೀಸರು ಎಫ್‌ಐಆರ್ ಹಂತದಲ್ಲಿಯೇ ಕೇಸ್ ಅನ್ನು ದುರ್ಬಲ ಗೊಳಿಸುವುದು. ಇನ್ನು ಕೆಲವು ಪ್ರಕರಣಗಳು ಪೊಲೀಸ್ ಠಾಣೆಯಲ್ಲೇ ರಾಜಿಯಾಗಿ ಪ್ರಕರಣಗಳೇ ದಾಖಲಾಗುವುದಿಲ್ಲ, ಕೆಲವು ಗ್ರಾಮಾಂತರ ಪ್ರದೇಶದಲ್ಲಿ ಪಂಚಾಯಿತಿ ಕಟ್ಟೆಯಲ್ಲಿ ತೀರ್ಮಾನವಾಗಿ, ಅತ್ಯಾಚಾರ ಆರೋಪಿಗೆ ಲಕ್ಷಾಂತರ ರೂಪಾಯಿಗಳ ದಂಡ ವಿಧಿಸಿ ಸಂತ್ರಸ್ತೆಗೆ ಅರ್ಧ ಭಾಗ ಹಣ ಕೊಟ್ಟು ಉಳಿದದ್ದನ್ನು ಪಂಚಾಯಿತಿ ಕಟ್ಟೆಯವರು ಹಂಚಿಕೊಂಡಿರುವುದುಂಟು, ಹೀಗಾಗಿ ಅತ್ಯಾಚಾರದಂತಹ ಪ್ರಕರಣಗಳಲ್ಲಿ ಅರ್ಧದಷ್ಟು ಪ್ರಕರಣಗಳು , ಬಹಿರಂಗವಾಗಿ ದಾಖಲಾಗುವುದೇ ಇಲ್ಲ, ತೆರೆ - ಮರೆಯಲ್ಲೇ ಇತ್ಯರ್ಥಗೊಳ್ಳುತ್ತವೆ. ಅತ್ಯಾಚಾರ ಆರೋಪಿಗಳಿಗೆ ಕಠಿಣ ಶಿಕ್ಷೆಯಾಗದ ಹೊರತು, ದೇಶದಲ್ಲಿ ಅತ್ಯಾಚಾರ ಪ್ರಕರಣಗಳು ಹೆಚ್ಚುಗುತ್ತಲೇ ಹೋಗುತ್ತವೆ.

ಬೂಕನಕೆರೆ ವಿಜೇಂದ್ರ, ಕುವೆಂಪು ನಗರ ಮೈಸೂರು

ಪಡಿತರ ಅಕ್ಕಿ ದುರ್ಬಳಕೆ ತಪ್ಪಲಿ

ಪಡಿತರ ಅಕ್ಕಿಯನ್ನು ಬಳ್ಳಾರಿಯಿಂದ ಸಿಂದನೂರಿಗೆ ಅಕ್ರಮವಾಗಿ ಸಾಗಿಸುತ್ತಿದ್ದ ವೇಳೆ ಆಹಾರ ನಿರೀಕ್ಷಕರು ದಾಳಿ ನಡೆಸಿ 164 ಕ್ವಿಂಟಲ್ ಅಕ್ಕಿಯನ್ನು ವಶಪಡಿಸಿಕೊಂಡ ಸುದ್ದಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಹೀಗೆ ಅಕ್ರಮವಾಗಿ ಸಾಗಿಸುತ್ತಿದ್ದ ಪಡಿತರ ಅಕ್ಕಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಪ್ರಕರಣಗಳು ಪದೇ ಪದೇ ನಡೆಯುತ್ತಿವೆ.

ಸರಕಾರ ಬಿಪಿಎಲ್ ಪಡಿತರ ಚೀಟಿದಾರರಿಗೆ ನೀಡುವ ಸವಲತ್ತುಗಳನ್ನು ಪಡೆದುಕೊಳ್ಳಲು ಅನರ್ಹರು ಸಹ ವಾಮ ಮಾರ್ಗದಲ್ಲಿ ಬಿಪಿಎಲ್ ಪಡಿತರ ಚೀಟಿ ಮಾಡಿಸಿಕೊಂಡು ತಮಗೆ ಬೇಡವಾದ ಪಡಿತರ ಧಾನ್ಯಗಳನ್ನು ಅಧಿಕ ಬೆಲೆಗೆ ಮಾರಿಕೊಂಡು ಮಧ್ಯವರ್ತಿಗಳಿಗೆ ಲಾಭ ಮಾಡಿಕೊಟ್ಟು ಸರಕಾರಕ್ಕೆ ನಷ್ಟವನ್ನುಂಟು ಮಾಡುತ್ತಿದ್ದಾರೆ. ಕಾಳಸಂತೆಯಲ್ಲಿ ಪಡಿತರ ಅಕ್ಕಿ ಮಾರಾಟವಾಗುತ್ತಿರುವುದು ಸರ್ವೇ ಸಾಮಾನ್ಯವಾಗಿಬಿಟ್ಟಿದೆ. ಪಡಿತರ ಅಕ್ಕಿಗೆ ಪಾಲಿಶ್ ಮಾಡಿಸಿ ಉತ್ತಮ ದರ್ಜೆಯ ಅಕ್ಕಿಯೆಂದು ಬಿಂಬಿಸಿ ಪಕ್ಕದ ರಾಜ್ಯಗಳಲ್ಲಿ ಅಧಿಕ ಬೆಲೆಗೆ ಮಾರಾಟ ಮಾಡುತ್ತಿರುವ ಪ್ರಕರಣಗಳೂ ಹೆಚ್ಚುತ್ತಿವೆ. ಅನರ್ಹ ಬಿಪಿಎಲ್ ಪಡಿತರ ಚೀಟಿಗಳನ್ನು ಗುರುತಿಸಿ ಮುಟ್ಟುಗೋಲು ಹಾಕಿಕೊಳ್ಳುವ ಕೆಲಸ ಆಮೆಗತಿಯಲ್ಲಿ ಸಾಗಿದೆ. ಬಿಪಿಎಲ್ ಪಡಿತರ ಚೀಟಿ ಪಡೆದುಕೊಳ್ಳಲು ಪ್ರಸ್ತುತ ಇರುವ ಮಾನದಂಡಗಳನ್ನು ಪರಿಷ್ಕರಿಸಿ ಅಕ್ರಮಗಳಿಗೆ ಕಡಿವಾಣ ಹಾಕುವುದರ ಮೂಲಕ ಸರಕಾರದ ಬೊಕ್ಕಸಕ್ಕೆ ಆಗುತ್ತಿರುವ ನಷ್ಟವನ್ನು ತಪ್ಪಿಸಬೇಕಾಗಿದೆ.

ಜಿ.ನಾಗೇಂದ್ರ, ಕಾವೂರು, ಸಂಡೂರು

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ಸರ್ಪಭೂಷಣ ಶಾಸ್ತ್ರಿ, ಮೈಸೂರು**
ಭಟ್ರೇ, ಪ್ರತಾಪ್ ಸಿಂಹ ಹೊಸ ಹೊಸ ರೈಲು ತಂದು ಜನ ಸೇವೆ ಮಾಡಿ ಮೆರೆದರು. ಈಗಿನ ಯದುವೀರ?
– **ಈ ರೈಲುಗಳಿಗೆ ಹೆಚ್ಚುವರಿ ಬೋಗಿಗಳನ್ನ ಹಾಕಿಸಿ ಜನಸೇವೆ ಮಾಡಬೇಕೇಂದಿದ್ದಾರಂತೆ!**

- **ರುಕ್ಕು, ಚಾಮರಾಜಪೇಟೆ**
ಭಟ್ರೇ, 'ವಿಶ್ವವಾಣಿ' ಹತ್ತರ ಹುಟ್ಟಿದ ಹಬ್ಬವನ್ನು ವೈಭವದಿಂದ ಆಚರಿಸಿದ ಭಟ್ಟರು ಜಯವೀರಗೌಡರನ್ನು ದೂರ ಇಟ್ಟಿದ್ದು ಏಕೆ?
– **ನನಗಿಂತ ಆತನಿಗೇ ಹೆಚ್ಚು ಅಭಿಮಾನಿಗಳಾದಾಗ, ಇನ್ನೇನು ಮಾಡಲಿ?!**

- **ಉಮೇಶ್ ಎಂ ಶಿರಾ, ರಾಮನಗರ**
ಭಟ್ರೇ, ನನ್ನ ಹೆಸರಿನ ಮುಂದೆ ಸ್ನೇಹಮಯಿ ಅಂತ ಹೆಸರಿಟ್ಟುಕೊಳ್ಳಬಹುದಾ?
– **ಯಾರ ವಿರುದ್ಧ ಜಗಳ ಎಂಬುದನ್ನು ಮೊದಲೇ ನಿರ್ಧರಿಸುವುದು ಅನಿವಾರ್ಯ!**

- **ಗುಡಿಬಂಡೆ ಗುರುರಾಜ, ಸಾಗರಕಟ್ಟೆ**
ಭಟ್ರೇ, ಯಾರೊಂದಿಗೂ ಹೆಚ್ಚು 'ರಬ್' ಮಾಡಿಕೊಳ್ಳದವರನ್ನು ಏನೆಂದು ಕರೆಯಬೇಕು?
– **ಅರಬ್!**

- **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ಈ ವರ್ಷದಲ್ಲಿ ನಿಮ್ಮದು ಎರಡು ವಿದೇಶ ಯಾತ್ರೆ ಆಯ್ತಲ್ಲ?
– **ವಿದೇಶದಲ್ಲೇ ಇರ್ತಾರೆ ಅಂತ ಸುಳ್ಳು ಸುದ್ದಿ ಹಬ್ಬಿಸುವುದನ್ನು ಇನ್ನಾದರೂ ನಿಲ್ಲಿಸಬಹುದು!**

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಇಲ್ಲೊಬ್ಬ ಕಾಫಿ ಕುಡಿಯುವ ಮೊದಲು ಕಾಫಿಯನ್ನು ಅದ್ದಿ, ಭೂಮಿಗೆ ಮೂರು ಸಲ ಸಿಡಿಸುತ್ತಾನಲ್ಲ?
– **ಅನುಮಾನ ಬೇಡ, ಆತ ಮಹಾ ಗುಂಡರ್!**

- **ಕೃಷ್ಣ ಕುಮಾರ ಎ., ಕೋಲಾರ**
ಭಟ್ರೇ, ಕರ್ನಾಟಕ ಸರಕಾರ ನಿದ್ದೆ ಮಾಡುತ್ತಿದೆ ಅಂತ ಗೊತ್ತಾಗುವುದು ಹೇಗೆ?
– **ಗೊರಕೆಯ ಸದ್ದಿನಿಂದ!**

- **ವೀರೇಶ ಕಮತಗಿ, ಅಡಗೂರು**
ಭಟ್ರೇ, ಹತ್ತು ತುಂಬಿದ 'ವಿಶ್ವವಾಣಿ'ಗೆ ಮೊಯಿಲಿ ಶುಭ ಕೋರಲಿಲ್ಲವೇ?
– **ಸಾಣೇಹಳ್ಳಿ ಸ್ವಾಮಿ ಜತೆ ಆಫೀಸಿಗೆ ಬರ್ತೀನೆ ಅಂತ ಹೇಳಿದ್ದಾರಂತೆ!**

- **ಚಂದ್ರಶೇಖರ ನಾಗೂರು, (ಇಮೇಲ್ ಮೂಲಕ)**
ಭಟ್ರೇ, ನದಿಯ ಪುಣ್ಯಸ್ನಾನದಲ್ಲಿ ತೊಳೆದು ಹೋದ 'ಪಾಪ' ವಾಪಸ್ ಬರುತ್ತದಾ?
– **ಮತ್ತೆ ನೀನು ದಿನಾ ಕುಡಿಯುತ್ತಿರುವುದು ಏನನ್ನು ಅಂತ ಅಂದುಕೊಂಡಿದ್ದೀಯಾ?!**

ನಮ್ಮ ನದಿಗಳ ಪಾವಿತ್ರ್ಯವನ್ನು ಉಳಿಸುವವರಾರು?

ನಮ್ಮ ನಗರಗಳ ಬಹುತೇಕ ಯುಜಿಡಿ ಪೈಪ್‌ಗಳು ಅಂತಿಮವಾಗಿ ಸೇರುವುದು ನದಿ ಮೂಲಗಳನ್ನೇ. ನಮ್ಮ ಕೈಗಾರಿಕೆಗಳ ತ್ಯಾಜ್ಯಗಳು, ರೈತರ ಕಾಫಿ ಪಲ್ಪಿಂಗ್ ಕೊಳಚೆ ನೀರು, ಶುಂಠಿ ತೊಳೆದ ರಾಸಾಯನ ಮಿಶ್ರಿತ ನೀರು, ನೂರಾರು ಮಾಂಸದಂಗಡಿಗಳ ತ್ಯಾಜ್ಯಗಳು ನದಿಯೊಡಲಿನಲ್ಲೇ ಮೋಕ್ಷ ಕಾಣುತ್ತವೆ.

ಲೋಕಮತ
ಲೋಕೇಶ್ ಕಾಯರ್ಗ
kaayarga@gmail.com

ಗಂಗೆಯಲ್ಲಿ ಮಿಂದರೆ ಸಮಸ್ತ ಪಾಪಗಳೂ ಪರಿಹಾರವಾಗುತ್ತವೆ. ಮೋಕ್ಷ ಸಿಗುತ್ತದೆ ಎನ್ನುವುದು ಭಾರತೀಯರ ನಂಬಿಕೆ. ಈ ನಂಬಿಕೆಯಿಂದಲೇ ಉತ್ತರಪ್ರದೇಶದ ಪ್ರಯಾಗದ ಕುಂಭಮೇಳದಲ್ಲಿ ಕೋಟ್ಯಂತರ ಜನರು ಭಾಗವಹಿಸಿ ಪುಣ್ಯಸ್ನಾನ ಮಾಡುತ್ತಿದ್ದಾರೆ. 144 ವರ್ಷಗಳ ಬಳಿಕ ಬಂದಿರುವ ಮಹಾಕುಂಭ ಮೇಳ ಎನ್ನುವ ಕಾರಣಕ್ಕಾಗಿಯೂ ಬಂದವರಿದ್ದಾರೆ. ಹತ್ತಾರು ಕೋಟಿ ಜನ ಸೇರುವ ಪ್ರಯಾಗದ ಸಂಗಮ ಹೇಗಿರಬಹುದೆಂಬ ಕುತೂಹಲದಿಂದ ಬಂದವರೂ ಸಾಕಷ್ಟು ಸಂಖ್ಯೆಯಲ್ಲಿರಬಹುದು. ಕಾಲ್ತುಳಿತ ಘಟನೆಯಲ್ಲಿ ಹಲವರು ಮೃತಪಟ್ಟ ಘಟನೆಯ ಬಳಿಕವೂ ಪ್ರಯಾಗಕ್ಕೆ ಬರುವ ಭಕ್ತರ ಸಂಖ್ಯೆ ಕಡಿಮೆಯಾಗಿಲ್ಲ. ಆದರೆ 30 ಕೋಟಿಗಿಂತಲೂ ಹೆಚ್ಚು ಮಂದಿ ಜಳಕ ಮಾಡಿದ ಗಂಗೆಯ ಒಡಲು ಅದೆಷ್ಟು ಮಲಿನಗೊಂಡಿರಬಹುದು ?

ಇಂತಹ ಪ್ರಶ್ನೆ ಭಕ್ತರ ಮನಸ್ಸನ್ನು ಘಾಸಿಗೊಳಿಸಬಹುದು. ಏಕೆಂದರೆ ಇದು ನಂಬಿಕೆಯ ಪ್ರಶ್ನೆ. ಕಾಶಿಯಲ್ಲಿ ಪವಿತ್ರ ಸ್ನಾನ ಮಾಡುವಾಗ ಪಕ್ಕದಲ್ಲೇ ಹೆಣಗಳು ತೇಲಿ, ಅರೆಬೆಂದ ಶವಗಳ ಮೂಳೆಗಳು ತೇಲಿ ಹೋದರೂ ಭಕ್ತರು ಇದನ್ನು ಲೆಕ್ಕಿಸುವುದಿಲ್ಲ. ನಂಬಿಕೆಯ ಮುಂದೆ ಉಳಿದುದೆಲ್ಲವೂ ಗೌಣ. ಭಕ್ತರ ಪಾಲಿಗೆ ಗಂಗೆ, ತುಂಗೆ, ಯಮುನೆ, ಕಾವೇರಿಯರೆಲ್ಲರೂ ಪವಿತ್ರೆ ಪಾವನೆಯರು, ಮೋಕ್ಷದಾಯಿಯರು. ಆದರೆ ನಮ್ಮ ದೇಶದ ನಾನಾ ನದಿಗಳ ನೀರಿನ ಗುಣಮಟ್ಟವನ್ನು ಅಧ್ಯಯನ ನಡೆಸಿದ ವಿಜ್ಞಾನಿಗಳ ಪ್ರಕಾರ ಕರ್ನಾಟಕದ 17 ನದಿಗಳೂ ಸೇರಿದಂತೆ 311 ನದಿಗಳ ನೀರು ಕುಡಿಯಲು ಬಿಡಿ, ಸ್ನಾನಕ್ಕೂ ಯೋಗ್ಯವಾಗಿಲ್ಲ.

ಗಂಗಾ ಸ್ನಾನದ ಬಗ್ಗೆ ಅಪಾರ ನಂಬಿಕೆ, ಭಕ್ತಿ ಇಟ್ಟುಕೊಂಡು ಬಂದಿದ್ದ ಆ್ಯಪಲ್ ಕಂಪನಿ ಸಂಸ್ಥಾಪಕ ದಿವಂಗತ ಸ್ಟೀವ್ ಜಾಬ್ಸ್ ಅವರ ಪತ್ನಿ ಲಾರೆನ್ ಪೊವೆಲ್ ಒಂದು ಬಾರಿ ಮುಳುಗಿ ಹಾಕಿ ಮರುದಿನವೇ ಮುಖ, ಮೂತಿ ಊದಿಸಿಕೊಂಡು ಭೂತಾನ್‌ಗೆ ಹಾರಿದ್ದು ಸುದ್ದಿಯಾಗಿತ್ತು. ಇದೇ ರೀತಿ ಗಂಗೆಯಲ್ಲಿ ಮಿಂದ ಬಳಿಕ ಮೈಯಲ್ಲಿ ತುರಿಕೆ ಎದ್ದು ವೈದ್ಯರನ್ನು ಕಂಡವರ ಸಂಖ್ಯೆ ಕಡಿಮೆ ಏನಿಲ್ಲ. ಇದರಲ್ಲಿ ಗಂಗೆಯದ್ದೇನೂ ತಪ್ಪಿಲ್ಲ. ನಾವು ನಿತ್ಯವೂ ಸ್ಮರಿಸುವ ಸಪ್ತ ನದಿಗಳೂ ಸೇರಿದಂತೆ ಎಲ್ಲ ಪವಿತ್ರ ನದಿಗಳನ್ನೂ ಅಪವಿತ್ರಗೊಳಿಸಿ, ಮಲೀನಗೊಳಿಸಿದವರು ನಾವೇ. ನೆಲ, ಗಾಳಿ, ಆಕಾಶ ಸೇರಿದಂತೆ ಪಂಚಭೂತಗಳನ್ನೂ ಕಲುಷಿತಗೊಳಿಸಿದ ಅಪಕೀರ್ತಿ ನಮಗೇ ಸಲ್ಲುತ್ತದೆ.

ಎಲ್ಲವೂ ನದಿಯಲ್ಲೇ ವಿಸರ್ಜನೆ

ಪವಿತ್ರ ಸ್ನಾನದಲ್ಲೂ ಶಾಂಪೂ, ಸೋಪುಗಳಿಲ್ಲದಿದ್ದರೆ ನಮ್ಮ ಸ್ನಾನ ಪೂರ್ಣಗೊಳ್ಳುವುದಿಲ್ಲ. ಸ್ನಾನದ ಬಳಿಕ ಒದ್ದೆ ಬಟ್ಟೆಯನ್ನು ನದಿಯಲ್ಲಿ ತೇಲಿ ಬಿಡದಿದ್ದರೆ ಮಾಡಿದ ಪಾಪಗಳು ತೊಲಗುವುದಿಲ್ಲ. ಇನ್ನು ಮನೆಯಲ್ಲಿ ಫ್ರೇಮ್ ಕಳಚಿದ, ಗ್ಲಾಸ್ ಒಡೆದ ದೇವರ ಫೋಟೋಗಳಿದ್ದರೆ, ರಕ್ಷೆಯ ಹೆಸರಿನಲ್ಲಿ ತಂದ ತೆಂಗಿನ ಕಾಯಿಗಳಿದ್ದರೆ, ಅರಿಶಿನ–ಕುಂಕುಮಗಳಿದ್ದರೆ ಇವೆಲ್ಲವನ್ನೂ ನದಿ ಒಡಲಿಗೆ ಸೇರಿಸಿದಾಗಲೇ ನಮಗೆ ಸಮಾಧಾನ. ಇವು ಭಕ್ತಿಯ ಹೆಸರಿನಲ್ಲಿ ನಡೆಯುವ ಅಧ್ವಾನಗಳಾದರೆ ನಮ್ಮ ನಗರಗಳ ಬಹುತೇಕ ಯುಜಿಡಿ ಪೈಪ್‌ಗಳು ಅಂತಿಮವಾಗಿ ಸೇರುವುದು ನದಿ ಮೂಲಗಳನ್ನೇ. ನಮ್ಮ ಕೈಗಾರಿಕೆಗಳ ತ್ಯಾಜ್ಯಗಳು, ರೈತರ ಕಾಫಿ ಪಲ್ಪಿಂಗ್ ಕೊಳಚೆ ನೀರು, ಶುಂಠಿ ತೊಳೆದ ರಾಸಾಯನ ಮಿಶ್ರಿತ ನೀರು, ನೂರಾರು ಮಾಂಸದಂಗಡಿಗಳ ತ್ಯಾಜ್ಯಗಳು ನದಿಯೊಡಲಿನಲ್ಲೇ ಮೋಕ್ಷ ಕಾಣುತ್ತವೆ.

ನಮ್ಮ ಹಿರಿಯರ ಪಾಲಿಗೆ ಪ್ರತಿಯೊಂದು ಜಲಮೂಲವೂ ಪವಿತ್ರವೇ ಆಗಿತ್ತು. ಪವಿತ್ರ ಸ್ನಾನಕ್ಕೆಂದು ಅವರು ದೂರದ ಪ್ರಯಾಗಕ್ಕೆ, ಕಾಶಿಗೆ ಹೋಗುವ ಅವಶ್ಯಕತೆ ಇರಲಿಲ್ಲ. ಜಲಮೂಲದ ನಂಟಿಲ್ಲದೆ ಅವರು ಯಾವ ದೇಗುಲಗಳನ್ನು ನಿರ್ಮಿಸಿದವರಲ್ಲ. ಎರಡು ಶತಮಾನಗಳಿಗಿಂತ ಹಳೆಯದಾದ ಯಾವುದೇ ದೇಗುಲವನ್ನು ತೆಗೆದುಕೊಂಡರೂ ಇವುಗಳು ನದಿ, ಹೊಳೆ, ಕೆರೆ, ಸರೋವರಗಳ ಸಮೀಪವೇ ನಿರ್ಮಾಣವಾಗಿದೆ. ಇದಾವುದೂ ಇಲ್ಲದೇ ಹೋದರೆ ದೇಗುಲದೊಳಗೊಂದು ಬಾವಿಯಾದರೂ ಇರಲೇಬೇಕು. ಶೈವ, ವೈಷ್ಣವ, ಶಾಕ್ತ ಎಂಬ ಭೇದವಿಲ್ಲದೆ ಎಲ್ಲ ದೇಗುಲಗಳಿಗೆ, ಜೈನರ ಬಸದಿಗಳಿಗೆ ಈ ನಿಯಮ ಅನ್ವಯವಾಗುತ್ತಿತ್ತು. ಪವಿತ್ರ ಸ್ನಾನ ಮಾಡಬೇಕೆನ್ನುವವರು ದೇಗುಲಗಳ ಬಳಿ ಇರುವ ಈ ನದಿಗಳಲ್ಲಿ, ಕೆರೆಗಳಲ್ಲಿ ಮುಳುಗು ಹಾಕಿ ಮೈಯ ಕೊಳೆಯ ಜತೆ ಮನಸ್ಸಿನ ಕೊಳೆಯನ್ನೂ ಕಳೆದುಕೊಂಡು ನಿರಾಳರಾಗುತ್ತಿದ್ದರು. ಇದೂ ಇಲ್ಲದೇ ಹೋದರೆ ದೇಗುಲದ ಬಾವಿಯಿಂದ ಎತ್ತಿದ ನೀರನ್ನು ಪಡೆದು ಕಲಶ ಸ್ನಾನದ ಹೆಸರಿನಲ್ಲಿ ಮಿಂದು ಪುನೀತರಾಗುತ್ತಿದ್ದರು.

ಹಾಗೆಯೇ ಇಂದಿನ ಪರಿಸ್ಥಿತಿಯನ್ನೊಮ್ಮೆ ಕಲ್ಪಿಸಿಕೊಳ್ಳಿ. ಗಂಗೆಯಲ್ಲಿ ಮಿಂದಂತೆ ದೇಗುಲಗಳನ್ನು ಬಳಸಿ ಸಾಗುವ ನಮ್ಮ ಎಷ್ಟು ನದಿಗಳಲ್ಲಿ ಮುಳುಗು ಹಾಕಲು ಸಾಧ್ಯವಿದೆ ನೀವೇ ಯೋಚಿಸಿ. ದೇಗುಲದ ಮುಂದಿನ ಕೆರೆಗಳ ಚಿತ್ರಣವನ್ನು ಕಣ್ಮುಂದೆ ತಂದುಕೊಳ್ಳಿ. ದೇಗುಲದೊಳಗಿನ ಬಾವಿಗಳು ಬತ್ತಿ ಹೋಗಿ ಬೋರ್‌ವೆಲ್ ನೀರಿನಲ್ಲಿ ಪ್ರತಿದಿನ ಅಭಿಷೇಕಗೊಳ್ಳುತ್ತಿರುವ ಊರ ದೇವರುಗಳನ್ನು ನೆನಪಿಸಿಕೊಳ್ಳಿ. ಇಲ್ಲಿರುವ ನದಿಗಳಲ್ಲಿ, ಕೆರೆಗಳಲ್ಲಿ ನೀರಿದ್ದರೂ ಮುಳುಗುಹಾಕಲು ನಾವೇ ಹಿಂದೇಟು ಹಾಕುತ್ತೇವೆ. ನಾವು ಅತ್ಯಂತ ಪವಿತ್ರ ಎಂದು ಪರಿಗಣಿಸಿದ ತ್ರಿವೇಣಿ ಸಂಗಮದ ಸ್ಥಳಗಳಲ್ಲಿ ಜಳಕ ಬಿಡಿ, ತಲೆ ಮೇಲೆ ನೀರನ್ನೂ ಪ್ರೋಕ್ಷಣೆ ಮಾಡಿಕೊಳ್ಳಲೂ ಮನಸ್ಸಾಗುವುದಿಲ್ಲ. ಈ ನದಿಗಳ ಸ್ನಾನಘಟ್ಟದ ಬಳಿ ಸಾಗಿದಾಗ ಭಕ್ತಿಯ ಹೆಸರಿನಲ್ಲಿ ಎಸಗುತ್ತಿರುವ ಅನರ್ಥಗಳನ್ನು ಕಣ್ಣಾರೆ ಕಾಣಬಹುದು.

ಕಾವೇರಿ, ತುಂಗೆಯರೂ ಕಲುಷಿತ

ಗಂಗೆಯ ಮಾಲಿನ್ಯವನ್ನು ತಡೆಗಟ್ಟಲು ಕೇಂದ್ರ ಸರಕಾರ ಮತ್ತು ಉತ್ತರ ಪ್ರದೇಶ ಸರಕಾರ ಕಳೆದ ಎರಡು ದಶಕಗಳಲ್ಲಿ ನೂರಾರು ಕೋಟಿ ರು. ವ್ಯಯಿಸಿವೆ. ಗಂಗಾ ತಟದ ನೂರಾರು ಕೈಗಾರಿಕೆಗಳಿಗೆ ಬೀಗ ಜಡಿಯಲಾಗಿದೆ. ಆದರೆ ಗಂಗಾಶುದ್ಧಿ ಯೋಜನೆಯ ಸಂಕಲ್ಪ ಇನ್ನೂ ಪೂರ್ತಿಯಾಗಿ ಈಡೇರಿಲ್ಲ. ನಮ್ಮ ರಾಜ್ಯದ ಪವಿತ್ರ ನದಿಗಳೂ ಈಗ ಗಂಗೆಗಿಂತಲೂ ಹೆಚ್ಚಿನ ಮಾಲಿನ್ಯ ಸಮಸ್ಯೆ ಎದುರಿಸುತ್ತಿವೆ. ಮುಂದಿನ ದಿನಗಳಲ್ಲಿ ಇದು ಅಂತಾರಾಜ್ಯ ಸಮಸ್ಯೆಯಾಗಿಯೂ ಕಾಡಬಹುದು. ಕರ್ನಾಟಕದಲ್ಲಿ ಕಾವೇರಿ ನೀರು ಕಲುಷಿತವಾಗುತ್ತಿದೆ. ಇದರಿಂದ ಶುದ್ಧ ಕುಡಿಯುವ ನೀರು ಪೂರೈಸಲು ಸಾಧ್ಯವಾಗುತ್ತಿಲ್ಲ ಎಂದು ದೂರಿ ತಮಿಳುನಾಡು ಸರಕಾರ ಈಗಾಗಲೇ ಸುಪ್ರೀಂಕೋರ್ಟ್ ಮೊರೆ ಹೋಗಿದೆ. ನೀರಿನ ತಕರಾರಿನ ಜತೆ ಈ ವ್ಯಾಜ್ಯದ ಹೆಸರಿನಲ್ಲೂ ಕರ್ನಾಟಕ ದುಡ್ಡು ಪೋಲು ಮಾಡಬೇಕಿದೆ.

ತಮಿಳುನಾಡಿನ ಆಕ್ಷೇಪ ಏನೇ ಇರಲಿ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಮೂರು ವರ್ಷಗಳ ಹಿಂದೆ ನೀಡಿರುವ ವರದಿ ಪ್ರಕಾರ ಕಾವೇರಿ, ಕಪಿಲೆ ಸೇರಿದಂತೆ ರಾಜ್ಯದ 17 ಪ್ರಮುಖ ನದಿಗಳ ನೀರು ಕಲುಷಿತಗೊಂಡಿದೆ. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ತಾಂತ್ರಿಕ ತಜ್ಞರ ಸಮಿತಿ ಈ ಸಂಬಂಧ ಈಗಾಗಲೇ ಸರಕಾರಕ್ಕೆ ವರದಿ ಸಲ್ಲಿಸಿದೆ. ಕೆಲ ತಿಂಗಳ ಹಿಂದಷ್ಟೇ ರಾಜ್ಯ ಸರಕಾರ ನದಿ ಮಾಲಿನ್ಯದ ಕಾರಣಗಳನ್ನು ತಿಳಿಯಲು ಮತ್ತೊಂದು ಸಮಿತಿಯನ್ನು ನೇಮಿಸಿದೆ. ಆದರೆ ಪರಿಹಾರದ ಕ್ರಮಗಳು ಇನ್ನೂ ಜಾರಿಯಾಗಿಲ್ಲ.

ಕಲುಷಿತ ನದಿಗಳು

ಕೇಂದ್ರ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಕಾರ ಪ್ರತಿ ಲೀಟರ್ ಶುದ್ಧ ನೀರಿನಲ್ಲಿ 1ಎಂಜಿ ಬಯೋ ಕೆಮಿಕಲ್ ಆಕ್ಸಿಜನ್ ಡಿಮ್ಯಾಂಡ್ (ಬಿಒಡಿ) ಇರಬೇಕು. ಆದರೆ ಕಾವೇರಿ ನದಿ ನೀರಿನಲ್ಲಿ 6 ಬಿಒಡಿ ಪ್ರಮಾಣವಿದ್ದರೆ, ಕಪಿಲಾ ನೀರಿನಲ್ಲಿ ಇದು 3.8 ಇದೆ. ಕಾಫಿ ಪಲ್ಪ್ ನೀರಿನಿಂದ ಕಲುಷಿತಗೊಳ್ಳುತ್ತಿರುವ ಕಾವೇರಿ ಉಪನದಿ ಲಕ್ಷ್ಮಣ ತೀರ್ಥದಲ್ಲಿ 5.6ರಷ್ಟು ಬಿಒಡಿ ಪ್ರಮಾಣವಿದೆ. ಬೆಂಗಳೂರಿನ ನಂದಿ ಬೆಟ್ಟದಲ್ಲಿ ಹುಟ್ಟುವ ಪಿನಾಕಿನಿ ನದಿ ನೀರಿನಲ್ಲಿ 111, ಅಘನಾಶಿನಿಯಲ್ಲಿ 3.3, ಅರ್ಕಾವತಿಯಲ್ಲಿ 39, ಭದ್ರಾದಲ್ಲಿ 7, ಭೀಮಾದಲ್ಲಿ 4, ಗಂಗಾವಳಿಯಲ್ಲಿ 3.4, ಕಾಗಿಣದಲ್ಲಿ 3.1, ಕೃಷ್ಣಾದಲ್ಲಿ 4.7, ನೇತ್ರಾವತಿಯಲ್ಲಿ 6, ಶರಾವತಿಯಲ್ಲಿ 3.3, ಶಿಂಶಾದಲ್ಲಿ 9.5, ತುಂಗಾದಲ್ಲಿ 6.2 ರಷ್ಟು ಬಿಒಡಿಗಳಷ್ಟಿದೆ.

ತಲಕಾವೇರಿಯಲ್ಲಿ ಹುಟ್ಟುವ ಕಾವೇರಿ ನದಿ ಕುಶಾಲನಗರ, ಹುಣಸೂರು, ಪಿರಿಯಾಪಟ್ಟಣ, ಕೆ.ಆರ್. ನಗರ, ಮೈಸೂರು, ಶ್ರೀರಂಗಪಟ್ಟಣ, ತಿ.ನರಸೀಪುರ, ಕೊಳ್ಳೆಗಾಲ ಮಾರ್ಗದಲ್ಲಿ ಹರಿಯುವಾಗ ಕಲುಷಿತಗೊಳ್ಳುತ್ತಿದೆ. ಅದರಲ್ಲೂ ಮೈಸೂರು ನಗರದ ಒಳ ಚರಂಡಿ ನೀರು ನೇರವಾಗಿ ಕಾವೇರಿ ನದಿ ಸೇರುತ್ತಿದೆ ಎಂಬ ದೂರುಗಳಿವೆ. ನಂಜನಗೂಡಿನಲ್ಲಿ ಕೈಗಾರಿಕಾ ಪ್ರದೇಶದ ತ್ಯಾಜ್ಯ ನೀರು ಹಾಗೂ ಪಟ್ಟಣದ ಒಳ ಚರಂಡಿ ನೀರು ಕೂಡ ಕಪಿಲೆಯ ಒಡಲು ಸೇರುತ್ತಿದೆ. ಹಿಂದೆ ತಲಕಾಡಿಗೆ ಪ್ರವಾಸ ಬಂದವರು ಇಲ್ಲಿನ ಸಹಜ ಈಜು ಕೊಳದಂತಿರುವ ನದಿಯಲ್ಲಿ ಮಿಂದು ಖುಷಿ ಪಡುತ್ತಿದ್ದರು. ಈಗ ನದಿಗಿಳಿದರೆ ತುರಿಕೆ ಗ್ಯಾರಂಟಿ ಎನ್ನುವಂತಾಗಿದೆ.

ಕುಂಭಮೇಳ ಸ್ವಚ್ಛತೆಗೆ ದಾರಿ ತೋರಲಿ

ಪ್ರಯಾಗದ ಪವಿತ್ರ ಸ್ನಾನದ ನಡುವೆಯೇ ನಮ್ಮ ತಿ.ನರಸೀಪುರದ ಸಂಗಮ ಸ್ಥಳದಲ್ಲಿ ಮತ್ತೊಮ್ಮೆ ಕುಂಭ ಮೇಳ ನಡೆಸಲು ಸರಕಾರ ಸಜ್ಜಾಗಿದೆ. ಕಾವೇರಿ, ಕಬಿನಿ ಮತ್ತು ಸ್ಪಟಿಕ ಸರೋವರದ ಸಂಗಮ ಸ್ಥಾನವಾದ ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರದ ತ್ರಿವೇಣಿ ಸಂಗಮದಲ್ಲಿ ಆರು ವರ್ಷಗಳ ಬಳಿಕ ಮೂರು ದಿನಗಳ ಕುಂಭ ಮೇಳ ಆಯೋಜಿಸಲಾಗಿದೆ. 2025ರ ಫೆಬ್ರವರಿ 10, 11 ಮತ್ತು 12ರಂದು ಒಟ್ಟು ಮೂರು ದಿನಗಳ ಕಾಲ ಕುಂಭಮೇಳ ಆಯೋಜನೆಗೊಂಡಿದೆ. ಸುತ್ತೂರು ಮಠಾಧೀಶ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಸೇರಿದಂತೆ ಅನೇಕ ಮಠಾಧೀಶರು ಕಳೆದ ವರ್ಷ ಸಭೆ ಸೇರಿ ಈ ಕುಂಭ ಮೇಳದ ರೂಪುರೇಷೆಗಳನ್ನು ಸಿದ್ಧಪಡಿಸಿದ್ದರು. 1989ರಲ್ಲಿ ಇಲ್ಲಿ ಮೊದಲ ಬಾರಿಗೆ ನಡೆದ ಕುಂಭಮೇಳದ ನಂತರ 12ನೇ ಕುಂಭಮೇಳಕ್ಕೆ ತ್ರಿವೇಣಿ ಸಂಗಮ ಸಜ್ಜಾಗಿದೆ.

ಉತ್ತರದ ರಾಜ್ಯಗಳಲ್ಲಿ ನಡೆಯುವ ಕುಂಭ ಮೇಳದಲ್ಲಿ ಭಾಗವಹಿಸಲಾಗದ ಭಕ್ತರಿಗೆ ಇಲ್ಲಿನ ತ್ರಿವೇಣಿ ಸಂಗಮ ಸ್ನಾನ ಸಮಾಧಾನ ತರಬಹುದು. ಪವಿತ್ರ ಕ್ಷೇತ್ರಗಳಿಗೆ ನಂಟು ಬೆಸೆದು ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಸರಕಾರದ ಯೋಜನೆಗೂ ಈ ಕುಂಭಮೇಳ ಪೂರಕವಾಗಬಹುದು. ಆದರೆ ಇಲ್ಲಿನ ಗಂಜಾಂ ನರಸಿಂಹ ಸ್ವಾಮಿ ದೇಗುಲ ಎದುರು ಹಸಿರು ಬಣ್ಣಕ್ಕೆ ತಿರುಗಿದ ಕಪಿಲೆಯನ್ನು ಕಂಡವರು, ನಂಜನಗೂಡಿನಲ್ಲಿ ಶ್ರೀಕಂಠೇಶ್ವರ ದೇಗುಲ ಎದುರಿನ ಸ್ನಾನ ಘಟ್ಟವನ್ನು ಕಂಡವರು, ತ್ರಿವೇಣಿ ಸಂಗಮದಲ್ಲಿ ಪುಣ್ಯಸ್ನಾನ ಮಾಡಲು 'ಭಕ್ತಿ ಪರವಶ'ರಾಗಿರಲೇಬೇಕು. ಶ್ರೀ ರಂಗಪಟ್ಟಣದ ಕಾವೇರಿ ಸಂಗಮದಲ್ಲಿ ಪುಣ್ಯಸ್ನಾನ ಮಾಡಬೇಕಾದರೂ ಭಕ್ತಿಯಿಂದ 'ಕಣ್ಮುಚ್ಚಿಕೊಂಡೇ' ನೀರಿಗಿಳಿಯಬೇಕು.

ಕುಂಭಮೇಳ, ಕಾವೇರಿ ಆರತಿ, ತುಂಗಾರತಿ, ಬಾಗಿನ ಅರ್ಪಣೆಗೆ ಆಸಕ್ತಿ ತೋರಿಸುವ ಸರಕಾರ ಮತ್ತು ಜನಪ್ರತಿನಿಧಿಗಳು ಮೊದಲು ಈ ನದಿ ಮತ್ತು ಕೆರೆಗಳ ಸಂರಕ್ಷಣೆ ಮತ್ತು ಸ್ವಚ್ಛತೆಗೆ ಆದ್ಯತೆ ನೀಡಬೇಕು. ನದಿಯನ್ನು ಕಲುಷಿತಗೊಳಿಸುವವರು ಯಾರೇ ಆಗಲಿ ಕಠಿಣ ಕ್ರಮ ಕೈಗೊಳ್ಳಬೇಕು. ನದಿ ಸ್ನಾನದಿಂದ ಪಾಪ ಕಳೆಯುವ ಮೊದಲು ನಮ್ಮ ಪಾಪ ಕೃತ್ಯಗಳನ್ನು ಕಳೆದುಕೊಳ್ಳಬೇಕು.

ಅಭಿಮತ
ವಿನಾಯಕ ಭಟ್
vveditoped@gmail.com

ಹವ್ಯಾಸಿ ರಂಗಸ್ಥಳದ ಸವಾಲುಗಳು ಮತ್ತು ಪರಿಹಾರ

ಇತ್ತೀಚೆಗೆ ವಿವಿಧ ಧಾರ್ಮಿಕ, ಸಾಂಸ್ಕೃತಿಕ , ಸಾಮಾಜಿಕ ಕಾರ್ಯಕ್ರಮಗಳ ಜೊತೆಗೆ ಯಕ್ಷಗಾನಕ್ಕೊಂದು ಸ್ಥಾನ ಕಂಡುಬರುತ್ತಿದೆ. ಬೇಸಿಗೆಯಲ್ಲಿ ಮೇಳಗಳು ಪ್ರವಾಸದಲ್ಲಿರುವುದರಿಂದ, ಅನೇಕ ಹವ್ಯಾಸಿಗಳ ಪ್ರದರ್ಶನಗಳು ರಾಜ್ಯದ ವಿವಿಧೆಡೆಗಳಲ್ಲಿ, ಬೆಂಗಳೂರು ಮಹಾನಗರದಲ್ಲಿ ಆಗುತ್ತಲೇ ಇರುತ್ತವೆ. ವಿವಿಧ ಭಾಗಗಳಲ್ಲಿ, ಸ್ಥಳೀಯ ಯಕ್ಷ ಗುರುಗಳು ಕಲಾವಿದರನ್ನು ತಯಾರಿ ಮಾಡಿ, ಪ್ರದರ್ಶನಕ್ಕೆ ಅಣಿ ಗೊಳಿಸುತ್ತಿರುವುದು ಯಕ್ಷಗಾನ ವಿಸ್ತಾರದ ದೃಷ್ಟಿಯಿಂದ ಒಳ್ಳೆಯದೇ ಹೌದು. ಆದರೆ, ಪ್ರದರ್ಶನಗಳ ಗುಣಮಟ್ಟ? ಅದು ಚರ್ಚಾರ್ಹ ವಿಷಯ. ಇರಲಿ. ಈಗ ಹೇಳ ಹೊರಟಿರುವುದು ಈ ರೀತಿಯ ಹವ್ಯಾಸಿಗಳ ಪ್ರದರ್ಶನಗಳಲ್ಲಿ ಕಂಡು ಬರುತ್ತಿರುವ ಸವಾಲುಗಳ ಕುರಿತು. ತಾವು ಕಲಿತ ಕಲೆಯನ್ನು ಉತ್ತಮ ಮಟ್ಟದಲ್ಲಿ ಪ್ರದರ್ಶನ ಮಾಡಬೇಕೆಂಬ ಕನಸು ಎಲ್ಲರದೂ. ಕಲಾವಿದರೇನೋ ಒಳ್ಳೆಯ ಪ್ರಯತ್ನವನ್ನು ಮಾಡುತ್ತಾರೆ ಆದರೆ ಕೆಲವೊಷ್ಟು ಬಾಹ್ಯ ಸವಾಲುಗಳು ಕಲಾ ಪ್ರದರ್ಶನ ಕಡಿಮೆ ಗುಣಮಟ್ಟದ್ದಾಗಿ ಕಾಣಿಸಿಕೊಳ್ಳಲು ಕಾರಣ ಆಗುತ್ತಿವೆ. ಒಬ್ಬ ಪ್ರೇಕ್ಷಕನ ದೃಷ್ಟಿಕೋನದಿಂದ ಅವುಗಳಲ್ಲಿ ಕೆಲವೊಂದನ್ನ ನೋಡುವ, ಪರಾಮರ್ಶಿಸುವ , ಪರಿಹಾರ ಕಂಡುಕೊಳ್ಳುವ ಇರಾದೆ ಈ ಲೇಖನದ್ದು.

ಸಾಮಾನ್ಯವಾಗಿ ಇಂಥ ಪ್ರದರ್ಶನಗಳು ಬೇರೆ ಯಾವುದೊ ಕಾರ್ಯಕ್ರಮದ ಸಂದರ್ಭದಲ್ಲಿ ಆಗುತ್ತಿವೆ. ಅದು ಸಂಸ್ಥೆಯ ವಾರ್ಷಿಕೋತ್ಸವವೋ , ದೇವಸ್ಥಾನದ ಧಾರ್ಮಿಕ ಕಾರ್ಯಕ್ರಮವೋ ಮುಂತಾಗಿ. ಸಂಗೀತ, ನಾಟ್ಯಗಳ ನಡುವೆ ಒಂದೊಂದು ಯಕ್ಷಗಾನವನ್ನೂ ಆಡಿಸುತ್ತಾರೆ. ಹಾಗಾಗಿ, ಮೊಟ್ಟ ಮೊದಲ ಸವಾಲು ಸರಿಯಾದ ರಂಗಸ್ಥಳ. ಅದ್ಯಾವುದೋ ರಸ್ತೆಯ ಮಧ್ಯದಲ್ಲಿ ಒಂದು ಪೆಂಡಾಲ್. ಅದರ ಮೇಲೆ ಯಕ್ಷಗಾನ ಮಾಡುವ ಸ್ಥಿತಿ ಕಲಾವಿದರದ್ದು. ಬಹುತೇಕ ಇಂಥ ಕಾರ್ಯಕ್ರಮಗಳ ರಂಗಸ್ಥಳದ ಚೌಕಟ್ಟು 10 ಚದರ ಅಡಿ ಇದ್ದರೆ ಹೆಚ್ಚು ಅನ್ನುವ ಪರಿಸ್ಥಿತಿ. ಜೊತೆಗೆ ಮೇಲೆ ಕಿರೀಟಕ್ಕೋ, ಕೇದಗೆ ಮುಂದಲೆಗೊ ತಗಲುವಷ್ಟು ಕಡಿಮೆ ಎತ್ತರದ ಪೆಂಡಾಲಿನ ಚಾವಣಿ. ಯಾವುದೇ ಪಾತ್ರ ಪೋಷಣೆ ಪೂರ್ಣ ಆಗುವುದಕ್ಕೆ ನೃತ್ಯ ಬೇಕಲ್ಲವೇ. ಈ ರೀತಿಯ ಚಿಕ್ಕ ರಂಗಸ್ಥಳದಲ್ಲಿ ಆ ಕಲಾವಿದ ತನ್ನ ಪೂರ್ಣ ಪ್ರಮಾಣದ ನೃತ್ಯವನ್ನು ಹೇಗೆ ಮಾಡಿಯಾನು? ಕುಣಿಯಲು ಸ್ಥಳ ಇಲ್ಲ, ಹಾರಲು ಎತ್ತರ ಇಲ್ಲ. ಅದೇನು ನೃತ್ಯ ಮಾಡಲು ಸಾಧ್ಯ? ಜೊತೆಗೆ, ಆ ರಂಗಸ್ಥಳವೋ, ಅದರ ಸುತ್ತ ಮುತ್ತಲಿನ ವಾತಾವರಣವೋ, ಕಲಾವಿದರಿಗೆ ಅದೆಷ್ಟು ಕಿರಿಕಿರಿ ಉಂಟುಮಾಡಬಹುದು! ಆ ಪರಿಸರದಲ್ಲಿ ಅದೆಷ್ಟು ಒಳ್ಳೆಯ ಪ್ರದರ್ಶನ ಕೊಟ್ಟಾರು!.

ಯಕ್ಷಗಾನದ ಮುಖ್ಯವಾದ ಒಂದು ಅಂಗ ಯಕ್ಷಗಾನದ ವೇಷ ಭೂಷಣಗಳು. ಅವುಗಳ ವೈಭವ ಹೆಚ್ಚಲು ಬೆಳಕಿನ ಪರಿಣಾಮ ಬಹಳ ಮುಖ್ಯ. ಮುಖವರ್ಣಿಕೆಗೆ ಬಳಸುವ ಬಣ್ಣಗಳೂ, ಅವುಗಳ ಚಿತ್ತಾರ ರಂಗಸ್ಥಳದ ಬೆಳಕಿನ ವ್ಯವಸ್ಥೆಗೆ ಹೊಂದಿಕೊಂಡಿದ್ದರೆ ಚೆನ್ನ.

ಆದರೆ, ಈ ರೀತಿಯ ಪ್ರದರ್ಶನಗಳ ರಂಗಸ್ಥಳಗಳಲ್ಲಿ ಬೆಳಕಿನ ತೀರಾ ಕೊರತೆ ಕಂಡು ಬರುತ್ತದೆ. ಪಾತ್ರಗಳ ಮುಖ ಭಾವವೋ, ಅಭಿನಯವೋ, ವೇಷ ವೈಭವವೋ, ಬೆಳಕಿನ ಕೊರತೆಯಿಂದ ಚೆನ್ನಾಗಿ ಕಾಣುವುದೇ ಇಲ್ಲ, ಮತ್ತದೇ ಸಮಸ್ಯೆ. ವೇಷಧಾರಿ ಅದೆಷ್ಟೇ ಪ್ರಯತ್ನ ಪಟ್ಟರೂ ನಿಜವಾದ ಅನುಭವವನ್ನು ಪ್ರೇಕ್ಷಕನಿಗೆ ಕೊಡುವುದು ಸಾಧ್ಯ ಆಗುವುದೇ ಇಲ್ಲ.

ಮುಂದಿನದು ವಾಚಿಕ ವೈಭವಕ್ಕೆ ಸವಾಲೊಡ್ಡುವ ಮೈಕ್ ವ್ಯವಸ್ಥೆ. ಸಾಧಾರಣ ಸಂಗೀತಕ್ಕೋ, ನೃತ್ಯಕ್ಕೋ ಸಾಕಾಗುವ ಮೈಕ್ ವ್ಯವಸ್ಥೆ ಯಕ್ಷಗಾನಕ್ಕೆ ಸಾಕಾಗುವುದಿಲ್ಲ. ಒಂದು ಪರಿಪೂರ್ಣ ಕಲೆಯಾದ ಯಕ್ಷಗಾನದಲ್ಲಿ ಹಾಡುಗಾರಿಕೆ, ಪಕ್ಕ ವಾದ್ಯಗಳೂ, ಮಾತೂ ಅಷ್ಟೇ ಮುಖ್ಯ. ಇವೆಲ್ಲವೂ ಪ್ರೇಕ್ಷಕನ ಕಿವಿಗಳಿಗೆ ತಲುಪಿದಾಗ ಮಾತ್ರ ಸಂಪೂರ್ಣ ಅನುಭೂತಿ. ಆದರೆ ಮೈಕ್ ವ್ಯವಸ್ಥೆ ಸರಿ ಇಲ್ಲದಿರುವುದು ಕೂಡಾ, ಒಟ್ಟಂದದಲ್ಲಿ ಪ್ರದರ್ಶನ ಚೆನ್ನಾಗಿ ಆಗದಿರುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ.

ಹಾಗಾದರೆ ನಾವು ಏನು ಮಾಡಬಹುದು!? ಕೆಲವೊಂದಿಷ್ಟನ್ನ ಚರ್ಚಿಸೋಣ. ಈ ಚರ್ಚೆಯ ಉದ್ದೇಶ ಪ್ರದರ್ಶನಗಳು ಚೆನ್ನಾಗಿ ಆಗಬೇಕು. ಬರುವ ಹೊಸ ಪ್ರೇಕ್ಷಕ ಯಕ್ಷಗಾನದ ಕಾಯಂ ಪ್ರೇಕ್ಷಕನಾಗಿ ಹೋಗಬೇಕು. ಮೊದಲ ಸಲ ನೋಡಲು ಬಂದಾಗಲೇ ಅದು ನೋಡಲು, ಕೇಳಲು, ಅನುಭವಿಸಲು ಸಂತೋಷ ಆಗಬೇಕು. ಆಗ ಮಾತ್ರ ಆ ಹೊಸ ಪ್ರೇಕ್ಷಕ ಕಾಯಂ ಪ್ರೇಕ್ಷಕ ಆಗುವುದಲ್ಲವೇ!. ಹಾಗಾಗಿ, ಎಲ್ಲಾ ಈ ಹವ್ಯಾಸಿ ಕಲಾವಿದರ ಒಂದು ಸಂಘಟನೆ ಆದರೆ ಚೆನ್ನ. ಆ ಸಂಘಟನೆಯ ಮೂಲಕ ಪ್ರದರ್ಶನ ಸಂಘಟಕರಿಗೆ ಒಂದು ಮಾರ್ಗದರ್ಶಿ ಕೈ ಪಿಡಿಯನ್ನು ಮಾಡಿದರೆ ಹೇಗೆ? ರಂಗಸ್ಥಳದ ಆಯ , ಆಕಾರ, ಬೇಕಾದ ವ್ಯವಸ್ಥೆಗಳು, ಬೆಳಕು ಯಾವ ರೀತಿ ಇರಬೇಕು, ಎಷ್ಟಿರಬೇಕು, ಮೈಕ್ ಎಲ್ಲೆಲ್ಲಿ, ಹ್ಯಾಗೆ, ಚೌಕಿ ಮನೆಯ ವ್ಯವಸ್ಥೆ ಮುಂತಾದ ವಿವರಣೆಗಳನ್ನು ಒಳಗೊಂಡ ಒಂದು ಚಿಕ್ಕ ಪುಸ್ತಕದ ರೂಪದಲ್ಲಿ ಮಾಡಿದರೆ ಹೊಸ ಸಂಘಟಕರಿಗೆ ಸಹಾಯ ಆದೀತು. ಸಂಘಟಕ ಕಲಾ ತಂಡವನ್ನು ಸಂಪರ್ಕಿಸಿ, ಪ್ರದರ್ಶನವನ್ನು ನಿಗದಿ ಮಾಡುವಾಗ, ಈ ಕೈಪಿಡಿ ಖಂಡಿತಾ ಸಹಾಯ ಮಾಡುತ್ತದೆ. ಯಾಕೆಂದರೆ, ಬಹುತೇಕ ಯಕ್ಷಗಾನೇತರ ಸಂಘಟಕರಿಗೆ ಮಾಹಿತಿಯ ಕೊರತೆ ಇದ್ದಿರಬಹುದು. ನೂರು ಪ್ರತಿಶತ ಅಲ್ಲದೇ ಇದ್ದರೂ ಮೂಲಭೂತ ಅವಶ್ಯಕತೆಗಳ ಪೂರೈಕೆ ಆದೀತು. ಆಟವನ್ನು ಒಪ್ಪಿಕೊಂಡ ಮುಖ್ಯ ಕಲಾವಿದ ಅಥವಾ ತಂಡದ ನಾಯಕ, ಆಟ ಆಗುವ ಹಿಂದಿನ ದಿನ ಸ್ಥಳ ವೀಕ್ಷಣೆ ಮಾಡಿ, ಬೇಕಾದ ಸೂಕ್ತ ಸಲಹೆ, ಸೂಚನೆಗಳನ್ನು ಕೊಡಬಹುದು. ಸ್ಥಳದಲ್ಲಿನ ಕುಂದು ಕೊರತೆಗಳನ್ನು ಹಿಂದಿನ ದಿನವೇ ಸಂಘಟಕರಿಗೆ ತಿಳಿಸಿದ್ದಲ್ಲಿ ಅವರೂ ಕ್ರಮ ಕೈಗೊಂಡಾರು. ಒಟ್ಟಾರೆಯಾಗಿ, ನಮ್ಮ ಯಕ್ಷಗಾನ ಪ್ರದರ್ಶನ ಬಾಹ್ಯ ಕೊರತೆಗಳಿಂದ ಪೇಲವ ಆಗುವುದು ಕಲೆಯ ದೃಷ್ಟಿಯಿಂದ, ಪ್ರೇಕ್ಷಕನ ದೃಷ್ಟಿಯಿಂದ ಒಳ್ಳೆಯದಲ್ಲ.

ಚೌಕಿ ಮನೆ, ಶೌಚಾಲಯ, ಆಹಾರ, ನೀರು ಮುಂತಾದ ಅದೆಷ್ಟೋ ಸವಾಲುಗಳು ಇವೆ. ಇವೆಲ್ಲವೂ ಪ್ರದರ್ಶನದ ಗುಣಮಟ್ಟದ ಮೇಲೆ ಪರಿಣಾಮ ಬೀರುವಂಥಹುದೇ ಆಗಿವೆ. ಇವೆಲ್ಲವನ್ನೂ ಒಬ್ಬ ಕಲಾವಿದ ಹೇಳಿದರೆ, ಕುಣಿಯಲು ಬಾರದವ ವ್ಯವಸ್ಥೆ ಸರಿ ಇಲ್ಲ ಎಂದ ಅನ್ನುವ ಕುಹಕಗಳು ಕೇಳಿಯಾವು. ಆದರೆ ಒಬ್ಬ ಕಲಾವಿದನ ಪ್ರದರ್ಶನ ಚೆನ್ನಾಗಿ ಆಗಬೇಕೆಂದರೆ ಇವೆಲ್ಲವೂ ಗಂಭೀರ ಪರಿಣಾಮ ಬೀರಿಯೇ ಬೀರುತ್ತವೆ. ಹಾಗಾಗಿ ಯಕ್ಷಗಾನವನ್ನು ಪ್ರೀತಿಸುವ , ಆರಾಧಿಸುವ ಪ್ರೇಕ್ಷಕ ಈ ಸಮಸ್ಯೆಗಳಿಗೆ ಪರಿಹಾರವನ್ನು ಬಯಸುತ್ತಾನೆ. ನಮ್ಮ ಪ್ರೀತಿಯ ಯಕ್ಷಗಾನ ಪ್ರದರ್ಶನ ಒಟ್ಟೊ ಒಂಥರಾ ಆಗಬಾರದು. ಹೇಗೆ ಆಗಬೇಕೋ ಹಾಗೆಯೇ ಆಗಿ ವೈಭವೋಪೇತವಾಗಿ ಆಗಬೇಕು. ಒಮ್ಮೆ ಬಂದ ಪ್ರೇಕ್ಷಕ ಎಲ್ಲೇ ಪ್ರದರ್ಶನ ಆದರೂ ಹುಡುಕಿಕೊಂಡು ಹೋಗಿ ಆಟ ನೋಡುವಂತೆ ಆಗಬೇಕು. ಹಾಗೆ ಆಗಬೇಕೆಂದರೆ ಮೇಲಿನ ವ್ಯವಸ್ಥೆಗಳೂ ಸರಿಯಾಗಿ, ಯಕ್ಷಗಾನ ವಿಜೃಂಭಿಸಬೇಕು ಎಂಬುದು ಆಶಯ.

4 ಲಕ್ಷದಿಂದಲೇ ಟ್ಯಾಕ್ಸ್ ಸ್ಲ್ಯಾಬ್ ಇರುವುದೇತಕ್ಕೆ?!

ಮನಿ ಮೈಂಡೆಡ್
ಕೇಶವ ಪ್ರಸಾದ್ ಬಿ.
vveditoped@gmail.com

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಕಳೆದ ಕೆಲವು ವರ್ಷಗಳಿಂದೀಚೆಗೆ ಜಾಲ ತಾಣಗಳಲ್ಲಿ ವ್ಯಾಪಕವಾಗಿ ಟೀಕಿಸಲಾಗುತ್ತಿತ್ತು. ಇತ್ತೀಚೆಗೆ ಬಿಗ್ ಬಾಸ್ ಅಭ್ಯರ್ಥಿ 50 ಲಕ್ಷ ರುಪಾಯಿ ಬಹುಮಾನವನ್ನು ಗಳಿಸಿದಾಗ, ಅದರಲ್ಲಿ 15 ಲಕ್ಷ ರುಪಾಯಿ ತೆರಿಗೆ ಕಡಿತವಾಗುವುದರಿಂದ ನಿರ್ಮಲಾ ಸೀತಾರಾಮನ್ ಅವರೇ ಬಹುಮಾನ ಗೆದ್ದ ಎರಡನೇ ಅಭ್ಯರ್ಥಿ ಎಂದು ಟೀಕಿಸಲಾಗಿತ್ತು. ಆದರೆ 2025–26ರ ಕೇಂದ್ರ ಬಜೆಟ್ ಮಂಡನೆಯಾದ ಬಳಿಕ ರಾತ್ರೋರಾತ್ರಿ ಚಿತ್ರಣ ಬದಲಾಗಿದೆ. ನಿರ್ಮಲಾ ಸೀತಾರಾಮನ್ ಅವರನ್ನು ಸಂಪತ್ತಿನ ಅಧಿದೇವತೆ ಲಕ್ಷ್ಮೀ ದೇವಿಗೆ ಹೋಲಿಸಲಾಗಿದೆ. ಮಧ್ಯಮ ವರ್ಗದ ಜನತೆಗೆ ವಾರ್ಷಿಕ 12 ಲಕ್ಷ ರುಪಾಯಿ ತನಕ ಆದಾಯಕ್ಕೆ ತೆರಿಗೆ ಇರುವುದಿಲ್ಲ ಎಂಬ ಘೋಷಣೆ ಸಂಚಲನ ಮೂಡಿಸಿದೆ. ವೇತನದಾರರಿಗೆ 12.75 ಲಕ್ಷ ರುಪಾಯಿ ತನಕ ಆದಾಯ ತೆರಿಗೆ ಮುಕ್ತವಾಗಿದೆ.

ಇದೇ ಮೊದಲ ಬಾರಿಗೆ ದೇಶದಲ್ಲಿ ಆದಾಯ ತೆರಿಗೆ ಪದ್ಧತಿಯಲ್ಲಿ 7 ಲಕ್ಷ ರುಪಾಯಿಗಳಿಂದ 12 ಲಕ್ಷ ರುಪಾಯಿ ತನಕ ರಿಬೇಟ್ ಮಿತಿಯನ್ನು ಹೈಜಂಪ್ ಮಾಡಿಸಲಾಗಿದೆ. ಆದ್ದರಿಂದ ಎಲ್ಲೆಲ್ಲೂ ಇದರದ್ದೇ ಸುದ್ದಿ. ಆದರೆ ಸಹಜವಾಗಿ ಹಲವಾರು ಪ್ರಶ್ನೆಗಳೂ, ಗೊಂದಲಗಳೂ ಇವೆ. ಅವುಗಳನ್ನು ಒಂದೊಂದಾಗಿ ಅರ್ಥವಾಗುವಂತೆ ಡಿಕೋಡ್ ಮಾಡೋಣ.

ಮೊದಲನೆಯದಾಗಿ, ಹೊಸ ತೆರಿಗೆ ಪದ್ಧತಿಯಲ್ಲಿ 12 ಲಕ್ಷ ರುಪಾಯಿ ತನಕ ಆದಾಯ ತೆರಿಗೆ ಇಲ್ಲ ಎಂದ ಮೇಲೆ, 4 ಲಕ್ಷ ರುಪಾಯಿಗಿಂತ ಹೆಚ್ಚಿನ ಆದಾಯಕ್ಕೆ ತೆರಿಗೆಯ ಸ್ಲ್ಯಾಬ್‌ಗಳು ಅನ್ವಯವಾಗುವುದೇಕೆ? 4 ಲಕ್ಷದಿಂದ 8 ಲಕ್ಷದ ತನಕ ಶೇಕಡಾ 5, 8 ಲಕ್ಷದಿಂದ 12 ಲಕ್ಷದ ತನಕ ಶೇಕಡಾ 10 ತನಕ ತೆರಿಗೆಯ ಸ್ಲ್ಯಾಬ್ಗಳು ಇರುವುದೇತಕ್ಕೆ? ಎಂಬ ಪ್ರಶ್ನೆ ಕೆಲವರದ್ದು. (ಹೊಸ ತೆರಿಗೆ ಪದ್ಧತಿಯಲ್ಲಿ 16 ಲಕ್ಷದಿಂದ 20 ಲಕ್ಷದ ತನಕ ಶೇಕಡಾ 20 ಮತ್ತು 20 ಲಕ್ಷದಿಂದ 24 ಲಕ್ಷದ ತನಕ ಶೇಕಡಾ 25 ಹಾಗೂ 24 ಲಕ್ಷದ ಮೇಲ್ಪಟ್ಟು ಆದಾಯಕ್ಕೆ ಶೇಕಡಾ 30 ತೆರಿಗೆ ಇದೆ. ಎಲ್ಲರ ಆದಾಯ ಒಂದೇ ರೀತಿ ಇರುವುದಿಲ್ಲ. ಕೆಲವರಿಗೆ ವರ್ಷಕ್ಕೆ 8 ಲಕ್ಷ ಇರಬಹುದು, ಇನ್ನು ಕೆಲವರಿಗೆ 10, 12, 15, 20 ಹೀಗೆ ಬೇರೆ ಬೇರೆ ಸ್ತರದಲ್ಲಿ ಇರಬಹುದು. ಆದ್ದರಿಂದಲೇ 4 ಲಕ್ಷದಿಂದ 24 ಲಕ್ಷದ ತನಕದ ಆದಾಯ ಇರುವವರಿಗೆ ತೆರಿಗೆಯ ಶ್ರೇಣಿಗಳೂ ಭಿನ್ನವಾಗಿದೆ. ಎಲ್ಲರಿಗೂ ಒಂದೇ ರೀತಿಯ ತೆರಿಗೆ ಹಾಕಿದರೆ ನ್ಯಾಯಸಮ್ಮತವಲ್ಲ.

ಎರಡನೆಯದಾಗಿ ಹೊಸ ತೆರಿಗೆ ಪದ್ಧತಿಯಲ್ಲಿ ವರ್ಷಕ್ಕೆ 12 ಲಕ್ಷ ರುಪಾಯಿಗಿಂತ ಕಡಿಮೆ ಆದಾಯ ಇರುವವರಿಗೆ, ಟ್ಯಾಕ್ಸ್ ರಿಬೇಟ್ ಅನ್ನು ಘೋಷಿಸಲಾಗಿದೆ. ಈ ಹಿಂದೆ 7 ಲಕ್ಷ ರುಪಾಯಿ ತನಕದ ಆದಾಯಕ್ಕೆ 25,000 ರುಪಾಯಿಗಳ ರಿಬೇಟ್ ಇದ್ದುದರಿಂದ ಅಷ್ಟು ಆದಾಯಕ್ಕೆ ತೆರಿಗೆ ಕಟ್ಟಬೇಕಿರುತ್ತಿರಲಿಲ್ಲ. ಈಗ ರಿಬೇಟ್ಪಡೆಯಲು ಆದಾಯ ಮಿತಿಯನ್ನು 12 ಲಕ್ಷಕ್ಕೆ ವಿಸ್ತರಿಸಿರುವುದರಿಂದ, ಇದಕ್ಕೆ ಅನ್ವಯವಾಗುವ 60,000 ರುಪಾಯಿಗಳ ಟ್ಯಾಕ್ಸ್ ಅನ್ನು ರಿಬೇಟ್ ಮಾಡಲಾಗಿದೆ. ಹೀಗಾಗಿ ತೆರಿಗೆ ಮುಕ್ತವಾಗುತ್ತದೆ. ವೇತನ ಪಡೆಯುವವರಿಗೆ 75 ಸಾವಿರ ರುಪಾಯಿಗಳ ಸ್ಟ್ಯಾಂಡರ್ಡ್ ಡಿಡಕ್ಷನ್ ಕೂಡ ಸಿಗುವುದರಿಂದ 12 ಲಕ್ಷದ 75 ಸಾವಿರ ರುಪಾಯಿ ತನಕ ಆದಾಯ ತೆರಿಗೆ ಮುಕ್ತವಾಗುತ್ತದೆ. ಹಾಗಾದರೆ ವೇತನ ಪಡೆಯುವವರನ್ನು ಹೊರತುಪಡಿಸಿ, ಉಳಿದವರಿಗೆ 12 ಲಕ್ಷ ರುಪಾಯಿ ದಾಟಿದೊಡನೆ 60,000 ರುಪಾಯಿಗಳ ರಿಬೇಟ್ ರದ್ದಾಗುವುದರಿಂದ ಏಕಾಏಕಿ ಭಾರಿ ತೆರಿಗೆಯ ಹೊರೆ ಬೀಳುತ್ತದೆಯೇ ಎಂಬ ಪ್ರಶ್ನೆಯೂ ಸ್ವಾಭಾವಿಕ.

ಉದಾಹರಣೆಗೆ ಒಬ್ಬ ವ್ಯಕ್ತಿಯ ವಾರ್ಷಿಕ ಆದಾಯ 12 ಲಕ್ಷದ ಒಂದು ರುಪಾಯಿ ಇದೆ ಎಂದು ಇಟ್ಟುಕೊಳ್ಳಿ. ಆಗ ತೆರಿಗೆಯ ರಿಬೇಟ್ ರದ್ದಾಗುವುದರಿಂದ ಆತ ಬರೋಬ್ಬರಿ 60,000 ರುಪಾಯಿ ಟ್ಯಾಕ್ಸ್ ಕಟ್ಟಬೇಕೇ? ಎಂಬ ಪ್ರಶ್ನೆ ಬರಬಹುದು. ಆದರೆ ಅದು ಹಾಗಾಗುವುದಿಲ್ಲ! ಅಂಥ ವ್ಯಕ್ತಿ ಕೇವಲ 1 ರುಪಾಯಿ ಟ್ಯಾಕ್ಸ್ ಕಟ್ಟಿದರೆ ಸಾಕು. ಇದು ಹೇಗೆ ಎನ್ನುತ್ತೀರಾ? ಆದಾಯ ತೆರಿಗೆ ಕಾಯಿದೆಯ ಸೆಕ್ಷನ್ 115 BAC ಪ್ರಕಾರ ಮಾರ್ಜಿನಲ್ ರಿಲೀಫ್ ನೀಡಲಾಗುತ್ತದೆ. ಯಾರ ಆದಾಯವು 12 ಲಕ್ಷ ರುಪಾಯಿಯಿಂದ 12 ಲಕ್ಷದ 75 ಸಾವಿರ ರುಪಾಯಿ ತನಕ ಇದೆಯೋ, ಅವರಿಗೆ ಅವರಿಗೆ 75,000 ರುಪಾಯಿ ತನಕ ಹೆಚ್ಚುವರಿ ಆದಾಯಕ್ಕೆ ಈ ಮಾರ್ಜಿನಲ್ ರಿಲೀಫ್ ಸಿಗುತ್ತದೆ. 12 ಲಕ್ಷದ 75 ಸಾವಿರ ರುಪಾಯಿಗಳ ಮಾರ್ಜಿನ್ ಮಿತಿ ದಾಟಿದ ಬಳಿಕ ಎಂದಿನಂತೆ ಟ್ಯಾಕ್ಸ್ ಸ್ಲ್ಯಾಬ್ ಪ್ರಕಾರ ತೆರಿಗೆ ಅನ್ವಯವಾಗುತ್ತದೆ.

ಮಾರ್ಜಿನಲ್ ರಿಲೀಫ್ ಇರುವುದರಿಂದ ತೆರಿಗೆದಾರರಿಗೆ ಅನ್ಯಾಯವಾಗುವುದಿಲ್ಲ. ಒಬ್ಬ ವ್ಯಕ್ತಿಗೆ 12 ಲಕ್ಷ ರುಪಾಯಿ ಆದಾಯ ಇರುವುದರಿಂದ ತೆರಿಗೆಯೇ ಇರುವುದಿಲ್ಲ, ಮತ್ತೊಬ್ಬರಿಗೆ 12 ಲಕ್ಷದ 1 ರುಪಾಯಿ ಆದಾಯ ಇರುವುದರಿಂದ 60,000 ರುಪಾಯಿಗಳ ಟ್ಯಾಕ್ಸ್ ಕಟ್ಟಿ ಎಂಬುದನ್ನು ಯಾರೂ ಒಪ್ಪಿಕೊಳ್ಳಲಾಗದು. ಹೀಗಾಗಿಯೇ 12 ಲಕ್ಷದ ಬಳಿಕ ಹೆಚ್ಚುವರಿ 75,000 ರುಪಾಯಿ ತನಕ ಮಾರ್ಜಿನಲ್ ರಿಲೀಫ್ ಸಿಗುತ್ತದೆ.

ಈಗ ಮತ್ತೊಂದು ಉದಾಹರಣೆಯನ್ನು ನೋಡೋಣ. ನಿಮ್ಮ ಆದಾಯ 12 ಲಕ್ಷದ 10,000 ರುಪಾಯಿ ಇದೆ ಎಂದಿಟ್ಟುಕೊಳ್ಳಿ. ಮಾರ್ಜಿನಲ್ ರಿಲೀಫ್ ಇರದಿದ್ದರೆ ನೀವು 61,500 ರುಪಾಯಿ ಟ್ಯಾಕ್ಸ್ ಕಟ್ಟಬೇಕಾಗುತ್ತದೆ. ಆದರೆ ರಿಲೀಫ್ ಇರುವುದರಿಂದ ಕೇವಲ 10,000 ರುಪಾಯಿ ಟ್ಯಾಕ್ಸ್ ಕಟ್ಟಿದರೆ ಸಾಕು.

ಹೀಗಾಗಿ ಒಂದು ಅಂಶವನ್ನು ಗಮನಿಸಬೇಕು. ಯಾವಾಗ ತೆರಿಗೆ ಪದ್ಧತಿಯಲ್ಲಿ ಗಣನೀಯ ಬದಲಾವಣೆ ಆಗುತ್ತದೆಯೋ, ಆವಾಗ ಮಾರ್ಜಿನಲ್ ರಿಲೀಫ್ ಅನ್ವಯವಾಗುತ್ತದೆ. ಇದರ ಉದ್ದೇಶ ತೆರಿಗೆಯನ್ನು ನ್ಯಾಯಬದ್ಧಗೊಳಿಸುವುದು. ಇಲ್ಲಿ ಹೆಚ್ಚುವರಿ ಆದಾಯಕ್ಕೆ ಮಾತ್ರ ತೆರಿಗೆ ಅನ್ವಯವಾಗುತ್ತದೆ. ಇಡೀ ಮೊತ್ತಕ್ಕೆ ಅಲ್ಲ ಎಂಬುದನ್ನು ಮರೆಯಬಾರದು. ಮಾರ್ಜಿನಲ್ ರಿಲೀಫ್ ಇದ್ದರೂ, ಆದಾಯವು 12 ಲಕ್ಷ ರುಪಾಯಿ ದಾಟಿದ ಬಳಿಕ ಹೆಚ್ಚು ದುಡ್ಡು ತೆರಿಗೆ ರೂಪದಲ್ಲಿ ಹೊರ ಹೋಗುತ್ತದೆ ಎಂದು ವಾದಿಸುವವರೂ ಇದ್ದಾರೆ. ಅದು ನಿಜವೇ? ಅದನ್ನೂ ನೋಡೋಣ.

ನೋಡಿ, ನಿಮ್ಮ ವಾರ್ಷಿಕ ಆದಾಯವು 12 ಲಕ್ಷದ ಒಳಗಿದ್ದರೆ, ಈಗಾಗಲೇ ತಿಳಿಸಿರುವಂತೆ ಟ್ಯಾಕ್ಸ್ ಇರುವುದಿಲ್ಲ, 12 ಲಕ್ಷದ 10 ಸಾವಿರ ರುಪಾಯಿ ಇದ್ದರೆ, ಮಾರ್ಜಿನಲ್ ರಿಲೀಫ್ ಇರದಿದ್ದರೆ 61,500 ರುಪಾಯಿ ತೆರಿಗೆ ಕಟ್ಟಬೇಕಾಗುತ್ತದೆ. ರಿಲೀಫ್ ಇರುವುದರಿಂದ 10,000 ರುಪಾಯಿ ಕಟ್ಟಿದರೆ ಸಾಕಾಗುತ್ತದೆ. 12 ಲಕ್ಷದ 50 ಸಾವಿರ ರುಪಾಯಿ ಆದಾಯವಿದ್ದಾಗ, ಮಾರ್ಜಿನಲ್ ರಿಲೀಫ್ ಇರದಿದ್ದರೆ 67,500 ರುಪಾಯಿ ತೆರಿಗೆ ಕಟ್ಟಬೇಕಾಗುತ್ತದೆ. ಮಾರ್ಜಿನಲ್ ರಿಲೀಫ್ ಅಡಿಯಲ್ಲಿ 50,000 ರುಪಾಯಿ ತೆರಿಗೆ ಕಟ್ಟಬೇಕಾಗುತ್ತದೆ. ಆದರೆ 12 ಲಕ್ಷದ 70 ಸಾವಿರ ಆದಾಯ ಇದ್ದಾಗ ಮಾತ್ರ ಹೆಚ್ಚಿನ ವ್ಯತ್ಯಾಸವಾಗುವುದಿಲ್ಲ. ಆಗ ಮಾರ್ಜಿನಲ್ ರಿಲೀಫ್ ಇದ್ದರೂ, 70 ಸಾವಿರ ರುಪಾಯಿ ಟ್ಯಾಕ್ಸ್ ಕಟ್ಟಬೇಕಾಗುತ್ತದೆ. ಹೀಗಾಗಿ, ರಿಲೀಫ್ನಿಂದ ಪ್ರಯೋಜನ ಇರುವುದನ್ನೂ ಗಮನಿಸಬಹುದು.

ಈ ಸಲ ಬಜೆಟ್‌ನಲ್ಲಿ ಮಧ್ಯಮ ವರ್ಗದ ಜನತೆಗೆ 12 ಲಕ್ಷದ ತನಕ ಆದಾಯ ತೆರಿಗೆಯಿಂದ ಮುಕ್ತಿ ನೀಡಿರುವುದು ಗಮನಾರ್ಹ ಎನ್ನಿಸಿದೆ. ಅನೇಕ ಮಂದಿ ಇದನ್ನು ನಿರೀಕ್ಷಿಸಿರಲಿಲ್ಲ. ಹೀಗಿದ್ದರೂ, ಸದ್ಯದ ಜಾಗತಿಕ ಮಟ್ಟದ ರಾಜಕೀಯ ಮತ್ತು ಆರ್ಥಿಕತೆಯ ಅನಿಶ್ಚಿತತೆಯ ಸವಾಲುಗಳನ್ನು ಎದುರಿಸಲು ತೆರಿಗೆ ಕಡಿತ ಮತ್ತು ರಿಬೇಟ್ನ ಅಗತ್ಯ ಇದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಚೀನಾ, ಮೆಕ್ಸಿಕೊ ಮತ್ತು ಕೆನಡಾ ವಿರುದ್ಧ ಆಮದು ತೆರಿಗೆಯನ್ನು ಹೆಚ್ಚಿಸಿ ವಾಣಿಜ್ಯ ಸಮರ ಆರಂಭಿಸಿದ್ದಾರೆ. ಇದರ ಪರಿಣಾಮ ಅಮೆರಿಕವೇ ಏಕಾಂಗಿಯಾಗುತ್ತದೆಯೇ ಅಥವಾ ಜಾಗತಿಕ ಆರ್ಥಿಕತೆಗೆ ಹೊಡೆತವಾಗಲಿದೆಯೇ ಎಂದು ಚರ್ಚೆ ನಡೆಯುತ್ತಿದೆ. ಇದನ್ನೆಲ್ಲ ಟ್ರಂಪ್ ತಿಳಿಯದವರೇನಲ್ಲ. ಆದರೆ, ತೆರಿಗೆಯ ಅಸ್ತ್ರವನ್ನು ಬಳಸಿಕೊಂಡು ಹಲವಾರು ದೇಶಗಳ ಜತೆಗೆ ಚೌಕಾಸಿಗೆ ಅವರು ಇಳಿದಿದ್ದಾರೆ. ಹೀಗಾಗಿ ಭಾರತ ಕೂಡ ಜಾಗತಿಕ ಅನಿಶ್ಚಿತತೆಗೆ ಸಜ್ಜಾಗುವ ನಿಟ್ಟಿನಲ್ಲಿ ಬಜೆಟ್‌ನಲ್ಲಿ ಈ ಸಲ ಮಧ್ಯಮ ವರ್ಗದ ಜನತೆಯ ಕೈಯಲ್ಲಿ ತೆರಿಗೆ ಕಡಿತದ ಮೂಲಕ ದುಡ್ಡನ್ನು ಉಳಿಸಿದೆ. ಇದರಿಂದ ಸರಕಾರಕ್ಕೆ ಸದ್ಯಕ್ಕೆ ಒಂದು ಲಕ್ಷ ಕೋಟಿ ರುಪಾಯಿ ತೆರಿಗೆ ಕಡಿಮೆಯಾದರೂ, ಭವಿಷ್ಯದ ದಿನಗಳಲ್ಲಿ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚುವ ಮತ್ತು ಉತ್ಪಾದಕ ಚಟುವಟಿಕೆಗಳು ಸಕ್ರಿಯವಾಗುವ ನಿರೀಕ್ಷೆ ಇದೆ. ಇದರಿಂದಲೂ ಸರಕಾರಕ್ಕೆ ತೆರಿಗೆ ಆದಾಯ ಸಿಗಲಿದೆ.

ದೇಶದಲ್ಲಿ ತೆರಿಗೆ ಪದ್ಧತಿ ಸರಳವಾಗಬೇಕು ಎಂಬುದು ನಿಜವಾದರೂ, ಅದು ಅಷ್ಟು ಸುಲಭದ ಮಾತಲ್ಲ. ಇದು ಸಾಕಷ್ಟು ಸಮಯವನ್ನೂ ತೆಗೆದುಕೊಳ್ಳುತ್ತದೆ. ಸ್ವತಂತ್ರ ಭಾರತದ ಮಹತ್ವದ ಪರೋಕ್ಷ ತೆರಿಗೆ ಸುಧಾರಣೆ ಕ್ರಮವಾಗಿರುವ, ಜಿಎಸ್ಟಿ ಜಾರಿಯಾಗಲೂ ಬರೋಬ್ಬರಿ 20 ವರ್ಷ ಬೇಕಾಯಿತು. ಹಾಗಂತ ನೇರ ತೆರಿಗೆ ಪದ್ಧತಿಯಲ್ಲಿ ಸುಧಾರಣೆಯ ಅವಶ್ಯಕತೆಯೂ ತೀವ್ರವಾಗಿದೆ. ಏಕೆಂದರೆ ಆದಾಯ ತೆರಿಗೆ ಸಂಗ್ರಹದಲ್ಲಿ ಪ್ರತಿ ವರ್ಷ ಹೆಚ್ಚಳವಾಗುತ್ತಿದ್ದರೂ, 2024ರ ಏಪ್ರಿಲ್ ವೇಳೆ 43 ಲಕ್ಷ ಕೋಟಿ ರುಪಾಯಿ ಮೌಲ್ಯದ ತೆರಿಗೆ ವಸೂಲಾತಿ ಬಾಕಿ ಇದೆ ಎಂದು ಇಲಾಖೆ ತಿಳಿಸಿತ್ತು. ದೇಶದಲ್ಲಿ ಬಹುತೇಕ ಮಂದಿ ರೈತರು ಸಣ್ಣ ಮತ್ತು ಮಧ್ಯಮ ವರ್ಗದವರಾಗಿದ್ದರೂ, ಶ್ರೀಮಂತ ರೈತರ ವರ್ಗವೂ ಇದೆ. ಆದರೆ ಅವರಿಗೂ ಆದಾಯ ತೆರಿಗೆ ಇರುವುದಿಲ್ಲ. ಇದು ನ್ಯಾಯಸಮ್ಮತವೇ ಎಂಬ ಪ್ರಶ್ನೆ ಇದೆ. ಅನಿವಾಸಿ ಭಾರತೀಯರು NRI ಅಕೌಂಟ್‌ನಲ್ಲಿ ಕೋಟ್ಯಂತರ ರುಪಾಯಿ ದುಡ್ಡು ಠೇವಣಿ ಇಟ್ಟರೂ, ಅಸಲಿಗೂ, ಬಡ್ಡಿಗೂ ಅದಕ್ಕೆ ತೆರಿಗೆ ಇರುವುದಿಲ್ಲ. ಹೀಗೆ ಹಲವು ಆಯಾಮಗಳಲ್ಲಿ ಸುಧಾರಣೆಯಾಗಬೇಕಾಗುತ್ತದೆ.

ಅಚ್ಚುಕಟ್ಟು ಪ್ರದೇಶ
RNI : KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:22

ಸಮಾಚಾರ ಸಣ್ಣದಲ್ಲ

ವದಂತಿ: 8 ಮಂದಿ ವಿರುದ್ಧ ಪ್ರಕರಣ

ಪ್ರಯಾಗ್‌ರಾಜ್: ಉತ್ತರ ಪ್ರದೇಶದ ಪ್ರಯಾಗ್ ರಾಜ್‌ನಲ್ಲಿ ನಡೆದಿರುವ ಮಹಾಕುಂಭ ಮೇಳ ಕುರಿತು ಜಾಲತಾಣಗಳಲ್ಲಿ ಜನರನ್ನು ದಾರಿ ತಪ್ಪಿಸುವ ಮಾಹಿತಿಗಳನ್ನು ಹಂಚಿಕೊಂಡಿದ್ದ ಆರೋಪದಡಿ 8 ಜನರ ವಿರುದ್ಧ ಪ್ರಯಾಗ್‌ರಾಜ್ ಪೊಲೀಸರು ಮಂಗಳವಾರ ಎಫ್‌ಐಆರ್ ದಾಖಲಿಸಿದ್ದಾರೆ. ಉತ್ತರ ಪ್ರದೇಶ ರಾಜ್ಯ ಮತ್ತು ಸರಕಾರದ ಪ್ರತಿಷ್ಠೆಗೆ ಮಸಿ ಬಳಿಯುವ, ಜನರನ್ನು ಕೆರಳಿಸುವ ಉದ್ದೇಶದಿಂದ ಸುಳ್ಳು ಮಾಹಿತಿ ಹರಡುವ ಯತ್ನ ಇದಾಗಿದೆ. ಸಾಮಾಜಿಕ ಮಾಧ್ಯಮ ಖಾತೆ ಹೊಂದಿದ್ದ 8 ಮಂದಿ ವಿರುದ್ಧ ಕೊತ್ವಾಲಿ ಮಹಾಕುಂಭ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ ಎಂದು ಎಸ್‌ಎಸ್‌ಪಿ ರಾಜೇಶ್ ದ್ವಿವೇದಿ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಗೂಡ್ಸ್ ರೈಲುಗಳ ಡಿಕ್ಕಿ: ಇಬ್ಬರಿಗೆ ಗಾಯ

ಫತೇಪುರ: ಉತ್ತರ ಪ್ರದೇಶದ ಫತೇಪುರ ಜಿಲ್ಲೆಯ ಪಂಭಿಪುರ ಬಳಿ ಮಂಗಳವಾರ ಬೆಳಗ್ಗೆ ನಿಂತಿದ್ದ ಸರಕು ಸಾಗಣೆ ರೈಲಿಗೆ ಅದೇ ಹಳಿಯಲ್ಲಿ ಎದುರುಗಡೆಯಿಂದ ಸಾಗಿಬಂದ ಮತ್ತೊಂದು ಗೂಡ್ಸ್ ರೈಲು ನೇರ ಡಿಕ್ಕಿ ಹೊಡೆದಿದೆ. ಪರಿಣಾಮ ರೈಲಿನ ಗಾರ್ಡ್ ಇರುವ ಬೋಗಿ ಮತ್ತು ಎಂಜಿನ್ ಎರಡೂ ಹಳಿ ತಪ್ಪಿದ್ದು, ಭಾರತೀಯ ರೈಲ್ವೆಯ ಸಿಬ್ಬಂದಿಗಳಾದ ಅನುಜ್ ರಾಜ್ (28) ಮತ್ತು ಶಿವಶಂಕರ್ ಯಾದವ್(35) ಗಾಯಗೊಂಡಿದ್ದಾರೆ.

ದೆಹಲಿ: 10.67 ಕೋಟಿ ರು. ನಗದು ವಶ

ದೆಹಲಿ: ದೆಹಲಿ ವಿಧಾನಸಭಾ ಚುನಾವಣೆಗೆ ಅಧಿಸೂಚನೆ ಪ್ರಕಟವಾಗಿ ನೀತಿ ಸಂಹಿತೆ ಜಾರಿಗೊಂಡ ಬಳಿಕ ಚುನಾವಣಾ ಆಯೋಗದ ಅಧಿಕಾರಿಗಳು ಮತ್ತು ದೆಹಲಿ ಪೊಲೀಸರು ವಿವಿಧೆಡೆ ನಡೆಸಿದ ದಾಳಿಗಳಲ್ಲಿ ಒಟ್ಟು 10.67 ಕೋಟಿ ರು. ನಗದು ವಶವಾಗಿದೆ. 2020ರ ಚುನಾವಣೆಯಲ್ಲಿ 4.50 ಕೋಟಿ ರು. ಅಕ್ರಮ ಹಣ ವಶಪಡಿಸಿಕೊಳ್ಳಲಾಗಿತ್ತು. ಈ ಬಾರಿ ಅದು ಎರಡು ಪಟ್ಟಿಗೂ ಅಧಿಕವಾಗಿದೆ ಎಂದು ಚುನಾವಣೆ ನೋಡಲ್ ಅಧಿಕಾರಿಯೂ ಆಗಿರುವ ದೆಹಲಿ ವಿಶೇಷ ಪೊಲೀಸ್ ಆಯುಕ್ತ(ಅಪರಾಧ ವಿಭಾಗ) ದೇವೇಶ್ ಚಂದ್ರ ಶ್ರೀವಾಸ್ತವ ಸುದ್ದಿಸಂಸ್ಥೆಗೆ ಮಾಹಿತಿ ನೀಡಿದ್ದಾರೆ. ಈ ಬಾರಿಯ ಚುನಾವಣೆ ಸಂದರ್ಭ ಈವರೆಗೆ 1.30 ಲಕ್ಷ ಲೀಟರ್ ಮದ್ಯ ವಶಪಡಿಸಿಕೊಳ್ಳಲಾಗಿದೆ. 168 ಕೆಜಿ ಮಾದಕಪದಾರ್ಥ ವಶವಾಗಿದೆ ಎಂದಿದ್ದಾರೆ.

ಪುಟ್ಟನ ಬಿರಿಯಾನಿ ಆಸೆಗೆ ಸಚಿವೆ ಅಸ್ತು

ತಿರುವನಂತಪುರಂ: ಅಂಗನವಾಡಿಯಲ್ಲಿ ಮಧ್ಯಾಹ್ನ ಬಿಸಿಯೂಟವಾಗಿ ಉಪ್ಪಿಟ್ಟು ಕೊಟ್ಟಿದ್ದಕ್ಕೆ ಸೋಟೆ ತಿರುವಿದ ಕೇರಳದ ಪುಟ್ಟ ಪೋರನೊಬ್ಬ, 'ಉಪ್ಪಿಟ್ಟು ಬೇಡ ಬಿರಿಯಾನಿ ಬೇಕು' ಎಂದು ಕೇಳಿದ ವಿಡಿಯೋ ವೈರಲ್ ಆಗಿದೆ. ಬಾಲಕ ಥ್ರಾಜುಲ್ ಎಸ್.ಶಂಕರ್ ತನ್ನ ತಾಯಿಗೆ 'ಅಂಗನವಾಡಿಯಲ್ಲಿ ಉಪ್ಮಾ ಬದಲು ಬಿರಿಯಾನಿ ಕೊಟ್ಟರೆ ತಿನ್ನುವೆ' ಎಂದು ಹೇಳಿದ್ದಾನೆ. ವಿಡಿಯೋ ವೈರಲ್ ಆಗುತ್ತಲೇ ಪ್ರತಿಕ್ರಿಯಿಸಿರುವ ಕೇರಳ ಆರೋಗ್ಯ, ಮಹಿಳಾ- ಮಕ್ಕಳ ಕಲ್ಯಾಣ ಸಚಿವೆ ವೀಣಾ ಜಾರ್ಜ್, 'ಮಕ್ಕಳ ಪೋಷಣೆ ಖಚಿತಪಡಿಸಿಕೊಳ್ಳಲು ಅಂಗನ ವಾಡಿ ಗಳಲ್ಲಿ ಬಗೆಬಗೆ ಆಹಾರ ಪದಾರ್ಥ ನೀಡಲಾಗುತ್ತಿದೆ. ಅಂಗನವಾಡಿಗಳಲ್ಲಿ ಮೊಟ್ಟೆ- ಹಾಲು ನೀಡಲಾ ಗುತ್ತಿದೆ. ಈಗ ಬಾಲಕ ಶಂಕು ಬೇಡಿಕೆಯಂತೆ ಅಂಗನವಾಡಿ ಮೆನು ಪರಿಷ್ಕರಿಸಲಾಗುವುದು' ಎಂದಿದ್ದಾರೆ.



ಗ್ರೀಸ್‌ನ ದ್ವೀಪದಲ್ಲಿ 200 ಬಾರಿ ಭೂಕಂಪ

ಅಥೆನ್ಸ್: ಗ್ರೀಸ್‌ನ ಸ್ಯಾಂಟೊರಿನಿ ದ್ವೀಪದಲ್ಲಿ ಮೂರು ದಿನಗಳಿಂದ ಸತತವಾಗಿ ಭೂಮಿ ಕಂಪಿಸುತ್ತಿದ್ದು, ಒಟ್ಟು 200ಕ್ಕೂ ಅಧಿಕ ಬಾರಿ ಭೂಕಂಪನದ ಅನುಭವವಾಗಿದೆ. ಭೂಕಂಪನ ಸಂದರ್ಭದ ದೃಶ್ಯಗಳಿರುವ ವಿಡಿಯೋಗಳು ಇನ್‌ಸ್ಟಾಗ್ರಾಮ್‌ನಲ್ಲಿ ವೈರಲ್ ಆಗಿವೆ. ಅತ್ಯಂತ ತೀವ್ರತೆಯ ಅಂದರೆ ರಿಕ್ಟರ್ ಮಾಪಕದಲ್ಲಿ 5.1ರಷ್ಟು ಕಂಪನ ಸೋಮವಾರ ಮಧ್ಯಾಹ್ನ ದಾಖಲಾಗಿದೆ. ಯುರೋಪಿಯನ್ - ಮೆಡಿಟರೇನಿಯನ್ ಭೂಕಂಪನ ಕೇಂದ್ರದ ದಾಖಲೆಗಳ ಪ್ರಕಾರ ಮಂಗಳವಾರ ಬೆಳಗ್ಗೆ 7 ಗಂಟೆಯಲ್ಲಿಯೂ ಕೆಲ ನಿಮಿಷಗಳ ಅಂತರದಲ್ಲಿ ಹಲವು ಬಾರಿ ಭೂಕಂಪವಾಗಿದೆ. ಮುಂಜಾಗ್ರತಾ ಕ್ರಮವಾಗಿ ಗುಡ್ಡಗಾಡು ಪ್ರದೇಶಗಳಲ್ಲಿದ್ದ ನಿವಾಸಿಗಳನ್ನು ವಿಶೇಷ ವಿಮಾನಗಳ ಮೂಲಕ ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲಾಗಿದೆ. ಈವರೆಗೆ ಯಾವುದೇ ಸಾವು-ನೋವು ವರದಿಯಾಗಿಲ್ಲ.

{ಹೇಮಾ ಮಾಲಿನಿ} ಬಿಜೆಪಿ ಸಂಸದೆ

ಮಹಾ ಕುಂಭಮೇಳದಲ್ಲಿ ಜ.29ರಂದು ಮೌನಿ ಅಮವಾಸ್ಯೆ ದಿನ ನಡೆದ ಕಾಲ್ತುಳಿತ ದೊಡ್ಡ ಘಟನೆಯೇನಲ್ಲ. ದೊಡ್ಡದಾಗಿ ಬಿಂಬಿಸಲಾಗುತ್ತಿದೆ ಅಷ್ಟೆ. ನಾವು ಕುಂಭಕ್ಕೆ ಹೋಗಿದ್ದೆವು. ತ್ರಿವೇಣಿ ಸಂಗಮದಲ್ಲಿ ಆರಾಮವಾಗಿ ಪುಣ್ಯ ಸ್ನಾನ ಜರುಗಿತು. ಕೋಟ್ಯಂತರ ಭಕ್ತರು ಭೇಟಿ ನೀಡುವ ಕುಂಭಮೇಳವನ್ನು ಉತ್ತಮವಾಗಿ ನಿರ್ವಹಿಸಲಾಗುತ್ತಿದೆ.



ಎಎಪಿ, ಬಿಜೆಪಿ, ಕಾಂಗ್ರೆಸ್ ತ್ರಿಕೋನ ಸ್ಪರ್ಧೆ | ಹ್ಯಾಟ್ರಿಕ್ ಸಾಧನೆಗೆ ಎಎಪಿ ಭಾರೀ ಯತ್ನ | ಅಧಿಕಾರಕ್ಕಾಗಿ ಬಿಜೆಪಿ, ಕಾಂಗ್ರೆಸ್ ಪ್ರಯತ್ನ

70 ಸದಸ್ಯರ ದೆಹಲಿ ವಿಧಾನಸಭೆಗೆ ಮತದಾನ

ದೆಹಲಿ: 70 ಸದಸ್ಯ ಬಲದ ದೆಹಲಿ ವಿಧಾನಸಭೆಗೆ ಒಂದೇ ಹಂತದಲ್ಲಿ ಚುನಾವಣೆ ನಡೆಯುತ್ತಿದ್ದು, ಬುಧವಾರ ಬೆಳಗ್ಗೆ 7ರಿಂದ ಸಂಜೆ 6ವರೆಗೂ ಮತದಾನ ನಡೆಯಲಿದೆ. ಕೇಂದ್ರಾಡಳಿತ ಪ್ರದೇಶ ದೆಹಲಿ ವ್ಯಾಪ್ತಿಯ 1.55 ಕೋಟಿ ಮತದಾರರು ಸಾಂವಿಧಾನಿಕ ಹಕ್ಕು ಚಲಾಯಿಸಲಿದ್ದಾರೆ. ಫೆ.8ಕ್ಕೆ ಮತ ಎಣಿಕೆ ನಡೆದು ಫಲಿತಾಂಶ ಪ್ರಕಟವಾಗಲಿದೆ.

ಚುನಾವಣಾ ಆಯೋಗ ಮತಗಟ್ಟೆಗಳ ಸಿದ್ಧತೆ, ಚುನಾವಣಾಧಿಕಾರಿಗಳ ನಿಯೋಜನೆಗೆ ಪೂರ್ಣ ಗೊಳಿಸಿದೆ. ಶಾಂತಿಯುತ ಮತದಾನ ಪ್ರಕ್ರಿಯೆಗಾಗಿ ಹೆಚ್ಚಿನ ಪ್ರಮಾಣದಲ್ಲಿ ಪೊಲೀಸ್ ಮತ್ತು ಭದ್ರತಾ ಪಡೆಗಳ ನಿಯೋಜನೆ ಮಾಡಲಾಗಿದೆ. ಬಹಿರಂಗ ಚುನಾವಣಾ ಪ್ರಚಾರ ಕಾರ್ಯಕ್ಕೆ ಸೋಮವಾರ ಸಂಜೆ 5ಕ್ಕೇ ತೆರೆ ಬಿದ್ದಿದ್ದರಿಂದ ಮಂಗಳವಾರ ರಾಜಕೀಯ ಪಕ್ಷಗಳ ಕಾರ್ಯಕರು, ಸ್ಥಳೀಯ ನಾಯಕರು ಮನೆ ಮನೆ ಪ್ರಚಾರ ನಡೆಸಿದರು. ಬಿಜೆಪಿ, ಎಎಪಿ, ಕಾಂಗ್ರೆಸ್ ಪಕ್ಷಗಳ ಅಭ್ಯರ್ಥಿಗಳ ಪರ ಸತತ ಪ್ರಚಾರ ನಡೆಸಿದ ಮುಂಚೂಣಿ ನಾಯಕರು ಮಂಗಳವಾರ ವಿಶ್ರಾಂತಿಗೆ ಮೊರೆ ಹೋದರು. ಮತದಾನಕ್ಕೂ ಮುನ್ನಾದಿನವಾದ ಮಂಗಳವಾರ ದೆಹಲಿ ಪೊಲೀಸರು, ಭದ್ರತಾ ಪಡೆಗಳ ಭದ್ರಕೋಟೆಯಾಗಿ ಪರಿವರ್ತನೆಗೊಂಡಿತ್ತು. ದೆಹಲಿ ಪೊಲೀಸರು ಸೋಮವಾರ ರಾತ್ರಿಯಿಂದಲೇ ಸೂಕ್ಷ್ಮ ಪ್ರದೇಶಗಳಲ್ಲಿ ಧ್ವಜ ಪಥಸಂಚಲನ ನಡೆಸಿ ದರು. ಪ್ರತಿ ಜಿಲ್ಲೆಯ ಡಿಸಿಪಿ ಧ್ವಜ ಪಥಸಂಚಲನ ಮುನ್ನಡೆಸಿದರು.

ಈ ಮಧ್ಯೆ, ದೆಹಲಿಗೆ ಬೇರೆಡೆಯಿಂದ ಆಗಮಿಸಿದ್ದ ಪಕ್ಷಗಳ ನಾಯಕರಿಗೆ ಬಹಿರಂಗ ಪ್ರಚಾರದ ಅವಧಿ ಕೊನೆಗೊಂಡಿರುವುದರಿಂದ ದೆಹಲಿ ಕೇಂದ್ರಾಡಳಿತ ಪ್ರದೇಶ ಬಿಟ್ಟು ತೆರಳುವಂತೆ ಚುನಾವಣಾ ಆಯೋಗ ಆದೇಶಿಸಿದೆ.



ಮತಗಟ್ಟೆಗಳಲ್ಲಿ ಬಿಗಿಭದ್ರತೆ

ಚುನಾವಣೆಯಲ್ಲಿ ಮತದಾನ ಪ್ರಕ್ರಿಯೆ ಸರಾಗವಾಗಿ, ಶಾಂತಿಯುತವಾಗಿ ನಡೆಯುವಂತೆ ಮಾಡುವ ಸಲು ವಾಗಿ ಮತಗಟ್ಟೆಗಳು ಮತ್ತು ಸೂಕ್ಷ್ಮ ಪ್ರದೇಶಗಳಲ್ಲಿ ಭದ್ರತಾ ಕಾರ್ಯಕ್ಕಾಗಿ 35 ಸಾವಿರಕ್ಕೂ ಅಧಿಕ ಪೊಲೀಸ ರನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿದೆ. ಹೆಚ್ಚುವರಿಯಾಗಿ ಕೇಂದ್ರದ ಮೀಸಲು ಪಡೆಗಳ 220 ತುಕಡಿಗಳನ್ನು ಭದ್ರತಾ ಕಾರ್ಯಕ್ಕಾಗಿ ನಿಯೋಜಿಸಿಕೊಳ್ಳಲಾಗಿದೆ. ಅಲ್ಲದೆ, ಮತಗಟ್ಟೆಗಳಲ್ಲಿ ಹೆಚ್ಚುವರಿಯಾಗಿ ಗೃಹರಕ್ಷಕ ದಳದ 19 ಸಾವಿರ ಸಿಬ್ಬಂದಿಗಳನ್ನೂ ಬಳಸಿಕೊಳ್ಳಲಾ ಗುತ್ತಿದೆ. ಈ ಬಾರಿ ಹೆಚ್ಚುವರಿ ಸೌಲಭ್ಯವಾಗಿ ಮತ ಗಟ್ಟೆ ಬಳಿ ಮತದಾರರ ಸರತಿ ಸಾಲು ನಿರ್ವಹಣೆಗೆ ಹೊಸ ಅಪ್ಲಿಕೇಶನ್ ಬಿಡುಗಡೆ ಮಾಡಲಾಗಿದೆ.

ದೆಹಲಿ ವಿಧಾನಸಭಾ ಕ್ಷೇತ್ರ	70
ಒಟ್ಟು ಮತದಾರರು	1.56 ಕೋಟಿ
ಪುರುಷ ಮತದಾರರು	83.76 ಲಕ್ಷ
ಮಹಿಳಾ ಮತದಾರರು	72.36 ಲಕ್ಷ
ತೃತೀಯ ಲಿಂಗಿ ಮತದಾರರು	1,267
ವಿಶೇಷಚೇತನರಿಗೆ ಮತಗಟ್ಟೆ	733
ಮತಗಟ್ಟೆಗಳ ಸಂಖ್ಯೆ	13,766

ನೀತಿ ಸಂಹಿತೆ ಉಲ್ಲಂಘನೆ: ಆತಿಶಿ ವಿರುದ್ಧ ಪ್ರಕರಣ

ದೆಹಲಿ: ದೆಹಲಿ ಚುನಾವಣೆಗೆ ಒಂದು ದಿನವಷ್ಟೇ ಬಾಕಿ ಇರುವಾಗ ದೆಹಲಿ ಮುಖ್ಯಮಂತ್ರಿ ಆತಿಶಿ ವಿರುದ್ಧ ಪ್ರಕರಣ ದಾಖಲಾಗಿದೆ. ಗೋವಿಂದಪುರಿಯಲ್ಲಿ ನಡೆದ ಗದ್ದಲ ಸಂಬಂಧ ಮುಖ್ಯಮಂತ್ರಿ ಆತಿಶಿ ಅವರ ವಿರುದ್ಧವೇ ದೆಹಲಿ ಪೊಲೀಸರು ಮಂಗಳವಾರ ಬಿಎನ್‌ಎಸ್ ಸೆಕ್ಷನ್ 188ರಡಿ ಪ್ರಕರಣ ದಾಖಲಿಸಿದ್ದಾರೆ. ಕಲ್ಕಾಜಿ ವಿಧಾನಸಭಾ ಕ್ಷೇತ್ರದ ಎಎಪಿ ಅಭ್ಯರ್ಥಿಯಾಗಿರುವ ಸಿಎಂ ಆತಿಶಿ ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿದ್ದಾರೆ.

ಅಲ್ಲದೇ, ಕರ್ತವ್ಯನಿರತ ಪೊಲೀಸರ ಜತೆ ಅನುಚಿತವಾಗಿ ವರ್ತಿಸಿದ ಹಾಗೂ ಸರಕಾರಿ ಕೆಲಸಕ್ಕೆ ಅಡ್ಡಿಪಡಿಸಿದ ಆರೋಪದಡಿ ಎಎಪಿ ಮತ್ತು ಸಿಎಂ ಆತಿಶಿ ಬೆಂಬಲಿಗರ ವಿರುದ್ಧ 2ನೇ ಪ್ರಕರಣವನ್ನು ದೆಹಲಿ ಪೊಲೀಸರು ದಾಖಲಿಸಿದ್ದಾರೆ. ಆತಿಶಿ ಅವರ ಬೆಂಬಲಿಗ ಸಾಗರ್ ಮೆಹ್ತಾ ಕೋಪೋದ್ರಿಕ್ತರಾಗಿ ಪೊಲೀಸ್ ಅಧಿಕಾರಿಯೊಬ್ಬರ ಕೆನ್ನೆಗೆ ಬಾರಿಸುತ್ತಿರುವುದು ವಿಡಿಯೋದಲ್ಲಿ ಸೆರೆಯಾಗಿದೆ. ಮಂಗಳವಾರ ನಸುಕಿನ 1 ಗಂಟೆಯಲ್ಲಿ ಗೋವಿಂದಪುರಿ ಪೊಲೀಸ್ ಠಾಣೆ ಹೆಡ್ ಕಾನ್‌ಸ್ಟೇಬಲ್ ಒಬ್ಬರನ್ನು ತಡೆದು ಹಲ್ಲೆ ಮಾಡಿದ ಆರೋಪದಡಿ ಆಡಳಿತಾರೂಢ 'ಎಎಪಿ'ಯ ಇಬ್ಬರು ಸದಸ್ಯರಾದ ಅಶ್ಮಿತ್ ಮತ್ತು ಸಾಗರ್ ಮೆಹ್ತಾರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ದೆಹಲಿ ವಿಧಾನಸಭಾ ಚುನಾವಣಾ ಪ್ರಚಾರ ಸೋಮವಾರಕ್ಕೆ ಕೊನೆಗೊಂಡಿತ್ತು. ಆದರೆ ತಡರಾತ್ರಿಯವರೆಗೂ ಪಕ್ಷದ ಕಾರ್ಯಕರ್ತರು ಅನೇಕ ಸ್ಥಳಗಳಲ್ಲಿ ಪ್ರಚಾರ ನಡೆಸುತ್ತಿದ್ದರು. ಇದರಿಂದ ಹಲವೆಡೆ ವಾಹನ ಸಂಚಾರಕ್ಕೆ ತೊಡಕಾಯಿತು.

ಕೇಜ್ರಿವಾಲ್ ಆರೋಪಕ್ಕೆ ಆಯೋಗ ತಿರುಗೇಟು

ದೆಹಲಿ: 'ಚುನಾವಣಾ ಆಯೋಗವನ್ನು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಒಬ್ಬರೇ ನಡೆಸುತ್ತಿದ್ದಾರೆ' ಎಂಬ ಆಮ್ ಆದ್ಮಿ ಪಕ್ಷದ ನಾಯಕರು ಮತ್ತು ಪಕ್ಷದ ಸಂಚಾಲಕ ಅರವಿಂದ್ ಕೇಜ್ರಿವಾಲ್ ಆರೋಪಗಳಿಗೆ ಸಿಟ್ಟಾಗಿರುವ ಮುಖ್ಯ ಚುನಾವಣಾ ಆಯುಕ್ತರು, ಕೇಜ್ರಿವಾಲ್‌ಗೆ ಮಂಗಳವಾರ ತಿರುಗೇಟು ನೀಡಿದ್ದಾರೆ. 'ದೆಹಲಿ ಚುನಾವಣೆಯನ್ನು ಅಚ್ಚುಕಟ್ಟಾಗಿ ನಡೆಸಲು ಸಜ್ಜಾಗಿರುವ ಚುನಾವಣಾ ಆಯೋಗವನ್ನು ಕೆಣಕಲು, ನಕಾರಾತ್ಮಕವಾಗಿ ಉತ್ತೇಜಿಸಲು ಆಮ್ ಆದ್ಮಿ ಪಕ್ಷ ಮತ್ತು ಪಕ್ಷದ ಮುಖಂಡರು ಪದೇ ಪದೇ ಯತ್ನಿಸುತ್ತಿದ್ದಾರೆ. ಉದ್ದೇಶಪೂರ್ವಕವಾಗಿಯೇ ಒತ್ತಡ ತಂತ್ರ ಅನುಸರಿಸುತ್ತಿದ್ದಾರೆ. ಆಯೋಗ ಸಾಂವಿಧಾನಿಕ ಸಂಸ್ಥೆಯಾಗಿದ್ದು, ಅಗತ್ಯ ಸಂಯಮವನ್ನು ಹೊಂದಿದೆ. ಇಂಥ ಪ್ರಚೋದನೆಗಳನ್ನು ಚಾಣಾಕ್ಷತನದಿಂದ ಹಾಗೂ ಅಷ್ಟೇ ನಿಷ್ಠೂರವಾಗಿ ನಿರ್ವಹಿಸಲಿದೆ. ಯಾವುದೇ ಪ್ರಚೋದನೆಗಳಿಂದಲೂ ಪ್ರಭಾವಿತವಾಗುವುದಿಲ್ಲ ಎಂದು ಹೇಳಿದ್ದಾರೆ. ಚುನಾವಣಾ ಆಯೋಗ ಒಬ್ಬರೇ ಸದಸ್ಯರ ಸಂಸ್ಥೆಯಲ್ಲ. ಮೂವರು ಸದಸ್ಯರಿದ್ದಾರೆ. ಒಬ್ಬರಲ್ಲಾ ಒಬ್ಬರು ಚುನಾವಣಾ ಪ್ರಕ್ರಿಯೆಗಳನ್ನು ಗಮನಿಸುತ್ತಾರೆ. ಎಎಪಿ ನಾಯಕರ ಇಂಥ ಹೇಳಿಕೆಗಳಿಂದ ಆಯೋಗದ ಅಧಿಕಾರಿಗಳು ಪ್ರಚೋದನೆಗಳಿಗೆ ಒಳಗಾಗುವುದಿಲ್ಲ ಎಂದಿದ್ದಾರೆ. ಬಿಜೆಪಿ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ನಡೆಸಿದ್ದರೂ ಚುನಾವಣಾ ಆಯೋಗ ಬೇಕೆಂದೇ ನಿರ್ಲಕ್ಷಿಸುತ್ತಿದೆ. ನಿವೃತ್ತಿ ನಂತರ ಸೂಕ್ತ ಹುದ್ದೆ ಪಡೆಯುವ ಸಲುವಾಗಿಯೇ ರಾಜೀವ್ ಕುಮಾರ್ ಅವರು ಬಿಜೆಪಿ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಕೇಜ್ರಿವಾಲ್ ಆರೋಪಿಸಿದ್ದರು. ರಾಜೀವ್ ಕುಮಾರ್ ಅಧಿಕಾರವಧಿ ಫೆ.18ರಂದು ಕೊನೆಗೊಳ್ಳಲಿದೆ.

ಪ್ರಮುಖ ಕ್ಷೇತ್ರ: ಪ್ರಮುಖರ ಸ್ಪರ್ಧೆ

ನವದೆಹಲಿ ಕ್ಷೇತ್ರ: ಎಎಪಿ ಸಂಚಾಲಕ, ಮಾಜಿ ಸಿಎಂ ಅರವಿಂದ್ ಕೇಜ್ರಿವಾಲ್ ಸ್ಪರ್ಧಿಸಿರುವ ಈ ಕ್ಷೇತ್ರದಲ್ಲಿ ಎದುರಾಳಿಗಳಾಗಿ ಬಿಜೆಪಿಯ ಪರ್ವೇಶ್ ವರ್ಮಾ, ಕಾಂಗ್ರೆಸ್‌ನ ಸಂದೀಪ್ ದೀಕ್ಷಿತ್ ಕಣಕ್ಕಿಳಿದಿದ್ದಾರೆ. **ಕಲ್ಕಾಜಿ ಕ್ಷೇತ್ರ:** ದೆಹಲಿ ಸಿಎಂ, ಎಎಪಿ ನಾಯಕಿ ಆತಿಶಿ ಸ್ಪರ್ಧೆ ಮಾಡಿದ್ದು, ಎದುರಾಳಿಗಳಾಗಿ ಬಿಜೆಪಿಯಿಂದ ರಮೇಶ್ ಬಿಧುರಿ, ಕಾಂಗ್ರೆಸ್‌ನ ಅಲ್ಕಾ ಲಂಬಾ ಕಣದಲ್ಲಿದ್ದಾರೆ. **ಜಂಗ್‌ಪುರ ಕ್ಷೇತ್ರ:** ಮಾಜಿ ಡಿಸಿಎಂ, ಎಎಪಿ ನಾಯಕ ಮನೀಶ್ ಸಿಸೊಡಿಯ ವಿರುದ್ಧ ಬಿಜೆಪಿಯ ಸರ್ದಾರ್ ತರವಿಂದರ್ ಸಿಂಗ್ ಮಾರ್ವಾ, ಕಾಂಗ್ರೆಸ್‌ನ ಫರ್ಹಾದ್ ಸುರಿ ಸ್ಪರ್ಧಿಸಿದ್ದಾರೆ.

ಅಲ್ಕಾ ಲಂಬಾ


ರಮೇಶ್ ಬಿಧುರಿ

ಅರವಿಂದ್ ಕೇಜ್ರಿವಾಲ್


ಮನೀಶ್ ಸಿಸೊಡಿಯ

ಸರತಿ ಸಾಲಿನ ಅಚ್ಚುಕಟ್ಟು ನಿರ್ವಹಣೆ

ಈ ಬಾರಿ ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಗರಿಷ್ಠ ಪ್ರಮಾಣದ ಮತದಾನ ಖಚಿತಪಡಿಸಿಕೊಳ್ಳಲು ಚುನಾವಣಾ ಆಯೋಗ ವಿಶೇಷ ಕಾಳಜಿ ವಹಿಸಿದೆ. ಮತದಾರರ ಸರತಿ ಸಾಲಿನ ಅಚ್ಚುಕಟ್ಟು ನಿರ್ವಹಣೆಗಾಗಿಯೇ ಚುನಾವಣಾ ಆಯೋಗ 'ಕ್ಯೂ ಮ್ಯಾನೇಜ್ಮೆಂಟ್ ಸಿಸ್ಟಂ' ಆಪ್ ಬಿಡುಗಡೆ ಮಾಡಿದೆ. ಈ ಆಪ್ ಬಳಸಿ ಮತದಾರರು ತಮ್ಮ ಮತಗಟ್ಟೆಯಲ್ಲಿ ಆ ಕ್ಷಣದಲ್ಲಿ ಎಷ್ಟು ಜನಸಂದಣಿ ಇದೆ ಎಂಬುದನ್ನು ಮನೆಯಲ್ಲಿದ್ದುಕೊಂಡೇ ತಿಳಿದುಕೊಳ್ಳಬಹುದಾಗಿದೆ.

ತ್ರಿಕೋನ ಸ್ಪರ್ಧೆ

ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಈ ಬಾರಿ ಆಮ್ ಆದ್ಮಿ ಪಕ್ಷ (ಎಎಪಿ) ಮತ್ತು ಬಿಜೆಪಿ ನಡುವೆ ನಿಕಟ ಸ್ಪರ್ಧೆಯಿದ್ದರೆ, ಕಾಂಗ್ರೆಸ್ ಪಕ್ಷದ ಪ್ರಬಲ ಉಪಸ್ಥಿತಿಯು ಚುನಾವಣೆಯನ್ನು ತ್ರಿಕೋನ ಸ್ಪರ್ಧೆಯ ಕಣವನ್ನಾಗಿಸಿದೆ. ಚುನಾವಣಾ ಬಹಿರಂಗ ಪ್ರಚಾರದ ಕೊನೆಯ ದಿನವಾದ ಸೋಮವಾರ ಮೂರೂ ಪಕ್ಷಗಳು ದಿಗ್ಗಜ ನಾಯಕರನ್ನು ಪ್ರಚಾರ ಕಾರ್ಯದಲ್ಲಿ ತೊಡಗಿಸಿದ್ದವು. ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಜೆ.ಪಿ. ನಡ್ಡಾ ಮತ್ತು ಬಿಜೆಪಿ ಆಡಳಿತದ ರಾಜ್ಯಗಳ ಮುಖ್ಯಮಂತ್ರಿಗಳು ಬಿಜೆಪಿ ಅಭ್ಯರ್ಥಿಗಳ ಪರ ಸೋಮವಾರ ದಿನವಿಡೀ ಪ್ರಚಾರ ನಡೆಸಿದರು. ಎಎಪಿ ನಾಯಕ ಅರವಿಂದ್ ಕೇಜ್ರಿವಾಲ್ ಸ್ವತಃ ನವದೆಹಲಿ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯಾಗಿದ್ದರೂ ಹಾಲಿ ಸಿಎಂ ಅತಿಶಿ ಅವರ ಕ್ಷೇತ್ರದ ವಿವಿಧೆಡೆ ಸೋಮವಾರ 3 ರ‍್ಯಾಲಿ ನಡೆಸಿದರು. ಕಾಂಗ್ರೆಸ್ ಅಭ್ಯರ್ಥಿಗಳ ಪರವಾಗಿ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಪ್ರಚಾರ ಕಣದಲ್ಲಿದ್ದರು. ಕಲ್ಕಾಜಿ ಮತ್ತು ಕಸ್ತೂರ್‌ಬಾ ನಗರ ಕ್ಷೇತ್ರಗಳಲ್ಲಿ ಅಣ್ಣ-ತಂಗಿ ರೋಡ್ ಶೋ ನಡೆಸಿದರು.



ಮಹಾ ಕುಂಭಮೇಳ: ಸಿಎಂ ಯೋಗಿ ಆದಿತ್ಯನಾಥ್ ಸಾಥ್

ಭೂತಾನ್ ದೊರೆ ಜಿಗ್ಮೆ ಖೇಸರ್ ಪುಣ್ಯಸ್ನಾನ

ಪ್ರಯಾಗ್‌ರಾಜ್: ಉತ್ತರ ಪ್ರದೇಶದಲ್ಲಿನ ಪ್ರಯಾಗ್ ರಾಜ್‌ನಲ್ಲಿ ಜ.13ರಿಂದ ನಡೆಯುತ್ತಿರುವ ಮಹಾ ಕುಂಭಮೇಳಕ್ಕೆ ಭೂತಾನ್ ದೊರೆ ಜಿಗ್ಮೆ ಖೇಸರ್ ನಮ್ಗೇಲ್ ವಾಂಗ್‌ಚುಕ್ ಮಂಗಳವಾರ ಭೇಟಿ ನೀಡಿದ್ದು, ತ್ರಿವೇಣಿ ಸಂಗಮ ಸ್ಥಳದಲ್ಲಿ ಪುಣ್ಯಸ್ನಾನ ಕೈಗೊಂಡರು. ಅದಕ್ಕೂ ಮುನ್ನ ಭೂತಾನ್ ದೊರೆ ಸೂರ್ಯನಿಗೆ 'ಅರ್ಘ್ಯ' ಅರ್ಪಿಸಿದರು.

ಉತ್ತರ ಪ್ರದೇಶ ಮುಖ್ಯಮಂತ್ರಿ, ಯೋಗಿ ಆದಿತ್ಯನಾಥ್, ರಾಜ್ಯದ ಸಚಿವರಾದ ಸ್ವತಂತ್ರ ದೇವ್ ಸಿಂಗ್, ನಂದಗೋಪಾಲ್ ಗುಪ್ತಾ ನೂತನ ಮಹಾ ಮಂಡಲೇಶ್ವರ ಸಂತೋಷ್ ದಾಸ್ ಜಿ ಮಹಾರಾಜ್ ಮತ್ತು ಕೆಲವು ಪ್ರಮುಖ ಸಾಧು-ಸಂತರು ವಿಶೇಷ ಅತಿಥಿಯ ಜತೆಗೂಡಿ ತ್ರಿವೇಣ ಸಂಗಮ ಸ್ಥಳದಲ್ಲಿ ಪವಿತ್ರ ಸ್ನಾನ ಕೈಗೊಂಡರು. ಪ್ರಯಾಗ್ ರಾಜ್ ವಿಮಾನ ನಿಲ್ದಾಣದಲ್ಲಿ ಬೆಳಗ್ಗೆ ಬಂದಿಳಿದಾಗ ಭೂತಾನ್‌ನ ಸಾಂಪ್ರದಾಯಿಕ ಉಡುಪಿನಲ್ಲಿದ್ದ ದೊರೆ ವಾಂಗ್ ಚುಕ್, ಸಂಗಮದಲ್ಲಿ ಪುಣ್ಯ ಸ್ನಾನಕ್ಕೆ ತೆರಳಿದಾಗ ಉದ್ದನೆಯ ಕೇಸರಿ ಬಣ್ಣದ ಕುರ್ತಾ- ಪೈಜಾಮ ಧರಿಸಿದ್ದರು. ಲಖನೌ ನಗರಕ್ಕೆ ಸೋಮವಾರ ಸಂಜೆಯೇ ಆಗಮಿಸಿದ ಭೂತಾನ್ ದೊರೆಗೆ ರಾಜಭವನದಲ್ಲಿ ರಾಜ್ಯಪಾಲರಾದ ಆನಂದಿಬೆನ್ ಪಟೇಲ್ ಆತಿಥ್ಯ ನೀಡಿದರು. ಭಾರತ-ಭೂತಾನ್ ಸಂಬಂಧಗಳ ಬಗ್ಗೆ ಇಬ್ಬರೂ ಚರ್ಚೆ ನಡೆಸಿದರು ಎಂದು ಮೂಲಗಳು ತಿಳಿಸಿವೆ.

ಮಹಾಕುಂಭ ಮೇಳಕ್ಕೆ ಮಂಗಳವಾರ ಭೇಟಿ ನೀಡಿದ ಭೂತಾನ್ ದೊರೆ ತ್ರಿವೇಣಿ ಸಂಗಮ ಸ್ಥಳದಲ್ಲಿ ಪುಣ್ಯಸ್ನಾನ ಕೈಗೊಂಡರು. ಸಿಎಂ ಯೋಗಿ ಮತ್ತು ಸಾಧು-ಸಂತರು ಸಾಥ್ ನೀಡಿದರು.

ಇಂದು ಮಹಾಕುಂಭ ಮೇಳಕ್ಕೆ ಪ್ರಧಾನಿ ಮೋದಿ

ಮಾಘ ಮಾಸ ಅಷ್ಟಮಿಯ ದಿನವಾದ ಬುಧವಾರ ಪ್ರಧಾನಿ ನರೇಂದ್ರ ಮೋದಿ ಪ್ರಯಾಗ್‌ರಾಜ್‌ಗೆ ಭೇಟಿ ನೀಡಲಿದ್ದು, ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಲಿದ್ದಾರೆ. ಬೆಳಗ್ಗೆ 10ಕ್ಕೆ ಪ್ರಧಾನಿ ಮೋದಿ ಪ್ರಯಾಗ್ ರಾಜ್ ವಿಮಾನ ನಿಲ್ದಾಣದಲ್ಲಿ ಬಂದಿಳಿಯವರು. ಅಲ್ಲಿಂದ ಹೆಲಿಕಾಪ್ಟರ್ ಮೂಲಕ ಡಿಪಿಎಸ್ ಹೆಲಿಪ್ಯಾಡ್ ತಲುಲಿ, ಬೆಳಗ್ಗೆ 10.45ರ ವೇಳೆಗೆ ಏರಿಯಲ್ ಘಾಟ್‌ಗೆ ಹೋಗಲಿದ್ದಾರೆ. ಅಲ್ಲಿ ದೋಣಿಯಲ್ಲಿ ಮಹಾ ಕುಂಭಮೇಳ ಸ್ಥಳವನ್ನು ತಲುಪಲಿದ್ದಾರೆ. ಬಳಿಕ ತ್ರಿವೇಣಿ ಸಂಗಮ ಸ್ಥಳದಲ್ಲಿ ಪವಿತ್ರ ಸ್ನಾನ ಮಾಡುವರು. ಸ್ನಾನದ ನಂತರ ಸಂಗಮದಲ್ಲಿ ಗಂಗಾನದಿ ಮಾತೆಯನ್ನು ಪೂಜಿಸಲಿದ್ದಾರೆ. ಪ್ರಧಾನಿ ಮೋದಿ 1 ಗಂಟೆ ಕಾಲ ಪ್ರಯಾಗ್‌ರಾಜ್‌ನಲ್ಲಿ ಇರಲಿದ್ದಾರೆ. ಮಧ್ಯಾಹ್ನ 12.30 ಕ್ಕೆ ವಾಯುಪಡೆಯ ವಿಶೇಷ ವಿಮಾನದಲ್ಲಿ ಪ್ರಯಾಗ್‌ರಾಜ್‌ನಿಂದ ದೆಹಲಿ ಹಿಂತಿರುಗುವರು. ಇದಕ್ಕೂ ಮುನ್ನ ಡಿ.13ರಂದು ಮೋದಿ ತ್ರಿವೇಣಿ ಸಂಗಮ ದಡದಲ್ಲಿ ಗಂಗಾನದಿಗೆ ಆರತಿ ಬೆಳಗಿ ಪೂಜೆ ಸಲ್ಲಿಸಿದ್ದರು. ಮಹಾಕುಂಭಮೇಳ ಬೃಹತ್ ಕಾರ್ಯಕ್ರಮ ಯಶಸ್ವಿಯಾಗಿ ಪೂರ್ಣಗೊಳ್ಳಲಿ ಎಂದು ಪ್ರಾರ್ಥಿಸಿದ್ದರು.

'ಯುಸಿಸಿ' ಜಾರಿಗೆ ಗುಜರಾತ್ ಸಜ್ಜು

ಅಹಮದಾಬಾದ್: ಏಕರೂಪ ನಾಗರಿಕ ಸಂಹಿತೆ(ಯುಸಿಸಿ)ಯನ್ನು ಜಾರಿಗೆ ತರಲು ಗುಜರಾತ್ ಸರಕಾರ ಮುಂದಾಗಿದೆ. ಏಕರೂಪ ನಾಗರಿಕ ಸಂಹಿತೆ ಕರಡು ಸಿದ್ಧಪಡಿಸಲು ಮತ್ತು ನಿಯಮಗಳನ್ನು ರೂಪಿಸಲು ಐವರು ಸದಸ್ಯರ ಸಮಿತಿ ರಚಿಸುವುದಾಗಿ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಮಂಗಳವಾರ ಘೋಷಿಸಿದ್ದಾರೆ. ಉತ್ತರಾಖಂಡ ರಾಜ್ಯದಲ್ಲಿ ಯುಸಿಸಿ ಜಾರಿಯಾಗಿದ್ದು, ಗುಜರಾತ್ ಎರಡನೇ ರಾಜ್ಯವಾಗಲಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಟೇಲ್, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ರಂಜನಾ ದೇಸಾಯಿ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ಸಮಿತಿ 45 ದಿನಗಳಲ್ಲಿ ವರದಿ ಸಲ್ಲಿಸಲಿದೆ. ಅದರ ಆಧಾರ ಸರಕಾರ ನಿರ್ಧಾರ ತೆಗೆದುಕೊಳ್ಳಲಿದೆ ಎಂದರು.

ಯುಸಿಸಿ ಅನ್ವಯ ಮದುವೆ, ವಿಚ್ಛೇದನ, ಆಸ್ತಿ ವರ್ಗಾವಣೆ, ದತ್ತು ಸ್ವೀಕಾರ ಸೇರಿದಂತೆ ಕೆಲ ನಿಯಮಗಳು ಎಲ್ಲಾ ಧರ್ಮ, ಜಾತಿ, ಸಮುದಾಯಗಳಿಗೂ ಒಂದೇ ರೀತಿ ಇರಲಿವೆ. ಅಲ್ಲದೇ ಈ ಕಾಯಿದೆ ಬಹುಪತ್ನಿತ್ವ ಅಥವಾ ಬಹುಪತಿತ್ವ ಎರಡನ್ನೂ ನಿಷೇಧಿಸುತ್ತದೆ. ಆಸ್ತಿ ಸಂಬಂಧಿತ ಕಾನೂನುಗಳು ಸುಲಭವಾಗಲಿದೆ ಎಂದರು.

ಮುಖ್ಯವಾಗಿ ಸಮಾಜದಲ್ಲಿ ಶಾಂತಿ-ಸೌಹಾರ್ದ ಕಾಪಾಡುವ, ನಾಗರಿಕರ ಮೂಲಭೂತ ಹಕ್ಕುಗಳ ರಕ್ಷಿಸುವುದು ಏಕರೂಪ ನಾಗರೀಕ ಸಂಹಿತೆಯ ಮೂಲ ಉದ್ದೇಶವಾಗಿದೆ. ಎಲ್ಲಾ ಧರ್ಮದವರ ಮದುವೆಯೂ ಯುಸಿಸಿ ಅಡಿ 60 ದಿನಗಳಲ್ಲಿ ನೋಂದಣಿ ಆಗಬೇಕು. ಸಂಪ್ರದಾಯ, ಧರ್ಮದ ಅನುಸಾರ ಮದುವೆ ವಿಧಿವಿಧಾನ ನಡೆಸಬಹುದು. ಆದರೆ ನೋಂದಣಿ ಕಡ್ಡಾಯ. ಎಲ್ಲಾ ಧರ್ಮದವರ ಮದುವೆಗಳಿಗೂ ಏರಕೂಪದಲ್ಲಿ ಕಾನೂನಾತ್ಮಕ ರಕ್ಷಣೆ ಸಿಗಲಿದೆ ಎಂದು ವಿವರಿಸಿದರು.

ಮತದಾರರಲ್ಲಿ ಅರಿವು ಮೂಡಿಸುವ ಕಾರ್ಯತಂತ್ರ

ದೆಹಲಿ ಚುನಾವಣೆ: ಬಿಜೆಪಿ ಪರ ಆರ್‌ಎಸ್‌ಎಸ್ 50 ಸಾವಿರ ಸಭೆ

ದೆಹಲಿ: ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಪರವಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘ ತಳಮಟ್ಟದಲ್ಲಿ ಕೆಲಸ ಮಾಡಿದೆ. ಈವರೆಗೆ ದೆಹಲಿ ಕೇಂದ್ರಾಡಳಿತ ಪ್ರದೇಶದಲ್ಲಿ 50 ಸಾವಿರಕ್ಕೂ ಹೆಚ್ಚು ಸಭೆಗಳನ್ನು ನಡೆಸಿದೆ. ಒಟ್ಟು 4 ಲಕ್ಷಕ್ಕೂ ಅಧಿಕ ಜನರು ಈ ಸಭೆಗಳಿಗೆ ಹಾಜರಾಗಿದ್ದರು ಎಂದು ಅಂಕಿ ಅಂಶ ಲಭ್ಯವಾಗಿದೆ.

ಆರ್‌ಎಸ್‌ಎಸ್ ನಡೆಸಿರುವ ಈ ತಳಮಟ್ಟದ ಪ್ರಚಾರ ಕಾರ್ಯದಿಂದ ಬಿಜೆಪಿಗೆ ಅಪಾರ ಜನ ಬೆಂಬಲ ಲಭಿಸುವ ಸಾಧ್ಯತೆ ಇದೆ. ಈ ಮಾಹಿತಿ ಎಎಪಿ ಪಕ್ಷದ ನಾಯಕರಿಗೆ, ಮುಖ್ಯವಾಗಿ ಸಂಚಾಲಕ ಅರವಿಂದ್ ಕೇಜ್ರಿವಾಲ್ ಅವರು ನಿದ್ರೆಗೆಡುವಂತೆ ಮಾಡಿದೆ.

2015 ಮತ್ತು 2020ರ ವಿಧಾನಸಭೆ ಚುನಾವಣೆಗಳಲ್ಲಿ ಸತತವಾಗಿ ಜಯ ಸಾಧಿಸಿರುವ ಎಎಪಿ ಈ ಬಾರಿಯೂ ಗೆದ್ದು ಹ್ಯಾಟ್ರಿಕ್ ಸಾಧಿಸುವ ವಿಶ್ವಾಸದಲ್ಲಿತ್ತು. ಚುನಾವಣೆಯ ಆರಂಭದ ದಿಸೆಯಲ್ಲಿ ವಾತಾವರಣ ಎಎಪಿ ಪರವಾಗಿಯೇ ಇದ್ದಿತು. ಆನಂತರದಲ್ಲಿ ಬಿಜೆಪಿ ಕೂಡಾ ಮಹಿಳೆಯರಿಗೆ ಆರ್ಥಿಕ ನೆರವು ಮತ್ತು ಉಚಿತ ಕೊಡುಗೆ ಗಳನ್ನು ತನ್ನ ಪ್ರಣಾಳಿಕೆಯಲ್ಲಿ ಘೋಷಿಸಿತು. ಜತೆಗೆ ಈಗ ಆರ್‌ಎಸ್‌ಎಸ್‌ನ ತಳಮಟ್ಟದ ಕಾರ್ಯಾಚರಣೆಯ ಬಲವೂ ಸೇರಿಕೊಂಡಿ ರುವುದರಿಂದ ಬಿಜೆಪಿಯ ಗೆಲುವಿನ ವಿಶ್ವಾಸ ಹೆಚ್ಚಿದೆ. ಪ್ರಚಾರ ಕಾರ್ಯದ ದೃಷ್ಟಿಯಿಂದ ದೆಹಲಿ ಕೇಂದ್ರಾಡಳಿತ ಪ್ರದೇಶವನ್ನು 8 ವಿಭಾಗಗಳಾಗಿ ವಿಂಗಡಿಸಿ ಯೋಜನೆ ರೂಪಿಸಿಕೊಂಡ ಆರ್‌ಎಸ್‌ಎಸ್, ನೂರಾರು ಕಾರ್ಯಕರ್ತರಿಗೆ ಜನರನ್ನು ನೇರವಾಗಿ ಭೇಟಿ ಮಾಡಿ, ಗುಂಪು ಸಭೆ ನಡೆಸಲು ಸೂಚಿಸಿತು. ಬಿಜೆಪಿ ತತ್ವಗಳು, ಕೇಂದ್ರದಲ್ಲಿ ಎನ್‌ಡಿಎ ಸರಕಾರದ 10 ವರ್ಷದ ಆಡಳಿತ, ಅಭಿವೃದ್ಧಿ ಕಾರ್ಯ, ದೆಹಲಿಯಲ್ಲಿ ಡಬಲ್ ಎಂಜಿನ್ ಸರಕಾರವಾದರೆ ಆಗುವ ಅನುಕೂಲಗಳ ಬಗ್ಗೆ ಜನರಿಗೆ ಮನದಟ್ಟು ಮಾಡುವಂತೆ ನಿರ್ದೇಶನ ನೀಡಿತು ಎನ್ನಲಾಗಿದೆ.

ಒಟ್ಟಾರೆ 4 ಲಕ್ಷ ಮತದಾರರಿಗೆ ಅರಿವು

ಸಂಘದ ಕಾರ್ಯಕರ್ತರು ಈವರೆಗೆ ದೆಹಲಿ ವಿಧಾನಸಭೆ ವ್ಯಾಪ್ತಿಯಲ್ಲಿ 8 ವಿಭಾಗಗಳಲ್ಲಿ ಒಟ್ಟು 50 ಸಾವಿರ ಗುಂಪು ಸಭೆಗಳನ್ನು ನಡೆಸಿದ್ದಾರೆ. 4 ಲಕ್ಷ ಮತದಾರರಿಗೆ ಮತದಾನದ ಅಗತ್ಯ ಕುರಿತು ಅರಿವು ಮೂಡಿಸಲು ಸಭೆಗಳನ್ನು ನಡೆಸಲಾಗಿದೆ. ಮತದಾರರಲ್ಲಿ ಜಾಗೃತಿ ಮೂಡಿಸುವುದು ನಮ್ಮ ಕೆಲಸವಾಗಿತ್ತು ಎಂದು ಸಂಘದ ಹಿರಿಯ ಕಾರ್ಯ ಕರ್ತರೊಬ್ಬರು ಮಾಧ್ಯಮದವರಿಗೆ ತಿಳಿಸಿದ್ದಾರೆ.

2,000 ವೃದ್ಧರಿಗೆ ಪುಣ್ಯಸ್ನಾನಕ್ಕೆ ವ್ಯವಸ್ಥೆ

ಮಹಾಕುಂಭ ನಗರ: ಮಹಾಕುಂಭ ಮೇಳದಲ್ಲಿ ಈವರೆಗೆ, ಮಿರ್ಜಾಪುರ, ಗೊಂಡಾ, ಸಿದ್ಧಾರ್ಥನಗರ, ಭದೋಹಿ, ಕೌಶಂಬಿ, ಹರ್ದೋಯಿ, ಸೀತಾಪುರ, ಲಖನೌ ಜಿಲ್ಲೆಗಳಿಂದ ಬಂದ 500ಕ್ಕೂ ಅಧಿಕ ಹಿರಿಯ ನಾಗರಿಕರು ಮಹಾಕುಂಭದಲ್ಲಿ ಭಾಗವಹಿಸಿದ್ದಾರೆ. ಕುಂಭಮೇಳ ಫೆ.26ರಂದು ಕೊನೆಗೊಳ್ಳಲಿದ್ದು, ಅಷ್ಟರೊಳಗೆ ಒಟ್ಟು 2,000 ವೃದ್ಧರಿಗೆ ತ್ರಿವೇಣಿ ಸಂಗಮದಲ್ಲಿ ಪುಣ್ಯಸ್ನಾನಕ್ಕೆ ಅನುಕೂಲ ಮಾಡಿಕೊಡಲಾಗುವುದು. ಇದಕ್ಕಾಗಿ ಸಮಾಜ ಕಲ್ಯಾಣ ಇಲಾಖೆ ತ್ರಿವೇಣಿ ಸಂಗಮದ ದಡದಲ್ಲಿ ಪೆಂಡಾಲ್ ಹಾಕುತ್ತಿದೆ ಎಂದು ರಾಜ್ಯ ಸರಕಾರ ತಿಳಿಸಿದೆ.

ವಿಶೇಷವಾಗಿ ಸರಕಾರಿ ವೃದ್ಧಾಶ್ರಮಗಳಿಂದ ಬಂದವರು ಕುಂಭಮೇಳವನ್ನು ಕಣ್ತುಂಬಿಕೊಳ್ಳಬಹುದಾಗಿದೆ. ವಿವಿಧ ವೃದ್ಧಾಶ್ರಮಗಳ ಹಿರಿಯ ನಾಗರಿಕರಿಗಾಗಿ ಕುಂಭ ಪ್ರದೇಶದಲ್ಲಿ 100 ಹಾಸಿಗೆಗಳ ಆಶ್ರಮವನ್ನು ಸ್ಥಾಪಿಸಲಾಗಿದೆ. ಅದಲ್ಲದೇ, ಕುಂಭ ಮೇಳದಲ್ಲಿ ಶ್ರವಣ ದೋಷವಿರುವವರಿಗೆ ತಪಾಸಣೆ-ಚಿಕಿತ್ಸೆ ಮಾಡಿಸುವ ಮೂಲಕ ಸಾವಿರಾರು ಜನರಿಗೆ ಉಚಿತ ಸೇವೆ ಒದಗಿಸಲಾಗುವುದು. ಶ್ರವಣ ಕುಂಭ ಉಪಕ್ರಮದಡಿ ಇದು ಪ್ರಮುಖ ಕಾರ್ಯಕ್ರಮವಾಗಿರಲಿದೆ.

ಅಮೆರಿಕ ಸರಕಿಗೆ ಸುಂಕ ಹೆಚ್ಚಿಸಿ ಚೀನಾ ಪ್ರತಿಕಾರ

ಬೀಜಿಂಗ್: ಅಮೆರಿಕದ ವಿವಿಧ ಸರಕುಗಳ ಆಮದು ಮೇಲೆ ಸುಂಕ ಪ್ರಮಾಣವನ್ನು ಹೆಚ್ಚಿಸುತ್ತಿರುವುದಾಗಿ ಚೀನಾ ವಾಣಿಜ್ಯ ಸಚಿವಾಲಯ ಮಂಗಳವಾರ ಹೇಳಿದೆ. ಅಮೆರಿಕದ ಕಲ್ಲಿದ್ದಲು ಮತ್ತು ದ್ರವೀಕೃತ ನೈಸರ್ಗಿಕ ಅನಿಲ ಉತ್ಪನ್ನಗಳ ಮೇಲೆ ಶೇ.15 ಹಾಗೂ ಕಚ್ಚಾ ತೈಲ, ಕೃಷಿ ಯಂತ್ರೋಪಕರಣ, ದೊಡ್ಡ ಗಾತ್ರದ ಕಾರುಗಳ ಮೇಲೆ ಶೇ.10ರಷ್ಟು ಸುಂಕ ವಿಧಿಸುವುದಾಗಿ ಕ್ಸಿ ಜಿನ್‌ಪಿಂಗ್ ಸರಕಾರ ಹೇಳಿದೆ. ಅಷ್ಟೇ ಅಲ್ಲದೇ ಅಮೆರಿಕದ ಮೂಲದ ಪ್ರಮುಖ ಕಂಪನಿ 'ಗೂಗಲ್' ವಿರುದ್ಧ ಕಾಯಿದೆ ಉಲ್ಲಂಘನೆ ಆರೋಪ ದಡಿ ತನಿಖೆಗೆ ಆದೇಶಿಸಿದೆ.ಅಮೆರಿಕ ಏಕಪಕ್ಷೀಯವಾಗಿ ಸುಂಕ ಹೆಚ್ಚಳ ಕ್ರಮ ಕೈಗೊಳ್ಳುವ ಮೂಲಕ 'ವಿಶ್ವ ವ್ಯಾಪಾರ ಸಂಸ್ಥೆ'ಯ (ಡಬ್ಲ್ಯುಎಚ್‌ಒ) ನಿಯಮಗಳನ್ನು ಉಲ್ಲಂಘಿಸಿದೆ. ಇದು ಚೀನಾ-ಅಮೆರಿಕ ನಡುವಿನ ಆರ್ಥಿಕ- ವ್ಯಾಪಾರ ಸಹಕಾರ ಸಂಬಂಧವನ್ನು ಹಾನಿಗೊಳಿಸುತ್ತದೆ ಎಂದು ಚೀನಾ ಹೇಳಿದೆ. ಚೀನಾ ಸರಕುಗಳ ಮೇಲೆ ಶೇ.10ರಷ್ಟು ಸುಂಕ ವಿಧಿಸುವುದಾಗಿ ಟ್ರಂಪ್ ಹೇಳಿಕೆ ನೀಡಿದ್ದರು.

ಆ ಕ್ರಮ ಮಂಗಳವಾರ ಜಾರಿಗೆ ಬರಬೇಕಿತ್ತು. ಆದರೆ ಟ್ರಂಪ್ ಸದ್ಯಕ್ಕೆ ಅದರ ಜಾರಿಗೆ ತಡೆ ನೀಡಿದ್ದು, ಚೀನಾ ಅಧ್ಯಕ್ಷ ಕ್ಸಿ ಜಿನ್ ಪಿಂಗ್ ಜತೆ ಸದ್ಯದಲ್ಲೇ ಮಾತನಾಡಲು ಯೋಜಿಸಿರುವುದಾಗಿ ಹೇಳಿದ್ದಾರೆ. ಜತೆಗೆ ಕೆನಡಾ, ಮೆಕ್ಸಿಕೊ ಮೇಲೆ ವಿಧಿಸಿದ ಸುಂಕ ಆದೇಶವನ್ನೂ 1 ತಿಂಗಳು ಮುಂದೂಡಿದ್ದಾರೆ.

ಸರಕಾರಿ ಕಚೇರಿಯಲ್ಲಿ 'ಮರಾಠಿ' ಕಡ್ಡಾಯ

ಮುಂಬೈ: ಸರಕಾರಿ, ಅರೆ ಸರಕಾರಿ ಕಚೇರಿಗಳು, ನಿಗಮಗಳು ಮತ್ತಿತರ ಸರಕಾರಿ ಕಚೇರಿಗಳಲ್ಲಿನ ಎಲ್ಲಾ ನೌಕರರು ತಮ್ಮ ಕಚೇರಿಯಲ್ಲಿ ವಿದೇಶ, ಮರಾಠಿ ಮಾತನಾಡದ ಅನ್ಯರಾಜ್ಯಗಳ ಜನರ ಹೊರತು ಉಳಿದೆಲ್ಲಾ ಸಂದರ್ಶಕರ ಜತೆ ಮರಾಠಿಯಲ್ಲಿಯೇ ಮಾತನಾಡಬೇಕು ಎಂದು ಸೂಚನೆ ಹೊರಡಿಸಲಾಗಿದೆ. ನಿಯಮ ಉಲ್ಲಂಘಿಸಿದ ಅಧಿಕಾರಿ, ಸಿಬ್ಬಂದಿ ವಿರುದ್ಧ ಕಾನೂನು ಕ್ರಮಕ್ಕಾಗಿ ಕಚೇರಿ ಅಥವಾ ಇಲಾಖೆ ಪ್ರಭಾರಿಗಳಿಗೆ ದೂರು ಸಲ್ಲಿಸಬಹುದು. ಅದನ್ನು ಅಶಿಸ್ತು ಎಂದು ಪರಿಗಣಿಸಿ ಕ್ರಮ ಕೈಗೊಳ್ಳಲಾಗುವುದು. ಈ ಕ್ರಮದಿಂದ ದೂರುದಾರರು ತೃಪ್ತರಾಗದಿದ್ದರೆ ಮಹಾರಾಷ್ಟ್ರ ಶಾಸಕಾಂಗದ ಮರಾಠಿ ಭಾಷಾ ಸಮಿತಿ ಮುಂದೆ ಮೇಲ್ಮನವಿ ಸಲ್ಲಿಸಬಹುದು ಎಂದು ಆದೇಶದಲ್ಲಿ ತಿಳಿಸಲಾಗಿದೆ. ಸರಕಾರದ ಅನುದಾನದಡಿ ಖರೀದಿಸುವ ಕಂಪ್ಯೂಟರ್ ಕೀಬೋರ್ಡ್‌ಗಳಲ್ಲಿ ಮರಾಠಿ, ದೇವನಾಗರಿ ಲಿಪಿ ಜತೆಗೆ ರೋಮನ್ ವರ್ಣಮಾಲೆ ಇರುವುದು ಕಡ್ಡಾಯ. ಮಾಧ್ಯಮಗಳಿಗೆ ಉದ್ಯಮಗಳು ನೀಡುವ ಜಾಹೀರಾತಿನಲ್ಲಿ ಮರಾಠಿ ಭಾಷೆ ಬಳಕೆ ಕಡ್ಡಾಯಗೊಳಿಸಬೇಕು. ಮುಂದಿನ 25 ವರ್ಷಗಳಲ್ಲಿ ಮರಾಠಿಯನ್ನು ಜ್ಞಾನ-ಉದ್ಯೋಗದ ಭಾಷೆಯಾಗಿಸುವುದು ಮುಖ್ಯ ಉದ್ದೇಶ ಎಂದು ರಾಜ್ಯ ಸರಕಾರ ಹೇಳಿದೆ.

ಫೆ.10ರಿಂದ 14ರವರೆಗೆ ಮೋದಿ ವಿದೇಶ ಪ್ರವಾಸ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಫೆ.10ರಿಂದ 14ರವರೆಗೆ ವಿದೇಶ ಪ್ರವಾಸ ಕೈಗೊಳ್ಳುತ್ತಿದ್ದಾರೆ.

ಮೊದಲಿಗೆ ಫ್ರಾನ್ಸ್‌ಗೆ ತೆರಳುವ ಮೋದಿ ಅವರು, ಫೆ.10 ಮತ್ತು 11ರಂದು ಪ್ಯಾರಿಸ್‌ನಲ್ಲಿ ನಡೆಯಲಿರುವ 'ಕೃತಕ ಬುದ್ಧಿಮತ್ತೆ'(ಎಐ) ಕುರಿತ ಶೃಂಗಸಭೆಯಲ್ಲಿ ಫ್ರಾನ್ಸ್ ಅಧ್ಯಕ್ಷ ಎಮ್ಯಾನುವಲ್ ಮ್ಯಾಕ್ರನ್ ಅವರ ಜತೆಗೂಡಿ ಭಾಗವಹಿಸುವರು. ಈ 'ಎಐ' ಶೃಂಗ ಸಭೆಗೆ ಅಮೆರಿಕದ ನೂತನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೂ ಆಹ್ವಾನಿತರಾಗಿದ್ದು, ಭಾಗವಹಿಸುವ ಸಾಧ್ಯತೆ ಇದೆ.

ಆ ಬಳಿಕ ಪ್ರಧಾನಿ ಮೋದಿ ಅವರು ಮೂರು ದಿನಗಳ ಕಾಲ(ಫೆ.12-14) ಅಮೆರಿಕ ಪ್ರವಾಸ ಕೈಗೊಳ್ಳುವರು.

ಪ್ಯಾರಿಸ್ ಭೇಟಿ ನಂತರ ಪ್ರಧಾನಿ ಮೋದಿ ಫೆ.12ರ ಸಂಜೆ ವಾಷಿಂಗ್ಟನ್ ಡಿಸಿಗೆ ಪ್ರಯಾಣ ಬೆಳೆಸಲಿದ್ದಾರೆ. ಮರುದಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ವ್ಯಾಪಾರ ಮತ್ತು ರಕ್ಷಣೆ ಸೇರಿದಂತೆ ಹಲವಾರು ವಿಷಯಗಳ ಕುರಿತು ಮಾತುಕತೆ ನಡೆಸಲಿದ್ದಾರೆ. ಜ.20ರಂದು ಡೊನಾಲ್ಡ್ ಟ್ರಂಪ್ 2ನೇ ಅವಧಿಗೆ ಅಮೆರಿಕ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ ಇದು ಪ್ರಧಾನಿ ಮೋದಿ ಜತೆಗಿನ ಮೊದಲ ಭೇಟಿ. ಟ್ರಂಪ್ ಆಡಳಿತ, ಅಕ್ರಮ ವಲಸಿಗರ ಸಾಮೂಹಿಕ ಗಡಿಪಾರು, ಆಮದು ಸುಂಕ ಏರಿಕೆ ಕ್ರಮಗಳನ್ನುಕೈಗೊಂಡಿರುವ ಸಂದರ್ಭದಲ್ಲೇ ಮೋದಿ ಅವರ ಅಮೆರಿಕ ಪ್ರವಾಸ ಕುತೂಹಲ ಕೆರಳಿಸಿದೆ.

ಸಮಾಚಾರ ಸಣ್ಣದಲ್ಲ

ಅಂಗಾಂಗ ದಾನ ಸಾಕಮ್ಮ ಮಾದರಿ

ಚಿಕ್ಕಮಗಳೂರು: ಶ್ರೀಮತಿ ಸಾಕಮ್ಮ ಕೂಂ ಡಾ.ಶಿವಾಜಿ ನಾಯ್ಕ ಇವರು 2024ರ ನ.30ರಂದು ಮೆದುಳಿನ

ರಕ್ತಸ್ರಾವದಿಂದ ಮೆದುಳು ನಿಷ್ಕ್ರಿಯಗೊಂಡ ಹಿನ್ನೆಲೆಯಲ್ಲಿ ಅರಳಗುಪ್ಪೆ ಮಲ್ಲೇಗೌಡ ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾಗ ಚಿಕಿತ್ಸೆಗೆ ಸ್ಪಂದಿಸದೆ ಬದುಕಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಕುಟುಂಬದವರು ಬಹು ಅಂಗಾಂಗದಾನಕ್ಕೆ ಸಮ್ಮತಿಸಿದ್ದು, ಬಹು ಅಂಗಾಂಗ ದಾನವನ್ನು 2024ರ ಡಿ.2 ರಂದು ಪಡೆಯಲಾಗಿದ್ದು ಇನ್ನೊಬ್ಬರ ಬಾಳಿನ ಜ್ಯೋತಿಯಾಗಿದ್ದಾರೆ. ದಿನಾಂಕ 26 ಜನವರಿ 2025 ಗಣರಾಜ್ಯೋತ್ಸವದಂದು ಸುಭಾಷ್ ಚಂದ್ರಬೋಸ್ ಜಿಲ್ಲಾ ಕ್ರೀಡಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಮಾನ್ಯ ಮುಖ್ಯಮಂತ್ರಿಗಳು ಮತ್ತು ಆರೋಗ್ಯ ಸಚಿವರಿಂದ ಸಹಿ ಮಾಡಿರುವ ಪ್ರಶಂಸನಾ ಪತ್ರ ನೀಡಿ ಸನ್ಮಾನಿಸಿದರು.

ಪಟ್ಲ ಫೌಂಡೇಶನ್‌ಗೆ 1.25 ಕೋಟಿ ದೇಣಿಗೆ

ಸುರತ್ಕಲ್: ಪಾವಂಜೆ ಶ್ರೀಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮೀ ಕ್ಷೇತ್ರದ ಪರಮಭಕ್ತರೂ, ಪಟ್ಲ ಸತೀಶ್ ಶೆಟ್ಟಿಯವರ ಕಟ್ಟಾ ಅಭಿಮಾನಿ ಶ್ರೀಶಾರದಾ ಪ್ರಸಾದ್ ರವರು ಹಾಗೂ ಅವರ ಧರ್ಮಪತ್ನಿ ಶ್ರೀಮತಿ ನಳಿನಿ ಪ್ರಸಾದ್ ರವರು ಪಟ್ಲ ಸತೀಶ್ ಶೆಟ್ಟಿಯವರ ಗೃಹಪ್ರವೇಶಕ್ಕೆ ಆಗಮಿಸಿ ಪಟ್ಲರು ಮಾಡುವ ಸತ್ಕಾರ್ಯಗಳನ್ನು ಮೆಚ್ಚಿ ಗೃಹಪ್ರವೇಶದ ದಿನದಂದು ಯಕ್ಷಧ್ರುವ ಪಟ್ಲ ಫೌಂಡೇಶನ್ ಗೆ ಒಂದು ಕೋಟಿ ಇಪ್ಪತ್ತೈದು ಲಕ್ಷ ಮೊತ್ತದ ದೇಣಿಗೆಯನ್ನು ನೀಡಿ ಆಶೀರ್ವದಿಸಿದರು. ಸಂಜೆ ನಡೆದ ಪಾವಂಜೆ ಮೇಳದ ಶ್ರೀದೇವಿಮಹಾತ್ಮೆ ಯಕ್ಷಗಾನದ ಸಂದರ್ಭದಲ್ಲಿ ಶ್ರೀಶಾರದಾಪ್ರಸಾದ್ ಹಾಗೂ ಶ್ರೀಮತಿ ನಳಿನಿ ಶಾರದಾ ಪ್ರಸಾದ್ ದಂಪತಿಗಳನ್ನು ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಪಾವಂಜೆಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ಕ್ಷೇತ್ರದ ಆಡಳಿತ ಮೊಕ್ತೇಸರರು ಶಶೀಂದ್ರ ಕುಮಾರ್ , ಪಟ್ಲ ಫೌಂಡೇಶನ್ ಟ್ರಸ್ಟ್ ನ ಪದಾಧಿಕಾರಿಗಳಾದ ಪಟ್ಲಗುತ್ತು ಮಹಾಬಲ ಶೆಟ್ಟಿ,ಸಿಎ ಸುದೇಶ್ ಕುಮಾರ್ ರೈ, ಸಿಎ ದಿವಾಕರ್ ರಾವ್, ಡಾ. ಸತೀಶ್ ಭಂಡಾರಿ, ಪ್ರದೀಪ್ ಆಳ್ವ ಕದ್ರಿ, ಭಂಡಾರಿ ಬಿಲ್ಡರ್ಸ್‌ನ ಮಾಲಕ ಲಕ್ಷ್ಮೀಶ್ ಭಂಡಾರಿ ಉಪಸ್ಥಿತರಿದ್ದರು.

ಕ್ರೀಡೆಯಿಂದ ದೈಹಿಕ ಸದೃಢತೆ ಸಾಧ್ಯ

ಚಿಕ್ಕಮಗಳೂರು: ದೈನಂದಿನ ಒತ್ತಡದ ನಡುವೆ ಸುವರ್ಣ ಕೆಲಸಗಾರರು ಕೆಲ ಸಮಯ ಬಿಡುವು ಮಾಡಿಕೊಂಡು ಕ್ರೀಡಾಸಕ್ತಿ ಬೆಳೆಸಿಕೊಂಡರೆ ಮಾನಸಿಕ ಹಾಗೂ ದೈಹಿಕವಾಗಿ ಸದೃಢರಾಗಲು ಸಾಧ್ಯ ಎಂದು ಸುವರ್ಣಗಾರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಸುಧೀರ್‌ಶೇಟ್ ಹೇಳಿದರು. ನಗರದ ಮೌಂಟೆನ್ ವ್ಯೂ ಶಾಲಾವರಣದಲ್ಲಿ ಸುವರ್ಣಗಾರರ ಕ್ಷೇಮಾಭಿವೃದ್ಧಿ ಸಂಘ ಹಾಗೂ ಚಿಕ್ಕಮ ಗಳೂರು ಚಿನ್ನಬೆಳ್ಳಿ ಕೆಲಸಗಾರರ ಸಹಯೋಗದಲ್ಲಿ ಏರ್ಪಡಿಸಿದ್ದ 12ನೇ ವರ್ಷದ ಕ್ರಿಕೇಟ್ ಪಂದ್ಯಾವಳಿಯ ಲ್ಲಿ ವಿಜೇತರಾದ ತಂಡಕ್ಕೆ ಬಹುಮಾನ ವಿತರಿಸಿ ಅವರು ಮಾತನಾಡಿದರು. ಸುವರ್ಣಗಾರರ ಹನ್ನೆರಡನೇ ವರ್ಷದ ಪಂದ್ಯಾವಳಿಯಲ್ಲಿ ಸುಮಾರು 6 ತಂಡಗಳು ಭಾಗಿಯಾಗಿದ್ದ ವು. ಅಂತಿಮವಾಗಿ ರಾಜರಾಜೇಶ್ವರಿ ತಂಡ ಹಾಗೂ ಬೆಂಗಾಲಿಬಾಯ್ಸ್ ತಂಡ ಪಂದ್ಯಾವಳಿ ನಡೆದವು. ಐದು ಓವರ್ ಬೆಂಗಾಲಿ ಬಾಯ್ಸ್ 74 ರನ್ ಕಲೆಹಾಕಿದರೆ, ರಾಜರಾಜೇಶ್ವರಿ ತಂಡ 75 ರನ್ನು ದಾಖಲಿಸುವ ಮೂ ಲಕ ವಿಜಯಪತಾಕಿ ಹಾರಿಸಿದ ತಂಡಕ್ಕೆ ಪಾರಿತೋಷಕ ಹಾಗೂ ನಗದು ಬಹುಮಾನ ವಿತರಿಸಲಾಯಿತು. ಸಂಘದ ಹಿರಿಯ ಸದಸ್ಯ ರುದ್ರಯ್ಯ ಆಚಾರ್ಯ ಮಾತನಾಡಿದರು. ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಶ್ರೀಕಾಂತ್‌ಶೇಟ್, ಸದಸ್ಯರುಗಳಾದ ರಘು ಕೆ.ಆಚರ್ಯ, ರಾಘವೇಂದ್ರ, ಸುದೀಪ್ ಆಚಾರ್ಯ, ಸೋಮಶೇಖರ್, ಮಾರುತಿ ಪಾಟೀಲ್, ಉಮೇಶ್ ಆಚಾರ್ಯ, ವೆಂಕಟೇಶ್ ಶೇಟ್, ಆಯೋಜಕರಾದ ಕಲ್ಲೇಶ್ ಆಚಾರ್ಯ ಮತ್ತಿತರರಿದ್ದರು.

ಚಿಕನ್ ಪಾಕ್ಸ್ ಆತಂಕ: ಕಡಬದಲ್ಲಿ 21 ಪ್ರಕರಣ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ವಿವಿಧೆಡೆ ಚಿಕನ್ ಪಾಕ್ಸ್ (ಸಿಡುಬು) ಆತಂಕ ಎದುರಾಗಿದ್ದು, ಕಡಬ ತಾಲ್ಲೂಕು ಒಂದರಲ್ಲೇ ವಿವಿಧ ಶಾಲೆಗಳ 21ಕ್ಕೂ ಹೆಚ್ಚು ಮಕ್ಕಳಿಗೆ ಚಿಕನ್ ಪಾಕ್ಸ್ ತಗುಲಿದೆ. ನೆಲ್ಯಾಡಿಯಲ್ಲಿ ಎರಡು ಶಾಲೆಗಳಲ್ಲಿ ಒಟ್ಟು ಒಂಭತ್ತು ಮಕ್ಕಳಿಗೆ, ಕುಕ್ಕೆ ಸುಬ್ರಹ್ಮಣ್ಯದಲ್ಲಿ ಆರು ಮಕ್ಕಳಿಗೆ, ಬೆಳ್ಳಾರೆ ಶಾಲೆಯಲ್ಲಿ ಒಂದು ಮಗುವಿಗೆ, ಲಾವತ್ತಡ್ಕದಲ್ಲಿ ಒಂದು ಮಗುವಿಗೆ, ಗೋಳಿತ್ತೊಟ್ಟುವಿನಲ್ಲಿ ಒಂದು ಮಗುವಿಗೆ ಸೇರಿದಂತೆ ಒಟ್ಟು 21 ಮಕ್ಕಳಿಗೆ ಚಿಕನ್ ಪಾಕ್ಸ್ ಹರಡಿರುವ ಬಗ್ಗೆ ಆರೋಗ್ಯ ಇಲಾಖೆ ಇಂದ ಮಾಹಿತಿ ಲಭ್ಯವಾಗಿದೆ. ರೋಗ ಹರಡಿರುವ ಶಾಲೆಗಳ ಆಡಳಿತ ಮಂಡಳಿಗೆ ಆರೋಗ್ಯ ಇಲಾಖೆ ಮುನ್ನೆಚ್ಚರಿಕೆ ವಹಿಸುವಂತೆ ಆದೇಶ ನೀಡಿದೆ. ರೋಗ ಕಡಿಮೆಯಾಗುವವರೆಗೂ ಮಕ್ಕಳಿಗೆ ರಜೆ ನೀಡುವಂತೆ ಮತ್ತು ಶಾಲೆಗೆ ಕಳುಹಿಸದಂತೆ ಶಾಲೆಗಳಿಗೆ ಮತ್ತು ಪೋಷಕರಿಗೆ ಜಿಲ್ಲಾ ಮತ್ತು ತಾಲೂಕು ಆರೋಗ್ಯಾಧಿಕಾರಿಗಳು ಸೂಚನೆ ನೀಡಿದ್ದಾರೆ.

{ ಶಿವರಾಜ್ ತಂಗಡಗಿ } ಸಚಿವ

ಸವಿತಾ ಸಮಾಜದ ಬೇಡಿಕೆಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತಂದು ಈಡೇರಿಸಲು ಪ್ರಯತ್ನಿಸಲಾಗುವುದು. ಈ ವರ್ಷ ಸವಿತಾ ಸಮಾಜದ ಅಭಿವೃದ್ಧಿಗೆ 23.70 ಕೋಟಿ ರು. ಅನುದಾನ ಮೀಸಲಿರಿಸಿದ್ದೇವೆ. ಈ ಮೂಲಕ ಆಯಾ ಸಮುದಾಯದ ಕಟ್ಟಕಡೆಯ ವ್ಯಕ್ತಿಗೂ ಸರಕಾರದ ಯೋಜನೆ ತಲುಪಿಸಲಾಗುವುದು.

ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಮಂಟಪ ಆವರಣದಲ್ಲಿ ಕಾರ್ಯಕ್ರಮ ವ್ಯವಸ್ಥೆ

ಜಿಲ್ಲಾ ರೈತ ಸಮಾವೇಶ ಫೆ.8ಕ್ಕೆ

ಉಡುಪಿ: ಉಡುಪಿ ಜಿಲ್ಲಾ ಕೃಷಿಕ ಸಂಘವು ವಿಜಯಾ ಗ್ರಾಮೀಣ ಅಭಿವೃದ್ಧಿ ಪ್ರತಿಷ್ಠಾನ ಮಂಗಳೂರು, ಈಸೀ ಲೈಫ್ ಎಂಟರ್‌ಪ್ರೈಸಸ್, ಎಸ್.ಆರ್.ಕೆ. ಲ್ಯಾಡರ್ಸ್ ಪುತ್ತೂರು ಸಹಯೋಗದಲ್ಲಿ ಆಯೋಜಿಸಿರುವ ಜಿಲ್ಲಾ ರೈತ ಸಮಾವೇಶ -2025, ಫೆ. 8 ರಂದು ಬೆಳಿಗ್ಗೆ 9.30ರಿಂದ ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಮಂಟಪ ಆವರಣದಲ್ಲಿ ನಡೆಯಲಿದೆ.

ಈ ಕುರಿತು ಸುದ್ದಿಗೋಷ್ಠಿ ಆಯೋಜಿಸಿ ಮಾತನಾಡಿದ ಸಂಘದ ಅಧ್ಯಕ್ಷ ರಾಮಕೃಷ್ಣ ಶರ್ಮ ಬಂಟಕಲ್ಲು, ಮಂಗಳೂರು ವಿಜಯಾ ಗ್ರಾಮೀಣ ಅಭಿವೃದ್ಧಿ ಪ್ರತಿಷ್ಠಾನದ ಎಸ್. ನಾಗರಾಜ ಕೆದ್ಲಾಯ ಸಮಾವೇಶವನ್ನು ಉದ್ಘಾಟಿಸಲಿರುವರು. ಕೃಷಿಕ ಸಂಘದ ಅಧ್ಯಕ್ಷ ರಾಮಕೃಷ್ಣ ಶರ್ಮ ಅಧ್ಯಕ್ಷತೆ ವಹಿಸಲಿರುವರು. ಬಡಗುಬೆಟ್ಟು ಕೋ-ಆಪರೇಟಿವ್ ಸೊಸೈಟಿಯ ಅಧ್ಯಕ್ಷ ಜಯಕರ ಶೆಟ್ಟಿ ಇಂದ್ರಾಳಿ, ಸಂಸ್ಕೃತಿ ವಿಶ್ವ ಪ್ರತಿಷ್ಠಾನ ಉಡುಪಿಯ ಸ್ಥಾಪಕ ಗೌರವಾಧ್ಯಕ್ಷ ವಿಶ್ವನಾಥ ಶೆಣೈ, ಕಾಪು ಶ್ರೀಲಕ್ಷ್ಮೀ ಜನಾರ್ದನ ದೇವಸ್ಥಾನದ ಆಡಳಿತ ಮೊಕ್ತೇಸರ ಮನೋಹರ ಶೆಟ್ಟಿ, ಕರ್ಣಾಟಕ ಬ್ಯಾಂಕ್ ಉಡುಪಿ ಪ್ರಾದೇಶಿಕ ಎ.ಜಿ.ಎಂ. ವಾದಿರಾಜ ಭಟ್ ಕೆ., ಪೆರಂಪಳ್ಳಿ ಎಡೇರಿ ಬೊಬ್ಬರ್ಯ ದೈವಸ್ಥಾನದ ಆಡಳಿತ ಮೊಕ್ತಸರ ಪಿ. ಎನ್. ಶಶಿಧರ ರಾವ್, ಈಸೀ ಲೈಫ್ ಎಂಟರ್ ಪ್ರೈಸಸ್‌ನ ಗೋವಿಂದ ರಾಜ್ ಕಳಾಯಿ, ಪುತ್ತೂರು ಎಸ್.ಆರ್.ಕೆ. ಭಾಗವಹಿಸಲಿದ್ದಾರೆ ಎಂದರು.

ಕೃಷಿ ವಿಚಾರ ತಾಂತ್ರಿಕ ಸಮಾವೇಶದಲ್ಲಿ ವೈಜ್ಞಾನಿಕ ಅಡಿಕೆ ಬೇಸಾಯ ಬಗ್ಗೆ ವಲಯ ತೋಟಗಾರಿಕಾ ಮತ್ತು

ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ರಾಮಕೃಷ್ಣ ಶರ್ಮ ಬಂಟಕಲ್ಲು ಅವರು ಮಾತನಾಡಿದರು.

> **ಕೃಷಿ ಮಾಹಿತಿ-ಮಾರ್ಗದರ್ಶನಗಳ ಜೊತೆಗೆ ಮಾರುಕಟ್ಟೆಯಲ್ಲಿ ಲಭ್ಯವಿರುವ ಆಧುನಿಕ ಕೃಷಿ ಪರಿಕರಗಳು, ಹೊಸ ಆವಿಷ್ಕೃತ ಯಂತ್ರೋಪಕರಣಗಳ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳು, ವಿವಿಧ ಬೆಳೆಗಳ ಸುಧಾರಿತ ತಂತ್ರಜ್ಞಾನದಿಂದ ಬೆಳೆಸಿದ ಗಿಡಗಳು, ಬೀಜ, ಕೃಷಿ ಸಂಬಂಧಿ ಪುಸ್ತಕ ಮಳಿಗೆಗಳು ಇರುತ್ತವೆ.**
> ರಾಮಕೃಷ್ಣ ಶರ್ಮ ಬಂಟಕಲ್ಲು, ಉಡುಪಿ ಜಿಲ್ಲಾ ಕೃಷಿಕ ಸಂಘದ ಅಧ್ಯಕ್ಷ

ಕೃಷಿ ಸಂಶೋಧನಾ ಕೇಂದ್ರದ ಸಹ ಸಂಶೋಧನಾ ನಿರ್ದೇಶಕ ಡಾ. ಧನಂಜಯ, ಆರೋಗ್ಯ ನೆಮ್ಮದಿಗಾಗಿ ಕೃಷಿ ಬಗ್ಗೆ ಉಡುಪಿ ಪೊಲೀಸ್ ಉಪಾಧೀಕ್ಷಕ ಪ್ರಭು ಡಿ.ಟಿ., ಲಾಭದಾಯಕ ಕೃಷಿಗೆ ವಿವಿಧ ತಂತ್ರಜ್ಞಾನದ ಬಗ್ಗೆ ಬ್ರಹ್ಮಾವರ ಕೃಷಿ ಮಹಾ ವಿದ್ಯಾಲಯದ ಪ್ರಾಂಶುಪಾಲರಾದ ಡಾ. ಲಕ್ಷ್ಮಣ್, ಹೈನುಗಾರಿಕೆಯಲ್ಲಿ ಕೃತಕ ಗರ್ಭಧಾರಣೆಯ ಸವಾಲುಗಳ ಬಗ್ಗೆ ಮಣಿಪಾಲದ ಮುಖ್ಯ ಪಶು ವೈದ್ಯಾಧಿಕಾರಿ ಡಾ. ಪ್ರಶಾಂತ ಶೆಟ್ಟಿ, ಭತ್ತದ ಇಳುವರಿ ಹೆಚ್ಚಿಸುವ ವಿಧಾನಗಳ ಬಗ್ಗೆ ಕೃಷಿ ಸಂಶೋಧನಾ ಕೇಂದ್ರ ಬ್ರಹ್ಮಾವರದ ಡಾ. ಸುಧೀರ್ ಕಾಮತ್, ಆಹಾರ ಪದ್ಧತಿ ಮತ್ತು ಮಧುಮೇಹ ಬಗ್ಗೆ ಡಾ. ಶ್ರುತಿ ಬಲ್ಲಾಳ್ ಅಂಬಲಪಾಡಿ ಉಪನ್ಯಾಸ ನೀಡುವರು.

ಕೃಷಿ ಇಲಾಖೆಯಿಂದ ಸಿಗುವ ಸರಕಾರಿ ಸೌಲಭ್ಯಗಳ ಬಗ್ಗೆ ಉಡುಪಿಯ ಜಂಟಿ ಕೃಷಿ ನಿರ್ದೇಶಕಿ ಪೂರ್ಣಿಮಾ, ತೋಟಗಾರಿಕೆ ಇಲಾಖೆಯಿಂದ ಸಿಗುವ ಸೌಲಭ್ಯಗಳ ಬಗ್ಗೆ ಉಡುಪಿ ತೋಟಗಾರಿಕೆ ಇಲಾಖೆ ಉಪ ನಿರ್ದೇಶಕಿ ಭುವನೇಶ್ವರಿ ಮತ್ತು ವಿದ್ಯುತ್ ಗ್ರಾಹಕರಿಗೆ ಅಗತ್ಯ ಮಾಹಿತಿಗಳನ್ನು ಉಡುಪಿ ಮೆಸ್ಕಾಂ ಅಧೀಕ್ಷಕ ಇಂಜಿನಿಯರ್ ದಿನೇಶ್ ಉಪಾಧ್ಯ ನೀಡಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಸಂಘದ ಪ್ರ. ಕಾರ್ಯದರ್ಶಿ ಶ್ರೀನಿವಾಸ್ ಭಟ್ ಕುದಿ, ಕಾರ್ಯದರ್ಶಿ ರವೀಂದ್ರ ಗುಜ್ಜರಬೆಟ್ಟು, ಉಪಾಧ್ಯಕ್ಷ ದಿನೇಶ್ ಶೆಟ್ಟಿ ಹೆರ್ಗ, ಶ್ರೀನಿವಾಸ್ ಆಚಾರ್ಯ ಬೈಲೂರು ಉಪಸ್ಥಿತರಿದ್ದರು.

ಚಳಿಗಾಲದ ಏಷ್ಯನ್ ಗೇಮ್ಸ್: ಸ್ಕೇಟಿಂಗ್‌ಗೆ ಅಣ್ಣ-ತಂಗಿ ಆಯ್ಕೆ

ಮಂಗಳೂರು: ಚೀನಾದ ಹಾರ್ಬಿನ್‌ನಲ್ಲಿ ಫೆಬ್ರವರಿಯಲ್ಲಿ ನಡೆಯಲಿರುವ ಚಳಿಗಾಲದ ಏಷ್ಯನ್ ಗೇಮ್ಸ್ 2025ರ ಐಸ್ ಸ್ಕೇಟಿಂಗ್ ತಂಡಕ್ಕೆ ಮಂಗಳೂರಿನ ಅಣ್ಣ-ತಂಗಿ ಆಯ್ಕೆಯಾಗಿದ್ದು, ಭಾರತವನ್ನು ಪ್ರತಿನಿಧಿಸಲಿದ್ದಾರೆ. ತನ್ನ ಅಮೋಘ ಪ್ರದರ್ಶನದ ಮೂಲಕ ಡೇನಿಯಲ್ ಸಲ್ವಡೋರೆ ಕೊನ್ಸೆಸಾವ್ ಹಾಗೂ ಡ್ಯಾಶಿಯಲ್ ಅಮಂಡಾ ಕೊನ್ಸೆಸಾವ್ ಈ ಐತಿಹಾಸಿಕ ಸಾಧನೆ ಮೆರೆದಿದ್ದಾರೆ.

ಥಾಯ್ಲೆಂಡ್‌ನ ಬ್ಯಾಂಕಾಕ್‌ನಲ್ಲಿ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದ ಡೇನಿಯಲ್ ಹಾಗೂ ಡ್ಯಾಶಿಯಲ್ ಅಂತಿಮವಾಗಿ ಭಾರತೀಯ ಐಸ್ ಸ್ಕೇಟಿಂಗ್ ತಂಡಕ್ಕೆ ಆಯ್ಕೆಯಾದರು. ಇವರು ಮಂಗಳೂರಿನ ಫ್ರಾನ್ಸಿಸ್ ಮತ್ತು ಡೋರಿಸ್ ಕೊನ್ಸೆಸಾವ್ ದಂಪತಿಯ ಮಕ್ಕಳಾಗಿದ್ದು, ಡೇನಿಯಲ್ ಕೊನ್ಸೆಸಾವ್ ಸಂತ ಜೋಸೆಫ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ತೃತೀಯ ವರ್ಷದ ಬಿ.ಇ. ವಿದ್ಯಾಭ್ಯಾಸ ಪಡೆಯುತ್ತಿದ್ದರೆ, ಡ್ಯಾಶಿಯಲ್ ಎಸ್‌ಡಿಎಂ ಕಾಲೇಜಿನ ಪ್ರಥಮ ವರ್ಷದ ಬಿಬಿಎ ವಿದ್ಯಾರ್ಥಿನಿಯಾಗಿದ್ದಾಳೆ. ಇವರಿಬ್ಬರೂ ಬಾಲ್ಯದಿಂದಲೇ ಸ್ಕೇಟಿಂಗ್ ರಿಂಕ್‌ನಲ್ಲಿ ಅದ್ಭುತ ಸಾಧನೆ ಮೆರೆಯುತ್ತಾ ಬಂದಿದ್ದಾರೆ.

ಚಳಿಗಾಲದ ಏಷ್ಯನ್ ಗೇಮ್ಸ್ 2025ರ ಐಸ್ ಸ್ಕೇಟಿಂಗ್ ತಂಡಕ್ಕೆ ಮಂಗಳೂರಿನ ಅಣ್ಣ-ತಂಗಿ ಆಯ್ಕೆಯಾಗಿದ್ದಾರೆ.

ಮಂಗಳೂರಿನ ಹೈಫ್ಲೈಯರ್ಸ್ ಸ್ಕೇಟಿಂಗ್ ಕ್ಲಬ್ ನ ಸದಸ್ಯರಾಗಿರೋ ಇವರಿಬ್ಬರಿಗೂ ರೋಲರ್ ಸ್ಕೇಟಿಂಗ್ ನಲ್ಲಿ ಮೋಹನ್‌ದಾಸ್ ಕೆ. ಅಶೋಕನಗರದ ಫ್ರಾನ್ಸಿಸ್ ಡೋರಿಸ್ ಸ್ಕೇಟ್ ಸಿಟಿಯಲ್ಲಿ ತರಬೇತಿ ನೀಡುತ್ತಿದ್ದಾರೆ.ಐಸ್ ಸ್ಕೇಟಿಂಗ್ ನಲ್ಲಿ ಕೆ. ಶ್ರೀಕಾಂತ್ ರಾವ್ ಮೈಸೂರು ಹಾಗೂ ಐಸ್ ಸ್ಕೇಟಿಂಗ್ ಅಸೋಸಿಯೇಶನ್ ಆಫ್ ಇಂಡಿಯಾ ತರಬೇತಿ ನೀಡಿರುತ್ತಾರೆ.ಡೇನಿಯಲ್ ಹಾಗೂ ಡ್ಯಾಶಿಯಲ್ ಕ್ರಮವಾಗಿ ಚೀನಾದ ಹಾರ್ಬಿನ್ ಮತ್ತು ದಕ್ಷಿಣ ಕೊರಿಯಾದಲ್ಲಿ ಒಂದು ತಿಂಗಳ ನ ಕಾಲ ಐಸ್ ಸ್ಕೇಟಿಂಗ್‌ನ ತರಬೇತಿ ಪಡೆದುಕೊಂಡಿದ್ದರು.

ಮನೆಗಳ ಸುತ್ತಮುತ್ತ ಸ್ವಚ್ಛತೆ ಇರಲಿ

ಚಿಕ್ಕಮಗಳೂರು: ಮನೆ ಹಾಗೂ ಸುತ್ತಮುತ್ತಲು ಸ್ವಚ್ಛತೆ ಕಾಪಾಡುವ ಮೂಲಕ ರೋಗ ರುಜಿನ ದೂರವಿರಿಸಬೇಕು. ಆರೋಗ್ಯಪೂರ್ಣ ಸಮಾಜ ನಿರ್ಮಿಸುವಲ್ಲಿ ಪ್ರತಿಯೊಬ್ಬರು ಕೈಜೋಡಿಸಬೇಕು ಎಂದು ನಗರಸಭಾ ಸದಸ್ಯ ಅರುಣ್ ಕುಮಾರ್ ಹೇಳಿದರು.

ಕಲ್ಯಾಣನಗರದಲ್ಲಿ ನಗರ ವೆಲ್ಫೇರ್ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ಬೀದಿಬದಿ ಸ್ವಚ್ಛತಾ ಕಾರ್ಯ ಕ್ರಮದಲ್ಲಿ ಇತ್ತೀಚೆಗೆ ಭಾಗಿಯಾಗಿ ಅವರು ಮಾತನಾಡಿದರು. ಮನುಷ್ಯ ಶಾರೀರಿಕವಾಗಿ ಶುದ್ಧವಾಗುವ ಜೊತೆಗೆ ಮನೆಯಂಗಳ ಹಾಗೂ ಸುತ್ತಮುತ್ತಲು ಸ್ವಚ್ಛತೆ ಕಾ ಪಾಡುವುದನ್ನು ಕರ್ತವ್ಯವೆಂದು ಭಾವಿಸಬೇಕು. ಅಕ್ಕಪಕ್ಕದ ಅಥವಾ ವಾರ್ಡಿನ ನಿವಾಸಿಗಳು ಎಲ್ಲೆಂದರಲ್ಲಿ ಕಸ ಬೀಸಾಡುವುದನ್ನು ಕಂಡಲ್ಲಿ ತಿಳಿಹೇಳಿ, ಕಸದ ಗಾಡಿಗಳಿಗೆ ಹಾಕುವಂತೆ ಸೂಚಿಸಬೇಕು ಎಂದರು. ಇತ್ತೀಚಿನ ದಿನಗಳಲ್ಲಿ ಸೋಂಕಿನಿಂದ ಮನುಷ್ಯನಿಗೆ ವಿವಿಧ ರೀತಿ ರೋಗಗಳು ಉಲ್ಬಣಿಸುತ್ತಿವೆ. ಅಲ್ಲದೇ ಕೆಲವರು ಬೀದಿ ಬದಿಗಳಲ್ಲಿ ಹಸಿಕಸ ಎಲ್ಲೆಂದರಲ್ಲೇ ಬೀಸಾಡುತ್ತಿದ್ದಾರೆ. ಆದರೆ ಕಾಲಕ್ರಮೇಣ ಕೊಳೆತು ನಾರಿ ಮಕ್ಕಳು, ವೃದ್ದರು ಅನಾರೋಗ್ಯಕ್ಕೆ ತುತ್ತಾಗುವ ಸಂಭವವಿರುವ ಕಾರಣ ನಿವಾಸಿಗಳು ಎಚ್ಚೆತ್ತುಕೊಂಡು ಗಾಡಿ ಗಳಿಗೆ ಕಸವನ್ನು ಹಾಕಬೇಕು ಎಂದರು. ನಗರ ವೆಲ್ಫೇರ್ ಟ್ರಸ್ಟ್ ಗೌರವಾಧ್ಯಕ್ಷ ಕಿಶೋರ್‌ಕುಮಾರ್ ಹೆಗ್ಡೆ ಮಾತನಾಡಿ,

ಮಾನವ ಮೊದಲು ಸ್ವಚ್ಛ ತೆಗೆ ಆದ್ಯತೆ ಕೊಡಬೇಕು. ಕೇವಲ ಸುತ್ತಮುತ್ತ ಸ್ವಚ್ಛಂಧಗೊಂಡರೆ ಸಾಲದು. ಸಾಮಾಜಿಕ ಕಾರ್ಯದ ಮೂ ಲಕ ಸಮಾಜಕ್ಕೆ ಮಾದರಿಯಾಗಿ ಬದುಕಿದರೆ ಮಾನವನಾಗಿ ಜನಿಸಿದ್ದಕ್ಕೂ ಸಾರ್ಥಕವಾದಂತೆ ಎಂದು ಹೇಳಿ ದರು.

ಈ ಸಂದರ್ಭದಲ್ಲಿ ಟ್ರಸ್ಟಿನ ಅಧ್ಯಕ್ಷ ಹರೀಶ್, ಸದಸ್ಯರು ಗಳಾದ ನಿಂಗರಾಜ್, ಮಹಾಬಲ, ವಾರ್ಡಿನ ನಿವಾಸಿಗಳು ಹಾಜರಿದ್ದರು.

ಬೆಂಬಲ ಬೆಲೆಯಡಿ ಕಡಲೆಕಾಳು ಖರೀದಿ: ಡಿಸಿ

ಚಿಕ್ಕಮಗಳೂರು: ಕೇಂದ್ರ ಸರಕಾರದ ಬೆಂಬಲ ಬೆಲೆ ಯೋಜನೆಯಡಿ ಎಫ್‌ಎಕ್ಯೂ ಗುಣಮಟ್ಟದ ಕಡಲೆಕಾಳು ಉತ್ಪನ್ನವನ್ನು ಪ್ರತಿ ಕ್ವಿಂಟಾಲ್‌ಗೆ ರು. 5,650 ರಂತೆ ಖರೀದಿಸಲಾಗುವುದು ಎಂದು ಜಿಲ್ಲಾಧಿಕಾರಿ ಮೀನಾ ನಾಗರಾಜ್ ಸಿ.ಎನ್. ತಿಳಿಸಿದರು.

ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಇತ್ತೀಚಿಗೆ

ನಡೆದ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸರ್ಕಾರ ಆದೇಶ ಹೊರಡಿಸಿದ ದಿನದಿಂದ ಖರೀದಿ ಕೇಂದ್ರಗಳಲ್ಲಿ ರೈತರ ಅಗತ್ಯ ದಾಖಲೆಗಳೊಂದಿಗೆ ನೋಂದಣಿಯನ್ನು ಮಾಡಿಕೊಳ್ಳಲಾಗುತ್ತದೆ. ರೈತರ ನೋಂದಣಿ ಕಾಲಾವಧಿಯನ್ನು 22ರ ಏಪ್ರಿಲ್ 2025ರ ವರೆಗೆ ನಿಗದಿಪಡಿಸಲಾಗಿದೆ. ನೋಂದಣಿ ಕಾರ್ಯದ ಜೊತೆಗೆ ಖರೀದಿ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ. ಸರಕಾರಿ ರಜಾ ದಿನಗಳನ್ನು ಹೊರತುಪಡಿಸಿ ಉಳಿದ ದಿನಗಳಲ್ಲಿ ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ಕಡಲೆಕಾಳು ಉತ್ಪನ್ನಗಳನ್ನು ಖರೀದಿಸಲಾಗುವುದು ಎಂದರು. ಕಡಲೇಕಾಳು ಪ್ರತಿ ಎಕರೆಗೆ ನಾಲ್ಕು ಕ್ವಿಂಟಾಲ್ ನಂತೆ ಪ್ರತಿ ರೈತರಿಂದ ಗರಿಷ್ಠ 20 ಕ್ವಿಂಟಾಲ್ ಪ್ರಮಾಣದ ಎಫ್‌ಎಕ್ಯೂ ಗುಣಮಟ್ಟದ ಕಡಲೆಕಾಳು ಉತ್ಪನ್ನವನ್ನು ಸರ್ಕಾರದ ಬೆಂಬಲ ಬೆಲೆಯಂತೆ ಪ್ರತಿ ಕ್ವಿಂಟಾಲ್‌ಗೆ ರೂ. 5,650 ರಂತೆ ಖರೀದಿಸಲಾಗುವುದು ಎಂದು ಹೇಳಿದರು.

ಎಫ್‌ಎಕ್ಯೂ ಗುಣಮಟ್ಟದ ಕಡಲೆಕಾಳು ಉತ್ಪನ್ನಗಳನ್ನು ಮಾರಾಟ ಮಾಡಲು ರೈತರು ನೋಂದಣಿಗಾಗಿ ತಮ್ಮ ಆಧಾರ್ ಗುರುತಿನ ಚೀಟಿಯ ನಕಲು ಪ್ರತಿ, ಪಹಣಿಯಲ್ಲಿರುವ ಹೆಸರಿನ ರೈತರ ಆಧಾರ್ ಸಂಖ್ಯೆ ಜೋಡಣೆಗೊಂಡ ಬ್ಯಾಂಕ್ ಖಾತೆ ಪುಸ್ತಕದ ನಕಲು ಪ್ರತಿಯನ್ನು ಸಲ್ಲಿಸಬೇಕು.

ಕೇಂದ್ರ ಸರಕಾರದ ಬೆಂಬಲ ಬೆಲೆ ಯೋಜನೆಯಡಿ ಖರೀದಿಸುವ ಕಡಲೆಕಾಳು ಉತ್ಪನ್ನವು ನಿರ್ಧಿಷ್ಟ ಪಡಿಸಿದ ಎಫ್‌ಎಕ್ಯೂ ಗುಣಮಟ್ಟ ಹೊಂದಿರಬೇಕು. ಕಡಲೆ ಕಾಳು ಚೆನ್ನಾಗಿ ಒಣಗಿಸಬೇಕು. ತೇವಾಂಶವು ಶೇ. 14ಕ್ಕಿಂತ ಕಡಿಮೆ ಇರಬೇಕು. ಕಡಲೆಕಾಳು ಉತ್ಪನ್ನವು ಗುಣಮಟ್ಟದ ಗಾತ್ರ, ಬಣ್ಣ ಮತ್ತು ಆಕಾರವನ್ನು ಹೊಂದಿರಬೇಕು. ಗಟ್ಟಿಯಾಗಿರಬೇಕು ಮತ್ತು ಮಣ್ಣಿನಿಂದ ಬೇರ್ಪಡಿಸಲ್ಪಟ್ಟು ಸ್ವಚ್ಛವಾಗಿರಬೇಕು ಎಂದು ತಿಳಿಸಿದ ಅವರು ಕಡಲೆಕಾಳು ಉತ್ಪನ್ನವು ಕ್ರಿಮಿಕೀಟಗಳಿಂದ ಮುಕ್ತವಾಗಿರಬೇಕು. ರೈತರಿಗೆ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿಯವರು ನೀಡುವ ಗೋಣಿ ಚೀಲದಲ್ಲಿ 50 ಕೆ.ಜಿ ಪ್ರಮಾಣದಲ್ಲಿ ತುಂಬ ಬೇಕು ಎಂದು ಹೇಳಿದರು.

ಜಿಲ್ಲೆಯ ಕಡೂರು ಹಾಗೂ ಅಜ್ಜಂಪುರಗಳಲ್ಲಿ ಖರೀದಿ ಕೇಂದ್ರಗಳನ್ನು ತೆರಯಾಲಾಗಿದ್ದು, ರೈತರು ಖರೀದಿ ಕೇಂದ್ರದ ಅಧಿಕಾರಿಗಳನ್ನು ಅವರ ಮೊಬೈಲ್ ಸಂಖ್ಯೆ : 9449864428, 9449206938, 9686466869 ಸಂಪರ್ಕಿಸಿ ಮಾಹಿತಿ ಪಡೆಯುವಂತೆ ತಿಳಿಸಿದ ಅವರು ರೈತರು ಇದರ ಸದುಪಯೋಗ ಪಡೆದುಕೊಳ್ಳುವಂತೆ ತಿಳಿಸಿದರು. ಸಭೆಯಲ್ಲಿ ಕೃಷಿ ಇಲಾಖೆ ಜಂಟಿ ನಿರ್ದೇಶಕಿ ಸುಜಾತಾ, ಕೃಷಿ ಮಾರಾಟ ಇಲಾಖೆ ಸಹಾಯಕ ನಿರ್ದೇಶಕ ವಿಶ್ವನಾಥರೆಡ್ಡಿ, ಸಹಾಯಕ ಕಾರ್ಯದರ್ಶಿ ಭವ್ಯ, ಕೃಷಿ ಮಾರಾಟ ಮಹಾಮಂಡಳಿ ವ್ಯವಸ್ಥಾಪಕ ಚೇತನ್, ಸಹಕಾರ ಸಂಘಗಳ ನಿಬಂಧಕರ ಕಛೇರಿಯ ತ್ರಿವೇಣಿ ಮುಂತಾದವರಿದ್ದರು.

ಶಶಿ ಬಂಡಿಮಾರ್ ನಿಧನಕ್ಕೆ ಪತ್ರಕರ್ತರ ನುಡಿ ನಮನ

ಮಂಗಳೂರು: ದಕ್ಷಿಣ ಕನ್ನಡ ಕಾರ್ಯನಿರತ ಪತ್ರಕರ್ತರ ಸಂಘದ ಸದಸ್ಯ ಟೈಮ್ಸ್ ಆಫ್ ಕುಡ್ಲದ ಪ್ರಧಾನ ಸಂಪಾದಕ ಶಶಿ ಬಂಡಿಮಾರ್ ಕಳೆದ ಬುಧವಾರ ನಿಧನರಾದ ಹಿನ್ನೆಲೆಯಲ್ಲಿ ಪತ್ರಿಕಾ ಭವನದಲ್ಲಿ ದಕ್ಷಿಣ ಕನ್ನಡ ಕಾರ್ಯ ನಿರತ ಪತ್ರಕರ್ತರ ಸಂಘ, ಮಂಗಳೂರು ಪ್ರೆಸ್ ಕ್ಲಬ್ ಹಾಗೂ ಪತ್ರಿಕಾ ಭವನ ಟ್ರಸ್ಟ್ ವತಿಯಿಂದ ಸಂತಾಪ ಸೂಚಕ ಸಭೆ ನಡೆಯಿತು.

ಟೈಮ್ಸ್ ಆಫ್ ಕುಡ್ಲತುಳು ಪತ್ರಿಕೆಯ ಸಂಪಾದಕ, ನಮ್ಮ ಸಂಘದ ಸಕ್ರಿಯ ಸದಸ್ಯರಾಗಿದ್ದು, ತುಳು ಭಾಷೆ ಸಂಸ್ಕೃತಿಯ ಕುರಿತಾಗಿ ತನ್ನ ಪತ್ರಿಕೆಯ ಮೂಲಕ ಶಶಿ ಬಂಡಿಮಾರ್ ಜಾಗೃತಿ ಮೂಡಿಸಿದವರು ಎಂದು ದಕ್ಷಿಣ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಅಧ್ಯಕ್ಷ ಶ್ರೀನಿವಾಸ ನಾಯಕ್ ನುಡಿನಮನ ಸಲ್ಲಿಸಿದರು.

ಯುವ ಉತ್ಸಾಹಿ ಉದ್ಯಮಿ ಪರಿಶ್ರಮದಿಂದ ತುಳು ಪತ್ರಿಕೆಯನ್ನು ನಡೆಸಿಕೊಂಡು ಬಂದವರು ಎಲ್ಲರೊಂದಿಗೆ ಉತ್ತಮ ಒಡನಾಟವನ್ನು ಹೊಂದಿದ್ದ ಪತ್ರಕರ್ತ ಶಶಿ ಬಂಡಿಮಾರ್ ನಮ್ಮನ್ನಗಲಿದ್ದಾರೆ ಎಂದು ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ.ಹರೀಶ್ ರೈ ಸಂತಾಪ ಸೂಚಿಸಿದ್ದಾರೆ.

ತುಳು ಪತ್ರಿಕೆ ನಡೆಸುತ್ತಾ, ತುಳು ಭಾಷೆಗೆ ಸೂಕ್ತ ಸ್ಥಾನಮಾನ ರಾಜ್ಯ ದಲ್ಲಿ ದೊರೆಯಬೇಕು, ಎಂಟನೆ

ಪತ್ರಕರ್ತ ಶಶಿ ಬಂಡಿಮಾರ್ ನಿಧನರಾದ ಹಿನ್ನೆಲೆಯಲ್ಲಿ ಪತ್ರಿಕಾ ಭವನದಲ್ಲಿ ಸಂತಾಪ ಸೂಚಕ ಸಭೆ ನಡೆಯಿತು.

> **ಯುವ ಉತ್ಸಾಹಿ ಉದ್ಯಮಿ ಪರಿಶ್ರಮದಿಂದ ತುಳು ಪತ್ರಿಕೆಯನ್ನು ನಡೆಸಿಕೊಂಡು ಬಂದವರು ಎಲ್ಲರೊಂದಿಗೆ ಉತ್ತಮ ಒಡನಾಟವನ್ನು ಹೊಂದಿದ್ದ ಪತ್ರಕರ್ತ ಶಶಿ ಬಂಡಿಮಾರ್ ನಮ್ಮನ್ನಗಲಿದ್ದಾರೆ.**
> ಪಿ.ಬಿ.ಹರೀಶ್ ರೈ, ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ

ಪರಿಚ್ಛೇದದಲ್ಲಿ ಸೇರಬೇಕು ಎನ್ನುವ ಪ್ರಯತ್ನಕ್ಕೆ ಪೂರಕವಾಗಿ ಪತ್ರಿಕೆಯ ಮೂಲಕ ದಾಖಲೆಗಳ ಸಂಗ್ರಹದ ಮೂಲಕ ಪ್ರಯತ್ನ ಪಟ್ಟ ಶಶಿ ಬಂಡಿಮಾರ್ ನಮ್ಮನ್ನಗಲಿದ್ದಾರೆ ಎಂದು ತುಳುನಾಡು ರಕ್ಷಣಾ ವೇದಿಕೆಯ ಸಂಸ್ಥಾಪಕ ಯೋಗೀಶ್ ಶೆಟ್ಟಿ ಜಪ್ಪು ಸಂತಾಪ ಸೂಚಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಭಾಸ್ಕರ ರೈ ಕಟ್ಟ, ಕೋಶಾಧಿಕಾರಿ ಪುಷ್ಪರಾಜ್ .ಬಿ.ಎನ್, ಸದಸ್ಯ ಯಶೋಧರ ಕೋಟ್ಯಾನ್ ನುಡಿನಮನ ಸಲ್ಲಿಸಿದರು.ಪ್ರಧಾನ ಕಾರ್ಯದರ್ಶಿ ಜಿತೇಂದ್ರ ಕುಂದೇಶ್ವರ ನುಡಿನಮನ ಸಲ್ಲಿಸಿ ವಂದಿಸಿದರು. ಪತ್ರಿಕಾ ಭವನಟ್ರಸ್ಟ್ ಅಧ್ಯಕ್ಷ ರಾಮಕೃಷ್ಣ, ಕಾರ್ಯ ಕಾರಿ ಸಮಿತಿ ಸದಸ್ಯರಾದ ರಾಜೇಶ್ ದಡ್ಡಂಗಡಿ ಹಾಗೂ ಇತರ ಸದಸ್ಯರು ಮತ್ತು ಟೈಮ್ಸ್ ಆಫ್ ಕುಡ್ಲ ತುಳು ಪತ್ರಿಕೆ ಯ ಪತ್ರಕರ್ತರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ವಿಧಾನಸೌಧ ಆವರಣದಲ್ಲಿ ಪುಸ್ತಕ ಮೇಳ ಫೆ.28ರಿಂದ

ಮಂಗಳೂರು: ಜನಸಾಮಾನ್ಯರಿಗೆ ವಿಧಾನ ಸೌಧ ಆವರಣ ಮುಕ್ತವಾಗಿಸಿ, ಅವರಲ್ಲಿ ಓದಿನ ಬಗ್ಗೆ ಆಸಕ್ತಿ ಮೂಡಿಸುವ ಉದ್ದೇಶದೊಂದಿಗೆ ಫೆ.28ರಿಂದ ಮಾ.3ರವರೆಗೆ ವಿಧಾನ ಸೌಧ ಆವರಣದಲ್ಲಿ ಪುಸ್ತಕ ಮತ್ತು ಸಾಹಿತ್ಯ ಮೇಳ ಆಯೋಜಿಸಲಾಗುತ್ತಿದೆ ಎಂದು ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್ ತಿಳಿಸಿದ್ದಾರೆ.

ಅವರು ಸೋಮವಾರ ಮಂಗಳೂರು ಸರ್ಕಿಟ್ ಹೌಸ್ ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ವಿಧಾನಸೌಧದ ಆವರಣದಲ್ಲಿ ಫೆ.28ರಿಂದ ಮಾ.3ರವರೆಗೆ ಪುಸ್ತಕ ಮತ್ತು ಸಾಹಿತ್ಯ ಮೇಳ ನಡೆಯಲಿದೆ. ನಾಡಿನ ಸಾಹಿತಿಗಳು, ಬುದ್ಧಿಜೀವಿಗಳು, ಬರಹಗಾರರು, ಸಚಿವರು, ಶಾಸಕರು ಸೇರಿದಂತೆ ಪುಸ್ತಕಗಳನ್ನು ಪ್ರೀತಿಸುವವರು ಭಾಗವಹಿಸಲಿರುವ ಈ ಮೇಳಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಫೆ.28ರಂದು ಚಾಲನೆ ನೀಡಲಿದ್ದಾರೆ ಎಂದು ಹೇಳಿದರು. ಪುಸ್ತಕ ಮೇಳದೊಂದಿಗೆ ಸಾಹಿತ್ಯ ಚರ್ಚೆ, ಗೋಷ್ಠಿ, ಪುಸ್ತಕ ಬಿಡುಗಡೆ ಕಾರ್ಯಕ್ರಮಗಳಿಗೂ ಇಲ್ಲಿ ಅವಕಾಶ ನೀಡಲಾಗಿದೆ. ಪುಸ್ತಕ ಮೇಳದ ಯಶಸ್ಸಿಗೆ ಹಿರಿಯ ಅಧಿಕಾರಿಗಳ ಸಮಿತಿ ರಚಿಸಲಾಗಿದೆ ಎಂದು ಅವರು ಹೇಳಿದರು.

ಪುಸ್ತಕ ಮೇಳದಲ್ಲಿ ಖಾಸಗಿ ಪುಸ್ತಕ ಪ್ರಕಾಶನ ಗಳಿಗೂ ಪುಸ್ತಕಗಳ ಪ್ರದರ್ಶನಕ್ಕೆ ಅವಕಾಶ ನೀಡಲಾಗುವುದು. ಲೇಖಕರು ಅಥವಾ ಸಾಹಿತಿಗಳು ತಮ್ಮ ಪುಸ್ತಕಗಳನ್ನು ಬಿಡುಗಡೆಗೊಳಿಸಲು ಅವಕಾಶ ಕಲ್ಪಿಸಲಾಗುವುದು. ಇದಲ್ಲದೆ, ಉತ್ತಮ ಸಾಹಿತ್ಯ ಕೃತಿಗೆ ಪ್ರಶಸ್ತಿ ನೀಡಲು ಉದ್ದೇಶಿಸಲಾಗಿದೆ ಎಂದು ಸ್ಪೀಕರ್ ವಿವರಿಸಿದರು.

ಪುಸ್ತಕ ಮೇಳದ ಅವಧಿಯಲ್ಲಿ ಸಾರ್ವಜನಿಕರಿಗೆ ಮುಕ್ತ ಅವಕಾಶ ಕಲ್ಪಿಸಲಾಗುವುದು, ಮೇಳದ ಸಂದರ್ಭದಲ್ಲಿ ನಿತ್ಯ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.ಇಲ್ಲಿ ಭೇಟಿ ನೀಡುವವರಿಗೆ ತರಹೇವಾರಿ ತಿಂಡಿ-ಖಾದ್ಯಗಳನ್ನು ಒಳಗೊಂಡ ಆಹಾರ ಮೇಳವೂ ಇರಲಿದೆ. ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲಾಗುವುದು. ವಿಚಾರಗೋಷ್ಠಿಗಳು, ಚರ್ಚೆಗಳೂ ನಡೆಯಲಿವೆ ಎಂದು ಯು.ಟಿ. ಖಾದರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್ ಅವರು ಮಾತನಾಡಿದರು.

ಅನುದಾನದಿಂದ ಖರೀದಿಗೆ ಅವಕಾಶ

ಸ್ಪರ್ಧಾತ್ಮಕ ಪುಸ್ತಕಗಳು ಸೇರಿದಂತೆ ನಾನ ಪ್ರಕಾರದ ಬೇಡಿಕೆಯ ಪುಸ್ತಕಗಳನ್ನು ಶಾಸಕರ ಇಲ್ಲಿ ಖರೀದಿಸಿ ತಮ್ಮ ಕ್ಷೇತ್ರಗಳಲ್ಲಿನ ಗ್ರಂಥಾಲಯಗಳು, ಸರಕಾರಿ ಕಾಲೇಜುಗಳಿಗೆ ಪೂರೈಸಬಹುದು. ಇದಕ್ಕೆ ಪೂರಕವಾಗಿ ಶಾಸಕ ನಿಧಿಯಲ್ಲಿನ 2ರಿಂದ 3 ಲಕ್ಷರೂ. ವರೆಗೆ ಪುಸ್ತಕಗೆ ಖರೀದಿಗೆ ಅವಕಾಶ ಮಾಡಿಕೊಡಲಾಗುವುದು ಎಂದು ಸಭಾಧ್ಯಕ್ಷ ಯು.ಟಿ. ಖಾದರ್ ಅವರು ಹೇಳಿದರು.

ಸವಿತಾ ಸಮುದಾಯ ಒಗ್ಗೂಡಲಿ: ಆನಂದ್ ಹೊಸಬೆಟ್ಟು

ಮಂಗಳೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ದ.ಕ ಜಿಲ್ಲಾ ಸವಿತಾ ಸಮಾಜ ಇವರ ಸಹಕಾರದೊಂದಿಗೆ ಸವಿತಾ ಮಹರ್ಷಿ ಜಯಂತಿ ಮಂಗಳವಾರ ನಗರದ ಸರಕಾರಿ ನೌಕರರ ಸಂಘದ ನಂದಿನಿ ಸಭಾಭವನದಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ಆನಂದ್ ಭಂಡಾರಿ ಹೊಸಬೆಟ್ಟು ಮಾತನಾಡಿ, ಸವಿತಾ ಸಮಾಜ ಅತ್ಯಂತ ಕಡಿಮೆ ಜನರನ್ನು ಹೊಂದಿದೆ. ಈ ಸಮಾಜದವರು ಒಂದಾದರೆ ಮಾತ್ರ ಸವಿತಾ ಸಮಾಜದ ಏಳಿಗೆಯಾಗುತ್ತದೆ. ಆದ್ದರಿಂದ ಸವಿತಾ ಸಮಾಜದವರು ಪರಸ್ಪರ ಒಗ್ಗೂಡಬೇಕು. ಸವಿತಾ ಸಮಾಜದ ಏಳಿಗೆಗೋಸ್ಕರ ಸಹಕಾರ ನೀಡಬೇಕು ಎಂದರು. ಉಪನ್ಯಾಸಕರಾಗಿ ಆಗಮಿಸಿದ ಲೇಖಕ ಟಿ.ಎ.ಎನ್ ಖಂಡಿಗೆ ಮಾತನಾಡಿ, ಕ್ಷೌರ ಸಮಾಜದ ಮೂಲ ಪುರುಷ ಸವಿತಾ ಮಹರ್ಷಿ ದೇವಾನುದೇವತೆಗಳಿಗೆ ಕ್ಷೌರ ಮಾಡುತ್ತಿದ್ದರು.ಅವರ ಚಿತ್ರವನ್ನು ಗಮನಿಸಿದಾಗ ಅವರ ಕೈಗಳಲ್ಲಿರುವ ಒಂದೊಂದು ವಸ್ತುಗಳು ಒಂದೊಂದು ವಿಚಾರಗಳನ್ನು ತಿಳಿಸುತ್ತದೆ. ಅವರು ಬರೀ ಕ್ಷೌರ ಕೆಲಸ ಮಾತ್ರವಲ್ಲದೆ ಬೇರೆ ಬೇರೆ ವೃತ್ತಿಯಲ್ಲಿ ಪರಿಣಿತಿ ಹೊಂದಿದವರು ಎಂದು ತಿಳಿಯುತ್ತದೆ ಎಂದರು. ಧ್ಯಾನದ ಸಂಕೇತವಾಗಿರುವ ಜಪಮಾಲೆ ನಾವು ಮಾಡುವ ಕೆಲಸದಲ್ಲಿ ಏಕಾಗ್ರತೆ ಇರಬೇಕು ಎಂಬ ಸಂದೇಶ ನೀಡುತ್ತದೆ.ಇನ್ನೊಂದು ಕೈಯಲ್ಲಿರುವ ತಾವರೆ ಯಾವ ರೀತಿ ಕೆಸರಿನಲ್ಲಿ ಹುಟ್ಟಿ ವಿಶೇಷ ಸ್ಥಾನವನ್ನು ಪಡೆದುಕೊಳ್ಳುತ್ತದೆ ಅದೇ ರೀತಿ ಮನುಷ್ಯನು ವಿಶೇಷ ಸ್ಥಾನವನ್ನು ಪಡೆದುಕೊಳ್ಳಬೇಕು ಎಂಬ ಅರ್ಥವನ್ನು ಹೊಂದಿದೆ. ಧನ್ವಂತರಿ ಬಿಲ್ಲು ಸುಮಾರು ವರ್ಷಗಳ ಹಿಂದೆ ಇದ್ದ ಕ್ಷೌರಿಕರು ವೈದಿಕ ವೃತ್ತಿಯನ್ನು ಕೂಡ ಮಾಡುತ್ತಿದ್ದರು. ಆಯುರ್ವೇದದಲ್ಲಿ ಕೂಡ ಪರಿಣಿತಿ ಹೊಂದಿದ್ದರು ಎಂದು ಹೇಳಿದರು. ಅವರ ಕೈಯಲ್ಲಿರುವ ವೀಣೆಯು ಸಂಗೀತ ಕಲೆಯಲ್ಲಿಯೂ ಕೂಡಾ ಪ್ರವೀಣರಾಗಿದ್ದರು ಎಂದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಡಿ ವೇದವ್ಯಾಸ್ ಕಾಮತ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಮಂಗಳೂರು ತಾಲೂಕು ಸವಿತಾ ಸಮಾಜದ ಅಧ್ಯಕ್ಷ ಸುರೇಶ್ ಭಂಡಾರಿ, ಮಾಜಿ ಮೇಯರ್ ದಿವಾಕರ್ ಪಂಡಿತ್, ವಸಂತ್ ಎಂ ಬೆಳ್ಳೂರು ಮತ್ತಿತರರು ಉಪಸ್ಥಿತರಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ರಾಜೇಶ್.ಜಿ ಸ್ವಾಗತಿಸಿ, ರೇಣುಕಾ ಕಣಿಯೂರು ನಿರೂಪಿಸಿದರು.

ಸೋಲನ್ನು ಕ್ರೀಡಾ ಸ್ಫೂರ್ತಿಯಿಂದ ಸ್ವೀಕರಿಸಿ

ಚಿಕ್ಕಮಗಳೂರು: ಯಾವುದೇ ಚುನಾವಣೆ ಅಥವಾ ಕ್ಷೇತ್ರದಲ್ಲಿ ನಡೆಯುವ ಸ್ಪರ್ಧೆಗಳಲ್ಲಿ ಸೋಲನ್ನು ಕ್ರೀಡಾ ಸ್ಪೂರ್ತಿಯಿಂದ ಸ್ವೀಕರಿಸಿದರೆ ಗೆಲುವಿನ ಮೆಟ್ಟಿಲು ಸುಲಭವಾಗುತ್ತದೆ ಎಂದು ಬಿಜೆಪಿ ಹಿರಿಯ ಮುಖಂಡ ಕೋಟೆ ರಂಗನಾಥ್ ಅಭಿಪ್ರಾಯಪಟ್ಟಿದ್ದಾರೆ. ಸೋಮವಾರ ನಗರದ ಜಿಲ್ಲಾ ಬಿಜೆಪಿ ಕಚೇರಿ ಪಾಂಚಜನ್ಯದಲ್ಲಿ ನಡೆದ ಹಿರೇಮಗಳೂರು ಕೃಷಿ ಪತ್ತಿನ ಸಹಕಾರ ಬ್ಯಾಂಕ್ ಚುನಾವಣೆಯಲ್ಲಿ ಗೆದ್ದ ಬಿಜೆಪಿ ಬೆಂಬಲಿತ ನಿರ್ದೇಶಕರುಗಳನ್ನು ಅಭಿನಂದಿಸಿ ಅವರು ಮಾತನಾಡಿ, ಚುನಾವಣೆಗೆ ನಮ್ಮ ನಾಯಕರಾದ ವಿಧಾನ ಪರಿಷತ್ ಶಾಸಕರಾದ ಡಾ.ಸಿ.ಟಿ.ರವಿ, ಜಿಲ್ಲಾ ಬಿಜೆಪಿ ಅಧ್ಯಕ್ಷ ಎಂ.ಆರ್.ದೇವರಾಜಶೆಟ್ಟಿ, ಡಿಸಿಸಿ ಬ್ಯಾಂಕ್ ನಿರ್ದೇಶಕ ಮುಗುಳುವಳ್ಳಿ ನಿರಂಜನ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಸತೀಶ್ ಸೇರಿದಂತೆ ಹಲವರು ಸಹಕಾರ ನೀಡಿದ್ದು, ಅವರೆಲ್ಲರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು. ಬಿಜೆಪಿ ನಗರ ಮಂಡಲ ಅಧ್ಯಕ್ಷ ಕೆಂಪನಹಳ್ಳಿ ಪುಷ್ಪರಾಜ್ ಮಾತನಾಡಿದರು. ಚುನಾವಣೆಯಲ್ಲಿ ಜಯಗಳಿಸಿದ ಸಚಿನ್, ಮೋಹನ್ ಅವರಿಗೆ ಶಾಲು ಹೊದಿಸಿ ಮಾಲಾರ್ಪಣೆ ಮಾಡುವ ಮೂಲಕ ಅಭಿನಂದಿಸಲಾಯಿತು. ನಗರಸಭೆ ಮಾಜಿ ಸದಸ್ಯ ಜಾನಯ್ಯ, ಜಿಲ್ಲಾ ಬಿಜೆಪಿ ಮಾಧ್ಯಮ ಸಹ ಪ್ರಮುಖ್ ಎಚ್.ಕೆ.ಕೇಶವಮೂರ್ತಿ ಮಾತನಾಡಿದರು. ಜಿಲ್ಲಾ ಬಿಜೆಪಿ ವಕ್ತಾರ ಹಿರೇಮಗಳೂರು ಪುಟ್ಟಸ್ವಾಮಿ, ಕೆ.ಪಿ.ವೆಂಕಟೇಶ್, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಕನಕರಾಜ ಅರಸ್, ಹಂಪಯ್ಯ, ನಾಗರಾಜ್, ಕುರುವಂಗಿ ಪುಟ್ಟಸ್ವಾಮಿ ಶೆಟ್ಟಿ, ಮೋಹನ್ ಹಾಜರಿದ್ದರು.

ಸರಕಾರದ ವಿರುದ್ಧ ಸುಳ್ಳು ಪ್ರಚಾರ

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶುಭದ ರಾವ್ ಆಕ್ರೋಶ

ಉಡುಪಿ: ಜನಪರ ಆಡಳಿತವನ್ನು ನೀಡುತ್ತಿರುವ ರಾಜ್ಯ ಕಾಂಗ್ರೆಸ್ ಸರಕಾರದ ಜನಪ್ರಿಯತೆಯನ್ನು ಸಹಿಸಿಕೊಳ್ಳಲಾರದೇ ಸರಕಾರದ ವಿರುದ್ಧ ಕಾರ್ಕಳ ಬಿಜೆಪಿ

ಹಮ್ಮಿಕೊಂಡಿರುವ ಪ್ರತಿಭಟನೆಗೆ ಜನ ಸೇರಿಸಲು ಸುಳ್ಳು ಪ್ರಚಾರ ಮಾಡುತ್ತಿರುವುದನ್ನು ಕಾರ್ಕಳ ಬ್ಲಾಕ್ ಕಾಂಗ್ರೆಸ್ ತೀವ್ರವಾಗಿ ಖಂಡಿಸುತ್ತದೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶುಭದ ರಾವ್ ತಿಳಿಸಿದ್ದಾರೆ.

ಗೃಹಲಕ್ಷ್ಮೀ, ಗೃಹಜ್ಯೋತಿ, ಅನ್ನಭಾಗ್ಯ, ಯುವನಿಧಿ, ಶಕ್ತಿ ಯೋಜನೆ ಹೆಸರಿನ ಮಹತ್ವದ ಪಂಚ ಗ್ಯಾರಂಟಿ ಯೋಜನೆಗಳನ್ನು ಜನರಿಗೆ ನೀಡಿ ಬಡವರ ಜನ ಸಾಮಾನ್ಯರ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿರುವ ಕಾಂಗ್ರೆಸ್ ಸರಕಾರದ ವಿರುದ್ಧ ಇಲ್ಲ ಸಲ್ಲದ ವಿಚಾರಗಳನ್ನು ಮುಂದಿಟ್ಟುಕೊಂಡು ಕಾರ್ಕಳ ಬಿಜೆಪಿ ಪ್ರತಿಭಟನೆ ನಡೆಸುತ್ತಿರುವುದು ನಾಚಿಕೆಗೇಡಿನ ವಿಚಾರವಾಗಿದೆ ಎಂದವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರ್ಕಳದಲ್ಲಿ ವ್ಯಾಪಕ ಜನ ವಿರೋಧವನ್ನು ಎದುರಿಸುತ್ತಿರುವ ಕಾರ್ಕಳ ಬಿಜೆಪಿಯು ಜನರಿಗೆ ಸುಳ್ಳು ಮಾಹಿತಿಯನ್ನು ನೀಡಿ ಪ್ರತಿಭಟನೆಯ ಹೆಸರಿನಲ್ಲಿ ದಾರಿ ತಪ್ಪಿಸುವ ಯತ್ನವನ್ನು ನಡೆಸುತ್ತಿದೆ. ಅಸ್ತಿತ್ವವನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿರುವ ಬಿಜೆಪಿ ಜನರಿಗೆ ಅನಾವಶ್ಯಕವಾಗಿ ಭಯ ಹುಟ್ಟಿಸುತ್ತಿದೆ. ಧರ್ಮ ರಕ್ಷಣೆ, ಧರ್ಮಕ್ಕೆ ಅಪಾಯ ಎನ್ನುವ ಬಿಜೆಪಿಯ ಸಾಂಪ್ರದಾಯಿಕ ಸುಳ್ಳುಗಳನ್ನು ಜನರು ಈಗ ನಂಬುವ ಸ್ಥಿತಿಯಲ್ಲಿ ಇಲ್ಲ. ಇದರಿಂದ ಕಂಗೆಟ್ಟಿರುವ ಕಾರ್ಕಳ ಬಿಜೆಪಿ ಬೆಲೆ ಏರಿಕೆ, ಮುಂತಾದ ವಿಚಾರಗಳನ್ನು ಹೇಳಿ ಜನರಿಗೆ ಮಂಕು ಬೂದಿ ಎರಚುವ ಪ್ರಯತ್ನದಲ್ಲಿದೆ. ಕೇಂದ್ರ ಸರ್ಕಾರವು ಅವೈಜ್ಞಾನಿಕವಾಗಿ ಜಿಎಸ್ಟಿ, ಪೆಟ್ರೋಲ್ ಬೆಲೆ ಏರಿಕೆ, ಆಹಾರ ವಸ್ತುಗಳ ಬೆಲೆ ಏರಿಕೆ, ಹಾಲಿನ ಮೇಲೆ ತೆರಿಗೆ ಹಾಕಿದಾಗ ಪ್ರತಿಭಟಿಸದೇ ಅದನ್ನು ಸಮರ್ಥಿಸಿದ್ದ ಬಿಜೆಪಿಗೆ ಈಗ ಬೆಲೆ ಏರಿಕೆಯ ನೆನಪಾಗಿರುವುದು ಹಾಸ್ಯಾಸ್ಪದ ಎಂದವರು ತಿಳಿಸಿದ್ದಾರೆ.

ಪ್ರತಿಭಟನೆಗೆ ಕರೆ ನೀಡಿದರೂ ಜನರಿಂದ ಯಾವುದೇ ಸ್ಪಂದನೆ ದೊರಕದಿರುವುದರಿಂದ ಕಂಗೆಟ್ಟಿರುವ ಬಿಜೆಪಿ ವಾಮ ಮಾರ್ಗದಿಂದ ಜನ ಸೇರಿಸುವ ಕೃತ್ಯಕ್ಕೆ ಕೈ ಹಾಕಿದೆ. ಗ್ರಾಮೀಣ ಭಾಗಗಳಲ್ಲಿ ಬಿಜೆಪಿ ಬೆಂಬಲಿತ ಗ್ರಾಮ ಪಂಚಾಯತ್ ಸದಸ್ಯರ ಮೂಲಕ ಗ್ರಾಮ ಪಂಚಾಯತ್ ಹೆಸರಿನಲ್ಲಿ ಜನರಿಗೆ ದೂರವಾಣಿ ಕರೆ ಮಾಡಿ ನಿಮ್ಮ ಬಿಪಿಎಲ್ ರೇಷನ್ ಕಾರ್ಡ್ ರದ್ದಾಗುತ್ತಿದೆ. ರೇಷನ್ ಕಾರ್ಡ್ ಉಳಿಯಬೇಕಿದ್ದರೆ ಪ್ರತಿಭಟನೆಗೆ ಬನ್ನಿ. 911 ಮಾಡಿಸಬೇಕಿದ್ದರೆ 6 ತಾರೀಖಿಗೆ ಕಾರ್ಕಳಕ್ಕೆ ಬನ್ನಿ ಎಂದು ಹೇಳಿ ಜನ ಸೇರಿಸಲು ಪ್ರಯತ್ನಿಸುತ್ತಿದ್ದಾರೆ. ಬಿಜೆಪಿಯ ಇಂತಹ ಕೀಳುಮಟ್ಟದ ರಾಜಕೀಯ ಸುಳ್ಳು ಸುದ್ದಿಗಳಿಗೆ ಸಾರ್ವಜನಿಕರು ಯಾರೂ ಕಿವಿಗೊಡಬಾರದು ಎಂದು ಶುಭದ ರಾವ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಪ ಅಂಚೆ ಕಚೇರಿ ಉದ್ಘಾಟನೆ ಫೆ.8ಕ್ಕೆ

ಮಂಗಳೂರು: ಕುಪ್ಪೆಪದವಿನಲ್ಲಿ ಫೆ.8ರಂದು ಹೊಸ ಅಂಚೆ ಕಚೇರಿ ಉದ್ಘಾಟನೆಗೊಳ್ಳಲಿದ್ದು, ಆ ಬಳಿಕ ಹೊಸ ಪಿನ್‌ಕೋಡ್ ಆಗಿ 574162 ಆಗಿರುತ್ತದೆ ಎಂದು ಮಂಗಳೂರು ಅಂಚೆ ವಲಯದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಈ ಬಗ್ಗೆ ಪ್ರಕಟಣೆ ಹೊರಡಿಸಿರುವ ಅಂಚೆ ಇಲಾಖೆ, ಈ ಮೊದಲು ಕುಪ್ಪೆಪ'ದವು, ಇರುವೈಲು, ಕೊಳವೂರು ಪ್ರದೇಶಗಳು ಗಂಜಿಮಠ ಅಂಚೆ ಕಚೇರಿಯ ಬಟವಾಡೆ ವ್ಯಾಪ್ತಿಗೆ ಒಳಪಟ್ಟಿದ್ದು, ಇಲ್ಲಿಯ ಪಿನ್ ಕೋಡ್ 574144 ಆಗಿತ್ತು. ಕುಪ್ಪೆಪದವಿನಲ್ಲಿ ನೂತನ ಉಪ ಅಂಚೆ ಕಚೇರಿಯು ಫೆ.8ರಿಂದ ಕಾರ್ಯಾರಂಭಗೊಳ್ಳಲಿದೆ ಎಂದು ತಿಳಿಸಿದೆ. ಇರುವೈಲು ಮತ್ತು ಕೊಳವೂರು ಶಾಖಾ ಅಂಚೆ ಕಚೇರಿ ವ್ಯಾಪ್ತಿಗೆ ಒಳಪಡುವ ಎಲ್ಲ ಪ್ರದೇಶಗಳು ಮತ್ತು ಕುಪ್ಪೆಪದವು ಶಾಖಾ ಅಂಚೆ ಕಚೇರಿಗೆ ಒಳಪಡುವ ಎಲ್ಲ ಪ್ರದೇಶಗಳಿಗೆ ಇನ್ನು ಮುಂದೆ ಹೊಸ ಪಿನ್ ಕೋಡ್ 574162 ಆಗಿರುತ್ತದೆ ಎಂದು ಅಂಚೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಇರುವೈಲು ಮತ್ತು ಕೊಳವೂರು ಶಾಖಾ ಅಂಚೆ ಕಚೇರಿ ವ್ಯಾಪ್ತಿಗೆ ಒಳಪಟ್ಟು ಕಾರ್ಯ ನಿರ್ವಹಿಸುತ್ತಿರುವ ಎಲ್ಲ ಬ್ಯಾಂಕ್‌ಗಳು ಈ ಪಿನ್ ಕೋಡ್ ಬದಲಾವಣೆಯನ್ನು ಗಣನೆಗೆ ತೆಗೆದು ಕೊಂಡು ತಮ್ಮ ಎಲ್ಲ ಪತ್ರ ವ್ಯವಹಾರಗಳಿಗೆ ಇನ್ನು ಮುಂದೆ ಕುಪ್ಪೆಪದವು ಅಂಚೆ ಕಚೇರಿಯ ನೂತನ ಪಿನ್ ಕೋಡ್ 574162ನ್ನು ನಮೂದಿಸಬೇಕು ಎಂದು ಮಂಗಳೂರು ಅಂಚೆ ವಲಯದ ಅಧಿಕಾರಿಗಳು ತಿಳಿಸಿದ್ದಾರೆ.

ವಿಶ್ವವಾಣಿ
ಬುಧವಾರ 05|02|2025

ಚಿತ್ತ ವಿಹಾರ

ಸೃಜನಶೀಲತೆ

ಮಾನವನ ಪ್ರಮುಖ ಗುಣಲಕ್ಷಣಗಳಲ್ಲಿ ಸೃಜನಶೀಲತೆಯು ಒಂದು. ಸೃಜನಶೀಲತೆಯು ಸೃಜನಶೀಲ ಕಲೆಯ ಮೂಲಭೂತ ಅಂಶವಾಗಿದೆ. ಇದು ಯಾವಾಗಲೂ ನಮ್ಮ ಬದುಕಿಗೆ ಮೌಲ್ಯಯುತವಾದ ಹಾಗೂ ಮೂಲವಾದುದನ್ನು ಉತ್ಪಾದಿಸುತ್ತದೆ. 'ತನಗಿರುವ ಬುದ್ಧಿಶಕ್ತಿಯಿಂದ ಹೊಸತರದ ಕಾರ್ಯಗಳನ್ನು ಮಾಡಲು ಹೊರಡುವುದು' ಸೃಜನಶೀಲತೆ. ಎಲ್ಲರಂತಲ್ಲದೆ ವಿಭಿನ್ನವಾಗಿ ಯೋಚಿಸುವ ಶಕ್ತಿ, ಯೋಚಿಸಿ ಕಾರ್ಯಕ್ಕಿಳಿಯುವ ಮನೋಭಾವ ಇದಕ್ಕೆ ಅಗತ್ಯ. ಸೃಜನಶೀಲತೆಯು ನಮ್ಮಲ್ಲಿ ಹೊಸದನ್ನು ಹುಟ್ಟುಹಾಕುವ ಗುಣವನ್ನು ಪೋಷಿಸಿ ಬೆಳೆಸುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ನಮ್ಮಲ್ಲಿ ಸ್ವಂತಿಕೆಯನ್ನು ವರ್ಧಿಸುತ್ತದೆ. ಸೃಜನಶೀಲತೆಯು ನಮ್ಮನ್ನು ಉಳಿದ ಎಲ್ಲರಿಗಿಂತಲೂ ಭಿನ್ನ ಹಾಗೂ ವಿಶೇಷವಾಗಿ ತೋರ್ಪಡಿಸುವ ಅಂಶವಾಗಿದೆ. ಯಾರೇ ಇರಲಿ, ಯಾರಲ್ಲಿಯೇ ಆಗಿರಲಿ ಯಾವುದೇ ರೀತಿಯ ಸಣ್ಣ ಸೃಜನಶೀಲತೆಯನ್ನೂ ಕಡೆಗಣಿಸಬಾರದು. ಅವರಿಗೆ ಪ್ರೋತ್ಸಾಹ ನೀಡಬೇಕು.

ಇರುವ ಸಂಗತಿಗಳಲ್ಲೇ ಹೊಸತನ್ನು ಕಂಡು ಹಿಡಿಯುವುದು ಕೂಡಾ ಸೃಜನಶೀಲತೆ ಎನಿಸಿಕೊಳ್ಳುತ್ತದೆ. ಉದಾಹರಣೆಗೆ, ಎಲ್ಲರೂ ಒಂದು ಪದ್ಯವನ್ನು ಒಂದೇ ರಾಗದಲ್ಲಿ ಹಾಡುತ್ತಿದ್ದರೆ, ಅದೇ ಹಾಡನ್ನು ಇನ್ನೊಂದು ರಾಗದಲ್ಲಿ ಹಾಡಲು ಪ್ರಯತ್ನಿಸುವುದು ಕೂಡ ಸೃಜನಶೀಲತೆಯೇ. ಸೃಜನಶೀಲ ಕೌಶಲ್ಯಗಳನ್ನು ನಾವು ಸಹಿತ ಕಲಿಯಬಹುದು. ಆದರೆ ನಮಗೆ ಸೃಜನಶೀಲ ಪ್ರಕ್ರಿಯೆಯಲ್ಲಿ ಆಸಕ್ತಿ, ಅನ್ವೇಷಿಸುವ ಬಯಕೆ ಮತ್ತು ಕುತೂಹಲದ ಮನೋಭಾವದ ಅಗತ್ಯವಿದೆ. ಸೃಜನಶೀಲತೆ ಇರುವವರ ಬೌದ್ಧಿಕ ಸಾಮರ್ಥ್ಯ, ಮಾನಸಿಕ ಸಾಮರ್ಥ್ಯ ಹಾಗೂ ಆಲೋಚನಾ ಸಾಮರ್ಥ್ಯ ಆರೋಗ್ಯಕರವಾಗಿ ರುತ್ತದೆ. ಇಂತಹ ಮಹತ್ವದ ಕೌಶಲ್ಯವನ್ನು ಎಲ್ಲರಲ್ಲಿಯೂ ಬೆಳಸಬೇಕು. ಸೃಜನಶೀಲತೆ ಇರುವ ವಿದ್ಯಾರ್ಥಿಗಳನ್ನು ಗುರುತಿಸಿ, ಆ ಕೌಶಲವು ಅವರಲ್ಲಿ ಬೆಳೆಸುವಂತೆ ನೋಡಿಕೊಳ್ಳಬೇಕು, ಪ್ರೋತ್ಸಾಹಿಸಬೇಕು. ತಂದೆ ತಾಯಿಗಳು, ಶಿಕ್ಷಕರು ಹಾಗೂ ಈ ಸಮಾಜವು ಮುಕ್ತ ವಾತಾವರಣ ಕಲ್ಪಿಸಿ, ಉತ್ತಮ ಮಾರ್ಗದರ್ಶನ ಒದಗಿಸಿದರೆ ಪ್ರತಿಯೊಬ್ಬರಲ್ಲಿಯೂ ಸೃಜನಶೀಲತೆಯು ಹೆಚ್ಚಿ ಅವರ ಪ್ರತಿಭೆಯು ತನ್ನಿಂತಾನೇ ಅರಳುತ್ತದೆ.

• ರಂಗನಾಥ್ ಗುಡಿಮನಿ

ಪ್ರೀತಿಯ ಹಲವು ಮುಖಗಳು

ತರಕಾರಿ ಮಾರುವವರೊಂದಿಗೆ ನಡೆಯುವ ಮಾತುಕತೆಯಲ್ಲಿ ಪ್ರೀತಿ ವಿಶ್ವಾಸದ ಸೆಲೆ ಹುದುಗಿರುತ್ತದೆ! ನೀವೂ ಒಮ್ಮೆ ಮಾತನಾಡಿಸಿ ನೋಡಿ.

• ಶ್ರೀರಂಜನಿ ಅಡಿಗ

ನಸುಕಿನ ಹೊತ್ತಿನಲ್ಲಿ ತರತರದ ದನಿಯಲ್ಲಿ ಕೂಗುತ್ತಾ ಮಲಗಿದ್ದವರನ್ನೆಲ್ಲಾ ಎಬ್ಬಿಸುವ ತರಕಾರಿ ಮಾರುವವರು ಬೆಂಗಳೂರಿನ ಜನರಿಗೆ ಒಂಥರಾ ಜಂಗಮ ಅಲಾರ್ಮ್. ಎಲ್ಲೋ ಬೆಳೆದ ತರಕಾರಿ, ಸೊಪ್ಪು ಇವರ ಮೂಲಕ ಮನೆಮನೆಯನ್ನು ತಲುಪಿ ಹೊಟ್ಟೆತಣಿಸುವ ಇವರ ಹೊಟ್ಟೆ ಯಾವತ್ತೂ ತಣ್ಣಗಿರಲಿ. ದಿನವೆಲ್ಲಾ ಹತ್ತಾರು ಕಿ.ಮೀ. ನಗರವನ್ನೆಲ್ಲಾ ಸುತ್ತಾಡಿಯೂ ಸುಸ್ತಾಗದ ಅವರ ಜೀವನೋತ್ಸಾಹ ಅಚ್ಚರಿಹುಟ್ಟಿಸುವಂಥದ್ದು. ಅವರೊಂದಿಗಿನ ಮಾತುಕತೆ ವೈನೋದಿಕವಾಗಿದ್ದು ಬದುಕಿಗೆ ಆಹ್ಲಾದಕತೆ ಕೊಡುವಂಥದ್ದು. ಕೇವಲ ಅವರ ಸ್ವರದಿಂದಲೇ ಮುಖಚಹರೆ ತಿಳಿಯುವಂಥ ಶಕ್ತಿ ಕೆಲಸಮಯದಲ್ಲಿ ಒಲಿಯುವುದು. ಒಬ್ಬಾತ ಸೊಪ್ಪೋ ಅನ್ನುವಾಗ 'ಪ್ಪೋ'ವನ್ನು ಧೀರ್ಘವಾಗಿ ಎಳೆಯುತ್ತಾನೆ ಹಾಗೂ ಯಾವತ್ತೂ ಸೈಲೆಂಟ್. ಅವನು ಕುಳ್ಳಗೆ ಹಾಗೂ ಮೈಮೇಲೆ ಟವೆಲನ್ನು ಧರಿಸಿರುತ್ತಾನೆ, ಇನ್ನೊಬ್ಬ ಇವನ ವಿರೋಧಪಕ್ಷ ದವನು. ಅವನಿಗೆ ಯಾವತ್ತೂ ಅವಸರ, 'ಸೊಪ್ಪೊ ಸೊಪ್ಪೊ' ಎನ್ನುತ್ತಾ ಸೈಕಲ್ಲೇರಿ ಹೋಗುತ್ತಿದ್ದರೆ ಶತಾಬ್ದಿ ಎಕ್ಸ್‌ಪ್ರೆಸ್ ಅನ್ನುವಂತಿರುತ್ತದೆ. ಅವನ ಸ್ವರ ಕೇಳಿ ದಡಬಡನೆ ಬಾಗಿಲ ಚಿಲಕ ತೆಗೆದು ಚಪ್ಪಲಿ ಮೆಟ್ಟಿ ಹೊರಗೆ ಹೋಗುವದರೊಳಗೆ ರಸ್ತೆಯ ಕೊನೆ ತಲುಪಿರುತ್ತಾನೆ. ತಲೆಗೆ ರುಮಾಲು ಇಲ್ಲದೆ ಅವನನ್ನು ಕಂಡದ್ದೇ ಇಲ್ಲ. ಇನ್ನೊಬ್ಬಾಕೆ ಸೋ..ಪ್ಪೋ ಎನ್ನುವವಳು ಮಂದ್ರದನಿಯಲ್ಲಿ ಆಲಾಪ ಹಾಕುವಂತಿರುತ್ತದೆ.

ಹಬ್ಬದ ದಿನ ಸೊಪ್ಪು!

ಈ ವ್ಯಾಪಾರದ ರೀತಿ ಹೇಗಿದೆ ನೋಡಿ. 'ಹತ್ತು ರೂಪಾಯಿಯ ಸೊಪ್ಪು ಕೊಡು' ಅಂದರೆ 'ನಾಳೆ ಹಬ್ಬ ಅವ್ವಾ, ಇಪ್ಪತ್ತು ರೂಪಾಯಿದ್ದು ತಕೋ. ಈಗ್ ತಾನೇ ಕನಕಪುರದಿಂದ ಕೊಯ್ಕೊಂಡ್ ಬಂದೀವ್ನಿ. ಫ್ರೆಶ್ ಐತೇ' ಅನ್ನುತ್ತಾನೆ. 'ನಾಳೆ ಯಾವ ಹಬ್ಬ?' ಅಂದರೆ 'ರಾಮನವಮಿ' ಎನ್ನುತ್ತಾನೆ, ನಾಳೆ ಮಾತ್ರವಲ್ಲ ಅವನಿಗೆ ಮುನ್ನೂರೈವತ್ತು ದಿನಗಳೂ 'ನಾಳೆ ಹಬ್ಬ' ಎಂದೇ ಹೇಳುವನು. ಕೆಲವೊಮ್ಮೆ ಸೊಪ್ಪು ಇದೆಯಾ ಅಂದರೆ 'ನಾಳೆ ಹಬ್ಬ ಅಲ್ವ್ರಾ? ಸೊಪ್ಪು ತಂದಿಲ್ಲ, ತರ್ಕಾರೀ ಹಾಕೀವ್ನಿ' ಅಂತಾನೆ. ಹೀಗಿದೆ ಅವನ ಮಾತಿನ ವರಸೆ.

ಇನ್ನೊಬ್ಬಾತನ ಬಳಿ ಒಮ್ಮೆ ಬಸಳೆಸೊಪ್ಪು ಕೊಂಡಿದ್ದೆ. ಅದನ್ನು ಮರೆಯದ ಅವನು ಬಸಳೆ ಸೊಪ್ಪು ತಂದಾಗೆಲ್ಲ 'ಅಕ್ಕಾ ಬಸಳೆ ತಂದೀವ್ನಿ' ಎಂದು ಮನೆಯೆದುರು ನಿಂತು ಕೂಗುತ್ತಾನೆ. 'ಎರಡೇ ಕಟ್ಟು ತಂದಿದ್ದು ಅಕ್ಕೋರೇ, ಒಂದು ನಿಮ್ ಕಡೆ ಊರವ್ರು ತಗೊಂಡ್ರು. ಇನ್ನೊಂದು ನಿಮಗೆ' ಎಂದಾಗ ನನಗೆ ಬೇಕಾಗದಿದ್ದರೂ ಕೊಳ್ಳಲೇಬೇಕು ಅನ್ನಿಸುತ್ತದೆ, ಕೊಂಡೇಕೊಳ್ಳುತ್ತಾರೆ ಎಂಬ ನಂಬಿಕೆಯಲ್ಲಿ ತಂದವನನ್ನು ಬರಿಗೈಯಲ್ಲಿ ಕಳಿಸಲು ಮನಸ್ಸಾಗುವುದಿಲ್ಲ. ಹೀಗೆ ತರಕಾರಿ ಗಾಡಿಯವ ಕೂಡಾ ಜೀಗುಜ್ಜೆ, ಸುವರ್ಣ ಗಡ್ಡೆ ತಂದಾಗೆಲ್ಲ 'ನಿಮ್ ಕಡೆಯವರೆಲ್ಲ ತಗೊಂಡ್ರು. ಇಷ್ಟೇ ಉಳಿದಿರೋದು' ಅನ್ನುವವನು ವ್ಯಾಪಾರ ಸೂತ್ರವನ್ನು ಬಲ್ಲ ಚತುರಗಾರನಂತೆ ಕಾಣುತ್ತಾನೆ.

ತರಕಾರಿ ಅಂಗಡಿಗಳಲ್ಲಿ, ಸೂಪರ್ ಮಾರುಕಟ್ಟೆಗಳಲ್ಲಿ ಸಸ್ತಾ ದರ ಎಂದಿದ್ದರೂ ಅಲ್ಲಿ ಎಲ್ಲವೂ ವ್ಯಾವಹಾರಿಕವಾಗಿರುತ್ತದೆ. ನಮಗೆ ಯಾವ ತರಕಾರಿ ಬೇಕೋ ಆರಿಸಿ,ಬಿಲ್‌ಕೌಂಟರಿನಲ್ಲಿ ಆನ್‌ಲೈನ್ ದುಡ್ಡು ಕೊಟ್ಟ ಮುಗಿಯಿತು, ಮಾತಿಲ್ಲ, ಕತೆಯಿಲ್ಲ, ಅಷ್ಟೇ ಆ ಸಂಬಂಧ. ಆದರೆ ಈ ಬೀದಿವ್ಯಾಪಾರದ ಮಾತುಕತೆ ಚಿಕ್ಕದಾದರೂ ಅವು ಕೊಡುವ ಸಂತಸ, ಆಹ್ಲಾದ ಕತೆ ದಿನವಿಡೀ ಲವಲವಿಕೆಯಿಂದಿರುವಂತೆ ಮಾಡುತ್ತವೆ, ಚೌಕಾಸಿಗಾಗಿ ಜಗಳವೂ ನಡೆಯುವುದಿದೆ. ಆದರೆ ಅದು ಆ ದಿನಕ್ಕೆ ಸೀಮಿತ. ವಯಸ್ಸಿನ ಭೇದಕಾಣದೆ ಎಲ್ಲರಿಗೂ 'ಅಕ್ಕಾ, ಅವ್ವಾ, ತಾಯೇ' ಎಂದರೆ ಅಪ್ಯಾಯಮಾನವೆನಿಸುವುದು.

ನಾಟಿ ವೈದ್ಯೆ!

ತರಕಾರಿ ಮಾರುತ್ತಾ ಬರುವ ಒಬ್ಬಳಂತೂ ಪಕ್ಕಾ ನಾಟಿ ವೈದ್ಯಳೇ. ಪಕ್ಕದ ಮನೆಯಲ್ಲಿ ಮಗು ಮತ್ತು ಬಾಣಂತಿಯಿರುವದನ್ನು ಕಂಡು 'ಬಾಣಂತಿಗೆ ಸಬ್ಬಸಿಗೆ ಸೊಪ್ಪು ತಿನ್ಸಕ್ಕಾ, ಎದೆಹಾಲು ಜಾಸ್ತಿ ಆಗೈತಿ. ಮೆಂತೆ ಸೊಪ್ಪು ತಿನ್ನಿಸಿ, ಬೆನ್ನುನೋವು ಇರಾಕಿಲ್ಲ' ಎನ್ನುವವಳು. ಆವಾಗಾವಾಗ ಹೊನಗೊನೆ ಸೊಪ್ಪು,ಆಡುಸೋಗೆ ಸೊಪ್ಪು ತಂದು ಅವುಗಳ ಉಪಯೋಗ ತಿಳಿಸಿ ಮಾರಾಟ ಮಾಡುವ ಜಾಣತನ ಅವಳಲ್ಲಿದೆ.

ಬೆಳಗಿನ ಉತ್ಸಾಹದ ಬುಗ್ಗೆಗಳು

ಇದೇ ತರಹದ ಜೀವನೋತ್ಸಾಹ ರಸ್ತೆ ಗುಡಿಸುವ ಕಾರ್ಮಿಕರಲ್ಲೂ ಕಂಡಿದ್ದೇನೆ. ಸೂರ್ಯ ಇನ್ನೂ ತನ್ನ ಹೊದಿಕೆಯಲ್ಲಿ ರುವಂತೆಯೇ ಎದ್ದು ಕೆಲಸಕ್ಕಾಗಿ ಜಮಾವಣೆಗೊಳ್ಳುವಾಗಲೇ ಸ್ನಾನ ಮಾಡಿ, ತಲೆತುಂಬಾ ಕನಕಾಂಬರವನ್ನೋ, ಮಲ್ಲಿಗೆಯನ್ನೋ ಮುಡಿದು, ಕೈತುಂಬಾ ಬಳೆ ಧರಿಸಿ ಬರುವ ಅವರ ಉತ್ಸಾಹ ಅನುಕರಣೀಯ. ಬೆಳಗಿನ ವಾಕಿಂಗ್ ಮುಗಿಸಿ ಬರುವಾಗ ಎದುರಿಗೆ ಸಿಗುವ ಇವರಿಗೆ 'ಗುಡ್ ಮಾರ್ನಿಂಗ್, ಆಯ್ತಾ ಕಾಫಿ?' ಎಂದರೆ ಅದೇ ಒಂದೆರೆಡು ಮಾತುಕತೆಗೇ ಖುಷಿಯಿಂದ ಪ್ರತಿಕ್ರಿಯೆ ನೀಡುತ್ತಾರೆ.

ಇವರ್ಯಾರೂ ನೆಂಟರಲ್ಲ, ಪರಿಚಯಸ್ಥರಲ್ಲ, ಸಂಬಂಧಿಕರಲ್ಲ. ಆದರೂ ಪ್ರತಿದಿನದ ಮುಖಚಹರೆಯ ಮೇಲೆ ಏನೋ ಒಂದು ಸ್ನೇಹದಬೇಸುಗೆ ಉದಯಿಸಿರುತ್ತದೆ.

ಯಾವುದೇ ಪದವಿ, ಹಣ ಕೊಡಲಾಗದ ಅನಿರ್ವಚನೀಯ ಸಂತಸವು ಇಂತಹ ಎರಡು ಪ್ರೀತಿಯ ಮಾತುಗಳಿಂದ ಸಿಗುವುದು. ಅದು ಮನಸ್ಸನ್ನು ಪ್ರಫುಲ್ಲಗೊಳಿಸುತ್ತದೆಯಲ್ಲ ಅದೇ ಅಮೂಲ್ಯವಾದದ್ದು.

ಸದಾ ಅತ್ಯುತ್ತಮವಾದದ್ದನ್ನು ಮಾಡು

ಕೃಷ್ಣ ಹೇಳುತ್ತಾನೆ: ನಿಮ್ಮ ಅನಿ ವಾರ್ಯ ಕಾರ್ಯಗಳನ್ನು ಮಾಡಿ. ಯಾಕೆಂದರೆ ಕಾರ್ಯ ಚಟುವಟಿಕೆಯು ನಿಷ್ಕ್ರಿಯತೆಗಿಂತ ಹೆಚ್ಚಿನದು. ನಿಷ್ಕ್ರಿಯತೆ ಯಿಂದ ನಿಮ್ಮ ದೇಹದ ಪೋಷಣೆಯನ್ನು ಮಾಡಿಕೊಳ್ಳಲು ಸಾಧ್ಯವಿಲ್ಲ (3.8).

ಆಹಾರ ಸಂಗ್ರಹಣೆ ಮತ್ತು ಬಳಕೆ ಯಂತಹ ಕಾರ್ಯಗಳು ಮಾನವ ದೇಹದ ಉಳಿವಿಗೆ ಅವಶ್ಯಕ. ಇನ್ನೂ ಎಂದರೆ ಮಾನವ ದೇಹವು ಅನೇಕ ಅವಯವಗಳು, ಪದ್ಧತಿಗಳು ಹಾಗೂ ರಾಸಾಯನಿಕಗಳನ್ನು ಒಳಗೊಂಡಿರುತ್ತದೆ. ಅವು ನಿಯಮಿತವಾಗಿ ಸಾವಿರಾರು ಆಂತರಿಕ ಕ್ರಿಯೆಗಳನ್ನು ಮಾಡುತ್ತಿರುತ್ತವೆ. ಅವುಗಳಲ್ಲಿ ಸ್ವಲ್ಪ ವ್ಯತ್ಯಾಸವಾದರೂ ದೇಹದ ಸಾಮರಸ್ಯ ಹೋಗಿ ದೇಹವು ಕಷ್ಟಕ್ಕೀಡಾಗಬಹುದು ಅಥವಾ ನಾಶ ಹೊಂದಬಹುದು. ಈ ಅರ್ಥದಲ್ಲಿ ಹೇಳುವುದಾದರೆ ದೇಹದ ಸಂರಕ್ಷಣೆ ನಿಷ್ಕ್ರಿಯತೆಯಿಂದ ಸಾಧ್ಯವಿಲ್ಲ.

ಅನಿವಾರ್ಯ ಕಾರ್ಯಗಳನ್ನು ಮಾಡುವುದರ ಬಗ್ಗೆ ಕೃಷ್ಣ ಹೇಳುವುದು ಒಂದು ಕ್ಲಿಷ್ಟ ವಿಚಾರ. ಪವಿತ್ರ ಗ್ರಂಥಗಳಲ್ಲಿ ಹೇಳಲಾದ ವಿಧಿ ವಿಧಾನಗಳು ಅಥವಾ ಕರ್ತವ್ಯಗಳನ್ನು ಸಾಮಾನ್ಯವಾಗಿ ಅನಿವಾರ್ಯ ಕ್ರಿಯೆಗಳು ಎಂದು ತಿಳಿಯಲಾಗಿದೆ. ಆದರೆ ಎರಡೂ ಕೃಷ್ಣ ಹೇಳಿರುವುದನ್ನು ವ್ಯಾಖ್ಯಾನಿಸಲು ವಿಫಲವಾಗಿವೆ. ಈ ಭೌತಿಕ ಜಗತ್ತಿನಲ್ಲಿ ನಮ್ಮ ಹೆಚ್ಚಿನ ಸಾಮರ್ಥ್ಯವನ್ನು ಪಡೆಯುವುದು ನಮ್ಮ ಅನಿವಾರ್ಯತೆಯಾಗಿದೆ. ಇದು ಬೀಜವು ದೊಡ್ಡಮರವಾಗುವಂತಿದೆ. ವಂಶವಾಹಿನಿಯ ನಿಯಮದ ಪ್ರಕಾರ ಒಂದು ಸಣ್ಣ ಕೋಶ ಸಂಕೀರ್ಣ ಮಾನವ ದೇಹವಾಗಿ ಅಭಿವೃದ್ಧಿ ಹೊಂದು ವಂತಿದೆ. ಇದರ ಅರ್ಥವೆಂದರೆ ನಮ್ಮ ಕರ್ಮವನ್ನು ನಮ್ಮ ಗುಣಗಳು ಈಗಾಗಲೇ ನಿರ್ಧರಿಸಬೇಕು. ಇನ್ನು ಉಳಿದಿದ್ದೆಂದರೆ ಬೆಳೆಯುವುದು, ಉಪಚರಿಸುವುದು ಮತ್ತು ಸಂರಕ್ಷಿಸಿಕೊಳ್ಳುವುದು ಮಾತ್ರ.



ನಿತ್ಯ ಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ • ಕೆ.ಶಿವಪ್ರಸಾದ್

ನಮ್ಮ ಸಾಮರ್ಥ್ಯಕ್ಕೆ ಸರಿಯಾಗಿ ನಮಗಾದಷ್ಟು ಒಳ್ಳೆಯದನ್ನು ಮಾಡುವುದು. ಇದು ಕೇವಲ ನಾವು ಏನು ಮಾಡುತ್ತೇವೆ ಎಂಬುದರ ಬಗ್ಗೆ ಅಲ್ಲ. ಎಷ್ಟು ಚೆನ್ನಾಗಿ ಮಾಡುತ್ತೇವೆ ಎಂಬುದು ಮುಖ್ಯವಾಗಿದೆ. ನಿಜ, ನಮ್ಮ ಸಾಮರ್ಥ್ಯ, ಅನುಭವ, ಸಮಯಗಳನ್ನು ಅವಲಂಬಿಸಿ ನಾವು ಎಷ್ಟು ಚೆನ್ನಾಗಿ ಮಾಡುತ್ತೇವೆ ಎನ್ನುವುದು ಒಬ್ಬರಿಂದ ಒಬ್ಬರಿಗೆ ಬೇರೆಯಾಗಿರುತ್ತದೆ. ಈ ಚೆನ್ನಾಗಿರುವುದೆಂದರೆ ನಮ್ಮ ಉಪಸ್ಥಿತಿ ಅಥವಾ ಮೌನ ಅಥವಾ ಬಲವಂತವಾಗಿ ಹೇಳುವುದಾಗಿರಬಹುದು. ಇದು ನಮ್ಮನ್ನು ಅಂತಿಮ ಸ್ಥಿತಿಯಾದ ಮೋಕ್ಷಕ್ಕೆ ಕರೆದೊಯ್ಯುತ್ತದೆ. ಅವ್ಯಕ್ತಕ್ಕೆ ಅನಿವಾರ್ಯವಾದದ್ದು. (2.7) ಇದು ಮಾಡುವದೇ ವಿನಹ ಆಯ್ಕೆ ಮಾಡುವುದಲ್ಲ ಯಾಕೆಂದರೆ ನಮ್ಮ ಜೀವನದ ಮುಖ್ಯ ಘಟನೆಯಾದ ನಮ್ಮ ಜನ್ಮ ನಮ್ಮ ಆಯ್ಕೆಯಿಂದ ಆಗಿರುವುದಿಲ್ಲ.

ಕಣ ಒಕ್ಕಣೆ

• ಎಂ.ಪರಮೇಶ್ವರ ಮದ್ದಿಹಳ್ಳಿ

ಹೊಲ ಫಸಲಿಗೆ ಬಂದು ಕೊಯ್ಲಿಗೆ ಬಂದಾಗ ನಮಗೆಲ್ಲ ಏನೋ ಒಂದು ತರಹ ಖುಷಿ . ಅತ್ತ ಅಜ್ಜಿ, ತಾತಾ, ಅಪ್ಪ ಹಾಗೂ ಕೂಲಿ ಕೆಲಸ ಮಾಡುವವರಿಗೆ ಏನೋ ಒಂದು ತರಹ ನೆಮ್ಮದಿ. ಏಕೆಂದರೆ ಕಾಳು ಸಿಗುತ್ತವೆ. ಆಗೆಲ್ಲಾ ಹಣದ ವ್ಯವಹಾರ ಕಡಿಮೆ. ಕಾಳು ಹುಲ್ಲು ಕೊಡುವುದರ ಮೂಲಕ ವ್ಯವಹಾರ : ಊರಿನ ಕೈವಾಡಸ್ತರಿಗೆ, ಅಂಗಡಿಯವರಿಗೆ ಖುಷಿಯೋ ಖುಷಿ . ಕೈವಾಡಸ್ತರು ಎಂದರೆ ತಳವಾರಿಕೆ, ಬಟ್ಟೆ ಒಗೆಯುವ ಇಂತಹ ಮುಂತಾದ ಕೆಲಸ ಮಾಡುತ್ತಿದ್ದವರಿಗೆ ಈ ರೀತಿ ಕರೆಯುತ್ತಿದ್ದರು.

ಯಾರ ಕಣ ಇಂದು ಒಕ್ಕಣೆ ಮಾಡುತ್ತಾರೆ ಅಂತಾ ಗೊತ್ತಾಗುತ್ತಿತ್ತು. ಭೂತಜ್ಜ , ನರಸಜ್ಜ, ಕದುರಜ್ಜ ಹನುಮಂತಜ್ಜ ಕತ್ತಾಳೆ ಸಿಗಿದು ರಾಗಿ ಹುಲ್ಲು ಅಥವಾ ಕೊರ್ಲೆ, ಆರ್ಕಾ, ಭತ್ತದ ಹೊರೆ ಕಟ್ಟಲು ಸಿದ್ದಮಾಡಿಕೊಳ್ಳುತ್ತಿದ್ದರು. ಎತ್ತು, ಎಮ್ಮೆ ಸಗಣಿಯನ್ನು ಒಂದು ಜಲ್ಲೆಯಷ್ಟು ನಾವು ಕೂಡಿಹಾಕಿಕೊಳ್ಳುತ್ತಿದ್ದೆವು. ಕಣವನ್ನು ಒಪ್ಪ ಓರಣವಾಗಿ ಸಗಣಿ ಬಳಿದು ಒಕ್ಕಣೆ ಕಣ ಸಿದ್ಧಮಾಡಿಟ್ಟು ಕೊಳ್ಳುತ್ತಿದ್ದೆವು – ಮರಳು, ಕಲ್ಲು ಮಣ್ಣು ಧಾನ್ಯದ ಜತೆ ಸೇರಬಾರದಲ್ಲಾ ಅದಕ್ಕೆ. ರಾಗಿ ತೆನೆ, ಭತ್ತದ ಪೈರು ಇನ್ನು ಮುಂತಾದವನ್ನು ಕಣಕ್ಕೆ ತಂದು ಹಾಕಿದರೆ, ಅದನ್ನು ಒಣಗಿಸುವುದು ತಿರುವಿ ಹಾಕುವುದು ಇದೇ ಕೆಲಸ.

ಎರಡು ದಿನ ಹೊಲದಲ್ಲಿರುವ ಕಣವೇ ನಮ್ಮ ವಾಸಸ್ಥಾನ! ಹುಲ್ಲು ಬಿಸಿಲಲ್ಲಿ ಚನ್ನಾಗಿ ಒಣಗಿದ ಮೇಲೆ ಎತ್ತಿಗೆ ರೋಣಗಲ್ಲನ್ನು (ಅದು ಈಗಿನ ರೋಲರ್ ತರ ಇರುತ್ತಿತ್ತು) ಕಟ್ಟಿಕೊಂಡು ವೃತ್ತಾಕಾರವಾಗಿ ತಿರುಗಿಸುವುದು, ಅದರ ಹಿಂದೆ ನಡೆಯುವುದು. ಹಗಲಿನಲ್ಲಿ ಆರಂಭಗೊಂಡ ಕೆಲಸ ರಾತ್ರಿಗೂ ಮುಂದುವರಿಯುತ್ತಿತ್ತು. ರಾತ್ರಿ ಬೆಳದಿಂಗಳ ಸವಿಯನ್ನುಂಡು ಕದುರಪ್ಪ , ನರಸಪ್ಪ ಹೇಳುತ್ತಿದ್ದ ಜಾನಪದ ಹಾಡುಗಳನ್ನು ಕೇಕೆ ಹಾಕಿಕೊಂಡು ಹಾಡಿ, ಕೆಲಸ ಮಾಡುತ್ತಿದ್ದ ನಮಗೆ ಆಯಾಸವೇ ಆಗುತ್ತಿರಲಿಲ್ಲ. ಊರಿಂದ ದೂರವಿರುವ ಕಣದಲ್ಲಿ ಊಟ ನಿದ್ದೆ ನಮಗೆ ಅಪ್ಯಾಯಮಾನವಾಗಿತ್ತು.

ಮರುದಿನ ರಾಶಿ ಮಾಡುವುದು, ಹುಲ್ಲನ್ನು ಬೇರ್ಪಡಿಸಿ ಹೊಟ್ಟನ್ನು ತೂರಿ ರಾಶಿ ಮಾಡುವುದು. ರಾಶಿಗೆ ಪೂಜೆ – ಬೆನಕ ಎಂದರೆ ಸಗಣಿಯಿಂದ ಮಾಡಿದ ವಿಘ್ನೇಶನನ್ನು ಕೂರಿಸಿ ಪೂಜೆ ಮಾಡಿದ ನಂತರ, ಧಾನ್ಯವನ್ನು ಎಲ್ಲಾ ಕೈವಾಡಸ್ತರಿಗೆ ಕೊಡುವುದು ಪದ್ಧತಿ. ಈಗಿನ ರೀತಿ ಹಣದ ಉಪಯೋಗ ಕಡಿಮೆ. ದಾಸರ ಸಂಜೀವಜ್ಜಿ, ರಂಗಜ್ಜಿ , ಅಗಸರ ಅಂಜಿನಪ್ಪ , ಸವಿತಾ ಸಮಾಜದ ಅಂಜನಪ್ಪ, ತಳವಾರ ನರಸಿಂಹಜ್ಜ ಇನ್ನು ಮುಂತಾದ ಕೈವಾಡಸ್ತರೆಲ್ಲ ಸೇರುತ್ತಿದ್ದರು; ತಮ್ಮ ಪಾಲನ್ನು ಪಡೆದುಕೊಳ್ಳುತ್ತಿದ್ದರು. ಊರಿನ ಅಂಗಡಿಯ ಕೆಲವೊಬ್ಬರು ಬಂದು ಪಕೋಡ, ಬೋಂಡಾ, ಕಡ್ಲೆಪುರಿ ತಂದಿಟ್ಟುಕೊಂಡು, ಅವರು ತಂದಿದ್ದನ್ನು ನಮಗೆ ಕೊಟ್ಟು ನಮ್ಮಿಂದ ಧಾನ್ಯ ತೆಗೆದುಕೊಂಡು ಹೋಗುತ್ತಿದ್ದರು . ಆಗಿನ ಕಣ ಒಕ್ಕಣೆ ಮಾಡುವುದು, ರಾಶಿ ಮಾಡುವುದು, ಎತ್ತುಗಳು ರೋಣಗಲ್ಲು ತಿರುಗುವುದು ಮಾಯವಾಗಿ, ಇಂದು ಧಾನ್ಯ ಹಸನು ಮಾಡುವ ಕೆಲಸ ಟಾರು ರಸ್ತೆಗೆ ಬಂದು ನಿಂತಿದೆ! ಇನ್ನೊಮ್ಮೆ ಕಣ ಒಕ್ಕಣೆ ಮಾಡುವ ಆಸೆಯಾಗಿದೆ. ಆ ಗ್ರಾಮೀಣ ವೈಭವ, ಖುಷಿ ಇಲ್ಲವಾಗಿದೆ! ಮತ್ತೊಮ್ಮೆ ಬಾ ಒಕ್ಕಣೆ ಕಣವೇ!

• ಪ್ರವೀಣ ನಳಿನಿ ನಾರಾಯಣ ರಾವ್ ಶಿರಸಿ

ಸೂರ್ಯನನ್ನು ಈ ಜಗತ್ತಿನ ಪ್ರತ್ಯಕ್ಷ ದೈವ ಎಂದು ಪರಿಗಣಿಸಲಾಗುತ್ತದೆ. ಸೂರ್ಯಾಧನೆಯ ಪ್ರಮುಖ ಪರ್ವವೇ ರಥ ಸಪ್ತಮಿ. ಇದು ಮಾಘಮಾಸ ಶುಕ್ಲಪಕ್ಷದ ಸಪ್ತಮೀ ತಿಥಿಯಂದು ಆಚರಿಸಲ್ಪಡುತ್ತದೆ.

ಈ ಭೂಮಂಡಲದ ಸಕಲರಿಗೂ, ಸಕಲ ಜೀವಿಗಳಿಗೂ ಚೈತನ್ಯ ಒದಗಿಸುವವನೇ ಸೂರ್ಯನಾರಾಯಣ. ಮನುಷ್ಯರಿಗೂ, ಪ್ರಾಣಿ ಪಕ್ಷಿಗಳಿಗೂ ಸಸ್ಯಗಳಿಗೂ, ಜಲಚರಗಳಿಗೂ ಶಕ್ತಿ ಒದಗಿಸುವವನು ಸೂರ್ಯ. ಸೂರ್ಯ ಪ್ರತಿದಿನವೂ ಹುಟ್ಟುತ್ತಿದ್ದರೂ ದಿನದಿನವೂ ಹೊಚ್ಚಹೊಸಬನಂತೆಯೇ ಕಂಡು ಬರುತ್ತಾನೆ. ಆತನು ಬಹು ಸುಂದರ ವ್ಯಕ್ತಿ. ಅದು ಎಂಥಾ ರುದ್ರಸೌಂದರ್ಯ! ಇಂಥಾ ಅಪೂರ್ವವವೂ, ಜೀವನಾಧಾರವೂ ಆಶ್ಚರ್ಯದ ಆಗರವೂ ಆಗಿರುವ ವಸ್ತುವನ್ನು ದೇವರೆಂದು ಭಾವಿಸಿ ಪೂಜಿಸತೊಡಗಿದರು ನಮ್ಮ ಪೂರ್ವಜರು.

ನಮ್ಮ ಜಗತ್ತು ಹುಟ್ಟಿದ್ದೇ ಸೂರ್ಯನ ಬೆಳಕಿನಲ್ಲಿ. ಆತನ ಬೆಳಕು ಕ್ಷೀಣಿಸಿದಾಗ, ಜಗತ್ತೂ ಕೊನೆಗೊಳ್ಳುತ್ತದೆ. ರಥಸಪ್ತಮಿಯನ್ನು ವಿಶ್ವಸೂರ್ಯನಮಸ್ಕಾರ ದಿನ ಎಂದೂ ಆಚರಿಸುವುದುಂಟು.

ಕಾಶ್ಯಪ ಋಷಿ ಹಾಗೂ ಅದಿತಿ ದೇವಿ ದಂಪತಿಗೆ ಮಾಘ ಮಾಸದ ಶುಕ್ಲ ಪಕ್ಷದ ಸಪ್ತಮಿಯಂದು ಜನಿಸಿದ ಮಗುವೇ ಸೂರ್ಯದೇವ. ಸೂರ್ಯ ಜಯಂತಿಯ ಈ ದಿನವನ್ನು ರಥಸಪ್ತಮಿ ಎನ್ನಲಾಗುತ್ತದೆ. ಈ ದಿನಕ್ಕೆ ಆರೋಗ್ಯ ಸಪ್ತಮಿ ಇಲ್ಲವೇ ಅಚಲಾ ಸಪ್ತಮಿ ಎಂಬ ಹೆಸರುಗಳೂ ಇವೆ. ವಸಂತ ಪಂಚಮಿಯ ಆಚರಣೆಯ ಎರಡೇ ದಿನಕ್ಕೆ ರಥಸಪ್ತಮಿ ಬರುತ್ತದೆ. ಸ್ವತಃ ಶ್ರೀ ಕೃಷ್ಣನೇ ಸೂರ್ಯನಿಗಿಂತ ಬೇರೆ ದೇವರು ಜಗತ್ತಿನಲ್ಲಿಲ್ಲ ಎಂದಿದ್ದಾನೆ. ಇಡೀ ಜಗತ್ತು ಕತ್ತಲಲ್ಲಿ ಮುಳುಗಿರುವಾಗ ಶಿವ ಸೂರ್ಯನನ್ನು ಸೃಷ್ಟಿಸಿದನೆಂಬ ನಂಬಿಕೆಯೂ ಇದೆ. ಇಡೀ ಜಗತ್ತು ಹುಟ್ಟಿದ್ದೇ ಸೂರ್ಯನ ಬೆಳಕಿನಲ್ಲಿ. ಅದು ಕೊನೆಗೊಂಡಾಗ ಜಗತ್ತೂ ಕೊನೆಗೊಳ್ಳುತ್ತದೆ. ಸೂರ್ಯ ಸದಾ ಜೀವಿಗಳ ಆರೋಗ್ಯ ಕಾಯುತ್ತಾನೆ. ಅವನಿಗೆ ಅರೆಗಂಟೆ ಗ್ರಹಣ ಕವಿದರೂ ಜಗತ್ತು ರೋಗಭೀತಿಯಲ್ಲಿ ನಲುಗುತ್ತದೆ. ಗ್ರಹಗಳ ರಾಜ ಸೂರ್ಯ.



ಸೂರ್ಯ ನಿನಗೆ ಪೊಡಮಡುವೆ

ರಥಸಪ್ತಮಿ ಆಚರಣೆ ಹೇಗೆ?

ವಿಷ್ಣು ಅಲಂಕಾರ ಪ್ರಿಯ. ಶಿವ ಅಭಿಷೇಕ ಪ್ರಿಯ. ಸೂರ್ಯ ದೇವನು ನಮಸ್ಕಾರ ಪ್ರಿಯ. ಹಾಗಾಗಿ ರಥ ಸಪ್ತಮಿಯನ್ನು 'ವಿಶ್ವ ಸೂರ್ಯ ನಮಸ್ಕಾರ ದಿನ' ಎಂದೂ ಆಚರಿಸಲಾಗುತ್ತದೆ. ಈದಿನ ಮುಂಜಾನೆ ಬೇಗ ಎದ್ದು ಅರುಣೋದಯ ಸಂದರ್ಭದಲ್ಲಿ ಸ್ನಾನ ಮಾಡಬೇಕು. ಎಕ್ಕೆಗಿಡದ ಎಲೆಗಳನ್ನು ತಲೆಯ ಮೇಲೆ ಭುಜಗಳ ಮೇಲೆ, ಕಾಲುಗಳ ಮೇಲೆ ಇಟ್ಟುಕೊಂಡು ಸ್ನಾನ ಮಾಡಬೇಕು ಎಂಬ ನಂಬಿಕೆ ಇದೆ. ನಂತರ ಸೂರ್ಯನಿಗೆ ಕಲಶದಿಂದ ಅರ್ಘ್ಯ ಸಮರ್ಪಿಸಬೇಕು. ನಂತರ ಸೂರ್ಯ ಬಿಂಬವನ್ನು ತಯಾರಿಸಿ ಷೋಢಶೋಪಚಾರದ ಮೂಲಕ ಸೂರ್ಯ ಪೂಜೆ ನೆರವೇರಿಸಬೇಕು.

ನಮಗೆ, ಭೂಮಿಯ ಎಲ್ಲಾ ಜೀವಿಗಳಿಗೆ ಶಕ್ತಿಯನ್ನು ನೀಡುವ ಆ ಸೂರ್ಯನನ್ನು ನಮಿಸೋಣ; ಸಾಧ್ಯವಾದರೆ ಸೂರ್ಯನಮಸ್ಕಾರ ಮಾಡಿ ನಮಿಸೋಣ!

ಹನಿಮಳೆ

ಬಜೆಟ್ ಪರಿಣಾಮ

ಇಲ್ಲಿಯವರೆಗೆ ಆದಾಯಕ್ಕೆ
ಹೊಸ ಮತ್ತು ಹಳೆಯ ತೆರಿಗೆ
ಅದಕ್ಕೆ ಜೊತೆಯಾಗಿದೆ ಈಗ ರಿಬೇಟು
ಯಾರಿಗೆ ಎಷ್ಟು ಲಾಭ?
ಪೆನ್ನು ಹಾಳೆಯ ಹಿಡಿದು
ಶುರುವಾಗಿದೆ ಡಿಬೇಟು!

• ಮಹಾಂತೇಶ ಮಾಗನೂರ

ಮಂತ್ರಾಲಯದ ಸುತ್ತಮುತ್ತ

ಮಂತ್ರಾಲಯ ಕ್ಷೇತ್ರದ ಸುತ್ತ ಮುತ್ತ ಇರುವ ಹಲವು ಸ್ಥಳಗಳು ನೋಡಲು ಅರ್ಹ ಎನಿಸಿವೆ.

• ವಿಲಾಸ ನಾ. ಹುದ್ದಾರ

ರಾಘವೇಂದ್ರ ಸ್ವಾಮಿಯವರು ಮಂತ್ರಾಲಯಕ್ಕೆ ಬರುವ ಮೊದಲು ಸುತ್ತಮುತ್ತಲಿರುವ ಕೆಲವು ಸ್ಥಳಗಳಲ್ಲಿ ತಮ್ಮ ಸಾಧನೆಯನ್ನು ಕೈಗೊಂಡಿದ್ದರು. ಅಂತಹ ಕೆಲವು ಸ್ಥಳಗಳನ್ನು ನೋಡುವ ಅವಕಾಶ ಈಚೆಗೆ ದೊರಕಿತು.

ಮಂತ್ರಾಲಯ ಪ್ರವೇಶಿಸುತ್ತಿದಂತೆ, ಅಭಯಾಂಜನೇಯ ದೇಗುಲ ಕಾಣಿಸುತ್ತದೆ. ಇಲ್ಲಿ ಆಂಜನೇಯನು ತನ್ನ ಬಲಗೈಯನ್ನು ಎತ್ತಿಹಿಡಿದು ತನ್ನ ಎಲ್ಲರಿಗೂ ಅಭಯ ನೀಡುವಂತೆ ಹಸ್ತವನ್ನು ತೋರಿಸುತ್ತಿದ್ದರೆ, ಎಡಗೈಯಲ್ಲಿ ಅವನ ಆಯುಧ ಗದೆ ಹಿಡಿದಿದ್ದಾನೆ. ಈ ಶಿಲಾವಿಗ್ರಹದ ಎತ್ತರ 33 ಅಡಿ.

ಬಿಚ್ಚಾಲೆ

ಬಿಚ್ಚಾಲೆ ಅನ್ನುತ್ತಿದ್ದಂತೆಯೇ ನಮ್ಮ ಕಣ್ಣುಗಳ ಮುಂದೆ ಅಪ್ಪಣ್ಣಾಚಾರ್ಯರು ಬರುವರು. ಗುರುರಾಘವೇಂದ್ರ ಸ್ತೋತ್ರ ರಚಿಸಿದ ಮಹಾತ್ಮರು ಇವರು. ಸಾಧಾರಣವಾಗಿ ಜನರು ಈ ಸ್ತೋತ್ರವನ್ನು ಅಷ್ಟೋತ್ತರದ ರೂಪದಲ್ಲಿ ಪಠಿಸುತ್ತ ಮೋಕ್ಷದ ಮಾರ್ಗದಲ್ಲಿ ಪಯಣಿಸುವ ಸತತ ಪ್ರಯತ್ನ ಮಾಡುತ್ತಿರುತ್ತಾರೆ. ಬಿಚ್ಚಾಲೆಯಲ್ಲಿರುವ ಬೃಂದಾವನದ ಆವರಣದಲ್ಲಿ ನಮಗೆ ಮೊದಲಿಗೆ ಕಂಡುಬರುವದು ರಾಯರಿಗಾಗಿ ಬಳಸುತ್ತಿದ್ದ ಒರಳು ಕಲ್ಲು. ಆಮೇಲೆ ಗಣಪತಿ ಮತ್ತು ಸುಬ್ರಹ್ಮಣ್ಯ ದೇವರ ಪುಟ್ಟ ದೇವಾಲಯ. ನಂತರ ನಾಗಗಳ ಕಟ್ಟೆ ಮತ್ತು ಈಶ್ವರಲಿಂಗ, ನಂದಿ. ಅದರ ಪಕ್ಕದಲ್ಲಿಯೇ ಅಪ್ಪಣ್ಣಾಚಾರ್ಯರು ಪ್ರತಿಷ್ಠಾಪನೆ ಮಾಡಿದ ರಾಘವೇಂದ್ರ ಸ್ವಾಮಿಗಳ ಅವರ ಏಕಶಿಲಾ ಬೃಂದಾವನ ವಿದೆ. ಅದೇ ಆವರಣದಲ್ಲಿ ವ್ಯಾಸರಾಯರು ಪ್ರತಿಷ್ಠಾಪಿಸಿದ ಪ್ರಾಣದೇವರು ಕಂಡುಬರುತ್ತಾರೆ. ಬೃಂದಾವನದ ಹಿಂದೆ ಇರುವದೇ ಗುರುರಾಯರ ಜಪದ ಕಟ್ಟೆ. ಆಶ್ವತ್ಥ ಮರದ ಕೆಳಗಿರುವ ಈ ಕಟ್ಟೆಯ ಮೇಲೆಯೇ ರಾಯರು ಕುಳಿತು ಸುಮಾರು 13 ವರ್ಷ ಜಪ ಮಾಡುತ್ತಿದ್ದರು.

ಬಂಡೆಕಲ್ಲುಗಳ ವಿನ್ಯಾಸ

ಜಪದಕಟ್ಟೆಯ ಬಲಭಾಗದಲ್ಲಿರುವ ಮೆಟ್ಟಿಲುಗಳನ್ನು ಏರಿ ಹೋದರೆ ಕಾಣುವದೇ ಬಿಚ್ಚಾಲೆ ಗ್ರಾಮದ ಗ್ರಾಮದೇವತೆ ಬಿಚ್ಚಾಲಮ್ಮನ ದೇವಸ್ಥಾನ. ಈ ದೇವಸ್ಥಾನದ ಕಟ್ಟಡ ನಿರ್ಮಿಸುವಾಗ, ಬಾಳೆಹಣ್ಣು ಮತ್ತು ಬೆಲ್ಲವನ್ನು ಉಪಯೋಗಿಸಲಾಗಿದೆ ಎಂದು ಅಲ್ಲಿರುವ ಫಲಕದಲ್ಲಿ ಬರೆಯಲಾಗಿತ್ತು. ರಾಯರ ಏಕಶಿಲಾ ಬೃಂದಾವನವು ತುಂಗಭದ್ರಾ ನದಿ ತೀರದಲ್ಲಿದೆ. ಪಕ್ಕದಲ್ಲೇ ಹರಿಯುತ್ತಿದ್ದ ತುಂಗಭದ್ರಳು ನಯನ ಮನೋಹರವಾಗಿ ಕಂಗೊಳಿಸುತ್ತಿದ್ದಳು. ನದಿವಿಹಾರ ಮಾಡಲು ಅಲ್ಲಿ ತೆಪ್ಪವೂ ಇತ್ತು. ಸಂಜೆಯ ಹೊತ್ತಿನಲ್ಲಿ ಇಲ್ಲಿನ ನದಿಯಲ್ಲಿ ಹರಡಿರುವ ಬಂಡೆಕಲ್ಲುಗಳ ವಿನ್ಯಾಸವನ್ನು ನೋಡುತ್ತಾ ಕುಳಿತರೆ, ಕಾಲದ ಪರಿವೆಯೇ ಅರಿವಾಗದು!



ಅಪ್ಪಣ್ಣಾಚಾರ್ಯರ ಮನೆ

ರಾಯರು ಅಪ್ಪಣ್ಣಾಚಾರ್ಯರ ಮನೆಯಲ್ಲಿ ಸುಮಾರು 13 ವರ್ಷ ತಂಗಿದ್ದು, ಮೂಲರಾಮನ ಪೂಜೆಯನ್ನು ಮಾಡುತ್ತಿದ್ದರು. ನಾವು ಅವರು ಮಲಗುತ್ತಿದ್ದ ಸ್ಥಳಕ್ಕೆ ನಮಿಸಿದೆವು. ಒಳಗಡೆಯ ಕೋಣೆಯಲ್ಲಿದ್ದ ರಾಯರು ಪೂಜಿಸುತ್ತಿದ್ದ ವಿಠಲನ ಮೂರ್ತಿ ಇದೆ. ಅದೇ ಕೋಣೆಯಲ್ಲಿ ಅಪ್ಪಣ್ಣಾಚಾರ್ಯರು ಪೂಜಿಸುತ್ತಿದ್ದ ಬಿಚ್ಚಾಲೆ ನಾಗಪ್ಪ (ಕೃಷ್ಣ ಸರ್ಪ), ಈಗಲೂ ಜಾಗೃತವಾಗಿರುವ ದರ್ಶನದ ಭಾಗ್ಯವೂ ನಮದಾಯಿತು.

ಪಂಚಮುಖಿ ಆಂಜನೇಯ

ಗಾಣದಾಳ ಗ್ರಾಮದಲ್ಲಿರುವ ಪಂಚಮುಖಿ ಆಂಜನೇಯನ ದೇವಸ್ಥಾನದಲ್ಲಿರುವ ಫಲಕದಲ್ಲಿದ್ದ ಮಾಹಿತಿ ಪ್ರಕಾರ ಗುರು ರಾಘವೇಂದ್ರರು ಅಲ್ಲಿರುವ ಗುಹೆಯಲ್ಲಿ 12 ವರ್ಷ ತಪಸ್ಸು ಮಾಡಿದ್ದರು. ಪಂಚಮುಖಿ ಪ್ರಾಣದೇವರು ಬಂಡೆಯಲ್ಲಿ (ಶಿಲೆ) ಒಡಮೂಡಿದ್ದಾರೆ (ನೈಸರ್ಗಿಕವಾಗಿ ಕಾಣಿಸಿಕೊಂಡಿದ್ದಾರೆ).

ನೈಸರ್ಗಿಕ ಅದ್ಭುತ

ಪಂಚಮುಖಿ ಪ್ರಾಣದೇವರ ದೇವಸ್ಥಾನದ ಹಿಂದುಗಡೆ ಲಕ್ಷ್ಮೀ ಮಂದಿರವಿದೆ. ಆ ಮಂದಿರಕ್ಕೆ ಹೋಗುವಾಗ ಎರಡು ನೈಸರ್ಗಿಕ ಅದ್ಭುತಗಳು ಕಾಣಸಿಗುತ್ತವೆ. ಒಂದರ ಮೇಲೊಂದು ಕೂಳಿತ ಮೂರು ಬೃಹದಾಕಾರದ ಬಂಡೆಗಳ ಮೇಲೆ ನಡುಮಧ್ಯೆ, ಒಂದು ಚಿಕ್ಕ ಬಂಡೆ ಮತ್ತು ಅಂಚಿಗೆ ಸ್ವಲ್ಪ ದೊಡ್ಡದಾದ ಬಂಡೆ, ಈ ಎರಡೂ ಬಂಡೆಗಳ ಮೇಲೆ ಸಮತೋಲನದಿಂದ ಕುಳಿತ ಇನ್ನೊಂದು ದೊಡ್ಡ ಗಾತ್ರದ ಬಂಡೆ. ಇನ್ನೊಂದು ಕಡೆ ಹಾಸಿಗೆಯಂತೆ ಕಾಣುತ್ತ ಮಲಗಿರುವ ಒಂದು ದೊಡ್ಡ ಬಂಡೆ, ಅದರ ಒಂದು ಪಾರ್ಶ್ವದ ಮೇಲೆ ಚಿಕ್ಕ ಬಂಡೆ, ಈ ಎರಡೂ ಬಂಡೆಗಳ ಮೇಲೆ ಚಾಚಿದ ಇನ್ನೊಂದು ಬಂಡೆ. ಹಾಸಿಗೆ ಮತ್ತು ದಿಂಬು ಎಂದು ಆ ಕೆಳಗಿನ ಬಂಡೆಯ ಮೇಲೆ ಬರೆದಿದ್ದಾರೆ.

ಪಂಚಮುಖಿ ಆಂಜನೇಯನ ದೇಗುಲದ ಸುತ್ತಲೂ ಇರುವ ಹಲವು ವಿಚಿತ್ರಾಕಾರದ ಬೃಹತ್ ಬಂಡೆಗಳು ಅಲ್ಲಿ ಪ್ರಕೃತಿಯೇ ಕಡೆದಿಟ್ಟ ವಿಗ್ರಹಗಳಂತೆ ತಲೆ ಎತ್ತಿದ್ದವು. ಆ ಬಂಡೆಗಳೂ ಸಹ ಮಂತ್ರಾಲಯ ಯಾತ್ರೆಯ ಭಾಗವಾಗುವ ಅರ್ಹತೆ ಪಡೆದಿವೆ!

ದಿನ ದರ್ಶಿಕೆ

ಶ್ರೀ ಕ್ರೋಧಿ ಸಂವತ್ಸರ, ಶುಕ್ಲ ಪಕ್ಷ, ಅಷ್ಟಮಿ ತಿಥಿ, ಭರಣಿ ನಕ್ಷತ್ರ, ಯೋಗ ಶುಕ್ಲ, ರಾಹುಕಾಲ ಅಪರಾಹ್ನ 12ರಿಂದ 1.30, ಅಭಿಜಿತ್ ಮುಹೂರ್ತ ಅಪರಾಹ್ನ 12.13ರಿಂದ 12.57

ಮನೆಮದ್ದು

ಶೀತ ಮತ್ತು ಕೆಮ್ಮಿಗೆ ಶುಂಠಿ ಪ್ರಯೋಜನಕಾರಿ. ಇದು ಶ್ವಾಸಕೋಶದಲ್ಲಿ ಶಾಖವನ್ನು ಸೃಷ್ಟಿಸುತ್ತದೆ ಮತ್ತು ಅಲ್ಲಿ ಸಂಗ್ರಹವಾಗಿರುವ ಕಫ ಕರಗಿಸಲು ಸಹಾಯ ಮಾಡುತ್ತದೆ. ಉರಿಯೂತ ನಿವಾರಕ ಗುಣಗಳು ಸ್ನಾಯು - ಕೀಲು ನೋವಿನಿಂದಲೂ ಪರಿಹಾರ ನೀಡುತ್ತದೆ.

ಸೌಂದರ್ಯ ಸೂತ್ರ

ಎರಡು ಟೀ ಸ್ಪೂನ್ ಕಡಲೆ ಹಿಟ್ಟನ್ನು ಒಂದು ಚಮಚ ಮೊಸರು ಮತ್ತು ಒಂದು ಚಿಟಿಕೆ ಅರಿಶಿಣದೊಂದಿಗೆ ಬೆರೆಸಿ. ಮುಖದ ಮೇಲೆ ಆ ಮಿಶ್ರಣ ಹಚ್ಚಿ, 15-20 ನಿಮಿಷಗಳ ಕಾಲ ಅಥವಾ ಒಣಗುವವರೆಗೆ ಬಿಡಿ. ಉಗುರು ಬೆಚ್ಚಗಿನ ನೀರಿನಿಂದ ತೊಳೆಯಿರಿ.

ದಿನ ಭವಿಷ್ಯ

ಮೇಷ: ವೃತ್ತಿಜೀವನದಲ್ಲಿ ಸಮಾಧಾನದಿಂದ ಕಾರ್ಯ ನಿರ್ವಹಿಸಿದರೆ ದೂರದ ಗುರಿ ಬಹಳ ಸುಲಭವಾಗಿ ತಲುಪಲಿದ್ದೀರಿ.

ವೃಷಭ: ನಿಮ್ಮ ಕಾರ್ಯ ವೈಖರಿಗೆ ತಕ್ಕ ಪ್ರತಿಫಲ ಸಿಗುವುದರಿಂದ ಮಾನಸಿಕವಾಗಿ ಸಂತಸ, ನೆಮ್ಮದಿ ಕಂಡುಕೊಳ್ಳಬಹುದಾಗಿದೆ.

ಮಿಥುನ: ಹೊಸ ಅವಕಾಶವೊಂದು ನಿಮ್ಮ ಎದುರಿಗೆ ತೆರೆದುಕೊಳ್ಳಲಿದ್ದು, ಅದರ ಸದುಪಯೋಗ ಪಡಿಸಿಕೊಳ್ಳದಿದ್ದರೆ ಅದರಿಂದ ನಷ್ಟ ಖಚಿತ.

ಕಟಕ: ಮಾಡಿದ್ದುಣ್ಣೋ ಮಹಾರಾಯ ಎಂಬಂತೆ ನಿಮ್ಮ ತಪ್ಪಿಗೆ ಸರಿಯಾದ ಶಿಕ್ಷೆ ಸಿಗುವ ಸಾಧ್ಯತೆ ಇದ್ದು, ಅದರಿಂದ ತಪ್ಪಿಸಿಕೊಂಡರೆ ಉತ್ತಮ.

ಸಿಂಹ: ಆಪ್ತರೊಬ್ಬರ ಅಗಲುವಿಕೆಯಿಂದ ನಿಮ್ಮ ಆತ್ಮಸ್ಥೈರ್ಯ ಕುಸಿಯುವ ಸಂಭವ ಇರುವುದರಿಂದ ಸದಾ ಎಚ್ಚರವಾಗಿರಲು ಪ್ರಯತ್ನಿಸಿ.

ಕನ್ಯಾ: ಎಲ್ಲರೂ ನಿಮ್ಮ ಮಾತನ್ನು ಕೇಳಬೇಕು ಎಂಬ ಹಠ ಬಿಟ್ಟರೆ ಮಾತ್ರ ವೃತ್ತಿ ಜೀವನದಲ್ಲಿ ನಿಮಗೆ ತಿರುವು ಸಿಗಲಿದೆ.

ತುಲಾ: ಹಲವು ದಿನಗಳಿಂದ ಮಾಡಬೇಕು ಎಂದು ಕೊಂಡ ಕೆಲಸ ಕೈಗೂಡುವ ದಿನ ನಿಮಗೆ ಬರಲಿದ್ದು, ಅದರಿಂದ ತಪ್ಪಿಸಿಕೊಳ್ಳದಿರಿ.

ವೃಶ್ಚಿಕ: ಷೇರು ವ್ಯವಹಾರವೂ ಸೇರಿದಂತೆ ಹಲವಾರು ಉತ್ತಮ ವ್ಯವಹಾರಗಳಲ್ಲಿ ನೀವು ತೊಡಗಿಕೊಂಡರೆ ಅದರಿಂದ ಲಾಭ ಹೆಚ್ಚು.

ಧನು: ನಿಮ್ಮ ನಿರೀಕ್ಷೆಗೂ ಮೀರಿ ಅದೃಷ್ಟ ನಿಮ್ಮನ್ನು ಹುಡುಕಿ ಬರುವುದರಿಂದ ಸದಾ ಸಮೃದ್ಧವಾದ ಜೀವನ ನಿಮ್ಮದಾಗಲಿದೆ.

ಮಕರ: ಆತ್ಮೀಯರಿಂದಲೇ ನೋವಾಗುವ ಘಟನೆ ನಿಮಗೆ ಎದುರಾಗುವ ಸಾಧ್ಯತೆ ಇರುವುದರಿಂದ ಬಹಳ ಸೂಕ್ಷ್ಮವಾಗಿ ಮಾತನಾಡಿ.

ಕುಂಭ: ಕೈಗೆ ಬಂದ ತುತ್ತು ಬಾಯಿಗೆ ಬರದಂತಹ ಪರಿಸ್ಥಿತಿ ನಿಮಗೆದುರಾದರೂ ಸದ್ಯದಲ್ಲೇ ಶುಭ ಸುದ್ದಿಯೊಂದು ನಿಮಗೆ ಬರಲಿದೆ.

ಮೀನ: ಕೊಂಕು ಮಾತನ್ನು ಯಾರಿಗೂ ಹೇಳದೆ, ಎಲ್ಲರೊಂದಿಗೂ ನಯ ವಿನಯವಾಗಿ ನಡೆದುಕೊಂಡರೆ ಉತ್ತಮ ಭವಿಷ್ಯ ನಿಮ್ಮದಾದೀತು.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 1917: ಮೆಕ್ಸಿಕೋ ದೇಶದಲ್ಲಿ ಸಂವಿಧಾನ ಅಸ್ತಿತ್ವಕ್ಕೆ ಬಂದ ದಿನ
- 1961: ಬ್ರಿಟನ್‌ನಲ್ಲಿ ಸಂಡೆ ಟೆಲಿಗ್ರಾಫ್ ದಿನಪತ್ರಿಕೆ ಆರಂಭವಾದ ದಿನ
- 1992: ಭಾರತದ ಕ್ರಿಕೆಟಿಗ ಡಿ. ವೆಂಗ್‌ಸರ್ಕಾರ್ ಕ್ರಿಕೆಟ್‌ನಿಂದ ನಿವೃತ್ತಿಯಾದ ದಿನ

ಚಿತ್ರಸ್ಫೂರ್ತಿ

ಲಂಡನ್‌ನ ಚೈನಾಟೌನ್‌ನಲ್ಲಿ ನಡೆಯುತ್ತಿರುವ ಚಂದ್ರ ವರ್ಷಾರಂಭದ ಸಡಗರ.

ಭಾವ ಬದಲಿಸಲಾಗದು

ಶಂಕರಾನಂದ ಹೆಬ್ಬಾಳ

ಹುಟ್ಟುಗುಣ ಸುಟ್ಟರೂ ಹೋಗುವುದಿಲ್ಲ ಎಂಬ ಗಾದೆಯಂತೆ ಮನುಷ್ಯನ ಸ್ವಭಾವ ವಿಚಿತ್ರ ಹಾಗೂ ವಿಸ್ಮಯ. ಈ ಸ್ವಭಾವವು ಹುಟ್ಟಿನಿಂದಲೇ ಸಸಿಯಂತಿದ್ದು ಬರಬರುತ್ತ ಹೆಮ್ಮರವಾಗಿ ಬೆಳೆಯುತ್ತದೆ. ಒಂದು ಅಂಗಡಿಯಲ್ಲಿ ಹೇಗೆ ವಿವಿಧ ವಸ್ತುಗಳು ಇರುತ್ತವೆಯೋ, ಅದರಂತೆ ಮನುಷ್ಯನ ಸ್ವಭಾವಗಳು ವಿಧ ವಿಧವಾಗಿವೆ. ಒಬ್ಬರಲ್ಲಿ ಕೋಪವಿದ್ದರೆ, ಇನ್ನೊಬ್ಬರಲ್ಲಿ ಹಠಮಾರಿತನ, ಮತ್ತೊಬ್ಬರಲ್ಲಿ ಜಗಳಗಂಟತನ ಹೀಗೆ ಅವುಗಳು ಆತ್ಮೀಯ ಗೆಳೆಯನಂತೆ ಒಬ್ಬೊಬ್ಬರ ಜೊತೆಗಿರುತ್ತದೆ.

ಮಹಾಕಾವ್ಯಗಳನ್ನು ಗಮನಿಸಿದರೆ ಸಾತ್ವಿಕ ಸ್ವಭಾವಕ್ಕೆ ರಾಮ-ಸೀತೆಯರು, ಕುಟಿಲ ಸ್ವಭಾವಕೆ ಶಕುನಿ ಮಂಥರೆಯಂತವರು, ಕೋಪಕ್ಕೆ ವಿಶ್ವಾಮಿತ್ರ, ಜಮದಗ್ನಿಯಂತವರು, ಹಠಕ್ಕೆ ದುರ್ಯೋಧನ, ದ್ರೌಪದಿ ಹೀಗೆ ಮೂಲ ಸ್ವಭಾವವನ್ನು ಕೊನೆಯ ತನಕ ಹಾಗೆ ಉಳಿಸಿಕೊಂಡು ಬೆಳೆದವರು. ಮೂರುವರ್ಷದ ಬುದ್ಧಿ ನೂರು ವರ್ಷದವರೆಗೆ ಎಂಬಂತೆ ಬಾಲ್ಯದಲ್ಲಿಯೇ ಈ ಸ್ವಭಾವವನ್ನು ತಿದ್ದದಿದ್ದರೆ ಹೆಮ್ಮರವಾಗಿ ಬೆಳೆದು ಅದು ಅವಸಾನದ ಅಂಚಿಗೆ ಒಯ್ಯುತ್ತದೆ.

ಕಚೇರಿಗಳ ವಿಷಯಕ್ಕೆ ಬಂದರೆ ಸಿಬ್ಬಂದಿಗಳ ಸ್ವಭಾವ ಒಂದು ತೆರನಾದರೆ, ಮುಖ್ಯಸ್ಥರ ಸ್ವಭಾವ ಒಂದು ತೆರನಾಗಿರುತ್ತದೆ. ಒಬ್ಬರಿಗೊಬ್ಬರು ಹೊಂದಾಣಿಕೆಯಿಲ್ಲದೆ ಉತ್ತಮ ಆಡಳಿತ ನಡೆಸಿಕೊಂಡು ಹೋಗುವುದು ಬಲು ದುಸ್ತರದ ಸಂಗತಿ. ಈ ಮೂಲ ಸ್ವಭಾವವನ್ನು ಬದಲಿಸಲು ಪ್ರಯತ್ನಪಟ್ಟರೂ ಕೊನೆಗೆ ಹೊರಟ ವ್ಯಕ್ತಿಯೇ ಬದಲಾಗುತ್ತಾನೆಯೆ ಹೊರತು ಎದುರಿಗಿರುವ ವ್ಯಕ್ತಿ ಕಿಂಚಿತ್ತು ಬದಲಾಗುವುದಿಲ್ಲ. ಸಾತ್ವಿಕ ಸ್ವಭಾವದ ಮನುಷ್ಯ ಅಂತಹ ಸ್ವಭಾವದ ಮನುಷ್ಯರ ಜೊತೆ ಅಷ್ಟಕಷ್ಟೆ ಬಾಂಧವ್ಯವನ್ನು ಹೊಂದಿ ಜೀವನ ನಡೆಸುತ್ತಾನೆ.

ಮನಶಾಸ್ತ್ರಜ್ಞರ ಪ್ರಕಾರ, ಈ ಸ್ವಭಾವದಲ್ಲಿ ಐದು ಗುಣಾಂಶಗಳಿವೆ, ಅವುಗಳೆಂದರೆ ಮುಕ್ತತೆ, ಮನಸಾಕ್ಷಿ, ಒಪ್ಪಿಕೊಳ್ಳುವಿಕೆ, ಸೂಕ್ಷ್ಮಗ್ರಾಹಿ. ಇಲ್ಲಿ ಮುಕ್ತತೆಯೆಂದರೆ ಸರ್ವಕಾಲದಲ್ಲಿ ಮುಕ್ತವಾಗಿ ಮಾತನಾಡುವ ಸ್ವಭಾವ , ಮನಸಾಕ್ಷಿ ಎಂದರೆ ತಮಗನ್ನಿಸಿದ್ದನ್ನು ಮಾಡುವ ಜೊತೆಗೆ ಆತ್ಮಸಾಕ್ಷಿಯ ಒಪ್ಪಿಗೆಯನ್ನು ಕೇಳುವ ಕರ್ತವ್ಯನಿಷ್ಠೆಯ ಸ್ವಭಾವ. ಒಪ್ಪಿಕೊಳ್ಳುವಿಕೆ ಎಂದರೆ ತಮ್ಮಲ್ಲಿ ತಪ್ಪುಒಪ್ಪುಗಳನ್ನು ಮುಚ್ಚುಮರೆಯಿಲ್ಲದೆ ಒಪ್ಪಿಕೊಳ್ಳುವ ಸ್ವಭಾವ.

ಸೂಕ್ಷ್ಮಗ್ರಾಹಿ ಎಂದರೆ ಭಾವನಾತ್ಮಕ ಜೀವಿಗಳು ಸರಳವಾಗಿ ಮಾನಸಿಕ ಖಿನ್ನತೆಗೆ ಒಳಗಾಗುವ ಪ್ರವೃತ್ತಿಯುಳ್ಳವರು. ನಮ್ಮ ನಿಮ್ಮಲ್ಲಿ ವಿಭಿನ್ನ ಬಗೆಯ ಸ್ವಭಾವಗಳಿವೆ. ಈ ಸ್ವಭಾವಗಳನ್ನು ಬದಲಿಸಲಾಗದಿದ್ದರೂ ಅದರಿಂದ ಕೆಡುಕಾಗದಂತೆ ಬಾಳುತ್ತ ಸಮಾಜವನ್ನು ಉತ್ತಮ ಹಾದಿಯತ್ತ ಕೊಂಡೊಯ್ಯುವ ಕೆಲಸವಾದರೆ ಅದೇ ಹರ್ಷದಾಯಕ.

ಸಿಟ್ಟು ಎರಡು ಬದಿಯ ಗರಗಸದಂತೆ

ಒಬ್ಬ ಮರದ ಕೆಲಸದವನು ರಾತ್ರಿ ತನ್ನ ಕೆಲಸವನ್ನು ಮುಗಿಸಿ ಎಂದಿನಂತೆ ತನ್ನ ಅಂಗಡಿಯನ್ನು ಮುಚ್ಚಿ ಮನೆಗೆ ಹೊರಡುತ್ತಾನೆ. ಆ ಹೊತ್ತಿನಲ್ಲಿ ಒಂದು ದೊಡ್ಡ ಹಾವೊಂದು ಅಂಗಡಿಗೆ ನುಗ್ಗುತ್ತದೆ. ಅಲ್ಲಿ ತನಗೆ ಏನಾದರೂ ಆಹಾರ ಸಿಗಬಹುದೆಂದು ಅತ್ತ ಇತ್ತ ತಿರುಗುತ್ತದೆ. ಹಾವು ಹಾಗೆ ತಿರುಗುತ್ತಿರುವಾಗ, ಅಲ್ಲಿರುವ ಎರಡು ಬದಿಯಲ್ಲಿಯೂ ಹರಿತವಾಗಿರುವ ಒಂದು ಗರಗಸಕ್ಕೆ ತಾಗಿ ಅದಕ್ಕೆ ಸಣ್ಣದಾದ ಗಾಯವಾಗುತ್ತದೆ. ಹಾವಿಗೆ ಸಿಟ್ಟು ಬಂದು ಆ ಗರಗಸಕ್ಕೆ ಕಚ್ಚುತ್ತದೆ. ಆಗ ಅದರ ಬಾಯಿಗೂ ಕೂಡ ಗಾಯವಾಗುತ್ತದೆ. ಇದರಿಂದ ಹಾವಿನ ಸಿಟ್ಟು ಮತ್ತಷ್ಟು ಹೆಚ್ಚಾಗುತ್ತದೆ. ಕೂಡಲೇ ಅದು ಆ ಗರಗಸಕ್ಕೆ ಗಟ್ಟಿಯಾಗಿ ಸುತ್ತಿಕೊಂಡು ತನ್ನ ಹಿಡಿತವನ್ನು ಬಲಪಡಿಸುತ್ತದೆ. ಮರುದಿನ ಬೆಳಿಗ್ಗೆ ಮರದ ಕೆಲಸದವನು ತನ್ನ ಅಂಗಡಿಯನ್ನು ತೆರೆದಾಗ ಅವನಿಗೆ ಗರಗಸದಲ್ಲಿ ಸುತ್ತಿಕೊಂಡು ಸತ್ತಿದ್ದ ಹಾವು ಕಾಣುತ್ತದೆ. ಮರದ ಕೆಲಸ ಮಾಡುವವನಿಗೆ ಆಘಾತವಾದರೂ ಒಂದೆರಡು ನಿಮಿಷ ಗಮನಿಸಿದಾಗ ಹಾವು ಬೇರೆಯವರ ಆಕ್ರಮಣದಿಂದ ಸಾಯಲಿಲ್ಲ, ಬದಲಿಗೆ ತನ್ನದೇ ಆದ ಸಿಟ್ಟು ಮತ್ತು ಹಠದಿಂದ ಸತ್ತಿತ್ತು ಎಂದು ಅರ್ಥವಾಯಿತು.

ಚಿಕ್ಕದಾದರೂ ಜೀವನದಲ್ಲಿ ಬಹುದೊಡ್ಡ ಪಾಠವನ್ನು ನಮಗೆ ಈ ಕಥೆ ನೀಡುತ್ತದೆ. ಜೀವನದಲ್ಲಿ ಸಿಟ್ಟು , ಕೋಪ, ಮನಸ್ತಾಪ ಮನುಷ್ಯ ಸಹಜವಾಗಿ ನಮಗೆ ಮೂಡುತ್ತದೆ. ಬಾಲ್ಯದಿಂದಲೂ ನಮ್ಮ ಹಿರಿಯರು ಮತ್ತೆ ನಮ್ಮ ವಿದ್ಯಾಭ್ಯಾಸ , ನಮ್ಮ ಸಂಸ್ಕಾರ ನಮಗೆ ಈ ಕ್ರೋಧ, ಅನುಮಾನ, ಸಿಟ್ಟು ಇವುಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಬೋಧಿಸುತ್ತಾ ಇರುತ್ತದೆ. ಅದು ಜೀವನದಲ್ಲಿ ವಿವಿಧ ಹಂತಗಳಲ್ಲಿ ಅನೇಕರಿಂದ ನಮಗೆ ತಿಳಿಯುತ್ತಾ ಹೋಗುತ್ತದೆ. ಬಾಲ್ಯದಲ್ಲಿ ಅಥವಾ ಸರಿಯಾದ ಸಮಯದಲ್ಲಿ ನಾವು ಈ ಸಿಟ್ಟನ್ನು ನಮ್ಮ ಅಂಕೆಯಲ್ಲಿ ಇಟ್ಟುಕೊಳ್ಳದೆ ಹೋದರೆ, ಏನೆಲ್ಲಾ ಅವಘಡಗಳಾಗಬಹುದು ಎನ್ನುವುದಕ್ಕೆ ಮೇಲಿನ ಕಥೆ ಒಂದು ಸೂಚ್ಯ ಉದಾಹರಣೆ ಅಷ್ಟೇ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಸಿಟ್ಟಿನಿಂದ ಮಾಡಿದ ಕೆಲಸಗಳು ಎಂದು ಸರಿಯಾಗಿ ಆಗುವುದಿಲ್ಲ. ಅನಗತ್ಯವಾಗಿ ಸಿಟ್ಟು ಮಾಡಿಕೊಳ್ಳುವುದು ಕೂಗಾಡುವುದು, ಮತ್ತೊಬ್ಬರ ಮೇಲೆ ಹರಿ ಹಾಯುವುದು ಇದರಿಂದ ನಮ್ಮ ಮಾನಸಿಕ ದೈಹಿಕ ಆರೋಗ್ಯ ಹಾಳಾಗುತ್ತದೆಯೇ ಹೊರತು, ಹೆಚ್ಚಿನ ಪ್ರತಿಫಲ ಸಿಗುವುದಿಲ್ಲ. ಇದರೊಟ್ಟಿಗೆ ನಮ್ಮ ಸಂಬಂಧಗಳು ಕೂಡ ಹಾಳಾಗುತ್ತಾ ಹೋಗುತ್ತದೆ.

ಸದಾ ಸಿಟ್ಟಿನಲ್ಲಿ ಇರುವವರನ್ನು ಯಾರೂ ಇಷ್ಟಪಡುವುದಿಲ್ಲ. ಹಣ ಅಧಿಕಾರ ಏನೇ ಇದ್ದರೂ ಸಹ ಅದರೊಡನೆ ಸಿಟ್ಟು ಸಹ ಇದ್ದರೆ ನಾವು ಬೇರೆಯವರನ್ನು ಹೆದರಿಸಲು ಸಾಧ್ಯ ಆದರೆ ಅವರ ಪ್ರೀತಿಯನ್ನು ಗಳಿಸಲು ಸಾಧ್ಯವಿಲ್ಲ.

ಮತ್ತೊಬ್ಬರ ಮೇಲೆ ಅನಗತ್ಯವಾಗಿ ಮಾಡಿಕೊಳ್ಳುವ ಸಿಟ್ಟು ನಮ್ಮ ಮಾನಸಿಕ ಸ್ಥಿತಿಯ ಬಗ್ಗೆ ಹೆಚ್ಚು ವಿವರಿಸುತ್ತಾ ಹೋಗುತ್ತದೆ. ಯಾರು ಮಾನಸಿಕವಾಗಿ ಬಹಳ ಕುಗ್ಗಿರುತ್ತಾರೋ, ಅವರ ಜೀವನವನ್ನು ನಿಭಾಯಿಸಲು ಸಾಧ್ಯವಿಲ್ಲದೆ ಒದ್ದಾಡುತ್ತಿರುತ್ತಾರೋ ಅಂತಹವರಿಗೆ ಸಿಟ್ಟು ನಿಯಂತ್ರಣಕ್ಕೆ ಸಿಗುವುದಿಲ್ಲ. ಒಳ್ಳೆಯ ದೈಹಿಕ ಮಾನಸಿಕ ಆರೋಗ್ಯ ಇಟ್ಟುಕೊಂಡವರು ಎಂತದ್ದೇ ಪರಿಸ್ಥಿತಿಯಲ್ಲೂ ಕೂಡ ಸಮಾಧಾನದಿಂದ ನಿಭಾಯಿಸುತ್ತಾರೆ. ಸಿಟ್ಟಿನಿಂದ ಆ ಕ್ಷಣದಲ್ಲಿ ನಾವು ಮತ್ತೊಬ್ಬರಿಗೆ ನೋವುಂಟು ಮಾಡಬಹುದು, ಆದರೆ ನಂತರ ಆ ಸಿಟ್ಟು ನಮ್ಮನ್ನೇ ಬಲಿ ತೆಗೆದುಕೊಳ್ಳುತ್ತದೆ.

ನಮಗೂ ಸಿಟ್ಟು ಬಂದಾಗ ನಾವು ಸಹಿತ ಆ ಹಾವಿನ ಹಾಗೆ, ಸಿಟ್ಟು ಮತ್ತು ಹಗೆಯಿಂದ ಎದುರಾಳಿಗೆ ನಷ್ಟ ಮಾಡಲು ಪ್ರಯತ್ನ ಪಡುತ್ತೇವೆ. ಆದರೆ ಸ್ವಲ್ಪ ಸಮಯದ ನಂತರ ಅದರಿಂದಾಗಿ ನಮಗೆ ಹೆಚ್ಚು ಹಾನಿಯಾದದ್ದು ಗಮನಕ್ಕೆ ಬರುತ್ತದೆ. ನಾವು ಸಂತೋಷದಿಂದ ಜೀವಿಸಲು ಕೆಲವೊಂದು ವಸ್ತು, ಜನರು, ಘಟನೆ ಹಾಗು ವಿಷಯಗಳನ್ನು ಕಡೆಗಣಿಸಬೇಕಾಗುತ್ತದೆ. ನಾವು ಪ್ರತಿಕ್ರಿಯೆ ತೋರಿಸುವ ಅಗತ್ಯತೆ ಇದ್ದಲ್ಲಿ ಮಾತ್ರ ಪ್ರತಿಕ್ರಿಯೆ ತೋರಿಸಬೇಕೇ ವಿನಹ ಎಲ್ಲದಕ್ಕೂ ಪ್ರತಿಕ್ರಿಯೆ ತೋರಿಸಲು ಹೋದಲ್ಲಿ ಅನವಶ್ಯಕವಾಗಿ ನಾವೇ ಹಾನಿಗೊಳಬೇಕಾಗುವ ಪ್ರಸಂಗಗಳೂ ಬರಬಹುದು.

ಅಲ್ಟ್ರಾ ಸಂಸ್ಕರಿಸಿದ ಆಹಾರಗಳಿಂದ ಸಮಸ್ಯೆ

-ವಾಣಿ ಮೈಸೂರು

ಮಾನವ ನಿರ್ಮಿತ ಕೈಗಾರೀಕರಣ ಹೆಚ್ಚಾದಂತೆ ಅಭಿವೃದ್ಧಿ ಹೊಂದಿದಷ್ಟು ಲಾಭ-ನಷ್ಟಗಳನ್ನು ಅನುಭವಿಸಬೇಕಾಗಿದೆ. ಆರೋಗ್ಯದಲ್ಲಿ ಏರುಪೇರು ಪ್ರಕೃತಿಯ ಅವನತಿಗೂ ಕಾರಣವಾಗುತ್ತಿದೆ ಆಧುನಿಕ ಜಗತ್ತಿನ ಪ್ರಭಾವ ಒತ್ತಡ ಹಾಗು ಯಾಂತ್ರಿಕ ಬದುಕು ಸಂದರ್ಭಕ್ಕೆ ತಕ್ಕಂತೆ ಇಂದಿನ ದಿನಗಳಲ್ಲಿ ಹೆಚ್ಚಾಗಿ ಅಲ್ಟ್ರಾ-ಪ್ರೊಸೆಸ್ಡ್ ಫುಡ್‌ಗೆ ಅವಲಂಬಿತವಾಗಿ ತುಂಬಾ ಗಂಭೀರ ಸಮಸ್ಯೆಗಳನ್ನು ಎದುರಿಸುವ ಸ್ಥಿತಿ ಬಂದಿದೆ ಅಂದರೆ ತಪ್ಪಿಲ್ಲ.

ಅಲ್ಟ್ರಾ-ಸಂಸ್ಕರಿಸಿದ ಆಹಾರಗಳು: ಪ್ರಕೃತಿದತ್ತವಾಗಿ ಸಿಗುವ ಆಹಾರ ಪದಾರ್ಥಗಳು ಮತ್ತು ಖಾದ್ಯ ವಸ್ತುಗಳು, ಸಂರಕ್ಷಕಗಳು, ಸುವಾಸನೆಗಳು ಮತ್ತು ಬಣ್ಣಗಳನ್ನು ಉಪಯೋಗಿಸಿ ಕೈಗಾರೀಕರಣದಿಂದ ಉತ್ಪಾದಿಸುವ ಆಹಾರಗಳೇ ಅಲ್ಟ್ರಾ ಸಂಸ್ಕರಿಸಿದ ಆಹಾರಗಳು. ನಾವು ಅದನ್ನು ತಿನ್ನುವುದರಿಂದ ನಮ್ಮ ಆರೋಗ್ಯದ ಮೇಲೆ ದೊಡ್ಡ ಪರಿಣಾಮ ಬೀರುತ್ತದೆ. ಬರ್ಗರ್, ಪಿಜ್ಜಾ ಮತ್ತು ಚಿಪ್ಸ್, ತಂಪು ಪಾನೀಯಗಳು ಮತ್ತು ಹೊರಗಡೆ ಸೇವಿಸುವ ರಸ್ತೆ ಬದಿಯ ಆಹಾರಗಳು ಆ ವರ್ಗಕ್ಕೆ ಸೇರುತ್ತದೆ. ಅಲ್ಟ್ರಾ ಸಂಸ್ಕರಿಸಿದ ಆಹಾರಗಳು ದೇಹಕ್ಕೆ ಬೇಕಾಗುವಷ್ಟು ಉಪಯೋಗಕಾರಿ ಪೋಷಕಾಂಶಗಳು ಮತ್ತು ವಿಟಮಿನ್‌ಗಳನ್ನು ಹೊಂದಿರುವುದಿಲ್ಲ. ನಾವು ಹೆಚ್ಚು ಅಲ್ಟ್ರಾ ಸಂಸ್ಕರಿಸಿದ ಆಹಾರಗಳನ್ನು ಸೇವಿಸುತ್ತೇವೆ, ಆಹಾರದ ಪೌಷ್ಟಿಕಾಂಶದ ಗುಣಮಟ್ಟವು ಕಳಪೆಯಾಗಿದೆ. ಅವು ನಾಲಿಗೆಗೆ ರುಚಿಯನ್ನು ಕೊಡುತ್ತದೆ ಮತ್ತು ಅಗ್ಗವಾಗಿರುತ್ತವೆ. ಸ್ಯಾಚುರೇಟೆಡ್ ಕೊಬ್ಬುಗಳು, ಸಕ್ಕರೆ ಮತ್ತು ಉಪ್ಪಿನಂತಹ ಅಂಶಗಳು ಮತ್ತು ಕೃತಕ ಹಾಗೂ ಹಾನಿಕಾರಕ ಪದಾರ್ಥಗಳನ್ನು ಅಧಿಕವಾಗಿ ಹೊಂದಿರುತ್ತವೆ. ಕಲಬೆರಕೆ ಆಹಾರವು ದೇಹವನ್ನು ಸೇರಿದರೆ ತುಂಬಾ ಹಾನಿಕಾರಕ ಮತ್ತು ಅಜೈವಿಕ ಆಹಾರ. ಇಂದು ಉತ್ಪಾದನೆಯಾಗುವ ಆಹಾರವು ರಾಸಾಯನಿಕಗಳ ಬಳಕೆಯಾಗಿದೆ. ಮತ್ತು ಆಹಾರ ಭದ್ರತೆಯ ಉದಯೋನ್ಮುಖ ಸವಾಲಾಗಿದೆ.

ಗಮನ ಇರಲಿ

- ಸುಧಾರಿತ ಸೂಕ್ಷ್ಮಜೀವಿಯ ಆಹಾರ ಸುರಕ್ಷತೆ ಮತ್ತು ಹೆಚ್ಚಿದ ಶೆಲ್ಫ್ ಜೀವಿತಾವಧಿ.
- ಕೀಟನಾಶಕಗಳು ಮತ್ತು ವಿಷಗಳನ್ನು ನಿರ್ಮೂಲ ಗೊಳಿಸುತ್ತದೆ.
- ಟಾಕ್ಸಿನ್ ರಚನೆಯ ಇಳಿಕೆ ಮಟ್ಟ ಕೆಳ ಮಟ್ಟದಲ್ಲಿ ಇರುತ್ತದೆ.
- ತಕ್ಷಣಕ್ಕೆ ಆಹಾರವನ್ನು ಸೇವಿಸಲು ಸುಲಭ ವಿಧಾನ.

ಅನಾನುಕೂಲತೆಗಳು

- ಹೆಚ್ಚುವರಿ ಕೊಬ್ಬು, ಸಕ್ಕರೆ ಮತ್ತು ಉಪ್ಪಿನ ಅಂಶಗಳು ಅಧಿಕ.
- ರಾಸಾಯನಿಕ ಕಲ್ಮಶಗಳ ಸೋರಿಕೆ
- ಅಲ್ಟ್ರಾ-ಸಂಸ್ಕರಿಸಿದ ಆಹಾರಗಳನ್ನು ಸೇವಿಸುವುದರಿಂದ ಸ್ವಷ್ಟ ಆರೋಗ್ಯ ಕ್ಕೆ ಅಡ್ಡಿಯಾಗಿ ಆರೋಗ್ಯದಲ್ಲಿ ಏರುಪೇರು ಉಂಟಾಗುತ್ತದೆ.
- ದೇಹದ ಅಂಗಾಂಶಗಳು ಮತ್ತು ಜೀವ ಕೋಶಗಳಲ್ಲಿ ಕ್ರಮೇಣ ಜೀವಾಣು ಸಂಗ್ರಹವಾಗಿ ಕಳಪೆ ಚಯಾಪಚಯ ಮತ್ತು ಕರುಳಿನ ಆರೋಗ್ಯ, ತೂಕ-ಸಂಬಂಧಿತ ಸಮಸ್ಯೆಗಳ ಹೆಚ್ಚಳ.
- ಕೀಲು ಅಥವಾ ಸ್ನಾಯು ನೋವನ್ನು ಹೆಚ್ಚಿಸುತ್ತದೆ, ಚರ್ಮ ಮತ್ತು ಕೂದಲಿನ ಮೇಲೆ ಪರಿಣಾಮ ಬೀರುತ್ತದೆ,
- ಒತ್ತಡದ ಮಟ್ಟವನ್ನು ಹೆಚ್ಚಿಸುತ್ತದೆ. ಬೊಜ್ಜು ಟೈಪ್ 2 ಮಧುಮೇಹ, ಹೃದಯಕ್ಕೆ ಸಂಬಂಧಪಟ್ಟ ಕಾಯಿಲೆಗಳು ಮತ್ತು ಕ್ಯಾನ್ಸರ್ ಕಾಯಿಲೆಗಳಿಂದ ಬಳಲುವ ಸಾಧ್ಯತೆ ಹೆಚ್ಚು.
- ಸತ್ವಭರಿತ ಆಹಾರ ಸೇವನೆ ಸಾಧ್ಯವಾದಷ್ಟು ಮಾಡಿ, ಜಂಕ್‌ಫುಡ್‌ನಿಂದ ದೂರವಿರುವುದು ಅತ್ಯುತ್ತಮ.

ಪದಬಂಧ



ಎಡದಿಂದ ಬಲಕ್ಕೆ

1. ಮೋಸ ಮಾಡು ಎನ್ನುವ ನುಡಿಗಟ್ಟು (4)
4. ನಾನು, ನನ್ನದೆಂಬ ಪ್ರೀತಿ (4)
6. ಭೀಷ್ಮನಿಗೆ ಹೀಗೊಂದು ಹೆಸರಿದೆ (3)
7. ಮುಖದ ಮೇಲಿನ ಹೊಳಪು (2)
8. ಮಜಾ ಮಾಡುವ ಮಂದಿ (2)
10. ಮಾರಾಟ ಅಥವಾ ವಿಕ್ರಯ (3)
12. ಇರುಳಿಗೆ ಮತ್ತೊಂದು ಹೆಸರು (3)
14. ಎರಡಕ್ಷರದ ಮನುಷ್ಯ (2)
16. ಹೆದರು ಎಂದರ್ಥ (2)
18. ಕಡಲೆ ಜಾತಿಯ ಪುಟಾಣಿ ಧಾನ್ಯ (3)
19. ಮರೀಚಿಕೆಗೆ ಹೀಗೊಂದು ಹೆಸರು (4)
20. ಭ್ರಮರವು ಮರದ ಮಧ್ಯೆಯೇ ಇದೆ (4)

ಮೇಲಿನಿಂದ ಕೆಳಕ್ಕೆ

2. ಮೊದಲು ಪೂಜಿಸಲ್ಪಡುವ ದೇವರು (4)
3. ಚಿತ್ತದೊಂದಿಗೆ ಬಂದಿರುವ ಮನ್ಮಥ (4)
4. ಮೂರಕ್ಷರದ ಹಂತ (3)
5. ಜೀವ ತೆಗೆಯುವ ಯಮನಿಗೆ ಹೀಗೆಯೂ ಹೇಳಬಹುದು (4)
7. ಸಿನೆಮಾವೊಂದರಿಂದ ಪ್ರಸಿದ್ಧವಾದ, ಕಾಡಿನ ಇನ್ನೊಂದು ಹೆಸರು (3)
9. ಯಾವ ಕಡೆಯಿಂದ ನೋಡಿದರೂ ಹೊಸತೇ (3)
11. ರೀತಿಯೊಂದಿಗೆ ಬರುವ ಜೋಡಿಪದ (3)
13. ಯುವಕನಿಗೆ ಹೀಗೊಂದು ಹೆಸರಿದೆ (4)
15. ಬೆಲೆಬಾಳುವ ರತ್ನದ ಮಾಲೆ ತಲೆಕೆಳಗಾಗಿದೆ (4)
16. ಮಂಗಳನಿಗೆ ಮತ್ತೊಂದು ಹೆಸರು (4)
17. ಶಕ್ತಿಯಿಂದ ಕೂಡಿದ ಎಂದರ್ಥ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ತಾಸು 3. ಬತ್ತಾಸು 5. ನಟ 6. ಗರಡಿ 7. ಲೋಲಾಕು 8. ಏತ 9. ಲಜ್ಜೆ 10. ಮಾರ 11. ನಗ 13. ಗುಮಾನಿ 14. ಡಬರಿ 15. ನಿಧಿ 17. ಪಣ 18. ಕೂಪ 20. ಪರ್ವ 21. ಗಾಬರಿ 22. ಮಿಹಿರ 23. ಚಾರ 24. ಸುಕೃತ 25. ಶುಕ

ಮೇಲಿನಿಂದ ಕೆಳಕ್ಕೆ: 2. ಸುಗತ 3. ಬಡಿವಾರ 4. ಸುಲೋಚನ 5. ನಕುಲ 10. ಮಾನಿನಿ 12. ಗಡಣ 16. ಧಿಕ್ಕರಿಸು 17. ಪರಿಮಿತಿ 19. ಪಗಾರ 20. ಪರಶು

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ



ಗ್ಲಾಸ್ ಎಲ್ಸೆ

ಪ.ನಾ ಹಳ್ಳಿ ಹರೀಶ್ ಕುಮಾರ್

ಮೊದಲ ನೋಟಕ್ಕೇ ಯಾವುದೋ ಗಾಜಿನ ಕಲಾಕೃತಿಗಳೆಂಬಂತೆ ಗೋಚರಿಸುವ ಈ ಜೀವಿಗಳು ಜೀವಜಗತ್ತಿನ ಅದ್ಭುತ ಸೃಷ್ಟಿಗಳಲ್ಲೊಂದಾಗಿದೆ. ಅದೊಂದು ಜೀವಿಯೆಂದು ಗೊತ್ತಾದ ಮೇಲೂ ಅದು ಹಾವೆಂದು ನೀವು ಭಾವಿಸಿದರೆ ಮತ್ತೊಮ್ಮೆ ನೀವು ಮೂರ್ಖರಾದಿರೆಂದೇ ಅರ್ಥ, ಏಕೆಂದರೆ ಅವು ಹಾವುಗಳೂ ಅಲ್ಲ, ಮೀನಿನ ಜಾತಿಗೆ ಸೇರಿದ ಜೀವಿಗಳು, ಅದರ ಹೆಸರು ಗ್ಲಾಸ್ ಎಲ್ಸೆ. ಮೀನೆಂದ ಮೇಲೆ ನೀರೇ ಅವುಗಳಿಗೆ ಆವಾಸ. ದೇಹವಿಡೀ ಆವೃತ ಗಾಜಿನಂತೆ ಪಾರದರ್ಶಕವಾಗಿದ್ದು ದೇಹದೊಳಗೆ ಜೈವಿಕ ಕ್ರಿಯೆಗಳನ್ನು ಹೊರತುಪಡಿಸಿ ಉಳಿದಂತೆ ಎಲ್ಲಾ ಅಂಗಗಳನ್ನೂ ಹೊರಗಿನಿಂದಲೇ ಗುರುತಿಸುವಷ್ಟು ಸ್ಪಷ್ಟ ಪಾರದರ್ಶಕವಾಗಿರುತ್ತವೆ. ಅದಕ್ಕೆಂದೇ ಇವುಗಳಿಗೆ ಗ್ಲಾಸ್ ಎಲ್ಸೆ ಗಳೆಂಬ ಹೆಸರು.

ಸುಲಭ ಮಾತ್ರಕ್ಕೆ ಕೈಗೆ ಸಿಗದ ಈ ಮೀನುಗಳು ಎರೆಹುಳುವಿನ ಗುಂಪಿಗೆ ಸೇರಿದವುಗಳಾಗಿದ್ದು ಹೆಚ್ಚಾಗಿ ಯೂರೋಪ್, ಉತ್ತರ ಅಮೇರಿಕಾ, ವೆನಿಜುವೇಲಾ, ಗ್ರೀನ್‌ಲ್ಯಾಂಡ್, ಐಸ್‌ಲ್ಯಾಂಡ್, ಮಿಸಿಸಿಪ್ಪಿ ಸರೋವರ ಹಾಗೂ ಜಪಾನ್‌ಗಳಲ್ಲಿ ಕಾಣಸಿಗುತ್ತವೆ. ವಲಸೆ ರಂಗದಲ್ಲಿ ಕ್ರಾಂತಿಯೆಂದೆನ್ನಬಹುದಾದಷ್ಟು ದೂರವನ್ನು ವರ್ಷವೊಂದರಲ್ಲೇ ಕ್ರಮಿಸುವ ಸಾಮರ್ಥ್ಯವುಳ್ಳ ಗ್ಲಾಸ್ ಎಲ್ಸೆಗಳು ಸಿಹಿ ನೀರಿಗಿಂತಲೂ ಹೆಚ್ಚು ಉಪ್ಪುನೀರಿನ ಆವಾಸಗಳತ್ತ ಆಕರ್ಷಣೆಗೊಂಡು ರಾತ್ರಿ ವೇಳೆಯಲ್ಲಿ ವಲಸೆ ಹೋಗುತ್ತಿರುತ್ತವೆ. ಸಿಹಿನೀರಿನ ಆವಾಸಗಳಲ್ಲಿ ಬೆಳೆಯುವ ಮರಿಗಳು ದೊಡ್ಡವಾದಂತೆಲ್ಲಾ ಪ್ರವಾಹಕ್ಕೆ ಎದುರಾಗಿ ಈಜುತ್ತಾ ಲವಣ ಸರೋವರಗಳತ್ತ ವಲಸೆ ಹೋಗುವ ಪರಿ ನಿಜಕ್ಕೂ ಅದ್ಭುತವಾದುದು. ವಯಸ್ಕರಾದಾಗ ಪುನಃ ಸಿಹಿನೀರಿನ ಆವಾಸಗಳತ್ತ ಮುಖ ಮಾಡುವುದು ಗ್ಲಾಸ್ ಎಲ್ಸೆಗಳ ವಿಶೇಷಗಳಲ್ಲೊಂದಾಗಿದೆ.

ಪುಸ್ತಕ ಲೋಕ

ಒಗ್ಗರಣೆ

ಈಗಾಗಲೇ ಹಲವು ಪುಸ್ತಕಗಳನ್ನು ಹೊರತಂದಿರುವ ಕೆ.ಪಿ.ಸತ್ಯನಾರಾಯಣ ಅವರು, ತಮ್ಮ ಎರಡನೆಯ ಪ್ರಬಂಧ ಸಂಕಲನವನ್ನು ಇದೀಗ ಹೊರ ತಂದಿದ್ದಾರೆ. ಇಲ್ಲಿನ ಪ್ರಬಂಧಗಳು ಲಲಿತ ಪ್ರಬಂಧದ ಸ್ವರೂಪ ಹೊಂದಿದ್ದು, ಹೆಚ್ಚಿನ ಬರಹಗಳಲ್ಲಿ ತಿಳಿಹಾಸ್ಯದ ಲೇಪನವಿರುವುದು ವಿಶೇಷ ಎನಿಸಿದೆ. ಕೆ.ಪಿ. ಸತ್ಯನಾರಾಯಣ ಅವರು ಛಾಯಾಗ್ರಾಹಕರಾಗಿಯೂ ಹೆಸರು ಮಾಡಿದ್ದು, ಹಲವು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಸುಲಭವಾಗಿ ಓದಿಸಿಕೊಂಡು ಹೋಗುವ, ಆರೋಗ್ಯಕರ ಹಾಸ್ಯದ ಎಳೆಗಳನ್ನು ಹೊಂದಿರುವ ಈ ಲಲಿತಪ್ರಬಂಧ ಸಂಕಲನವನ್ನು ತೇಜು ಪಬ್ಲಿಕೇಷನ್ಸ್, ಬೆಂಗಳೂರು ಇವರು ಪ್ರಕಟಿಸಿದ್ದಾರೆ.

ಬೇಸಿಗೆ ಬರುತ್ತಿದೆ: ಆರೈಕೆ ಹೀಗಿರಲಿ

-ಅನುಪಮ ರಂಗನಾಥ, ಗುಂಡ್ಲುಪೇಟೆ

ಚಳಿಗಾಲ ಮುಗಿದು ಬಿರು ಬಿಸಿಲು ಇನ್ನು ಸ್ವಲ್ಪ ದಿನಗಳಲ್ಲೇ ಆರಂಭವಾಗಲಿದೆ. ಕಾಲುಗಳು ಒರಟಾಗಿ, ಹಿಮ್ಮಡಿಗಳಲ್ಲಿ ಡೆಡ್‌ಸ್ಕಿನ್ ಶೇಖರಣೆಯಾಗುವ ಸಾಧ್ಯತೆ ಹೆಚ್ಚು. ಹಾಗಾಗಿ ಬೇಸಿಗೆಯಲ್ಲಿ ಪಾದೋಪಚಾರ ಬಹಳ ಮುಖ್ಯ. ಮನೆಗಳಲ್ಲಿ ಸಿಗುವ ವಸ್ತುಗಳಿಂದಲೇ ಸರಳವಾಗಿ ಪೆಡಿಕ್ಯೂರ್ ಮಾಡಿಕೊಂಡು ಆಹ್ಲಾದ ಹೊಂದಬಹುದಾಗಿದೆ.

ಏನಿದು ಪೆಡಿಕ್ಯೂರ್: ಒಂದು ಅರ್ಧ ಬಕೆಟ್ ಬೆಚ್ಚಗಿನ ನೀರಿಗೆ ಸ್ವಲ್ಪ ಉಪ್ಪು ಬೆರೆಸಿ ಕಾಲನ್ನು ಅದರೊಳಗೆ ನೆನೆಯಲು ಬಿಡಿ. ನೀವು ಮೊಬೈಲ್ ಅಥವಾ ಟಿ.ವಿ ನೋಡುವ ಸಮಯವಾದರೆ ಸೂಕ್ತ, ಏಕೆಂದರೆ ಆಗ ಹೆಚ್ಚಿನ ಸಮಯ ಕೊಡಬಹುದು. ಹದಿನೈದು ನಿಮಿಷಗಳ ನಂತರ ಒಂದು ಅರ್ಧ ನಿಂಬೆಹಣ್ಣಿನ ಹೋಳಿನಿಂದ ನೆನದ ಎಲ್ಲಾ ಭಾಗಕ್ಕೆ ಚೆನ್ನಾಗಿ ಮಸಾಜ್ ಮಾಡಿಕೊಳ್ಳಿ, ಆ ಬಳಿಕ ಒಂದು ಕಲ್ಲಿನಿಂದ ಅಥವಾ ಬ್ರಷ್‌ನಿಂದ ಚೆನ್ನಾಗಿ ಉಜ್ಜಿ, ನೆನೆದ ಹಿಮ್ಮಡಿ ಮತ್ತು ಪಾದಗಳಲ್ಲಿ ಇರುವ ಡೆಡ್ ಸ್ಕಿನ್ ಹೋಗುವವರೆಗೂ ಸ್ವಚ್ಛವಾದ ನೀರಿನಿಂದ ನಯವಾಗಿ ತೊಳೆದು ಟವಲ್‌ನಿಂದ ಪಾದಗಳನ್ನು ಒರೆಸಿಕೊಳ್ಳಿ. ಆ ಬಳಿಕ ಒಂದು ಒಳ್ಳೆಯ ಬಾಡಿಲೋಷನ್ ಹಚ್ಚಬೇಕು. ಕೆಲ ದಿನಗಳಲ್ಲೇ ಪಾದೋಪಚಾರದ ವ್ಯತ್ಯಾಸವನ್ನು ಗಮನಿಸಬಹುದಾಗಿದೆ.

ಇದೇ ರೀತಿ ಕೈಗಳಿಗೂ ಮೆನಿಕ್ಯೂರ್ ಮಾಡಬಹುದು. ಹೊಳೆಯುವ ಕೈ, ಕಾಲು ಬೆರಳುಗಳ ಉಗುರುಗಳಿಗೆ ಒಂದೊಳ್ಳೆಯ ನೈಲ್ ಪಾಲಿಷ್ ಹಚ್ಚಿ. ಪ್ರತೀ ಸ್ನಾನದ ನಂತರ ಬಿಸಿಲಿನಿಂದ ನಿಮ್ಮ ಚರ್ಮವನ್ನು ರಕ್ಷಿಸಲು ದೇಹದ ಇತರೆ ಭಾಗಗಳಿಗೆ ಬಾಡಿಲೋಷನ್ ಅಪ್ಲೈ ಮಾಡಬಹುದು.

ಬಿಸಿಲಿನಲ್ಲಿ ಓಡಾಡುವಾಗ ಕಾಟನ್ ಬಟ್ಟೆಗಳಿದ್ದರೆ ಹೆಚ್ಚು ಸೂಕ್ತ. ಬಟ್ಟೆಗಳು ಮತ್ತು ಬಳಸುವ ವಸ್ತುಗಳ ಬಣ್ಣ ಲೈಟ್ ಕಲರ್ ಆಗಿರಲಿ. ಕಾಟನ್ ಬಟ್ಟೆಯು ಬೆವರನ್ನು ಹೀರಿಕೊಳ್ಳುತ್ತದೆ. ಟೂ ವೀಲರ್ಸ್‌ಗಳಲ್ಲಿ ಓಡಾಡುವವರು ಮರೆಯದೆ ಹೆಲ್ಮೆಟ್ ಧರಿಸಿ, ವಾಪಸ್ ಮನೆಗೆ ಬಂದಾಗ ತಣ್ಣೀರಿನಿಂದ ಒಮ್ಮೆ ಸ್ನಾನ ಮಾಡಿಕೊಂಡು ಧೂಳಿನಿಂದ ಮುಕ್ತರಾಗಿ. ರಾತ್ರಿ ಮಲಗುವಾಗ ನಿಮ್ಮ ಚರ್ಮಕ್ಕೆ ಹೊಂದಿಕೊಳ್ಳುವ ಯಾವುದಾದರೂ ಕೋಲ್ಡ್ ಕ್ರೀಮನ್ನು ಹಚ್ಚಿಕೊಳ್ಳಿ. ಬೇಸಿಗೆಯಲ್ಲಿ ವಾರಕ್ಕೆ ಮೂರು ಬಾರಿಯಾದರೂ ತಲೆಕೂದಲುಗಳಿಗೆ ಶಾಂಪೂ ಹಚ್ಚಿ, ರಾತ್ರಿ ತಲೆಗೆ ಎಣ್ಣೆ ಹಚ್ಚಿ ಬೆಳಿಗ್ಗೆ ಸೀಗೆಕಾಯಿಯಿಂದ ತೊಳೆಯುವ ಹವ್ಯಾಸವಿದ್ದರೆ ಉತ್ತಮ. ಬೇಸಿಗೆಯಲ್ಲಿ ತಲೆ ಒಟ್ಟು ಉದುರುವುದು ನಿಲ್ಲುತ್ತದೆ.

ಬೇಸಿಗೆಯಲ್ಲಿ ದೇಹದ ಹೊರಗಿನ ಉಪಚಾರವಷ್ಟೇ ಅಲ್ಲ, ಆಹಾರ-ಪಾನೀಯ ಸೇವನೆಯಲ್ಲೂ ಗಮನಹರಿಸುವುದು ಉತ್ತಮ. ವಾರಕ್ಕೊಂದೆರೆಡು ಎಳೆನೀರು ಸೇವನೆ ಕಡ್ಡಾಯವಾಗಿರಲಿ, ಮನೆಯಲ್ಲಿ ಮಕ್ಕಳಿಗೆ ಮತ್ತು ಹೊರಗೆ ಕೆಲಸದ ನಿಮಿತ್ತ ದುಡಿಯುವವರಿಗೆ ಮಜ್ಜಿಗೆ ರಾಗಿ ಗಂಜಿ, ನಿಂಬೆಹಣ್ಣಿನ ಶರಬತ್ತು, ಸಿರಿಧಾನ್ಯದಿಂದ ತಯಾರಾದ ಹಿಟ್ಟಿನ ಗಂಜಿ, ಅಕ್ಕಿ ಗಂಜಿ, ಮಾಡಿ ಕೊಟ್ಟರೆ ಉತ್ತಮ. ಇವೆಲ್ಲ ಬೇಸಿಗೆಯಲ್ಲಿ ಕಡಿಮೆ ಖರ್ಚಿನಲ್ಲಿ ತಯಾರಿಸಿಕೊಳ್ಳಬಹುದಾದಂತವುಗಳು.

ಈ ಸೀಸನ್‌ಗೆ ಸಿಗುವ ಬೇಲದ ಹಣ್ಣಿನ ಜ್ಯೂಸ್ ಮಾಡಿಕೊಳ್ಳಿ, ಬೀಜದ ಸಮೇತ ಹಣ್ಣನ್ನು ತಿನ್ನುವುದರಿಂದ ಪಿತ್ತಕೋಶದಲ್ಲಿರುವ ಕಲ್ಲುಗಳು ಕರಗುತ್ತವೆ. ಬೆಲ್ಲದ ಪಾನಕ, ಒಮ್ಮೊಮ್ಮೆ ಬಾರ್ಲಿ ಗಂಜಿ ಮಾಡಿ ಕುಡಿದರೂ ಉತ್ತಮ. ಯಥೇಚ್ಛವಾಗಿ ನೀರನ್ನು ಕುಡಿಯುವಿದನ್ನೂ ಮರೆಯಬೇಡಿ.

ಬರೆಯುವಾಗ ಬೆವರುವ ಕೈಕೆಳಗೆ ಕರವಸ್ತ್ರಳನ್ನು ಇಟ್ಟುಕೊಂಡರೆ ಪುಸ್ತಕ ಸ್ವಚ್ಛವಾಗಿರುತ್ತದೆ, ಉಪಯೋಗಿಸುವ ಸಾಕ್ಸ್‌ಗಳನ್ನು ಪ್ರತಿದಿನ ಬದಲಾಯಿಸಿ, ಹಿತವಾದ ಟಾಲ್ಕಂ ಪೌಡರನ್ನು ಬಳಸಿ ಇಲ್ಲವೆ ಪರ್ಫ್ಯೂಮ್ ಬಳಸಿ ಬೇಸಿಗೆ ದಿನಗಳ ಆರೈಕೆ ಮಾಡಬಹುದಾಗಿದೆ.

ಇಂಗ್ಲೆಂಡ್ ವಿರುದ್ಧದ ಏಕದಿನ ಸರಣಿ | ಸ್ಪಿನ್ನರ್‌ಗಳಿಗೆ ಮಣೆ | ಟೀಂನಲ್ಲಿ 5 ಸ್ಪಿನ್ನರ್‌ಗಳು

ವರುಣ್ ತಂಡಕ್ಕೆ ಸೇರ್ಪಡೆ

ದೆಹಲಿ: ಇಂಗ್ಲೆಂಡ್ ವಿರುದ್ಧದ ಮೂರು ಪಂದ್ಯಗಳ ಏಕದಿನ ಸರಣಿಯ ಭಾರತ ತಂಡಕ್ಕೆ ಸ್ಪಿನ್ನರ್ ವರುಣ್ ಚಕ್ರವರ್ತಿ ಅವರನ್ನು ಆಯ್ಕೆ ಮಾಡಲಾಗಿದೆ. ಆಂಗ್ಲರ ವಿರುದ್ಧ ಇತ್ತೀಚೆಗೆ ಮುಗಿದಿದ್ದ ಐದು ಪಂದ್ಯಗಳ ಟಿ20 ಸರಣಿಯಲ್ಲಿ ವರುಣ್ ಚಕ್ರವರ್ತಿ ತನ್ನ ಸ್ಪಿನ್ ಮೋಡಿ ಮೂಲಕ 14 ವಿಕೆಟ್‌ಗಳನ್ನು ಕಬಳಿಸಿ ಸರಣಿ ಶ್ರೇಷ್ಠ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದರು. ಈ ಹಿನ್ನೆಲೆಯಲ್ಲಿ ಅವರಿಗೆ ಇದೀಗ ಏಕದಿನ ತಂಡದಲ್ಲಿಯೂ ಸ್ಥಾನ ಕಲ್ಪಿಸಲಾಗಿದೆ.

ನಾಗ್ಪುರದ ವಿದರ್ಭ ಕ್ರಿಕೆಟ್ ಅಸೋಸಿಯೇಷನ್ ಸ್ಟೇಡಿಯಂನಲ್ಲಿ ರೋಹಿತ್ ಶರ್ಮಾ ಸಾರಥ್ಯದ ತಂಡದ ಜೊತೆ ಮಂಗಳವಾರ ಬೆಳಗ್ಗೆ ನೆಟ್ ಪ್ರಾಕ್ಟೀಸ್ ವೇಳೆ ತಂಡಕ್ಕೆ ಸೇರ್ಪಡೆಗೊಂಡಿದ್ದಾರೆ. ಆಯ್ಕೆ ಸಮಿತಿಯು ಇಂಗ್ಲೆಂಡ್ ವಿರುದ್ಧ ನಡೆಯಲಿರುವ ಮೂರು ಪಂದ್ಯಗಳ ಏಕದಿನ ಸರಣಿಯ ಭಾರತ ತಂಡದಲ್ಲಿ ವರುಣ್ ಚಕ್ರವರ್ತಿಗೆ ಸ್ಥಾನ ಕಲ್ಪಿಸಿದೆ ಎಂದು ಬಿಸಿಸಿಐ ತನ್ನ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದೆ.

ಐವರು ಸ್ಪಿನ್ನರ್‌ಗಳಿಗೆ ಸ್ಥಾನ: ಬಿಸಿಸಿಐ ಆಯ್ಕೆ ಮಂಡಳಿ ಇಂಗ್ಲೆಂಡ್ ವಿರುದ್ಧದ ಮೂರು ಪಂದ್ಯಗಳ ಏಕದಿನ ಸರಣಿಗೆ ಪ್ರಕಟಿಸಿರುವ ಟೀಂ ಇಂಡಿಯಾ 16 ಸದಸ್ಯರ ತಂಡದಲ್ಲಿ ಐವರು ಸ್ಪಿನ್ನರ್‌ಗಳು ಸ್ಥಾನ ಪಡೆದಿದ್ದಾರೆ. ರವೀಂದ್ರ ಜಡೇಜಾ, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್ ಹಾಗೂ ಕುಲ್ದೀಪ್ ಯಾದವ್ ಈಗಾಗಲೇ ತಂಡದಲ್ಲಿದ್ದಾರೆ. ವರುಣ್ ಚಕ್ರವರ್ತಿ ಸೇರ್ಪಡೆಯಿಂದ ಭಾರತ ತಂಡದಲ್ಲಿ ಒಟ್ಟು ಐವರು ಸ್ಪಿನ್ನರ್‌ಗಳು ಸೇರ್ಪಡೆಯಾದಂತಾಗಿದೆ.

ಜೇಮಿ ಸ್ಮಿತ್ ಅಲಭ್ಯ

ಪಂದ್ಯಕ್ಕೂ ಮುನ್ನ ಇಂಗ್ಲೆಂಡ್ ತಂಡಕ್ಕೆ ಭಾರಿ ಹಿನ್ನಡೆಯಾಗಿದೆ. ಇಂಗ್ಲೆಂಡ್ ವಿಕೆಟ್ ಕೀಪರ್ ಜೇಮಿ ಸ್ಮಿತ್ ಗಾಯಕ್ಕೆ ತುತ್ತಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಅವರು ಆರಂಭಿಕ ಎರಡು ಪಂದ್ಯಗಳಿಗೆ ಅಲಭ್ಯರಾಗಿದ್ದಾರೆಂದು ವರದಿಯಾಗಿದೆ. ಅವರು ಗಾಯಗೊಂಡ ಕಾರಣ ಇಂಗ್ಲೆಂಡ್ ತಂಡವು ಇದೀಗ ಹೆಚ್ಚುವರಿ ಬೌಲರ್‌ನೊಂದಿಗೆ ಮೈದಾನಕ್ಕಿಳಿಯಲು ತಯಾರಿ ನಡೆಸುತ್ತಿದೆ. ಸ್ಮಿತ್ ಬದಲಿಗೆ ಟಿ20 ತಂಡದಲ್ಲಿ ಸೇರ್ಪಡೆಗೊಂಡಿರುವ ಸ್ಪಿನ್ನರ್ ರೆಹಾನ್ ಅಹ್ಮದ್ ಅವರನ್ನು ಇಂಗ್ಲೆಂಡ್ ತನ್ನ ತಂಡಕ್ಕೆ ಸೇರಿಸಿಕೊಳ್ಳಬಹುದು.

ಪಾಕ್‌ನಲ್ಲಿ ತ್ರಿಕೋನ ಸರಣಿ

ಇಸ್ಲಾಮಾಬಾದ್: ಪಾಕಿಸ್ತಾನವು ತ್ರಿಕೋನ ಸರಣಿಯೊಂದಕ್ಕೆ ಸಜ್ಜುಗೊಂಡಿದೆ. ಪಾಕ್ ಕ್ರಿಕೆಟ್ ಬೋರ್ಡ್ ಆಯೋಜಿಸುತ್ತಿದೆ. ಆತಿಥೇಯ ಪಾಕ್ ಅನ್ನು ಹೊರತುಪಡಿಸಿ ದ. ಆಫ್ರಿಕಾ ಮತ್ತು ನ್ಯೂಜಿಲೆಂಡ್ ತಂಡಗಳು ಈ ತ್ರಿಕೋನ ಸರಣಿಯಲ್ಲಿ ಪಾಲ್ಗೊಳ್ಳಲಿವೆ. ಮೊದಲ ಪಂದ್ಯದಲ್ಲಿ ಫೆಬ್ರವರಿ 8ರಂದು ಆತಿಥೇಯ ಪಾಕಿಸ್ತಾನ ತಂಡವು ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದೆ. ಫೆಬ್ರವರಿ 10ರಂದು ನಡೆಯಲಿರುವ ದ್ವಿತೀಯ ಪಂದ್ಯದಲ್ಲಿ ನ್ಯೂಜಿಲೆಂಡ್ ಮತ್ತು ದ. ಆಫ್ರಿಕಾ ತಂಡಗಳು ಸೆಣಸಲಿದೆ. ಫೆಬ್ರವರಿ 12 ರಂದು ಪಾಕಿಸ್ತಾನ ಮತ್ತು ದ. ಆಫ್ರಿಕಾ ತಂಡಗಳು ಮುಖಾಮುಖಿಯಾಗಲಿದೆ.

ಈ ಪಂದ್ಯಗಳಲ್ಲಿ ಅತ್ಯಧಿಕ ಪಂದ್ಯಗಳನ್ನು ಗೆದ್ದ ತಂಡಗಳು ಅಥವಾ ಉತ್ತಮ ನೆಟ್ ರೇಟ್ ಪಡೆದ ಟೀಮ್‌ಗಳು ಫೈನಲ್ ಪಂದ್ಯವನ್ನಾಡಲಿದೆ. ಫೆಬ್ರವರಿ 14ರಂದು ತ್ರಿಕೋನ ಸರಣಿಯ ಫೈನಲ್ ನಡೆಯಲಿದೆ.

ಲಂಕಾ ಕ್ರಿಕೆಟಿಗ ಕರುಣಾರತ್ನೆ ನಿವೃತ್ತಿ

ಗಾಲೆ: ಶ್ರೀಲಂಕಾ ಕ್ರಿಕೆಟ್ ತಂಡದ ಮಾಜಿ ನಾಯಕ ದಿಮುತ್ ಕರುಣಾರತ್ನೆ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಪ್ರಕಟಿಸಿದ್ದಾರೆ. ಗಾಲೆಯಲ್ಲಿ ಗುರುವಾರದಿಂದ ಆರಂಭವಾಗಲಿರುವ ಆಸ್ಟ್ರೇಲಿಯಾ ವಿರುದ್ಧದ ದ್ವಿತೀಯ ಟೆಸ್ಟ್ ಪಂದ್ಯ ಕರುಣಾರತ್ನೆಗೆ ಕೊನೆಯ ಪಂದ್ಯವಾಗಲಿದ್ದು, ಅದು ಅವರ ನೂರನೇ ಟೆಸ್ಟ್ ಪಂದ್ಯವಾಗಿದೆ. ಈ ಮೂಲಕ ಲಂಕಾ ಪರ ನೂರನೇ ಟೆಸ್ಟ್ ಪಂದ್ಯವನ್ನಾಡಿದ 7ನೇ ಬ್ಯಾಟರ್ ಎನಿಸಿಕೊಳ್ಳಲಿದ್ದಾರೆ.

36 ವರ್ಷದ ದಿಮುತ್ ಕರುಣಾರತ್ನೆ ಕಳೆದೊಂದು ವರ್ಷದಿಂದ ಬ್ಯಾಟಿಂಗ್ ಫಾರ್ಮ್ ಕಳೆದುಕೊಂಡಿದ್ದರು. ತಮ್ಮ ಕೊನೆಯ ಏಳು ಟೆಸ್ಟ್ ಪಂದ್ಯಗಳಲ್ಲಿ 182 ರನ್ ಮಾತ್ರ ಗಳಿಸಿದ್ದರು. ಸೆಪ್ಟೆಂಬರ್ 2024ರಲ್ಲಿ ನ್ಯೂಜಿಲೆಂಡ್ ವಿರುದ್ಧ ಅವರ ಏಕೈಕ ಅರ್ಧಶತಕ ದಾಖಲಾಗಿತ್ತು. 2012ರಲ್ಲಿ ಟೆಸ್ಟ್‌ಗೆ ಪದಾರ್ಪಣೆ ಮಾಡಿದ ಕರುಣಾರತ್ನೆ ಶ್ರೀಲಂಕಾದ ಅತ್ಯುತ್ತಮ ಟೆಸ್ಟ್ ಬ್ಯಾಟರ್ ಆಗಿ ಗುರುತಿಸಿಕೊಂಡಿದ್ದರು. ಲಂಕಾ ಪರ 99 ಟೆಸ್ಟ್ ಪಂದ್ಯಗಳನ್ನಾಡಿ 16 ಶತಕಗಳೊಂದಿಗೆ 7,172 ರನ್ ಗಳಿಸಿದ್ದಾರೆ. ನಾಯಕನಾಗಿಯೂ ಹಲವು ಸರಣಿ ಜಯಿಸಿದ ದಾಖಲೆಯೂ ಅವರ ಹೆಸರಿನಲ್ಲಿದೆ. 2021ರಲ್ಲಿ ಬಾಂಗ್ಲಾದೇಶದ ವಿರುದ್ಧದ ಟೆಸ್ಟ್‌ನಲ್ಲಿ 244 ರನ್ ಬಾರಿಸಿದ್ದು ಅವರ ಗರಿಷ್ಠ ವೈಯಕ್ತಿಕ ಮೊತ್ತವಾಗಿದೆ. ಏಕದಿನದಲ್ಲಿ 50 ಮತ್ತು 34 ಟಿ20 ಪಂದ್ಯಗಳನ್ನು ಆಡಿದ್ದಾರೆ. 2023ರಲ್ಲಿ ಐರ್ಲೆಂಡ್ ವಿರುದ್ಧ ತಮ್ಮ ಏಕೈಕ ಏಕದಿನ ಶತಕವನ್ನು ದಾಖಲಿಸಿದ್ದರು.

ಬುಮ್ರಾಗೆ ವೈದ್ಯಕೀಯ ಪರೀಕ್ಷೆ

ಬೆಂಗಳೂರು: ಐಸಿಸಿ ಚಾಂಪಿಯನ್ಸ್ ಟ್ರೋಫಿ ಫೆ.19ರಿಂದ ಆರಂಭವಾಗಲಿದೆ. ಈ ಟೂರ್ನಿಗೆ ಎಲ್ಲ ತಂಡಗಳನ್ನೂ ಪ್ರಕಟಿಸಲಾಗಿದೆ. ಇತ್ತೀಚೆಗಷ್ಟೇ ಬಿಸಿಸಿಐ ಕೂಡ 15 ಸದಸ್ಯರ ತಂಡವನ್ನು ಆಯ್ಕೆ ಮಾಡಿದ್ದು, ಇದರಲ್ಲಿ ವೇಗದ ಬೌಲರ್ ಜಸ್ಪ್ರೀತ್ ಬುಮ್ರಾ ಅವರ ಹೆಸರೂ ಸೇರಿದೆ. ಆದರೆ 2025ರ ಚಾಂಪಿಯನ್ಸ್ ಟ್ರೋಫಿಯಲ್ಲಿ ಬುಮ್ರಾ ಆಡುತ್ತಾರಾ ಎಂಬುದು ಇನ್ನೂ ನಿರ್ಧಾರವಾಗಿಲ್ಲ. ವಾಸ್ತವವಾಗಿ, ಆಸ್ಟ್ರೇಲಿಯಾ ವಿರುದ್ಧದ ಕೊನೆಯ ಟೆಸ್ಟ್ ಪಂದ್ಯದ ಸಂದರ್ಭದಲ್ಲಿ ಗಾಯಗೊಂಡಿದ್ದ ಬುಮ್ರಾ ವೈದ್ಯಕೀಯ ಪರೀಕ್ಷೆಗೆ ಒಳಪಡಬೇಕಾಗಿದೆ.

ತೆಂಡೂಲ್ಕರ್ ದಾಖಲೆ ಮುರಿಯುವ ಅವಕಾಶ

ಎಲ್ಲರ ಚಿತ್ತ ಕೊಹ್ಲಿಯತ್ತ

ದೆಹಲಿ: ಭಾರತ ಹಾಗೂ ಇಂಗ್ಲೆಂಡ್ ತಂಡಗಳ ನಡುವಿನ ಮೊದಲನೇ ಏಕದಿನ ಪಂದ್ಯ ನಾಗ್ಪುರದ ವಿದರ್ಭ ಕ್ರಿಕೆಟ್ ಅಸೋ ಸಿಯೇ ಷನ್ ಕ್ರೀಡಾಂಗಣದಲ್ಲಿ ಗುರುವಾರ ನಡೆಯಲಿದೆ. ಈ ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ ಟೀಮ್ ಇಂಡಿಯಾ ಮಾಜಿ ನಾಯಕ ವಿರಾಟ್ ಕೊಹ್ಲಿ, ಕ್ರಿಕೆಟ್ ದೇವರು ಸಚಿನ್ ತೆಂಡೂಲ್ಕರ್ ಅವರ 19 ವರ್ಷಗಳ ಹಳೆಯ ದಾಖಲೆ ಯನ್ನು ಮುರಿಯುವ ಸಾಧ್ಯತೆ ಇದೆ.

ಏಕದಿನ ಕ್ರಿಕೆಟ್‌ನಲ್ಲಿ ವೇಗವಾಗಿ 14000 ರನ್‌ಗಳನ್ನು ಪೂರ್ಣಗೊಳಿಸಿದ ಮೊದಲ ಬ್ಯಾಟ್ಸ್‌ಮನ್ ಎನಿಸಿಕೊಳ್ಳಲು ವಿರಾಟ್ ಕೊಹ್ಲಿಗೆ ಅವಕಾಶವಿದೆ. 2006ರ ಫೆಬ್ರವರಿಯಲ್ಲಿ ಸಚಿನ್ ತೆಂಡೂಲ್ಕರ್ ಅವರು ಪಾಕಿಸ್ತಾನ ವಿರುದ್ಧದ ಪಂದ್ಯದಲ್ಲಿ ಶತಕವನ್ನು ಸಿಡಿಸುವ ಮೂಲಕ 350ನೇ ಇನಿಂಗ್ಸ್‌ನಲ್ಲಿ 14000 ರನ್‌ಗಳನ್ನು ಪೂರ್ಣಗೊಳಿಸಿದ್ದರು. ಸಚಿನ್ ತೆಂಡೂಲ್ಕರ್ ಅವರ ಶತಕದ ಹೊರತಾಗಿಯೂ ಟೀಮ್ ಇಂಡಿಯಾ 7 (ಡಿಎಲ್‌ಎಸ್ ನಿಯಮ) ರನ್‌ಗಳಿಂದ ಸೋಲು ಅನುಭವಿಸಿತ್ತು.

ವಿರಾಟ್ ಕೊಹ್ಲಿ ಸದ್ಯ 283 ಏಕದಿನ ಪಂದ್ಯಗಳಿಂದ 58.18ರ ಸರಾಸರಿ ಮತ್ತು 93.54ರ ಸ್ಟ್ರೈಕ್ ರೇಟ್‌ನಲ್ಲಿ 13906 ರನ್‌ಗಳನ್ನು ಕಲೆ ಹಾಕಿದ್ದರು. ಇದರಲ್ಲಿ 50 ಶತಕಗಳು ಹಾಗೂ 72 ಅರ್ಧಶತಕಗಳನ್ನು ಸಿಡಿಸಿದ್ದಾರೆ. ಕಳೆದ ವರ್ಷ ಶ್ರೀಲಂಕಾ ವಿರುದ್ಧ ಆಡಿದ್ದ ಮೂರು ಏಕದಿನ ಪಂದ್ಯಗಳಿಂದ ಕೇವಲ 58 ರನ್‌ಗಳಿಗೆ ಸೀಮಿತವಾಗಿದ್ದರು. ಅವರು ಮೂರು ಪಂದ್ಯಗಳಲ್ಲಿ ಕ್ರಮವಾಗಿ 24, 14 ಹಾಗೂ 20 ರನ್‌ಗಳನ್ನು ಕಲೆ ಹಾಕಿದ್ದರು.

ಏಕದಿನ ವಿಶ್ವಕಪ್ ಬಳಿಕ ವಿರಾಟ್ ಕೊಹ್ಲಿ ಇಲ್ಲಿಯವರೆಗೂ ಆಡಿರುವುದು ಕೇವಲ ಮೂರು ಏಕದಿನ ಪಂದ್ಯಗಳು ಮಾತ್ರ. 14000 ರನ್‌ಗಳನ್ನು ಪೂರ್ಣಗೊಳಿಸಲು ವಿರಾಟ್ ಕೊಹ್ಲಿಗೆ ಕೇವಲ 94 ರನ್‌ಗಳ ಅಗತ್ಯವಿದೆ. ಇಂಗ್ಲೆಂಡ್ ವಿರುದ್ಧ ಒಂದು ಈ ರನ್‌ಗಳನ್ನು ಗಳಿಸಿದರೆ, ಏಕದಿನ ಕ್ರಿಕೆಟ್‌ನಲ್ಲಿ ವೇಗವಾಗಿ 14000 ರನ್‌ಗಳನ್ನು ಪೂರ್ಣಗೊಳಿಸಿದ ಮೊದಲ ಬ್ಯಾಟ್ಸ್‌ಮನ್ ಎನಿಸಿ ಕೊಳ್ಳಲಿದ್ದಾರೆ. ಅಂದಹಾಗೆ ಸಚಿನ್ ತೆಂಡೂಲ್ಕರ್ ಬಿಟ್ಟರೆ ಈ ಸಾಧನೆ ಮಾಡಿರುವುದು ಶ್ರೀಲಂಕಾ ಮಾಜಿ ನಾಯಕ ಕುಮಾರ ಸಂಗಕ್ಕಾರ ಮಾತ್ರ.

ದುಬೈನಲ್ಲಿ ಭುವನಂ ಗಗನಂ

ಪ್ರಮೋದ್ ಮತ್ತು ಪೃಥ್ವಿ ಅಂಬಾರ್ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ಭುವನಂ ಗಗನಂ ಫೆಬ್ರವರಿ 14ರ ಪ್ರೇಮಿಗಳ ದಿನದಂದು ಅದ್ದೂರಿಯಾಗಿ ತೆರೆಗೆ ಬರಲಿದೆ. ಅದಕ್ಕೂ ಮುನ್ನವೇ ಚಿತ್ರದ ಬಗ್ಗೆ ಕುತೂಹಲ ದುಪ್ಪಟ್ಟಾಗಿದೆ. ಭುವನಂ ಗಗನಂ ದುಬೈನಲ್ಲಿ ಪ್ರೀಮಿಯರ್ ಆಗಿದ್ದು, ಹೌಸ್ ಫುಲ್ ಪ್ರದರ್ಶನ ಕಂಡಿದೆ. ಸಿನಿಮಾ ನೋಡಿದ ಪ್ರೇಕ್ಷಕರೆಲ್ಲರೂ ಮೆಚ್ಚಿ ಕೊಂಡಾಡಿದ್ದಾರೆ. ಹಾಡುಗಳು ಮತ್ತು ಟೀಸರ್‌ನಲ್ಲಿ ಗಮನಸೆಳೆದಿರುವ ಈ ಚಿತ್ರದ ಟ್ರೇಲರ್ ಭಾನುವಾರ ಬಿಡುಗಡೆ ಯಾಗಲಿದೆ. ಭುವನಂ ಗಗನಂ ಚಿತ್ರವು ಅನನ್ಯ ಪ್ರೇಮ ಕಥೆ ಯನ್ನು ಒಳಗೊಂಡಿದ್ದು, ಪ್ರಮೋದ್ ಜತೆ ಯಾಗಿ ರಾಚೆಲ್ ಡೇವಿಡ್ ಹಾಗೂ ಪೃಥ್ವಿಗೆ ಜೋಡಿ ಯಾಗಿ ಅಶ್ವತಿ ನಟಿಸಿದ್ದಾರೆ. ಇನ್ನುಳಿದಂತೆ ಅಚ್ಯುತ್ ಕುಮಾರ್, ಶರತ್ ಲೋಹಿತಾಶ್ವ, ಪ್ರಕಾಶ್ ತುಮ್ಮಿನಾಡು, ಹರಿಣಿ, ಸ್ಪರ್ಶ ರೇಖಾ ಮುಂತಾದ ವರು ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಗಿರೀಶ್ ಮೂಲಿ ಮನಿ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದು, ಎಸ್‌ವಿಸಿ ಫಿಲಂಸ್ ಬ್ಯಾನರ್‌ನಲ್ಲಿ ಎಂ.ಮುನೇಗೌಡ ಚಿತ್ರ ನಿರ್ಮಾಣ ಮಾಡಿದ್ದಾರೆ. ಚಂದನ್ ಸುರೇಶ್ ಸಂಸ್ಥೆ ಭುವನಂ ಗಗನಂ ಚಿತ್ರದ ಕರ್ನಾಟಕದಲ್ಲಿನ ವಿತರಣಾ ಹಕ್ಕುಗಳನ್ನು ಪಡೆದುಕೊಂಡಿದೆ.

ಒಲವಿನ ಪಯಣದ ಸುಂದರ ಕಥನಾ

ಕಿರುತೆರೆಯ ಖ್ಯಾತಿಯ ಸುನಿಲ್ ನಾಯಕನಾಗಿ ನಟಿಸಿರುವ ವಿಭಿನ್ನ ಪ್ರೇಮ ಕಥಾಹಂದರದ ಒಲವಿನ ಪಯಣ ತೆರೆಗೆ ಸಿದ್ಧವಾಗಿದೆ. ಹಳ್ಳಿಯ ಹುಡುಗನ ಬದುಕು, ಪ್ರೇಮ ಪಯಣದ ಕಥೆಯನ್ನು ಈ ಚಿತ್ರದಲ್ಲಿ ಕಟ್ಟಿಕೊಡಲಾಗಿದ್ದು, ಕಿಶನ್ ಬಲ್ನಾಡ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಸದ್ಯ ಈ ಚಿತ್ರದ ಟೀಸರ್ ಮತ್ತು ಹಾಡುಗಳು ಬಿಡುಗಡೆ ಯಾಗಿದ್ದು ಸಿನಿಪ್ರಿಯರ ಮನಗೆದ್ದಿವೆ. ಗೊತ್ತು ಗುರಿಯಿಲ್ಲದೆ ಹುಡುಗನೊಬ್ಬ ಶ್ರೀಮಂತ ಮನೆತನದ ಯುವತಿಯನ್ನು ಪ್ರೀತಿಸಿ, ಆಕೆಯನ್ನು ವಿವಾಹ ವಾಗಲು ಸವಾಲು ಸ್ವೀಕರಿಸುತ್ತಾನೆ. ಕೊನೆಗೆ ಆ ಸವಾಲನ್ನು ಗೆದ್ದು ಅವಳನ್ನು ಮದುವೆ ಯಾಗುತ್ತಾನಾ, ಈ ಹಾದಿಯಲ್ಲಿ ಆತನಿಗೆ ಯಾವೆಲ್ಲಾ ಸವಾಲುಗಳು ಎದುರಾಗುತ್ತವೆ ಎಂಬುದನ್ನು ಒಲವಿನ ಪಯಣದಲ್ಲಿ ರೋಚಕವಾಗಿ ಕಟ್ಟಿಕೊಡಲಾಗಿದೆ. ಖುಷಿ ಹಾಗೂ ಪ್ರಿಯಾ ಹೆಗ್ಡೆ ನಾಯಕಿಯರಾಗಿ ಕಾಣಿಸಿ ಕೊಂಡಿದ್ದಾರೆ. ಇದು ಮಿಡಲ್ ಕ್ಲಾಸ್ ಹುಡುಗನ ಜೀವನದ ಪಯಣ, ಅದರಲ್ಲಿನ ಏಳು ಬೀಳುಗಳು, ತೊಂದರೆಗಳು, ಅಲ್ಲಿಂದ ಆತ ಹೊರಬರಲು ಹೇಗೆಲ್ಲ ಹೋರಾಡುತ್ತಾನೆ ಎಂಬುದನ್ನು ಈ ಚಿತ್ರದಲ್ಲಿ ತೋರಿಸಿದ್ದೇವೆ ಎಂದು ನಟ ಸುನೀಲ್ ಹೇಳಿದರು. ಖುಷಿ ಶ್ರೀಮಂತನ ಮಗಳ ಪಾತ್ರದಲ್ಲಿ ಕಾಣಿಸಿಕೊಂಡಿದ್ದು ಡಬ್ಬಲ್ ಶೇಡ್‌ನಲ್ಲಿ ಮಿಂಚಿದ್ದಾರೆ. ಪ್ರಿಯಾ ಹೆಗ್ಡೆ ಗ್ಲಾಮರ್ ಲುಕ್‌ನಲ್ಲಿ ಕಂಗೊಳಿಸಿದ್ದಾರೆ. ಉಳಿದಂತೆ ನಾಗೇಶ್‌ಮಯ್ಯ, ಪದ್ಮಜಾ ರಾವ್, ಪೃಥ್ವಿರಾಜ್, ಸುಧಾಕರ ಬನ್ನಂಜೆ, ಸೂರ್ಯಕಿರಣ್, ಧನಂಜಯ್, ರಾಮ್ ಧನುಷ್, ಬೇಬಿ ರಿಧಿ ಮುಂತಾದವರು ತಾರಾಗಣದಲ್ಲಿದ್ದಾರೆ. ಮುಳಗುಂದ ಕ್ರಿಯೇಷನ್ಸ್ ಮೂಲಕ ನಾಗರಾಜ್ ಎಸ್.ಮುಳಗುಂದ ಈ ಚಿತ್ರ ನಿರ್ಮಾಣ ಮಾಡಿದ್ದಾರೆ, ಚಿತ್ರದಲ್ಲಿ ಮೂರು ಹಾಡು ಗಳಿದ್ದು, ಸಾಯಿ ಸರ್ವೇಶ್ ಸಂಗೀತ ಸಂಯೋಜಿಸಿದ್ದಾರೆ, ರಾಜೇಶ್ ಕೃಷ್ಣನ್, ವೀರ ಸಮರ್ಥ್ ಗೀತೆಗೆ ದನಿಯಾಗಿದ್ದಾರೆ. ಜೀವನ್‌ಗೌಡ ಛಾಯಾಗ್ರಹಣ, ಕೀರ್ತಿರಾಜ್ ಸಂಕಲನ ಈ ಚಿತ್ರಕ್ಕಿದೆ

ನಮ್ಮ ನಿರ್ಮಾಪಕರೇ ಹೆಣೆದ ಕಥೆಯಿದು. ಇದು ಮಧ್ಯಮ ವರ್ಗದ ಹುಡುಗನ ಯಶೋಗಾಥೆಯಾಗಿದ್ದರೂ ಎಲ್ಲರಿಗೂ ಕನೆಕ್ಟ್ ಆಗಲಿದೆ. ಸಿನಿಮಾ ನೋಡುತ್ತಾ ನಮ್ಮ ಬದುಕಿನಲ್ಲಿಯೂ ಎದುರಾದ ಸವಾಲು ಗಳು, ಸಂಕಷ್ಟಗಳು ತೆರೆಯಲ್ಲಿ ಹಾದು ಹೋಗುತ್ತವೆ. ಲವ್ ಸೆಂಟಿಮೆಂಟ್ ಸ್ಟೋರಿ ಪ್ರೇಕ್ಷಕರ ಮನಗೆಲ್ಲಲ್ಲಿದೆ.

-ಕಿಶನ್, ನಿರ್ದೇಶಕ